# ಕರ್ನಾಟಕ ವಿಧಾನ ಪರಿಷತ್ತು

## ಸೋಮವಾರ, 30ನೇ ಜುಲೈ 2012

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಅಪರಾಹ್ನ 12 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**ಸಭಾಪತಿಯವರು:–** ಈಗ ಪ್ರಶೋತ್ತರ ಅವಧಿ.

**ಶ್ರೀ ಎಸ್.ಆರ್. ಪಾಟೀಲ್: (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 28.07.2012ರಂದು ಶನಿವಾರ ಸಂಜೆ ಸುಮಾರು 7.00 ಗಂಟೆ ಸಮಯದಲ್ಲಿ...

**ಡಾ|| ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಯವರೇ, ನಮ್ಮ ಸದನದ ಸದಸ್ಯರೊಬ್ಬರಿಗೆ ಅಖಿಲ ಭಾರತ ಮಟ್ಟದ ಪ್ರಶಸ್ತಿ ಲಭಿಸಿದೆ. ಅದಕ್ಕಾಗಿ ಅವರಿಗೆ ಮೊದಲು ಅಭಿನಂದನೆಗಳನ್ನು ಸಲ್ಲಿಸಿ ಮುಂದಿನ ಕಲಾಪವನ್ನು ತೆಗೆದುಕೊಳ್ಳಬಹುದಾಗಿದೆ.

**ಸಭಾಪತಿಯವರು:–** ಮೊದಲು ಪ್ರಶ್ನೋತ್ತರ ಅವಧಿಯನ್ನು ಮುಗಿಸೋಣ, ನಂತರ ನಾನು ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ.

**ಡಾ|| ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಯವರೇ, ಅವಕಾಶ ಕೊಡುವ ಹಾಗಿದ್ದರೆ ಸಂತೋಷ.

## 1. ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ.

## ಮಂಗಳೂರು ಸಮೀಪದ ಕಣ್ಣೂರಿನ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇನಲ್ಲಿ ನಡೆದಿರುವ ಘಟನೆ ಕುರಿತು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯ ಅಡಿಯಲ್ಲಿ ಅವಕಾಶ ಕೋರಿ ಕಳುಹಿಸಿಕೊಟ್ಟಿರುವ ಪ್ರಸ್ತಾವನೆ ಬಹಳ ಮಹತ್ವದ್ದಾಗಿದೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು ಜನರು ಕಾನೂನನ್ನು ಕೈಗೆತ್ತಿಕೊಂಡು ಮನಸೋ ಇಚ್ಛೆ ಸ್ವೇಚ್ಛಾಚಾರದಿಂದ ನಡೆದುಕೊಳ್ಳುತ್ತಿರುವುದರಿಂದ ಬಹುತೇಕವಾಗಿ ಈ ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ ಎನ್ನುವಂತಹ ಅಸ್ತಿತ್ವದ ಪ್ರಶ್ನೆ ಬಂದಿರುವುದರಿಂದ ಬಹಳ ಮಹತ್ವದ ವಿಚಾರವನ್ನು, ಅದೂ ಕೂಡ ಸಂಸ್ಕೃತಿ ನೆಪದಲ್ಲಿ ಹೆಣ್ಣುಮಕ್ಕಳ ಮೇಲೆ ಹಲ್ಲೆ ಮಾಡುವಷ್ಟರ ಮಟ್ಟಿಗೆ ಹೋಗಿದೆ

ಎಂದರೆ ದಯಮಾಡಿ ತಾವೇ ಯೋಚನೆ ಮಾಡಬೇಕು. ತಾವು ಬಹಳ ಸೂಕ್ಷ್ಮ ಸಂವೇದನೆಯವರಾದ್ದರಿಂದ...

**ಸಭಾಪತಿಯವರು:–** ತಾವು ಕಳುಹಿಸಿಕೊಟ್ಟಿರುವಂತಹ ನೋಟೀಸ್ ನನಗೆ ತಲುಪಿದೆ, ನಾವು ಅದನ್ನು ನೋಡಿದ್ದೇನೆ. ಈಗ ಮೊದಲು ಪ್ರಶ್ನೋತ್ತರ ಅವಧಿಯನ್ನು ಮುಗಿಸೋಣ. ನಂತರ ಮೊದಲ ಅವಕಾಶವನ್ನು ನಾನು ತಮಗೆ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯ Sanctity ಏನೆಂದರೆ, ಎಲ್ಲಾ ಕಲಾಪಗಳನ್ನೂ ಬದಿಗೊತ್ತಿ ಅದಕ್ಕೆ ಮೊದಲು ಅವಕಾಶವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಮಹಿಳೆಯರ ಗೌರವದ ಪ್ರಶ್ನೆ ಇರುವುದರಿಂದ ಮಹಿಳೆಯರ ಮೇಲೆ ಹಲ್ಲೆ ನಡೆಯುವಂತಹ ಘಟನೆ ನಡೆದಿದೆ, ಯಾವ ದೇಶದಲ್ಲಿ ಮಹಿಳೆಯರನ್ನು ಪೂಜ್ಯ ಭಾವನೆಯಿಂದ ಕಾಣುತ್ತಾರೆಯೋ ಆ ದೇಶದಲ್ಲಿ ಮಹಿಳೆಯರ ಮೇಲೆ ಹಲ್ಲೆ ಮಾಡಿ ಅವರನ್ನು ಅರೆನಗ್ನಗೊಳಿಸುವಂತಹ ದುಷ್ಕೃತ್ಯಕ್ಕಿಳಿದಿರುವುದು ಬಹಳ ದುರಂತದ ಸಂಗತಿ. ನಿಜವಾಗಿಯೂ ಈ ರಾಜ್ಯದಲ್ಲಿ ಸರ್ಕಾರ ಜೀವಂತವಾಗಿದೆಯೋ ಇಲ್ಲವೋ ಎಂದು ನನಗೆ ಸಂಶಯ ಬಂದಿದೆ. ಇದು ಬಹಳ ಮಹತ್ವದ ವಿಚಾರವಾದ್ದರಿಂದ ಇಡೀ ರಾಷ್ಟ್ರೀಯ ವಾಹಿನಿಯಲ್ಲಿ ಕೂಡ ಈ ದುಷ್ಕೃತ್ಯ ಬಿತ್ತರಗೊಂಡಿದೆ. ಹೀಗಾಗಿ ಇದಕ್ಕೆ national importance ಇದೆ.

**ಸಭಾಪತಿಯವರು:–** ನಾನು ತಮಗೆ ಖಂಡಿತವಾಗಿಯೂ ಅವಕಾಶ ಕೊಡುತ್ತೇನೆ, ಈಗ ಬೇಡ, ಪ್ರಶ್ನೋತ್ತರಗಳನ್ನು ಮುಗಿಸೋಣ. ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ನಾನು ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಸ್ಸಾಮಿನ ಗುವಾಹಟಿಯ ನಂತರ 2ನೇ ಅತ್ಯಂತ ಕೆಟ್ಟದಾದಂತಹ ಒಂದು ಘಟನೆ ನಮ್ಮ ರಾಜ್ಯದಲ್ಲಿ ನಡೆದಿದೆ. ಅತ್ಯಂತ ಸುಸಂಸ್ಕೃತವಾದಂತಹ ರಾಜ್ಯದಲ್ಲಿ ಇಂತಹ ಒಂದು ಘಟನೆ ನಡೆದಿರುವುದು ಸರಿಯಲ್ಲ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಈ ಘಟನೆಯಿಂದಾಗಿ ಇಡೀ ರಾಜ್ಯದ ಜನ ನೊಂದಿದ್ದಾರೆ. ಸಂವಿಧಾನಬದ್ಧವಾದಂತಹ...

**ಸಭಾಪತಿಯವರು:-** ಮೊದಲು ಪ್ರಶ್ನೋತ್ತರ ಅವಧಿಯನ್ನು ಮುಗಿಸೋಣ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಕ್ಷಮಿಸಬೇಕು, ಯಾವುದೂ ರೆಕಾರ್ಡ್‍ನಲ್ಲಿ ಹೋಗತಕ್ಕದ್ದಲ್ಲ. ಒಬ್ಬರಿಗಿಂತ ಹೆಚ್ಚು ಜನರು ಮಾತನಾಡಿದರೆ ಅದು ಯಾವುದೂ ರೆಕಾರ್ಡ್‍ನಲ್ಲಿ ಹೋಗತಕ್ಕದ್ದಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ರೆಕಾರ್ಡ್ ಮಾಡಬಾರದೆಂದು ಸೂಚಿಸಿದರು)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಯಾವುದೇ ನಾಗರೀಕ ಸರ್ಕಾರ ಕೂಡ ನಾಚಿಕೆಯಿಂದ ತಲೆತಗ್ಗಿಸುವಂತಹ ಅತ್ಯಂತ ಪೈಶಾಚಿಕ ಕೃತ್ಯ ಇದಾಗಿದೆ, ದಯಮಾಡಿ ತಾವು ಸೂಕ್ಷ್ಮ ಸಂವೇದನೆಯವರಾದ್ದರಿಂದ ದಯಮಾಡಿ ಈ ವಿಚಾರದ ಬಗ್ಗೆ ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

**ಸಭಾಪತಿಯವರು:-** ಯಾವುದೂ ರೆಕಾರ್ಡ್‍ಗೆ ಹೋಗತಕ್ಕದಲ್ಲ, ಒಬ್ಬರಿಗಿಂತ ಹೆಚ್ಚು ಜನರು ಮಾತನಾಡಿದರೆ ಅದು ಯಾವುದೂ ದಾಖಲೆಗೆ ಹೋಗತಕ್ಕದ್ದಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ ಪ್ರಶ್ನೋತ್ತರ ಅವಧಿಯನ್ನು ತೆಗೆದುಕೊಳ್ಳಬಾರದೆಂದು ನಾವು ಹೇಳುತ್ತಿಲ್ಲ, ಪ್ರಶ್ನೋತ್ತರ ಅವಧಿಯನ್ನು ತೆಗೆದುಕೊಳ್ಳಿ. ಆದರೆ ಈ ವಿಷಯಕ್ಕೆ ಆದ್ಯತೆ ನೀಡಬೇಕು. ಈ ರಾಜ್ಯದಲ್ಲಿ ಹೆಣ್ಣುಮಕ್ಕಳಿಗೆ ರಕ್ಷಣೆ ಇದೆಯೋ, ಇಲ್ಲವೋ ಎನ್ನುವುದರ ಬಗ್ಗೆ ಮೊನ್ನೆ ಕೂಡ ಪ್ರಸ್ತಾಪವಾಗಿದೆ.

**ಸಭಾಪತಿಯವರು:–** ನಾನು ಅವಕಾಶ ಕೊಡುತ್ತೇನೆ, ಕೊಡುವುದಿಲ್ಲ ಎಂದು ಎಲ್ಲಿ ಹೇಳಿದ್ದೇನೆ? ಅವಕಾಶ ಕೊಡುವುದಿಲ್ಲ ಎಂದು ನಾನೇನಾದರೂ ಹೇಳಿದ್ದೇನೆಯೆ?

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಮೊದಲು ಪ್ರಶ್ನೋತ್ತರ ಅವಧಿಯನ್ನು ತೆಗೆದುಕೊಳ್ಳುವುದಾಗಿ ತಾವು ತಿಳಿಸುತ್ತಿದ್ದೀರಲ್ಲಾ ಅದನ್ನು ಆಮೇಲೆ ತೆಗೆದುಕೊಳ್ಳಿ, ಪರವಾಗಿಲ್ಲ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಗೆ ಮೊದಲು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತಿರುವ ವಿಷಯ ಬಹಳ ಮಹತ್ವಪೂರ್ಣವಾದಂತಹ ವಿಚಾರವಾಗಿದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ರಾಜ್ಯದ ಜನತೆ ಈ ಕೃತ್ಯದಿಂದಾಗಿ ಬಹಳ ಬೇಸತ್ತಿದ್ದಾರೆ, ಈ ರೀತಿ ನಮ್ಮ ಹೆಣ್ಣು ಮಕ್ಕಳನ್ನು ನಡೆಸಿಕೊಳ್ಳುವುದು ಸರಿಯೇ ಎಂದು ನೊಂದುಕೊಂಡಿದ್ದಾರೆ.

(ಗೊಂದಲ)

**ಸಭಾಪತಿಯವರು:–** ಒಬ್ಬರಿಗಿಂತ ಹೆಚ್ಚು ಜನರು ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗತಕ್ಕದ್ದಲ್ಲ.

(ಗೊಂದಲ)

**ಸಭಾಪತಿಯವರು:-** ಈಗ ನಾನು ಹೇಳುವುದನ್ನು ಸ್ವಲ್ಪ ಕೇಳುತ್ತೀರಾ? ಮೊದಲು ಪ್ರಶ್ನೋತ್ತರ ಅವಧಿಯನ್ನು ಮುಗಿಸೋಣ, ನಂತರ ನಾನು ತಮಗೆ ಅವಕಾಶ ಕೊಡುತ್ತೇನೆ. ನನಗೆ ಒಟ್ಟು ಎರಡು ನೋಟೀಸ್‌ಗಳು ಬಂದಿವೆ.

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯ ಅಡಿಯಲ್ಲಿ ನಾವು ಹಿಂದೆ ವಿಷಯಗಳನ್ನು ಪ್ರಸ್ತಾಪ ಮಾಡಿರುವಂತಹ ಸಂದರ್ಭದಲ್ಲಿ ಪ್ರಶ್ನೋತ್ತರ ಅವಧಿಯ ನಂತರವೇ ಪ್ರಸ್ತಾಪ ಮಾಡಬೇಕೆನ್ನುವಂತಹ ವಿಚಾರವನ್ನು ತಾವು ನಮಗೆ ತಿಳಿಸಿದ್ದೀರಿ. ನಾವು ಅದಕ್ಕೆ ತಲೆಬಾಗಿದ್ದೇವೆ. ಆದರೆ ಈ ನಿಲುವಳಿ ಸೂಚನೆಯನ್ನು ತಂದಿರುವಂತಹ ಸಂದರ್ಭದಲ್ಲಿ ಹಿಂದೆ ಕಳುಹಿಸಿಕೊಟ್ಟಿದ್ದಂತಹ ಎಲ್ಲ ವಿಷಯಗಳ ಬಗ್ಗೆಯೂ ಗಮನ ಹರಿಸಬೇಕಾಗುತ್ತದೆ. ಈಗ ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ತಂದಿರುವಂತಹ ವಿಷಯ ಏನಿದೆ ಇದರ ಹಿಂದಿರತಕ್ಕಂತಹ ಮರ್ಮ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

**ಸಭಾಪತಿಯವರು:-** ಈಗ ಆ ವಿಷಯದಲ್ಲಿ ಚರ್ಚೆ ಬೇಡ, ಆ ವಿಷಯವನ್ನು ಈಗ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಖಂಡಿತವಾಗಿಯೂ ಈಗ ಆ ವಿಚಾರ ಬೇಡ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ನಾವು ಇವೊತ್ತು ಚರ್ಚೆ ಮಾಡುತ್ತಿರುವಂತಹ ವಿಚಾರದ ನಂತರ ಪ್ರಶ್ನೋತ್ತರಗಳನ್ನು ಸಹ ತೆಗೆದುಕೊಳ್ಳೋಣ. ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳು ಮತ್ತು ಲಿಖಿತ ಮೂಲಕ ಉತ್ತರಿಸುವ 68 ಪ್ರಶ್ನೆಗಳುಂಟು. ಇಲಾಖೆಯ ಕಾರ್ಯನೀತಿ ಮತ್ತು ಕಾರ್ಯವಿಧಾನದ ಮೇಲೆ ಚರ್ಚೆ ಉಂಟು. ಆದರೆ ಅದು ಯಾವುದೂ ಸಹ ಇವೊತ್ತು ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ತಂದಿರುವಂಹತಹ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಬೇರೆ ಯಾವ ವಿಚಾರಗಳು ಕೂಡ ನಮಗೆ ಮುಖ್ಯವಾದ ವಿಚಾರಗಳಲ್ಲ.

ಮುಖ್ಯವಾಗಿರತಕ್ಕಂತಹ ವಿಚಾರ ಯಾವುದು ಎಂಬುದನ್ನು ತಮ್ಮ ಗಮನಕ್ಕೆ ತಂದ ಮೇಲೆಯೂ ಕೂಡ, ತಾವು ಆ ಸ್ಥಾನದಲ್ಲಿ ಕುಳಿತಿದ್ದೀರಿ, ಬಹುಶಃ ತಾವು ಕೂಡ ಇದನ್ನೆಲ್ಲಾ ವೀಕ್ಷಣೆ ಮಾಡಿದ್ದರೆ ನಾವು ಹೆಚ್ಚಿಗೆ ವಿವರಣೆ ಮಾಡಬೇಕಾಗಿರಲಿಲ್ಲ. ಬಹುಶಃ ಈ ರಾಜ್ಯದಲ್ಲಿ ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿರುವಂತಹ ಸಂದರ್ಭದಲ್ಲಿ ನಾವು ಇದನ್ನು ಚರ್ಚೆ ಮಾಡಿ ಇದನ್ನು ನೀವೇ ಮಾಡಿದ್ದೀರಿ ಎಂದು ಸರ್ಕಾರವನ್ನು ಮುಜುಗರಕ್ಕೆ ಒಳಪಡಿಸಬೇಕೆನ್ನುವಂತಹ ಉದ್ದೇಶವಾಗಲೀ ನಮ್ಮದಲ್ಲ. ಇಂತಹ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಇನ್ನು ಮುಂದೆ ನಿರ್ಮಾಣವಾಗದಂತೆ ನಿಯಂತ್ರಣ ಮಾಡುವ ದಿಕ್ಕಿನಲ್ಲಿ ನಾವು ಏನು ಮಾಡಬೇಕೆಂಬ ಬಗ್ಗೆ ವಿಚಾರ ಮಾಡುವುದಕ್ಕಿಂತ ಪ್ರಮುಖವಾದಂತಹ ಮತ್ತೊಂದು ವಿಚಾರ ನಮ್ಮ ಕರ್ನಾಟಕ ರಾಜ್ಯದಲ್ಲಿದೆಯೇ?

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ನಾನು ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಮಹತ್ವಪೂರ್ಣವಾದ ವಿಷಯವಾಗಿದೆ. 2009ರಲ್ಲಿ ಯಾರು ಈ ರೀತಿ ಮಾಡಿದ್ದಾರೆಯೋ ಅದೇ ಜನ ಈ ರೀತಿಯ ಕೃತ್ಯಗಳನ್ನು ಮಾಡುತ್ತಿದ್ದಾರೆ. ಇದು ಬಹಳ ಅಮಾನವೀಯವಾದಂತಹ ಘಟನೆಯಾಗಿದೆ. ಈ ರಾಜ್ಯದಲ್ಲಿ ಸಂವಿಧಾನಬದ್ಧವಾದ ಸರ್ಕಾರವಿದ್ದೂ, ಪೋಲೀಸ್ ಇಲಾಖೆಯಿದ್ದೂ ಈ ರೀತಿಯ ಘಟನೆಗಳು ನಡೆದಿವೆ ಎಂದರೆ ಇದನ್ನು ಒಪ್ಪುವುದಕ್ಕಾಗುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿದ ನಂತರ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ಅವಕಾಶ ಕೊಡುವುದಿಲ್ಲ ಎಂದು ನಾನು ಹೇಳುತ್ತಿಲ್ಲ.

(ಗೊಂದಲ)

**ಶ್ರೀ ಆರ್.ವಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇಂತಹ ಕೃತ್ಯಗಳಿಂದಾಗಿ ರಾಷ್ಟ್ರ ಮಟ್ಟದಲ್ಲಿ ಕರ್ನಾಟಕ ರಾಜ್ಯ ತಲೆತಗ್ಗಿಸುವಂತಾಗಿದೆ. ಆದ್ದರಿಂದ ದಯವಿಟ್ಟು ತಾವು ಈ ವಿಷಯವನ್ನು ಪ್ರಸ್ತಾಪಿಸಲು ನಮಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತಿದ್ದೇವೆ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಹೆಣ್ಣುಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ, ಈ ರಾಜ್ಯದಲ್ಲಿ ಸಂವಿಧಾನದ ಅಳಿವು-ಉಳಿವಿನ ಪ್ರಶ್ನೆ ಇದೆ. ನಮ್ಮ existence ಇರುವುದು ಈ ರಾಷ್ಟ್ರದ ಸಂವಿಧಾನದಿಂದ, ಆ ಸಂವಿಧಾನಕ್ಕೆ ಬೆಲೆ ಕೊಡದಿರತಕ್ಕಂತಹ ಘಟನೆಗಳು ಈ ರಾಜ್ಯದಲ್ಲಿ ನಡೆಯುತ್ತಿದ್ದರೆ ಹೇಗೆ? ರಾಜ್ಯದ ಜನತೆ ನೆಮ್ಮದಿಯಿಂದ ಜೀವನ ನಡೆಸುವುದಕ್ಕಾಗುತ್ತದೆ? ದಯಮಾಡಿ ತಾವು ದೊಡ್ಡ ಮನಸ್ಸು ಮಾಡಿ ನೈಜತೆ ಮತ್ತು ಗಾಢತೆಯನ್ನು ಅರ್ಥ ಮಾಡಿಕೊಂಡು ಈ ವಿಷಯವನ್ನು ಪ್ರಸ್ತಾಪಿಸಲು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಾವು ಕೂಡಲೇ ಅವಕಾಶ ಮಾಡಿಕೊಡಬೇಕಾಗುತ್ತದೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಇವೊತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿರುವಂತಹ ಎಲ್ಲ ಕಲಾಪಗಳನ್ನೂ ಬದಿಗೊತ್ತಿ ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ಕಳುಹಿಸಿಕೊಟ್ಟಿರುವ ವಿಷಯದ ಬಗ್ಗೆ ಮಾತನಾಡಲು ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ ನಾನು ತಿಳಿಸಿರುವಂತೆ ತಾವು ಅತ್ಯಂತ ಸೂಕ್ಷ್ಮ ಸಂವೇದನಾಶೀಲರಿದ್ದೀರಿ, ಇದರ ಬಗ್ಗೆ ನಿಶ್ಚಿತವಾಗಿಯೂ ತಮ್ಮ ಮನಸ್ಸು ಕೂಡ ಕಲಕಿದೆ ಎನ್ನುವಂತಹ ವಿಚಾರವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ, ತಮ್ಮ ಮುಖವನ್ನು ನೋಡಿದರೆ ನಮಗೆ ಅದು

ಅರ್ಥವಾಗುತ್ತಿದೆ. ಈ ಘಟನೆಯಿಂದಗಿ ತಾವು ಕೂಡ ಬಹಳ ನೋವನ್ನು ಅನುಭವಿಸಿದ್ದೀರಿ, ಇಂತಹ ಘಟನೆಗಳು ನಡೆಯಬಾರದು ಎಂಬುದಾಗಿ ನಿಮ್ಮ ಹೃದಯಾಂತರಾಳದ ಭಾವನೆಯಾಗಿದೆ. ಆ ವಿಚಾರವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಬದ್ಧತೆ ಇರುವಂತಹ ಜನ ಕಳೆದ ಎರಡು ದಿವಸಗಳಿಂದ ನಿದ್ದೆ ಮಾಡಿಲ್ಲ, ಅಷ್ಟು ನೋವನ್ನು ಎಲ್ಲರೂ ಅನುಭವಿಸುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನೆನ್ನೆಯ ದಿವಸ ಇಡೀ ರಾತ್ರಿ ಎಲ್ಲ ರಾಷ್ಟ್ರೀಯ ವಾಹಿನಿಗಳಲ್ಲಿ ಈ ಘಟನೆ ಭಿತ್ತರವಾಗಿದೆ. ಇಡೀ ಭಾರತ ದೇಶದಲ್ಲಿ ಅತ್ಯಂತ ಶಾಂತಿಯುತ ಜೀವನ ಬಯಸುವಂತಹ ನಾಗರೀಕರಿರುವಂತಹ ಈ ಕನ್ನಡ ನಾಡಿನ ಜನ ನಾಚಿಕೆಯಿಂದ ತಲೆತಗ್ಗಿಸುವಂತಹ ಅತ್ಯಂತ ಪೈಶಾಚಿಕವಾದ ಕೃತ್ಯ ಈ ರಾಜ್ಯದಲ್ಲಿ ನಡೆದಿದೆ.

**ಸಭಾಪತಿಯವರು:–** ದಯಮಾಡಿ ನಾನು ಹೇಳುವುದನ್ನು ಕೂಡ ಸ್ವಲ್ಪ ಕೇಳುತ್ತೀರಾ? ನಾನು ಹೇಳುವುದನ್ನು ಕೇಳುವ ಹಾಗಿದ್ದರೆ ಚರ್ಚೆ ಮಾಡಬಹುದು, ಇಲ್ಲವಾದರೆ ಚರ್ಚೆ ಮಾಡುವುದು ಕಷ್ಟವಾಗುತ್ತದೆ. ನಾನು ಮಾತನಾಡುತ್ತೇನೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ನೀವು ಕಳುಹಿಸಿಕೊಟ್ಟಿರುವಂತಹ ನೋಟೀಸ್‌ಗಳನ್ನು ನಾನು ಪೂರ್ಣವಾಗಿ ಗಮನಿಸಿದ್ದೇನೆ. ಮನಸ್ಸು ಕಲಕಿ ಹೋಗುವಂತಹ, ನಡೆಯಬಾರದಂತಹ ಒಂದು ಘಟನೆ ನಮ್ಮ ರಾಜ್ಯದಲ್ಲಿ ನಡೆದಿದೆ. ಆದ್ದರಿಂದ ಬೇರೆಲ್ಲಾ ಕಲಾಪಗಳನ್ನೂ ಬದಿಗೊತ್ತಿ ಇದರ ಬಗ್ಗೆ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಾವು ಕೋರುತ್ತಿದ್ದೀರಿ. ನಮ್ಮ ಸದನದಲ್ಲಿ ನನಗೆ ನೆನಪಿರುವ ಹಾಗೆ ಎಂದೂ ನಾವು ಪ್ರಶ್ನೋತ್ತರ ಅವಧಿಯನ್ನು ಬದಿಗೊತ್ತಿ ನಾವು ನಿಲುವಳಿ ಸೂಚನೆಗೆ ಅವಕಾಶ ಕೊಟ್ಟಿಲ್ಲ. ಆದ್ದರಿಂದ ಒಂದು ಗಂಟೆಯೊಳಗೆ ಬಹಳ ವ್ಯತ್ಯಾಸಗಳೇನೂ ಆಗುವುದಿಲ್ಲ, ಪ್ರಶ್ನೋತ್ತರ ಕಲಾಪ

ಮುಗಿದ ತಕ್ಷಣ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ನೋಟೀಸ್‌ಗೆ ಸಹಿ ಮಾಡಿಕೊಟ್ಟಿರುವಂತಹ ಇತರ ಎಲ್ಲ ಸದಸ್ಯರಿಗೂ ಈ ವಿಷಯದ ಮೇಲೆ ಪೂರ್ವಭಾವಿ ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ. ಆದ್ದರಿಂದ ಪ್ರಶ್ನೋತ್ತರ ಅವಧಿ ಮುಗಿಯುವತನಕ ದಯವಿಟ್ಟು ತಾವೆಲ್ಲರೂ ನನಗೆ ಸಹಕಾರ ನೀಡಬೇಕೆಂದು ನಾನು ಕೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ. ಇದು ಬಹಳ ಮಹತ್ವದ ವಿಷಯವಾಗಿದೆ, ಇಡೀ ರಾಜ್ಯದ ಗೌರವದ ಪ್ರಶ್ನೆ ಇದರಲ್ಲಿದೆ.

**ಸಭಾಪತಿಯವರು:-** ನೀವು ವಿಷಯಕ್ಕೇ ಹೋಗಿಬಿಡುತ್ತೀರಲ್ಲಾ, ನನ್ನನ್ನು ಕೇಳುವುದಕ್ಕೆ ಮುಂಚೆಯೇ. ನಾನು ತಮಗೆ ಒಪ್ಪಿಗೆ ಕೊಡುವುದಕ್ಕೆ ಮುಂಚೆಯೇ ತಾವು ವಿಷಯವನ್ನು ಪ್ರಸ್ತಾಪ ಮಾಡಿದರೆ ಅದು ಸರಿಹೋಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವೇನೂ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ದಯಮಾಡಿ ಬೇರೆಲ್ಲಾ ಕಲಾಪಗಳನ್ನೂ ಬದಿಗೊತ್ತಿ ನಮಗೆ ಈ ವಿಷಯದಲ್ಲಿ ಪೂರ್ವಭಾವಿ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳೀಕೊಳ್ಳುತ್ತಿದ್ದೇವೆ.

**ಸಭಾಪತಿಯವರು:-** ಇಲ್ಲ, ದಯವಿಟ್ಟು ಇಲ್ಲ, ಪ್ರಶ್ನೋತ್ತರ ಅವಧಿ ಮುಗಿಯುವವರೆಗೆ ಅದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕಲಾಪಗಳ ಪಟ್ಟಿಯಲ್ಲಿರುವ ಬೇರೆ ಎಲ್ಲ ವಿಷಯಗಳನ್ನು ಬೇಕಾದರೆ ರಾತ್ರಿ ಒಂದು ಗಂಟೆಯವರೆಗೂ ನಡೆಸಿ, ನಾವು ಬೇಡವೆಂದು ಹೇಳುವುದಿಲ್ಲ. ಆದರೆ ದಯವಿಟ್ಟು ತಾವೀಗ ಈ ವಿಷಯದ ಮೇಲಿನ ಪೂರ್ವಭಾವಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬುದು ನಮ್ಮ ವಿನಂತಿಯಾಗಿದೆ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇಲ್ಲ, ಹಾಗಾದರೆ ಅದರ ಮಹತ್ವವೇ ಹೋಗುತ್ತದೆ.

**ಸಭಾಪತಿಯವರು:–** ದಯಮಾಡಿ ಕ್ಷಮಿಸಬೇಕು, ಇಲ್ಲ ಪ್ರಶ್ನೋತ್ತರಕ್ಕೆ ಮೊದಲು ಈ ವಿಷಯಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ದಯಮಾಡಿ ನಮಗೆ ಈ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟರೆ ತಮ್ಮ ಮನಸ್ಸು ಕೂಡ ಹಗುರವಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಗಂಭೀರವಾಗಿದೆ, ಮೊನ್ನೆ ಬರಗಾಲದ ಮೇಲಿನ ಚರ್ಚೆಯನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಬೇಕೆಂದು ಅವಕಾಶ ಕೋರಿ ತಂದಾಗ ತಾವು ಅದನ್ನು ಪ್ರಶ್ನೋತ್ತರ ಅವಧಿಯ ನಂತರ ತೆಗೆದುಕೊಳ್ಳೋಣ ಎಂದು ಹೇಳಿದ ತಕ್ಷಣ ನಾವು ಪೀಠದಿಂದ ಬಂದಂತಹ ತಮ್ಮ ಆದೇಶಕ್ಕೆ ಗೌರವ ಸೂಚಿಸಿ ಆಯಿತು, ಪ್ರಶ್ನೋತ್ತರ ಅವಧಿಯ ನಂತರವೇ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ ಎಂದು ಒಪ್ಪಿದೆವು. ಆದರೆ ಈ ವಿಷಯ ಇಡೀ ರಾಜ್ಯದ ಸಮಸ್ತ ಜನತೆಯ ಮನ ಕಲಕುವಂತಹ ಅತ್ಯಂತ ಗಂಭೀರವಾದಂತಹ ಪೈಶಾಚಿಕವಾದಂತಹ ರಾಕ್ಷಸಿ ಪ್ರವೃತ್ತಿಯ ಘಟನೆ ನಮ್ಮ ರಾಜ್ಯದಲ್ಲೇನು ನಡೆದಿದೆ ಇದರಿಂದ ಇಡೀ ಭಾರತ ದೇಶದಲ್ಲಿಯೇ ಕನ್ನಡಿಗರಾದ ನಾವು ನಾಚಿಕೆಯಿಂದ ತಲೆತಗ್ಗಿಸುವಂತಾಗಿದೆ. ದಯಮಾಡಿ ಅದಕ್ಕೆ ಅವಕಾಶ ಕಲ್ಪಿಸಿಕೊಡಿ.

**ಸಭಾಪತಿಯವರು:–** ತಾವೀಗ ಈ ವಿಷಯದಲ್ಲಿ ಭಾಷಣ ಮಾಡುವುದಕ್ಕೆ ಹೊರಟಿದ್ದೀರೇನು? ಇಲ್ಲ ನಾನು ತಮಗೆ ಆ ವಿಷಯದ ಬಗ್ಗೆ ಪ್ರಸ್ತಾಪಿಸಲು ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯಮಾಡಿ ಕ್ಷಮಿಸಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ದಯಮಾಡಿ ಪ್ರಿಲಿಮಿನರಿ ಸಬ್ಮಿಷನ್‌ಗೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಿದ್ದೇವೆ.

**ಸಭಾಪತಿಯವರು:–** ಇಲ್ಲ, ಸಾಧ್ಯವಿಲ್ಲ, ದಯಮಾಡಿ ಕ್ಷಮಿಸಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಈ ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಂಡು ನಮಗೆ ಪ್ರಸ್ತಾಪಿಸಲು ಅವಕಾಶ ಕೊಡಬೇಕು.

**ಸಭಾಪತಿಯವರು:–** ಇಲ್ಲ, ಸಾಧ್ಯವಿಲ್ಲ, ದಯಮಾಡಿ ಕ್ಷಮಿಸಬೇಕು.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಇಡೀ ರಾಜ್ಯದ ಕಾನೂನು ಸುವ್ಯವಸ್ಥೆಯ ಪ್ರಶ್ನೆ ಅಡಗಿದೆ.

(ಗೊಂದಲ)

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ವ್ಯವಸ್ಥಿತ ಷಡ್ಯಂತ್ರದಿಂದಾಗಿ ಇಂತಹ ಘಟನೆ ನಡೆದಿದೆ.

(ಗೊಂದಲ)

**ಸಭಾಪತಿಯವರು:–** ತಾವು ಮಾತನಾಡುತ್ತಿರುವಂತಹ ವಿಷಯ ದಾಖಲೆಗೆ ಹೋಗಬೇಕೋ, ಬೇಡವೋ?

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಈ ಘಟನೆಯಿಂದಾಗಿ ತಮ್ಮ ಮನಸ್ಸಿಗೆ ಆಗಿರುವಂತಹ ನೋವನ್ನು ನಾವು ಸಹ ಅರ್ಥ ಮಾಡಿಕೊಳ್ಳುತ್ತೇವೆ. ಸಭಾಪತಿಗಳ ಪೀಠದಲ್ಲಿರುವ ತಾವು ಆ ಸ್ಥಾನದಲ್ಲಿದ್ದುಕೊಂಡು ಇದನ್ನು ಯಾವ ರೀತಿ ವ್ಯಾಖ್ಯಾನ ಮಾಡುತ್ತೀರಿ ಎಂಬುದು ನಮಗೂ ಗೊತ್ತಿದೆ. ತಾವೇನಾದರೂ ಇವೊತ್ತು ಸನ್ಮಾನ್ಯ

ರಾಜ್ಯಪಾಲರ ಸ್ಥಾನದಲ್ಲಿದ್ದರೆ ನೀವು 356ನೇ ವಿಧಿಯನ್ನು ಈಗಲೇ ಜಾರಿಗೊಳಿಸಿ ಕಳುಹಿಸಿಕೊಡುತ್ತಿದ್ದಿರಿ ಎನ್ನುವಂತಹ ವಿಚಾರ ನನಗೆ ಗೊತ್ತಿದೆ. ಆದರೂ ನಾನು ಹೇಳುತ್ತೇನೆ, ಈ ವಿಚಾರದ ಹಿನ್ನೆಲೆಯಲ್ಲಿ ಅದರ ಪ್ರಾಮುಖ್ಯತೆಯನ್ನು ತಾವು ಸಹ ಅಲ್ಲಗಳೆಯುವುದಿಲ್ಲ ಎನ್ನುವಂತಹ ಮಾತನ್ನು ಈಗಾಗಲೇ ತಾವು ತಿಳಿಸಿದ್ದೀರಿ. ಆದರೆ ನಿಜವಾಗಿಯೂ ನಾನು ಹೇಳುತ್ತೇನೆ. ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ತಂದಿರುವಂತಹ ಇದೊಂದು ವಿಷಯವೇನಿದೆ ಇದು ಬೇರೆಲ್ಲಾ ಕಲಾಪಗಳನ್ನು ಬದಿಗೊತ್ತಿ ತೆಗೆದುಕೊಳ್ಳಬೇಕಾಗಿರುವಂತಹ ವಿಷಯವಾದ್ದರಿಂದ ನಾವು ಈ ವಿಚಾರದಲ್ಲಿ ತಮ್ಮ ಮನವೊಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಿಯಮಗಳ ಅಡಿಯಲ್ಲಿ ಇತರ ಕಲಾಪಗಳನ್ನು ಅಮಾನತ್ತಿನಲ್ಲಿಟ್ಟು ಇದನ್ನು ತೆಗೆದುಕೊಳ್ಳುವುದಕ್ಕೆ ನಿಮಗೆ ಅವಕಾಶವಿದ್ದರೂ ಸಹ ಬಹುಶಃ ಯಾವುದೋ ಒಂದು ಸಂಪ್ರದಾಯವನ್ನು ನಾವು ಅನುಸರಿಕೊಂಡು ಬಂದಿರುವಂತಹ ಹಿನ್ನೆಲೆಯಲ್ಲಿ ತಾವು ಮಾತನಾಡಿ ಪ್ರಶ್ನೋತ್ತರ ಅವಧಿಗೆ ಮೊದಲು ಇದಕ್ಕೆ ನಾನು ಅವಕಾಶ ಕೊಡುವುದೇ ಇಲ್ಲ, ಪ್ರಶ್ನೋತ್ತರಗಳ ನಂತರ ಮಾತ್ರ ಅವಕಾಶ ಕೊಡುತ್ತೇನೆ ಎನ್ನುವಂತಹ ತಮ್ಮ ತೀರ್ಪಿಗೆ ತಾವು ಬದ್ಧರಾಗಿಯೇ ಇರುವುದಾದರೆ ನಾವು ತಮ್ಮ ತೀರ್ಪಿಗೆ ತಲೆಬಾಗುತ್ತೇವೆ. ಆದರೆ ನಾವು ತಮ್ಮ ಮನವೊಲಿಸುವುದಕ್ಕೆ ಏನು ಪ್ರಯತ್ನಗಳನ್ನು ಮಾಡಿದ್ದೇವೆ ಅವುಗಳನ್ನು ಪುನರ್ವಿಮರ್ಶೆ ಮಾಡಿ ತಮ್ಮ ನಿಲುವನ್ನು ಪರಿವರ್ತನೆ ಮಾಡಿ ನಮಗೆ ಒಂದು ಅವಕಾಶ ಕೊಡಬೇಕೆಂದು ಮಾತ್ರ ನಾವು ಕೇಳಿಕೊಳ್ಳುತ್ತಿದ್ದೇವೆ.

**ಶ್ರೀ ಆರ್.ಅಶೋಕ (ಉಪ ಮುಖ್ಯಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯ ನಂತರ ಆ ವಿಷಯವನ್ನು ಪ್ರಸ್ತಾಪಿಸಲು ತಾವು ಅವಕಾಶ ಮಾಡಿಕೊಟ್ಟರೆ ನಾವು ಚರ್ಚೆಗೆ ಸಿದ್ಧರಿದ್ದೇವೆ. ತಾವು ಚರ್ಚೆಗೆ ಎಷ್ಟು ಸಮಯವನ್ನು ಬೇಕಾದರೂ ನಿಗದಿಪಡಿಸಿ, ನಮ್ಮದೇನೂ ಅಭ್ಯಂತರವಿಲ್ಲ, ಆದರೆ ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ನಾವು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಎರಡೂ ಸದನಗಳು ಮತ್ತು ಸರ್ಕಾರ ಅಸ್ತಿತ್ವದಲ್ಲಿರುವುದು ನಮ್ಮ ಸಂವಿಧಾನದಿಂದ. ಆ ಸಂವಿಧಾನವನ್ನು ದಿಕ್ಕರಿಸಿ ಇಲ್ಲಿ ಚುನಾಯಿತ ಸರ್ಕಾರ ಇರುವಾಗ ಸಹ 'ವಿವಿಧತೆಯಲ್ಲಿ ಏಕತೆ' ಎನ್ನುವಂತಹ ನಮ್ಮ ದೇಶದ ಮೂಲ ಸತ್ವ ಏನಿತ್ತು, ಇದರಂತೆ ಸಾವಿರಾರು ವರ್ಷಗಳಿಂದ ನಾವು ನಡೆದುಕೊಂಡು ಬಂದಿದ್ದೇವೆ. ಅದನ್ನು ಗಾಳಿಗೆ ತೂರಿ ಸಂಜೆ ಸುಮಾರು ಆರೇಳು ಗಂಟೆಯ ಸಮಯದಲ್ಲಿ ಹೆಣ್ಣುಮಕ್ಕಳ ಮೇಲೆ ಈ ರೀತಿ ಹಲ್ಲೆ ನಡೆಸಿ ಅಮಾನವೀಯವಾಗಿ ನಡೆಸಿಕೊಳ್ಳುತ್ತಾರೆ ಎಂದರೆ ಆ ಘಟನೆಯಿಂದ ಬಹಳ ಮನನೊಂದು ನಾವು ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ನೀಡಬೇಕೆಂದು ವಿನಂತಿಸುತ್ತಿದ್ದೇವೆ. ತಾವು ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕು, ಕೊನೆಯಪಕ್ಷ ನಮಗೆ ಪ್ರಿಲಿಮಿನರಿ ಸಬ್ಮಿಷನ್‌ಗಾದರೂ ಅವಕಾಶ ಮಾಡಿಕೊಡಬೇಕೆಂದು ನಾವೆಲ್ಲಾ ಹಿರಿಯರು ವಿನಂತಿಸಿಕೊಳ್ಳುತ್ತಿದ್ದೇವೆ.

**ಡಾ॥ ಎಸ್.ಆರ್. ಲೀಲಾ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯ ನಂತರ ತೆಗೆದುಕೊಂಡರೆ ಈ ವಿಷಯದ ಪ್ರಾಮುಖ್ಯತೆ ಏನಾದರೂ ಕಡಿಮೆಯಾಗುತ್ತದೆಯೇ? ಏತಕ್ಕೆ ಇವರು ಇಷ್ಟೊಂದು ಹಠ ಹಿಡಿಯುತ್ತಿದ್ದಾರೆ?

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಇವರು ಮಹಿಳೆಯಾಗಿ, ತಾಯಿಯಾಗಿ ಈ ರೀತಿ ಮಾತನಾಡುತ್ತಿರುವುದನ್ನು ನೋಡಿ ನಮಗೆ ಬಹಳ ದುಃಖವಾಗುತ್ತಿದೆ. ಇದು ಈ ದೇಶದ ದುರ್ದೈವ.

(ಗೊಂದಲ)

(12–30 ಗಂಟೆ)

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿ ನಡೆಸಲು ಸದನದ ಬಾವಿಗೆ ಬಂದರು)**

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಮಾನ್ಯ ಸದಸ್ಯರು ಮಾತನಾಡುವಂತಹ ಯಾವ ವಿಷಯವು ರೆಕಾರ್ಡ್‌ಗೆ ಹೋಗತಕ್ಕದಲ್ಲವೆಂದು ಸೂಚಿಸಿದರು)**

(ಗೊಂದಲ)

**ಶ್ರೀ ವಿ.ಸೋಮಣ್ಣ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಇದೊಂದು ಗಂಭೀರವಾದಂತಹ ವಿಚಾರ. ಈ ವಿಚಾರವನ್ನು ಯಾವುದೇ ಕಾರಣಕ್ಕೂ ಟ್ರ್ಯಾಕ್ ಬದಲಾವಣೆ ಮಾಡುವುದು ಬೇಡ. ಸನ್ಮಾನ್ಯ ಗೃಹ ಸಚಿವರು ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಅದರ ಗಾಂಭೀರ್ಯವನ್ನು ಅರಿತುಕೊಂಡು ಎಷ್ಟು ಗಂಟೆ ಬೇಕಾದರು ಚರ್ಚೆ ಆಗಲಿ ಎಂದು ತಿಳಿಸಿದರು, ರಾಜ್ಯದಲ್ಲಿ ಆಗಿರುವಂತಹ ಕಹಿ ಘಟನೆಯ ಬಗ್ಗೆ ಈಗಾಗಲೇ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ, ಮತ್ತು ಏನು ಮಾಡಬೇಕು ಎಂದು ತಮ್ಮೆಲ್ಲರ ಅಭಿಪ್ರಾಯವನ್ನು ಕೇಳುವುದಕ್ಕೆ ಈಗಾಗಲೇ ಅವಕಾಶವನ್ನು ಕೊಟ್ಟಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದಂತಹ ಮಾನ್ಯ ನಾಣಯ್ಯನವರು ಒಂದು ದೊಡ್ಡ ಮಾತನ್ನು ಹೇಳಿದರು, ನೀವು ಮೊದಲಿನಿಂದಲೂ ಈ ಒಂದು ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದೀರಿ, ಒಂದು ವೇಳೆ ಆ ಸಂಪ್ರದಾಯಕ್ಕೇ ತಾವು ಬದ್ದರಾಗುವುದಾದರೆ, ಪ್ರಶ್ನೋತ್ತರ ಅವಧಿ ಮುಗಿದ ಮೇಲೆಯೇ ಈ ವಿಷಯವನ್ನು ತೆಗೆದುಕೊಳ್ಳುತ್ತೇನೆ ಎನ್ನುವುದಾದರೆ ಏನು ಮಾಡಬೇಕು ಎಂಬುದನ್ನು ತಮ್ಮ ವಿವೇಚನೆಗೆ ಬಿಟ್ಟಿದ್ದು ಎಂಬ ಮಾತನ್ನು ಹೇಳಿದರು. ಮಾನ್ಯ ವೀರಣ್ಣ ಮತ್ತೀಕಟ್ಟಿಯವರು ಸಭಾಪತಿಯವರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರು ಆ ಪೀಠದಲ್ಲಿದ್ದಾಗ ಈ ರೀತಿಯ ಅನೇಕ ಗುರುತರವಾದ ವಿಚಾರಗಳ ಬಗ್ಗೆ ರಾಜ್ಯದ ಜನತೆಗೆ ಬೆಳಕನ್ನು ಚೆಲ್ಲಿರುವಂಥ ನಿದರ್ಶನಗಳಿವೆ. ದಯಮಾಡಿ ತಮ್ಮ ಮೂಲಕ ಕಾಂಗ್ರೆಸ್ಸಿನ ಎಲ್ಲಾ ಹಿರಿಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಇದರ ಗಾಂಭೀರ್ಯತೆ ಏನಿದೆ, ಇದರ ಅವ್ಯವಸ್ಥೆ ಏನಿದೆ, ಈ ಪಿಡುಗನ್ನು ತೊಡೆದು ಹಾಕುವುದಕ್ಕೆ

ತಮ್ಮ ಅಭಿಪ್ರಾಯಗಳ ಜೊತೆಯಲ್ಲಿ ಸರ್ಕಾರವು ಯಾವ ರೀತಿ ಇದಕ್ಕೆ ಸ್ಪಂದಿಸಿದೆ ಎನ್ನುವುದನ್ನು ಕೂಡ ನಾವು ಹೇಳುವುದಕ್ಕೆ ತಯಾರಾಗಿದ್ದೇವೆ ಎನ್ನುವಂಥ ಮಾತನ್ನು ಸನ್ಮಾನ್ಯ ಗೃಹ ಸಚಿವರು ತಿಳಿಸಿದ್ದಾರೆ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ತಾವು ಸಭಾಪತಿಯವರಾಗಿದ್ದಂತಹವರು, ಆ ಸ್ಥಾನದಲ್ಲಿ ಕುಳಿತುಕೊಂಡು ಸುಮಾರು ವರ್ಷಗಳ ಕಾಲ ಕೆಲಸ ಮಾಡಿರುವಂಥವರು ತಮ್ಮ ಮೂಲಕ ನಾನು ವಿನಂತಿ ಮಾಡುವುದೇನೆಂದರೆ, ಈಗೇನು ಪ್ರಶ್ನೋತ್ತರ ಅವಧಿ ಇದೆ, ಇದು ಮುಗಿದ ಕೂಡಲೆ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದಿಂದ ಯಾವುದೇ ಅಭ್ಯಂತರವಿಲ್ಲ. ಆದರೆ ಇವತ್ತಿನ ದಿವಸ ಈ ವಿಷಯ ಕೆಳ ಮನೆಯಲ್ಲಿಯೂ ಚರ್ಚೆ ಆಗುತ್ತಿದೆ, ಹಾಗಾಗಿ ಮೇಲ್ಮನೆಯಲ್ಲಿಯೂ ಸಹ ಈ ವಿಷಯಕ್ಕೆ ಹೆಚ್ಚಿನ ಆದ್ಯತೆ ಕೊಡುವುದಕ್ಕೆ ಸರ್ಕಾರ ತಯಾರಿದೆ. ಯಾರು culprits ಇದ್ದಾರೆ, ಅವರನ್ನು ಯಾವುದೇ ಕಾರಣಕ್ಕೂ ನಾವು ಸೈಡ್ ಮಾಡುವಂಥದಕ್ಕೆ ನಾವು ತಯಾರಿಲ್ಲ. ಹಾಗಾಗಿ ತಮ್ಮ ಮೂಲಕ ನಾನು ಹಿರಿಯ ಸದಸ್ಯರಲ್ಲಿ ಹಾಗೂ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಸುವುದೇನೆಂದರೆ, ಆಗಿರುವಂತಹ ಅಹಿತರ ಘಟನೆ ಏನಿದೆ ಇದು ತಲೆತಗ್ಗಿಸುವಂಥ ಘಟನೆಯಾಗಿದೆ. ಇದಕ್ಕೆ ಉತ್ತರ ಕೊಡಲು ಸರ್ಕಾರ ತಯಾರಾಗಿದೆ. ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳುವುದಕ್ಕೆ ತಿಳಿಸಬೇಕು, ಸನ್ಮಾನ್ಯ ಸಭಾಪತಿಯವರು ಏನು ರೂಲಿಂಗ್ ಕೊಟ್ಟಿದ್ದಾರೆ ಆ ರೂಲಿಂಗ್ ಆದತಕ್ಷಣ ತಾವು ಯಾವ ರೀತಿ ಚರ್ಚೆ ಮಾಡಬೇಕು, ಏನು ಮಾಡಬೇಕು ಎಂಬುದರ ಬಗ್ಗೆ ಬೆಳಕನ್ನು ಚೆಲ್ಲಬೇಕು, ಅದಕ್ಕೆ ಸರ್ಕಾರ ಕೂಡ ತೀಕ್ಷ್ಣವಾದಂತಹ ಉತ್ತರ ಕೊಡುವುದಕ್ಕೆ ತಯಾರಾಗಿದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರ ವಿಷಯದ ಗಾಂಭೀರ್ಯತೆಯನ್ನು ಅರಿತುಕೊಂಡು ಇದಕ್ಕೆ ಸ್ಪಂದಿಸಬೇಕಾಗಿತ್ತು. ನಿಶ್ಚಿತವಾಗಿ ಹೇಳುವುದೇನೆಂದರೆ ಇಂತಹ ಒಂದು ಅತ್ಯಂತ ಅವಮಾನಕರವಾದಂತಹ ಘಟನೆ ನಡೆದಂತಹ ಸಂದರ್ಭದಲ್ಲಿ ಇಡೀ ಪ್ರಪಂಚವೇ ನಾಚಿಕೆಯಿಂದ ತಲೆ ತಗ್ಗಿಸುವಂತಹ ಘಟನೆ

ನಮ್ಮ ರಾಜ್ಯದಲ್ಲಿ ನಡೆದಿರುವುದಕ್ಕೆ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ, ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳುತ್ತೀರೆಂದು ನಾನು ನಿರೀಕ್ಷೆ ಮಾಡಿದ್ದೆ. ಮಾನ್ಯ ಸೋಮಣ್ಣನವರು ಹಿರಿಯರು, ಅನುಭವಿಗಳು ಇಂತಹ ಸಂದರ್ಭದಲ್ಲಿ ಈ ವಿಷಯಕ್ಕೆ ಸ್ಪಂದಿಸುತ್ತಾರೆಂದು ಅವರಿಂದ ನಾನು ಬಹಳ ನಿರೀಕ್ಷೆ ಮಾಡಿದ್ದೆ. ನಿಜವಾಗಿಯೂ ಮಾನ್ಯ ಸೋಮಣ್ಣವರ ಮನಸ್ಸು ಸಹ ಈ ಘಟನೆಯಿಂದ ಕಲಕಿದೆ ಎಂದು ಅವರ ಭಾವನೆಯನ್ನು ಅರ್ಥಮಾಡಿಕೊಳ್ಳಬಲ್ಲೆ. ಆದುದರಿಂದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ. ದಯಾಮಾಡಿ ಇನ್ನೊಮ್ಮೆ ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ ಇದು ಅತ್ಯಂತ ಗಂಭೀರವಾದಂತಹ ಘಟನೆ ಆಗಿರುವುದರಿಂದ ದಯಮಾಡಿ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ಪೂರ್ವಬಾವಿ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಇದಕ್ಕೆ ಸರ್ಕಾರ ಕೂಡ ಸ್ಪಂದಿಸುತ್ತದೆ ಎಂಬ ವಿಶ್ವಾಸ ಕೂಡ ನಮಗಿದೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದಂತಹ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು)**

**ಸಭಾಪತಿಯವರು:-** ಸನ್ಮಾನ್ಯ ವಿರೋಧ ಪಕ್ಷದ ನಾಯಕರನ್ನು, ಗೌರವಾನ್ವಿತ ಎಲ್ಲಾ ಸದಸ್ಯರಲ್ಲಿ ಮತ್ತೊಮ್ಮೆ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಗಂಟೆ ಎಂದರೆ, ಒಂದು ಗಂಟೆಗೆ ಸರಿಯಾಗಿ ಪ್ರಶ್ನೋತ್ತರ ಅವಧಿಯನ್ನು ಮುಗಿಸೋಣ. ಮುಗಿಸದ ತಕ್ಷಣ ತಾವೆಲ್ಲರೂ ಕಳುಹಿಸಿರುವಂತಹ ನಿಲುವಳಿ ಸೂಚನೆಯ ಬಗ್ಗೆ ಪೂರ್ವಬಾವಿ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಇದು ನಮ್ಮ ಪದ್ಧತಿ ಹಾಗೂ ನಡೆದುಕೊಂಡು ಬಂದಿರುವಂತಹ ಕಾರ್ಯವಿಧಾನ. ನಾವು ಎಂದೂ ಸಹ ಪ್ರಶ್ನೋತ್ತರವನ್ನು ಬದಿಗೊತ್ತಿ ಯಾವುದೇ ಚರ್ಚೆಯನ್ನು ತೆಗೆದುಕೊಂಡಿರುವಂತಹ ನಿದರ್ಶನಗಳು ನಮ್ಮ ಸದನದಲ್ಲಿ ನಡೆದಿಲ್ಲ. ಹಾಗಾಗಿ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ

ಅವಕಾಶ ಮಾಡಿಕೊಡಬೇಕೆಂದು ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಸಹ ಬಹಳ ಭಾರವಾದ ಹೃದಯದಿಂದ ಇವತ್ತು ಸದನದ ಬಾವಿಯನ್ನು ಪ್ರವೇಶ ಮಾಡಿದೆ. ಇದು ನನಗೂ ಸಹ ಬಹಳ ನೋವು ತರುವಂತಹ ಸಂಗತಿಯಾಗಿದೆ. ನಾನು ಇಡೀ ಕರ್ನಾಟಕ ರಾಜ್ಯವನ್ನು ವ್ಯಾಪಿಸಿರುವಂತಹ 'ಬರ'ದ ಬಗ್ಗೆ ನಿಲುವಳಿ ಸೂಚನೆಯನ್ನು ತಂದಾಗ ತಾವು ಪ್ರಶ್ನೋತ್ತರದ ಅವಧಿ ಮುಗಿದ ಮೇಲೆ ತೆಗೆದುಕೊಳ್ಳೋಣವೆಂದು ಹೇಳಿದಾಗ ತಮ್ಮ ಮಾತಿಗೆ ಗೌರವ ಕೊಟ್ಟು ಪ್ರಶ್ನೋತ್ತರ ಅವಧಿಯನ್ನು ನಡೆಸುವುದಕ್ಕೆ ಅವಕಾಶ ಕಲ್ಪಿಸಿದೆವು, ನಂತರ ತಾವು ನಮಗೆ ಅವಕಾಶ ಕೊಟ್ಟಿರಿ. ನಾವು ಸುಧೀರ್ಘವಾದಂತಹ ಚರ್ಚೆ ಮಾಡಿ, ಅನೇಕ ಮಹತ್ವವಾದಂತಹ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದೆವು, ಅದಕ್ಕೆ ಸರ್ಕಾರ ಕೂಡ ಉತ್ತರವನ್ನು ಕೊಟ್ಟಿದೆ. ಅದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. I do not want to go deep into the merits of that discussion. ಆದರೆ ಈ ಸಂದರ್ಭದಲ್ಲಿ ನಾವು ಏಕೆ ಇಷ್ಟು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ ಎಂದರೆ ಇದು ಮೊದಲನೆ ಘಟನೆ ಆಗಿದ್ದರೆ ಅದನ್ನು ನಾವು ಕ್ಷಮಿಸಬಹುದಾಗಿತ್ತು. ಆದರೆ ಇಂತಹ ಘಟನೆ ಮೇಲಿಂದ ಮೇಲೆ ಪುನರಾವರ್ತನೆ ಆಗುತ್ತಿದೆ. ಈ ರಾಜ್ಯದಲ್ಲಿ ಮಹಿಳೆಯರು ಗೌರವದಿಂದ ತಲೆಎತ್ತಿ ತಿರುಗಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದಕಾರಣ ವಿಷಯದ ಗಾಂಭೀರ್ಯತೆಯನ್ನು ಅರ್ಥಮಾಡಿಕೊಂಡು ತಾವು ಇದಕ್ಕೆ ಅವಕಾಶವನ್ನು ಕಲ್ಪಿಸಿದರೆ ಬಹಳ ಒಳ್ಳೆಯದು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಪೂರ್ವಬಾವಿ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ಹೇಳಲಿಲ್ಲ. ನಾನು ಅದರ ಗಾಂಭೀರ್ಯತೆಯನ್ನು ಅರ್ಥಮಾಡಿಕೊಂಡು ಮುಂದಕ್ಕೆ ಹೋಗೋಣ ಎಂದು ಹೇಳಿದ್ದು. ಆದರೆ ಪ್ರಶ್ನೋತ್ತರ ಅವಧಿಯನ್ನು ಬದಿಗಿಟ್ಟು, ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಿದರೆ ಆಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, 24ನೇ ಜನವರಿ 2009 ಪಬ್ ಮೇಲೆ ಶ್ರೀರಾಮಸೇನೆಯವರು ಮಹಿಳೆಯರ ಮೇಲೆ ಹಲ್ಲೆ ಮಾಡಿದಂತಹ ಸಂದರ್ಭದಲ್ಲಿ ಅವರನ್ನು ಗೂಂಡಾಗಳಂತೆ ಪರಿಗಣಿಸಿ, ಗೂಂಡಾ ಕಾಯಿದೆ ಅಡಿಯಲ್ಲಿ ಅವರ ಮೇಲೆ ಕ್ರಮಕೈಗೊಳ್ಳುತ್ತೇವೆಂದು ಹೇಳಿ ಅವರ ಮೇಲೆ ಯಾವ ರೀತಿಯಾದಂತಹ ಕ್ರಮವನ್ನು ಕೈಗೊಳ್ಳಲಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಚರ್ಚೆಗೆ ನಾನು ಅವಕಾಶ ಕೊಟ್ಟಿಲ್ಲ. ದಯಮಾಡಿ ಈಗ ಸಾಧ್ಯವಿಲ್ಲ. ದಯಮಾಡಿ ಸಹಕರಿಸಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಜೀವಂತವಾಗಿದೆಯೇ ಇಲ್ಲವೆ? ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಂತಹ ಸಾಮರ್ಥ್ಯ ಈ ಸರ್ಕಾರಕ್ಕೆ ಇದೆಯೇ ಇಲ್ಲವೆ ಎಂಬುದರ ಬಗ್ಗೆ ನಮಗೆ ಜಿಜ್ಞಾಸೆ ಇದೆ. ಆ ದೃಷ್ಟಿಯಿಂದ ತಾವು ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ವಿನಯಪೂರ್ವಕವಾಗಿ ವಿನಂತಿಸುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಮಹಿಳೆಯರ ಗೌರವಕ್ಕಿಂತ ಪ್ರಶ್ನೋತ್ತರ ಅವಧಿಯೇ ಮುಖ್ಯವಾಗಿದೆಯೇ. ಹೇಳಿ. ನಿಮ್ಮ ಮನೆಯವರನ್ನು ಕೇಳಿದರೂ ಸಹ ಅವರು ಹೇಳುವುದೇನೆಂದರೆ, ಮೊದಲ ನೀವು ಮಹಿಳೆಯರ ಮಾನ ಉಳಿಸಿ, ಈ ದೇಶದಲ್ಲಿರುವಂತಹ ಮಹಿಳೆಯರ ಗೌರವವನ್ನು ಹೆಚ್ಚಿಸಿ ಹಾಗಾಗಿ ಮೊದಲು ಈ ವಿಷಯದ ಬಗ್ಗೆ ಚರ್ಚೆ ಆಗಲಿ ಎಂದು ಹೇಳುತ್ತಾರೆ.

**ಸಭಾಪತಿಯವರು:-** ಮೊದಲು ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಪ್ರಶ್ನೋತ್ತರವನ್ನು ನಡೆಸೋಣ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಮೊದಲು ಬರ್ನಿಂಗ್ ವಿಷಯ ಚರ್ಚೆಯಾಗಲಿ.

**ಸಭಾಪತಿಯವರು:-** ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿದ್ದೇನೆ.

**(12 ಗಂಟೆ 39 ನಿಮಿಷಕ್ಕೆ ಮುಂದೂಡಿದ ಸದನವು ಮತ್ತೆ 1 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು)**

**ಸಭಾಪತಿಯವರು:-** ಸದನ 10 ನಿಮಿಷಗಳ ಕಾಲ ಮುಂದೂಡುವಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಗೌರವಾನ್ವಿತ ಎಲ್ಲಾ ವಿರೋಧ ಪಕ್ಷದ ಸದಸ್ಯರು ಧರಣಿ ಮಾಡುತ್ತಿದ್ದರು, ಬಾವಿಯೊಳಗಿದ್ದರು. ಆ ಸಂದರ್ಭದಲ್ಲಿ ಗೌರವಾನ್ವಿತ ವಿರೋಧ ಪಕ್ಷದ ನಾಯಕರನ್ನು ಜೆಡಿಎಸ್ ಪಕ್ಷದ ನಾಯಕರಾದ ಮಾನ್ಯ ನಾಣಯ್ಯ, ಮಾನ್ಯ ಹೊರಟ್ಟಿ, ಮಾನ್ಯ ವೀರಣ್ಣ ಮತ್ತಿಕಟ್ಟಿ ಹಾಗೂ ಪ್ರಮುಖರನ್ನು ನನ್ನ ಕೊಠಡಿಗೆ ಕರೆದು ಮಾತನಾಡಿದೆ. ಇವತ್ತು ನಿನ್ನೆ ಮಂಗಳೂರಿನಲ್ಲಿ ನಡೆದಿರುವ, ಮನಸ್ಸಿಗೆ ನೋವಾಗುವ ಘಟನೆ ಎಲ್ಲರನ್ನೂ ಕಲಕುತ್ತಿದೆ, ನಾಗರಿಕ ಸಮಾಜ ಇದನ್ನು ತಿರಸ್ಕಾರದಿಂದ ನೋಡಬೇಕು, ಇಂತಹ ಘಟನೆ ನಡೆಯಬಾರದು ಎನ್ನುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರುಗಳು ಒತ್ತಾಯ ಮಾಡಿದರು.

ನಾನು, ಎಲ್ಲಾ ಗೌರವಾನ್ವಿತ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ಅವಧಿ ಹಾಗೂ ಶೂನ್ಯವೇಳೆ ಮುಗಿಸಿದ ತಕ್ಷಣ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡುತ್ತೇನೆ. ಸಾಮಾನ್ಯವಾಗಿ ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಯಾರಿಗಾದರೂ ಒಬ್ಬರಿಗೆ ಮಾತನಾಡಲು ಅವಕಾಶ ಕೊಡಲಾಗುತ್ತದೆ. ಆದರೆ, ನಡೆದಿರುವ ದುರ್ಘಟನೆ, ಅದರ ವ್ಯಾಪ್ತಿಯ ಹಿನ್ನೆಲೆಯಲ್ಲಿ ಸ್ವಲ್ಪ ಸಮಾಧಾನವಾಗಿ ಪ್ರಿಲಿಮಿನರಿ ಸಬ್‌ಮಿಷನ್ ಕೇಳೋಣ, ನಂತರ ಸರ್ಕಾರ ಏನು ಹೇಳುತ್ತದೆ ಕೇಳಿ ಅಂತಿಮ ನಿರ್ಣಯ ಮಾಡೋಣ. ನಿಲುವಳಿ ಸೂಚನೆ ಅಡಿಯಲ್ಲಿ ಇದಕ್ಕೆ ಅವಕಾಶ ಕೊಡಬೇಕೋ ಬೇಡವೋ ಎಂಬುದನ್ನು ನಂತರ ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ

ನಾಯಕರು, ಇತರ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ನಾನು ಹಾಗೂ ನಮ್ಮ ಪಕ್ಷದ ಅನೇಕ ಸದಸ್ಯರು, ಹಿರಿಯರಾದ ಮಾನ್ಯ ನಾಣಯ್ಯನವರು, ಮಾನ್ಯ ಹೊರಟ್ಟಿಯವರು ತಮ್ಮ ಕೊಠಡಿಯಲ್ಲಿ ಕುಳಿತು ಸದರಿ ವಿಷಯದ ಬಗ್ಗೆ ಮಾತನಾಡಿದಾಗ ಆ ವಿಷಯ ತಮ್ಮ ಮನಸ್ಸನ್ನೂ ಕೂಡ ಕಲುಕಿತು ಎಂದು ಅಲ್ಲೂ ಹೇಳಿದಿರಿ, ಇಲ್ಲೂ ಹೇಳಿದಿರಿ. ಈ ಸಂದರ್ಭದಲ್ಲಿ ನಾನು ಬಹಳಷ್ಟು ನಿರೀಕ್ಷಣೆ ಮಾಡಿದ್ದೆ. ಸರ್ಕಾರ ಇಂತಹ ಮಹತ್ವದ ವಿಚಾರವನ್ನು ಪ್ರತಿಷ್ಠೆ ಮಾಡಿಕೊಳ್ಳಲಾರದೆ ಚರ್ಚೆಗೆ ಅವಕಾಶ ಕಲ್ಪಿಸುತ್ತಾರೆ ಎನ್ನುವಂತಹ ಭಾವನೆ ನನಗೂ ಇತ್ತು. ಪ್ರತಿಪಕ್ಷದಲ್ಲಿದ್ದುಕೊಂಡು ಸದನ ನಡೆಯಬೇಕು, ನಾಡಿನ ಜನರ ಸಮಸ್ಯೆಗಳಿಗೆ ದುಃಖ ದುಮ್ಮಾನಗಳಿಗೆ ಈ ಸದನದ ಮುಖಾಂತರ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆನ್ನುವ ವಿಚಾರದಲ್ಲಿ ನಾವು ಮೊದಲಿಗರು. ಸದನ ಸ್ಟಾಲ್ ಮಾಡುವುದರಿಂದ ಬಹುತೇಕವಾಗಿ ನಮಗೂ ಒಳ್ಳೆಯದಲ್ಲ, ರಾಜ್ಯದ ಜನತೆಗೂ ಒಳ್ಳೆಯದಲ್ಲ. ಅದನ್ನೂ ಕೂಡ ನಾವು ಕಲ್ಪನೆಗೆ ತೆಗೆದುಕೊಂಡಿದ್ದೇವೆ. ಮೊದಲು ಈ ವಿಷಯವನ್ನು ತೆಗೆದುಕೊಂಡು ಆಮೇಲೆ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡಿದ್ದರೆ ಏನು ಆಗುತ್ತಿರಲಿಲ್ಲ. ಆದರೂ ಗೌರವಾನ್ವಿತ ಸಭಾಪತಿಯವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಾವು ಸದನವನ್ನು ಸ್ಟಾಲ್ ಮಾಡುವುದರಿಂದ ರಾಜ್ಯದ ಜನತೆಗೆ ಒಳ್ಳೆಯ ಸಂದೇಶ ಹೋಗುವುದಿಲ್ಲ. ಆದರೆ, ನಿಶ್ಚಿತವಾಗಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶವನ್ನು ಕೊಡುತ್ತಿದ್ದಾರೆ ಮತ್ತು ಸರ್ಕಾರವೂ ಕೂಡ ಅದಕ್ಕೆ ಪ್ರತಿಯಾಗಿ ಉತ್ತರವನ್ನು ಕೊಟ್ಟು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಉತ್ಸುಕತೆಯಿಂದ ಇದೆ ಎಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಸದನದ ಕಲಾಪಗಳು ನಡೆಯಬೇಕೆನ್ನುವ ವಿಚಾರದಲ್ಲಿ ಪ್ರತಿಪಕ್ಷ ಅಪಾರವಾದ ನಂಬಿಕೆ, ವಿಶ್ವಾಸವನ್ನು ಇಟ್ಟಿದ್ದರಿಂದ ಅದರ ಮುಖಾಂತರ ರಾಜ್ಯದ ಅನೇಕ ಜನರ ದುಃಖ ದುಮ್ಮಾನಗಳ ಸಮಸ್ಯೆಗೆ ಪರಿಹಾರವನ್ನು

ಕಂಡುಹಿಡಿದುಕೊಳ್ಳುವುದಕ್ಕೆ ಒಳಿತು ಆಗಲಿ ಎನ್ನುವ ವಿಚಾರದಿಂದ ನಾವು ತಮ್ಮ ಮಾತಿಗೆ ಗೌರವ ಕೊಡುತ್ತಿದ್ದೇವೆ. ನಮ್ಮ ಪಕ್ಷದ ಎಲ್ಲಾ ಸದಸ್ಯರಿಗೆ ತಮ್ಮ ಸ್ಥಾನಗಳಿಗೆ ಬರುವುದಕ್ಕೆ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಪ್ರಶ್ನೋತ್ತರ ಮತ್ತು ಶೂನ್ಯ ವೇಳೆ ಮುಗಿದ ನಂತರ ತಕ್ಷಣ ಈ ವಿಚಾರವನ್ನು ಕೈಗೆತ್ತಿಕೊಳ್ಳಬೇಕೆನ್ನುವಂತಹ ಮಾತನ್ನು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**(ಧರಣಿ ನಿರತರಾಗಿದ್ದ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)**

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾವು ನಿಮ್ಮ ತೀರ್ಪಿಗೆ ತಲೆ ಬಾಗಿದ್ದೇವೆ. ಏಕೆಂದರೆ, ಪ್ರಶ್ನೋತ್ತರ ಬದಿಗೊತ್ತಿ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಹಿಂದಿನ ಸಂಪ್ರದಾಯಗಳಿಲ್ಲ. ಆ ಹಿನ್ನೆಲೆಯಲ್ಲಿ ತಾವು ಎತ್ತಿರತಕ್ಕಂಥ ವಿಚಾರವನ್ನು ನಾವೆಲ್ಲಾ ಒಪ್ಪಿದ್ದೇವೆ. ಅದರ ಜೊತೆಯಲ್ಲಿ ಈ ಸದನದ ಇತಿಹಾಸದಲ್ಲಿ, ಇಷ್ಟು ದೊಡ್ಡ ಪ್ರಮಾಣದ ಅತ್ಯಾಚಾರ ಕಣ್ಣು ಎದುರಿಗಡೆಯೇ ಸರ್ಕಾರ ಇದ್ದಾಗ, ಅಧಿಕಾರಿಗಳು ಇದ್ದಾಗ ನಡೆದಿರತಕ್ಕಂಥದ್ದು ಬಹುಶಃ ಎಂದೂ ಆಗಿರಲಾರದು ಎನ್ನುವಂತಹ ಭಾವನೆ ಇದೆ. ಈ ಹಿನ್ನೆಯಲ್ಲಿ ತಾವು ಕಾನೂನು ಮತ್ತು ನಿಯಮಗಳನ್ನು ಸ್ವಲ್ಪ ಎಲ್ಲಾದರೂ ವಿಸ್ತಾರ ಮಾಡುವಾಗ, ಬರೀ ಪ್ರಿಲಿಮಿನರಿ ಸಬ್‌ಮಿಷನ್ ಮಾತ್ರ ಮಾಡಿ, ಮೆರಿಟ್‌ಗೆ ಹೋಗಬೇಡಿ, ಮೆರಿಟ್‌ಗೆ ಹೋದರೆ ಅದು ಆಗುತ್ತದೆ ಇದು ಆಗುತ್ತದೆ ಎಂದು ದಯಮಾಡಿ ಹೇಳಬೇಡಿ. ಈ ಸಂದರ್ಭದಲ್ಲಿ ಆ ಪ್ರಿಲಿಮಿನರಿ ಸಬ್‌ಮಿಷನ್ ಅಡಿಯಲ್ಲೇ ವ್ಯಾಪಕವಾಗಿರತಕ್ಕಂಥ ಚರ್ಚೆಗೆ ಅವಕಾಶ ಕೊಟ್ಟು ಪುನಃ ಮತ್ತೆ ಚರ್ಚೆಗೆ ಅವಕಾಶ ಆಗದಂತೆ ಸರ್ಕಾರ ನೇರವಾಗಿ ಅದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಗೃಹ ಸಚಿವರು ಅವರು ಗಟ್ಟಿ ಇದ್ದಾರೆಯೇ, ಮೃದು ಇದ್ದಾರೆಯೇ, Whether it is a soft state or a hard state, ಎಂದು ಹೇಳತಕ್ಕಂಥದ್ದಕ್ಕೆ ಅವರನ್ನು ಒರೆಗಲ್ಲಿಗೆ ಹಚ್ಚುವಂತಹ ಕೆಲಸವನ್ನು ನಾವು ಮಾಡಿಯೇ ಮಾಡುತ್ತೇವೆ. ಅದಕ್ಕೂ ಸರ್ಕಾರ ತಯಾರಾಗಲಿ ಎನ್ನುವ ಮಾತನ್ನು ಹೇಳಿ, ತಮ್ಮ ಈ ಚಿಂತನೆಯನ್ನು

ನಾವು ಒಪ್ಪುತ್ತೇವೆ. ಶೂನ್ಯ ವೇಳೆಯನ್ನು ತೆಗೆದುಕೊಳ್ಳುವುದು ಬೇಡ. ದಯವಿಟ್ಟು ಇದಾದ ಕೂಡಲೇ ಚರ್ಚೆಗೆ ಅವಕಾಶ ಕೊಡಬೇಕು.

**ಸಭಾಪತಿಯವರು:–** ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

## 2. ಪ್ರಶ್ನೋತ್ತರ

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಟ್ರಾನ್ಸ್‌ಫಾರಂಗಳ ಬಗ್ಗೆ

### 477; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿ 100 ಕೆ.ವಿ–52 ಟಿಸಿ, 63 ಕೆ.ವಿ–29 ಟಿಸಿ, 25 ಕೆ.ವಿ–20 ಟಿಸಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ 101 ಟ್ರಾನ್ಸ್‌ಫಾರ್ಮ್‌ಗಳನ್ನು ಮದ್ದೂರು ಕೆಇಬಿ ಗೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

**ಆ)** ತಾಲ್ಲೂಕಿನ 200 ವಿವಿಧ ರೀತಿಯ ಟ್ರಾನ್ಸ್‌ಫಾರ್ಮ್‌ಗಳು ಸುಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸುಟ್ಟು ಹೋಗಿರುವ ಟ್ರಾನ್ಸ್‌ಫಾರ್ಮ್‌ಗಳನ್ನು ದುರಸ್ಥಿ ಪಡಿಸಿ ಎಷ್ಟು ದಿವಸಗಳಲ್ಲಿ ಅಳವಡಿಸಲಾಗುವುದು; (ವಿವರ ನೀಡುವುದು)

**ಇ)** ಮದ್ದೂರಿನಲ್ಲಿ ಟ್ರಾನ್ಸ್‌ಫಾರ್ಮ್‌ಗಳನ್ನು ದುರಸ್ಥಿಪಡಿಸಲು ದುರಸ್ಥಿ ಕೇಂದ್ರವನ್ನು ತೆರೆಯಲು ಸರ್ಕಾರದ ಗಮನದಲ್ಲಿದೆಯೇ, ಹಾಗಿದ್ದರೆ ಯಾವಾಗ ತೆರೆಯಲಾಗುವುದು;

**ಈ)** ಮದ್ದೂರು ತಾಲ್ಲೂಕಿನಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾವುದು?

**ಶೋಭಾ ಕರಂದ್ಲಾಜೆ (ಇಂಧನ ಸಚಿವರು)**

**ಅ)** ಹೌದು

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿ ಕುಡಿಯುವ ನೀರು ಸರಬರಾಜು, ವ್ಯವಸ್ಥೆ ಸುಧಾರಣೆಗೆ ಹೆಚ್ಚಿನ ಪರಿರ್ವತಕಗಳು ಸರಬರಾಜು ಆಗುತ್ತಿದ್ದು, ಅನಧಿಕೃತ ಪಂಪ್‌ಸೆಟ್‌ಗಳ ಕಾರಣದಿಂದಾಗಿ ವಿಫಲವಾಗಿರುವ ಪರಿವರ್ತಕಗಳನ್ನು ಹಾಲಿ ಇರುವ ಎರಡು ದುರಸ್ತಿ ಕೇಂದ್ರಗಳಿಂದ ದುರಸ್ತಿಗೊಳಿಸಿ ಒದಗಿಸಲಾಗುತ್ತಿದೆ.

ಖರೀದಿ ಪ್ರಕ್ರಿಯೆಯನ್ನು ಚುರುಕುಗೊಳಿಸಲಾಗಿದ್ದು, ಕರ್ನಾಟಕ ವಿದ್ಯುತ್ ಕಾರ್ಖಾನೆಯಿಂದ ಹಾಗೂ ಖಾಸಗಿ ಸಂಸ್ಥೆಗಳಿಂದಲೂ ಸಹ ಪಡೆಯಲು ಕ್ರಮ ತೆಗೆದುಕೊಳ್ಳಲಾಗಿದೆ ಈ ಮೂಲಕ ಮದ್ದೂರು ತಾಲ್ಲೂಕಿಗೂ ಪರಿವರ್ತಕಗಳನ್ನು ಒದಗಿಸಲಾಗುತ್ತದೆ.

**ಆ)** ಮದ್ದೂರು ತಾಲ್ಲೂಕಿನ ವಿವಿಧ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವುದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಗಮನಕ್ಕೆ ಬಂದಿರುತ್ತದೆ.

ಮದ್ದೂರು ತಾಲ್ಲೂಕಿನಲ್ಲಿ ಜೂನ್ 2012ರ ಅಂತ್ಯದಲ್ಲಿದ್ದಂತೆ ವಿಫಲವಾದ 64 ವಿದ್ಯುತ್ ಪರಿವರ್ತಕಗಳು ಮಾತ್ರ ಬದಲಾಯಿಸಲು ಬಾಕಿ ಉಳಿದಿರುತ್ತವೆ.

ಸುಟ್ಟು ಹೋಗಿರುವ ಪರಿವರ್ತಕಗಳನ್ನು ಆದಷ್ಟು 72 ಗಂಟೆಗಳ ಒಳಗೆ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅದಾಗ್ಯೂ ಅನಿವಾರ್ಯ ಪರಿಸ್ಥಿತಿಗಳಲ್ಲಿ ಪರಿವರ್ತಕವನ್ನು ದುರಸ್ತಿ ಕೇಂದ್ರದಲ್ಲಿ ದುರಸ್ತಿಗೊಳಿಸಲು 7 ದಿನಗಳು ಬೇಕಾಗಿದ್ದು, ಆದ್ಯತೆ ಮೇಲೆ ದುರಸ್ತಿಗೊಳಿಸಲು ವಿಭಾಗ ಮಟ್ಟದಲ್ಲಿ ಆವಾರ್ಡ್ ನೀಡಲು ಸಹ ಆದೇಶ ನೀಡಲಾಗಿದ್ದು ದುರಸ್ತಿ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಕ್ರಮಕೈಗೊಳ್ಳಲಾಗಿದೆ.

ಇ) ಪ್ರಸ್ತುತ, ಮದ್ದೂರು ತಾಲ್ಲೂಕಿನಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಕೇಂದ್ರವನ್ನು ತೆರೆಯಲು ಯಾವ ಪ್ರಸ್ತಾವನೆಯು ಇರುವುದಿಲ್ಲ. ಮದ್ದೂರು ತಾಲ್ಲೂಕಿನ ಸಮೀಪದಲ್ಲೇ ಇರುವ ಮಂಡ್ಯದಲ್ಲಿ ಒಂದು ಮೆ॥ ಎಸ್.ಎಂ.ಎಂಟರ್‌ಪ್ರೈಸಸ್ ದುರಸ್ತಿ ಕೇಂದ್ರವಿದ್ದು, ಸದರಿ ಕೇಂದ್ರದಲ್ಲಿ ವಿಫಲಗೊಂಡ ಪರಿವರ್ತಕಗಳನ್ನು ಅಲ್ಲಿ ದುರಸ್ತಿ ಮಾಡಲಾಗುತ್ತಿದೆ.

**ಈ)** ಮದ್ದೂರು ತಾಲ್ಲೂಕಿನಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಎರಡನೇ ಹಂತದಲ್ಲಿ ಅನುಷ್ಠಾನಗೊಳಿಸಲು ಟೆಂಡರ್ ಕರೆಯಲಾಗಿದ್ದು, ಯೋಜನೆಯ ಒಟ್ಟು ಮೊತ್ತ ₹ 32.04 ಕೋಟಿಗಳಾಗಿರುತ್ತದೆ. ಸದರಿ ಯೋಜನೆಯ ಟೆಂಡರ್ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುತ್ತದೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) (ಮಾನ್ಯ ಬಿ.ರಾಮಕೃಷ್ಣರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮದ್ದೂರು ತಾಲ್ಲೂಕಿನಲ್ಲಿ ಮಾನ್ಯ ಸಚಿವರೇ ಉತ್ತರ ಕೊಟ್ಟಿರುವ ಹಾಗೆ 64 ಟ್ರಾನ್ಸ್‌ಫಾರ್ಮರ್‌ಗಳು ಜೂನ್ ತಿಂಗಳಿನಿಂದಲೂ ಕೂಡ ಕೆಟ್ಟು ಹೋಗಿವೆ. ಅವುಗಳನ್ನು ರಿಪೇರಿ ಮಾಡಿ ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ಹೇಳಿದ್ದಾರೆ. ಕೆಟ್ಟು ಹೋದಂತಹ ಪರಿವರ್ತಕಗಳನ್ನು ಆದಷ್ಟು 72 ಗಂಟೆಗಳ ಒಳಗೆ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ಯಾರಿಗಾದರೂ ಕೂಡ ಕೆಟ್ಟಿರುವಂತಹ ಟ್ರಾನ್ಸ್‌ಫಾರ್ಮರ್‌ಗಳನ್ನು 72 ಗಂಟೆ ಒಳಗೆ ಒದಗಿಸಿದ್ದರೆ ನಾನು ಈ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟುಬಿಡುತ್ತೇನೆ.

**ಸಭಾಪತಿಯವರು:–** ದಯಮಾಡಿ ಆ ರೀತಿ ಎಲ್ಲಾ ಚಾಲೆಂಜ್ ಮಾಡಬೇಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇವತ್ತು ಮದ್ದೂರು ತಾಲ್ಲೂಕಿನಲ್ಲಿ ಬಹಳಷ್ಟು ಹಳ್ಳಿಗಳಲ್ಲಿ ಟ್ರಾನ್ಸ್‌ಫಾರ್ಮರ್ ಕೊರತೆಯಿಂದ ಕುಡಿಯುವ ನೀರಿನ ಅಭಾವ ಉಂಟಾಗಿದೆ. ಅದೇ ರೀತಿ ಮದ್ದೂರು ತಾಲ್ಲೂಕಿನಲ್ಲಿ ಮೆಣಸಿಗೆರೆ ಎನ್ನುವ ಗ್ರಾಮ ಇದೆ. ಸುಮಾರು ಐದಾರು ವರ್ಷಗಳ ಹಿಂದೆ ಅಕ್ರಮ ಸಕ್ರಮದಲ್ಲಿ ಹಣವನ್ನು ಕಟ್ಟಿದ್ದಾರೆ. 5–6 ವರ್ಷಗಳಾದರೂ ಕೂಡ ಅವರಿಗೆ ಟ್ರಾನ್ಸ್‌ಫಾರ್ಮರ್‌ಗಳೂ ಇಲ್ಲ, ಯಾವುದೇ ಮೆಟೀರಿಯಲ್ ಇಲ್ಲ. ಇವತ್ತು ನೂರಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ ಇದೆ. ಟ್ರಾನ್ಸ್‌ಫಾರ್ಮರ್ ಕೆಟ್ಟು ಹೋಗಿದೆ. ಒಂದು ತಿಂಗಳಾದರೂ ಕೂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸತಕ್ಕಂಥದ್ದು, ತರತಕ್ಕಂಥದ್ದು, ಸವಲತ್ತು ಕೊಡತಕ್ಕಂಥದ್ದು ಇಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಮರಳಿಗ, ಬಿದರಕೋಟೆ, ಮೂಡ್ಯ, ಮೂಲಸಲೆ, ಇತರ ಕಡೆ ಕಂಬಗಳೆಲ್ಲವೂ ಕೂಡ ಮುರಿದು ಬಿದ್ದು ಹೋಗಿವೆ. ಅಧಿಕಾರಿಗಳಿಗೆ ಶಾಸಕರು ಹತ್ತಾರು ಪತ್ರ ಬರೆದಿದ್ದಾರೆ. ಒಂದು ತಿಂಗಳಾದರೂ ಕೂಡ ಆ ಕಂಬಗಳನ್ನು ಬದಲಾವಣೆ ಮಾಡುವುದಕ್ಕೆ ಇಲಾಖೆಯಿಂದ ಆಗಲಿಲ್ಲ. ಈ ರೀತಿ ಆಗುವುದಾದರೆ ಗ್ರಾಮೀಣ ಪ್ರದೇಶದಲ್ಲಿ ಯಾವ ರೀತಿ ವಿದ್ಯುತ್ ಸರಬರಾಜು ಆಗುತ್ತದೆ? ಮದ್ದೂರು ತಾಲ್ಲೂಕಿನಲ್ಲಿ ಇವತ್ತು ರೈತರಿಗೆ ಕುಡಿಯುವ ನೀರಿನ ತೊಂದರೆಯಾಗಿದೆ, ಯಾವುದೇ ಪಂಪ್‌ಸೆಟ್‌ಗಳು ಕೂಡ ಓಡುತ್ತಿಲ್ಲ. 64 ಟ್ರಾನ್ಸ್‌ಫಾರ್ಮರ್‌ಗಳು ಸುಮಾರು ಎರಡು ತಿಂಗಳುಗಳಿಂದ ರಿಪೇರಿಯಲ್ಲಿದೆ, 72 ಗಂಟೆಯೊಳಗೆ ಸರಬರಾಜು ಮಾಡುತ್ತೇವೆ ಎಂದು ಉತ್ತರದಲ್ಲಿ ಹೇಳುತ್ತಾರೆ. ಈ ರೀತಿಯಾದರೆ ಹೇಗೆ?

**ಸಭಾಪತಿಯವರು:–** ನೀವು ಉತ್ತರವನ್ನು ಓದಲಿಲ್ಲ. ಪ್ರಯತ್ನ ಮಾಡುತ್ತೇವೆ, ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** 72 ಗಂಟೆಯೊಳಗೆ ಸರಬರಾಜು ಮಾಡುತ್ತೇವೆ ಎಂದು ಹೇಳಿ 1500 ಗಂಟೆಗಳನ್ನಾದರೂ ತೆಗೆದುಕೊಳ್ಳಬಹುದೇ?

**ಶ್ರೀ ದಯಾನಂದ:-** ಮಾನ್ಯ ಸಭಾಪತಿಯವರೇ, 74 ಗಂಟೆಯೊಳಗೆ ಬದಲಾವಣೆ ಮಾಡಬೇಕೆನ್ನುವ ಆದೇಶ ಇದೆ. ಮಾನ್ಯ ಸಚಿವರು ಬಹಳ ಸಹೃದಯವಂತರಾಗಿ ಈ ಕೆಲಸಕ್ಕೆ ಹಣವನ್ನು ಒದಗಿಸಿದ್ದಾರೆ ಮತ್ತು ಎಲ್ಲಾ ಜೋನಲ್ ಇಂಜಿನಿಯರ್ಸ್‌ಗಳಿಗೆ ಅಧಿಕಾರವನ್ನೂ ಕೂಡ ಕೊಟ್ಟಿದ್ದಾರೆ. ಆದರೂ ಕೂಡ ಅಧಿಕಾರಿಗಳು ಟ್ರಾನ್ಸ್‌ಫಾರ್ಮರ್‌ಗಳನ್ನು ಏಕೆ ಬದಲಾಯಿಸುತ್ತಿಲ್ಲ ಎನ್ನುವುದನ್ನು ಕೂಡ ಸಚಿವರು ತಿಳಿಸಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಕೇಳುವುದೇನೆಂದರೆ, ದಯಮಾಡಿ ಮದ್ದೂರು ತಾಲ್ಲೂಕಿನಲ್ಲಿ ಪಂಪ್‌ಸೆಟ್ ಟ್ರಾನ್ಸ್‌ಫಾರ್ಮರ್ ಕೊರತೆಯಿಂದ ಕುಡಿಯುವ ನೀರಿನ ಕೊರತೆ ಉಂಟಾಗಿದೆ. ನೀರಿನ ಪಂಪ್‌ಸೆಟ್‌ಗಳು ಓಡುತ್ತಿಲ್ಲ. ಎಷ್ಟು ದಿನಗಳೊಳಗೆ ಈ 64 ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಡಿಸುತ್ತಾರೆ, ಮತ್ತೆ ಮುರಿದು ಹೋಗಿರುವಂತಹ ಕಂಬಗಳನ್ನು ಎಷ್ಟು ದಿನಗಳೊಳಗೆ ಹಾಕಿಸುತ್ತಾರೆ. ಸುಮಾರು 5-6 ವರ್ಷಗಳಿಂದ ಅಕ್ರಮ ಸಕ್ರಮಗಳಲ್ಲಿ ಹಣ ಕಟ್ಟಿದರೂ ಕೂಡ ಇನ್ನು ಕೂಡ ಸರ್ವಿಸ್‌ಗೆ ಕಾಯುತ್ತಿರತಕ್ಕಂಥ ಜನರಿಗೆ ಮೆಟಿರಿಯಲ್ಸ್‌ನ್ನು ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನು ಯಾವಾಗ ಕೊಡಿಸುತ್ತಾರೆ ಎಂಬುದನ್ನು ದಯಮಾಡಿ ಮಾನ್ಯ ಸಚಿವರು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಕುಮಾರಿ ಶೋಭಾ ಕರಂದ್ಲಾಜೆ:-** ಮಾನ್ಯ ಸಭಾಪತಿಯವರೇ, ಇವತ್ತು ರಾಜ್ಯದಲ್ಲಿ ಅತ್ಯಂತ ಭೀಕರವಾದ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ಯಾವಾಗ ಬರಗಾಲ ಬರುತ್ತದೆ ಆವಾಗ ಹೆಚ್ಚು ಪ್ರಮಾಣದ ಟ್ರಾನ್ಸ್‌ಫಾರ್ಮರ್‌ಗಳು ಕೆಡುವುದನ್ನು ನಾವು ನೋಡುತ್ತೇವೆ. ಹೆಚ್ಚು ಪಂಪ್‌ಸೆಟ್‌ಗಳನ್ನು ಹಾಕಿಕೊಳ್ಳುತ್ತಾರೆ, ಹೆಚ್ಚು ಬೋರ್‌ವೆಲ್‌ಗಳನ್ನು ಕೊರೆಯುತ್ತಾರೆ. ಈ ಕಾರಣಕ್ಕಾಗಿ ನಮ್ಮ ಲೆಕ್ಕದಲ್ಲಿ ಈ ಒಂದು ಟ್ರಾನ್ಸ್‌ಫಾರ್ಮರ್‌ಗೆ ಇಷ್ಟು ಕೆಪಾಸಿಟಿ, ಇಷ್ಟು ಪಂಪ್‌ಸೆಟ್‌ಗಳನ್ನು ಅವರು ಹಾಕಿಕೊಳ್ಳಬೇಕೆನ್ನುವುದು ಸಹಜವಾಗಿಯೇ ಇರುತ್ತದೆ. ಆದರೆ, ಇವತ್ತು ಇದರಲ್ಲಿ ಡಬಲ್, ತ್ರಿಬಲ್, ಬಹಳಷ್ಟು ಕಡೆಗಳಲ್ಲಿ ಆಗಿದೆ. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಇಡೀ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದ ಬರಗಾಲ

ಇದೆ. ಈ ಕಾರಣಕ್ಕಾಗಿ ಇವತ್ತು ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದ ಲಕ್ಷಾಂತರ ಸಂಖ್ಯೆಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಕೆಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ವರ್ಷ ಅದು ಇನ್ನೂ ಬಹಳ ದೊಡ್ಡ ಪ್ರಮಾಣದಲ್ಲಿದೆ. ಮಂಡ್ಯ ಜಿಲ್ಲೆಯಲ್ಲೂ ಬಹಳ ದೊಡ್ಡ ಪ್ರಮಾಣದಲ್ಲಿದೆ. ನಾನು ಉತ್ತರ ಕೊಡುವಂತಹ ಸಂದರ್ಭದಲ್ಲಿ 64 ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟಿರುವುದಿತ್ತು. ಈಗ ಅವುಗಳ ಸಂಖ್ಯೆ 43ಕ್ಕೆ ಇಳಿಸಲಾಗಿದೆ. ಉಳಿದದ್ದು ಈಗಾಗಲೇ ರಿಪೇರಿ ಆಗಿದೆ. ಆ ಜಿಲ್ಲೆಯಲ್ಲಿ ಈಗಾಗಲೇ 5 ರಿಪೇರಿ ಸೆಂಟರ್‌ಗಳಿವೆ. ಆದರೆ, ಅದು ನೀರಾವರಿ ಇರುವಂತಹ ಜಿಲ್ಲೆಯಾದ ಕಾರಣ ರಿಪೇರಿ ಸೆಂಟರ್‌ನ್ನು ಕೂಡ ನಾವು ಜಾಸ್ತಿ ಮಾಡುವುದಕ್ಕೆ ಖಂಡಿತ ಪರಿಶೀಲನೆ ಮಾಡುತ್ತೇವೆ. ಈಗಾಗಲೇ ಮದ್ದೂರು ತಾಲ್ಲೂಕಿನ ಸಮೀಪದಲ್ಲೇ ಇರುವ ಮಂಡ್ಯದ ಬಾರ್ಡರ್‌ನಲ್ಲಿ ಒಂದು ಮೆ:ಎಸ್.ಎಂ.ಎಂಟರ್‌ಪ್ರೈಸಸ್ ದುರಸ್ತಿ ಕೇಂದ್ರವಿದ್ದು, ಸದರಿ ಕೇಂದ್ರದಲ್ಲಿ ವಿಫಲಗೊಂಡ ಪರಿವರ್ತಕಗಳನ್ನು ಅಲ್ಲಿ ದುರಸ್ತಿ ಮಾಡಲಾಗುತ್ತಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದೇವೆ. ಅವರದ್ದು ಒಂದು ರಿಪೇರಿ ಸೆಂಟರ್ ಇತ್ತು. ಅವರು ಈಗ ಎರಡನೇ ಸಲ ಟೆಂಡರ್ ಪಡೆದಿದ್ದಾರೆ. ಮದ್ದೂರಿನಲ್ಲಿ ರಿಪೇರಿ ಸೆಂಟರ್ ಪ್ರಾರಂಭ ಮಾಡಬೇಕೆಂದು ಟೆಂಡರ್‌ನ್ನು ಕರೆದರೆ ಯಾರೂ ಅರ್ಜಿಯನ್ನು ಸಲ್ಲಿಸಿಲ್ಲ, ಯಾರೂ ಟೆಂಡರ್‌ಗೇ ಬಂದಿಲ್ಲ. ಹಾಗಾಗಿ, ಮದ್ದೂರು ತಾಲ್ಲೂಕಿನಲ್ಲಿಯ ವಿಫಲಗೊಂಡ ಪರಿವರ್ತಕಗಳನ್ನು ಮಂಡ್ಯದ ಬಾರ್ಡರ್‌ನಲ್ಲಿರುವ ಈ ದುರಸ್ತಿ ಕೇಂದ್ರದಲ್ಲಿ ದುರಸ್ತಿ ಮಾಡಿಸಲಾಗುತ್ತಿದೆ. ಮದ್ದೂರಿಗೆ ಟೆಂಡರ್ ಕರೆದಂತಹ ಸಂದರ್ಭದಲ್ಲಿ ಯಾರೂ ಟೆಂಡರ್‌ಗೆ ಅರ್ಜಿಯನ್ನು ಸಲ್ಲಿಸಲಿಲ್ಲ. ಮಾನ್ಯ ಸದಸ್ಯರು ಎರಡು-ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ಟ್ರಾನ್ಸ್‌ಫಾರ್ಮರ್‌ಗಳನ್ನು ಖಂಡಿತವಾಗಿಯೂ 15 ದಿನಗಳೊಳಗೆ ರಿಪೇರಿ ಮಾಡುತ್ತೇವೆ. ಕಂಬ ಮುರಿದು ಬಿದ್ದಿದೆ ಎಂದು ಹೇಳಿದರು. ಅದು ನನ್ನ ಗಮನಕ್ಕೆ ಬಂದಿರಲಿಲ್ಲ. ಈ ವರ್ಷ ಮಳೆಯೇ ಇಲ್ಲ, ಏತಕ್ಕಾಗಿ ಕಂಬಗಳು ಗಾಳಿಗೆ ಬಿದ್ದಿದೆಯೋ ಅಥವಾ ಯಾವ ಕಾರಣಕ್ಕಾಗಿ ಬಿದಿದ್ದೆಯೋ ಏನೋ ಗೊತ್ತಿಲ್ಲ. ಖಂಡಿತವಾಗಿಯೂ ಅವುಗಳನ್ನು ಬದಲಾಯಿಸುವ ಕೆಲಸವನ್ನು ಮಾಡುತ್ತೇವೆ. ಅಕ್ರಮ-ಸಕ್ರಮದಲ್ಲಿ ಏನು ಮಾಡಬಹುದು

ಎನ್ನುವಂಥದ್ದನ್ನು ಕೇಳಿದ್ದಾರೆ. ನಿಮಗೆಲ್ಲರಿಗೂ ಗೊತ್ತಿರುವ ಹಾಗೆ ಇವತ್ತು ರಾಜ್ಯದಲ್ಲಿ ಸುಮಾರು ಎರಡೂವರೆ ಲಕ್ಷ ಪಂಪ್‌ಸೆಟ್‌ಗಳು ಅಕ್ರಮ ಸಕ್ರಮದಲ್ಲಿ ಸಕ್ರಮೀಕರಣವಾಗಬೇಕಾಗಿದೆ. ಕೆಲವರು ಹಣವನ್ನು ಕೊಟ್ಟಿದ್ದಾರೆ. ಆದರೆ, ಸಹಜವಾಗಿಯೇ ಇದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಹಣಕಾಸು ಬೇಕಾಗಿರುವ ಕಾರಣಕ್ಕಾಗಿ ಸ್ವಲ್ಪ ನಿಧಾನಗತಿಯಲ್ಲಿ ಇದು ನಡೆಯುತ್ತಿದೆ. ಖಂಡಿತವಾಗಿಯೂ ಇದನ್ನು ಮಾಡಿ ಕೊಡುತ್ತೇವೆ.

**ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿನ ಕೊಲೆಯ ಪ್ರಕರಣಗಳನ್ನು ಕುರಿತು.**

**1–30 ಗಂಟೆ**

**586; ಶ್ರೀ ಅಲ್ಲಮಪ್ರಭು ಪಾಟೀಲ್, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕಳೆದ ಮೂರು ವರ್ಷಗಳಲ್ಲಿ ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ನಡೆದ ಕೊಲೆಯ ಪ್ರಕರಣಗಳು ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) ಅಪರಾಧಿಗಳನ್ನು ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು ವಿವರ ನೀಡುವುದು)

**ಆ)** ಕಳೆದ ಮೂರು ವರ್ಷಗಳಲ್ಲಿ ಕೊಲೆಯ ಪ್ರಕರಣಗಳು ಹೆಚ್ಚಾಗಲು ಕಾರಣಗಳೇನು: ಮತ್ತು ಈ ಅಪರಾಧಗಳನ್ನು ನಿಯಂತ್ರಿಸಲು ಕೈಗೊಳ್ಳಲಾದ ಕ್ರಮಗಳೇನು?

**ಶ್ರೀ ಆರ್.ಅಶೋಕ್ (ಉಪ ಮುಖ್ಯಮಂತ್ರಿಗಳು)**

**ಅ)** ಕಳೆದ ಮೂರು ವರ್ಷಗಳ ಅವಧಿಯಿಂದ 2012 ರ ಜೂನ್ ಅಂತ್ಯಕ್ಕೆ, ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ, ಕ್ರಮವಾಗಿ 334 ಮತ್ತು 97 ಕೊಲೆ ಪ್ರಕರಣಗಳು ನಡೆದಿರುತ್ತವೆ. ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಅಪರಾಧಿಗಳನ್ನು ಪತ್ತೆ ಹಚ್ಚಲಾದ ಒಟ್ಟು ಪ್ರಕರಣಗಳ ಸಂಖ್ಯೆ: 374. ವರ್ಷವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

**ಆ)** ಭೂವಿವಾದ, ಹಳೆಯ ದ್ವೇಷಗಳು, ಅನೈತಿಕ ಸಂಬಂಧ ಮತ್ತು ವೈಯಕ್ತಿಕ ದ್ವೇಷಗಳು ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಿಸಿದ ವೈಷಮ್ಯಗಳು ಕೊಲೆ ಪ್ರಕರಣಗಳಿಗೆ ಕಾರಣಗಳಾಗಿರುತ್ತವೆ.

ಈ ಅಪರಾಧಗಳನ್ನು ನಿಯಂತ್ರಿಸಲು, ಮೇಲೆ ನಮೂದಿಸಿದ ಅಂಶಗಳಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಪರಿಸ್ಥಿತಿಗಳು ಉದ್ಭವವಾದ ಪ್ರಸಂಗಗಳು ಇಲಾಖೆಯ ಗಮನಕ್ಕೆ ಬಂದ ತಕ್ಷಣ ಮುಂಜಾಗೃತ ಕ್ರಮವಾಗಿ ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಸಾಮರಸ್ಯ ಸಭೆಗಳ ಮುಖಾಂತರ ಅವುಗಳನ್ನು ಶಮನಗೊಳಿಸಲು ಕಾನೂನಿನ ಅರಿವು ಮತ್ತು ಇರುವ ಶಿಕ್ಷೆಗಳ ಬಗ್ಗೆ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸೂಕ್ಷ್ಮ, ಅತೀ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅಂತಹ ಸ್ಥಳಗಳಿಗೆ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಗಸ್ತು ಕರ್ತವ್ಯವನ್ನು ಚುರುಕುಗೊಳಿಸಲಾಗುತ್ತಿದೆ.

## ಅನುಬಂಧ

## ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ, ನಡೆದ ಕೊಲೆ ಪ್ರಕರಣಗಳ ಮತ್ತು ಅಪರಾಧಿಗಳನ್ನು ಪತ್ತೆ ಹಚ್ಚಲಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

## ಗುಲ್ಬರ್ಗಾ ಜಿಲ್ಲೆ

| ತಾಲ್ಲೂಕು | ವರ್ಷ | ವರಿದಿಯಾದ ಕೊಲೆ ಪ್ರಕರಣಗಳ ಸಂಖ್ಯೆ | ಅಪರಾಧಿಗಳನ್ನು ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ |
|---|---|---|---|
| ಗುಲ್ಬರ್ಗಾ | 2009 | 42 | 38 |
| | 2010 | 30 | 25 |
| | 2011 | 32 | 29 |
| | 2012 (30, ಜೂನ್) | 19 | 13 |
| ಆಳಂದ | 2009 | 11 | 11 |
| | 2010 | 10 | 09 |
| | 2011 | 11 | 10 |
| | 2012 (30, ಜೂನ್) | 10 | 06 |
| ಅಫ್‌ಜಲ್‌ಪುರ | 2009 | 13 | 12 |
| | 2010 | 03 | 02 |
| | 2011 | 15 | 14 |
| | 2012 (30, ಜೂನ್) | 01 | 00 |

| | | | |
|---|---|---|---|
| **ಜೇವರ್ಗಿ** | 2009 | 10 | 09 |
| | 2010 | 06 | 04 |
| | 2011 | 05 | 04 |
| | 2012 (30, ಜೂನ್) | 02 | 02 |
| **ಚಿತ್ತಾಪುರ** | 2009 | 15 | 14 |
| | 2010 | 15 | 15 |
| | 2011 | 13 | 13 |
| | 2012 (30, ಜೂನ್) | 07 | 07 |
| **ಸೇಡಂ** | 2009 | 05 | 04 |
| | 2010 | 10 | 09 |
| | 2011 | 07 | 07 |
| | 2012 (30, ಜೂನ್) | 05 | 04 |
| **ಚಿಂಚೋಳಿ** | 2009 | 14 | 09 |
| | 2010 | 08 | 06 |
| | 2011 | 09 | 09 |
| | 2012 (30, ಜೂನ್) | 06 | 05 |
| ಒಟ್ಟು | | **334** | **290** |

## ಯಾದಗಿರಿ ಜಿಲ್ಲೆ

| ತಾಲ್ಲೂಕು | ವರ್ಷ | ವರದಿಯಾದ ಕೊಲೆ ಪ್ರಕರಣಗಳ ಸಂಖ್ಯೆ | ಅಪರಾಧಿಗಳನ್ನು ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ |
|---|---|---|---|
| ಯಾದಗಿರಿ | 2009 | 11 | 11 |
| | 2010 | 07 | 07 |
| | 2011 | 09 | 08 |
| | 2012 (30, ಜೂನ್) | 10 | 04 |
| ಶಹಾಪುರ | 2009 | 10 | 10 |
| | 2010 | 09 | 09 |
| | 2011 | 12 | 12 |
| | 2012 (30, ಜೂನ್) | 04 | 02 |
| ಸುರಪುರ | 2009 | 07 | 07 |
| | 2010 | 09 | 08 |
| | 2011 | 05 | 05 |
| | 2012 (30, ಜೂನ್) | 04 | 01 |
| ಒಟ್ಟು | | **97** | **84** |

1.30 ಘಂಟೆ

**ಶ್ರೀ ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಏನೋ ಕೊಟ್ಟಿದ್ದಾರೆ. ಆದರೆ, ನಮ್ಮ ಗುಲ್ಬರ್ಗ ಮತ್ತು ಯಾದಗಿರಿ ಜಿಲ್ಲೆಯಲ್ಲಿ, ಅಖಂಡ ಜಿಲ್ಲೆಯಲ್ಲಿ ಮೊದಲು ಆಗಿರುವಂತಹ ಅಪರಾಧಗಳು ಅವರ ಅಂಕಿ-ಸಂಖ್ಯೆಗಳ ಪ್ರಕಾರ ಸುಮಾರು 374 ಕೊಲೆ ಪ್ರಕರಣಗಳು ನಡೆದಿರುವಂತಹ ವಿಷಯವನ್ನು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಮತ್ತೆ ನನ್ನ ಎರಡನೇ ಉಪ ಪ್ರಶ್ನೆಗೂ ಕೂಡ ಕಳೆದ ಮೂರು ವರ್ಷಗಳಿಂದ ಕೊಲೆಗಳು ಹೆಚ್ಚಾಗಲು ಕಾರಣಗಳೇನು ಎನ್ನುವುದಕ್ಕೆ ಉತ್ತರವನ್ನು ಕೊಟ್ಟಿರುವುದು ನಿಜವಾಗಿಯೂ ಕೂಡ ಸಮಂಜಸವಲ್ಲವೆಂದು ಅನಿಸುತ್ತದೆ. ಮೊನ್ನೆ 26ನೇ ತಾರೀಖಿನಂದು ನಮ್ಮ ಹಿರಿಯ ಪತ್ರಕರ್ತ ಶ್ರೀಯುತ ಲಿಂಗಣ್ಣ ಸತ್ಯಂಪೇಟೆ ರವರ ಕೊಲೆ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪವನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಇನ್ನೂ ಉತ್ತರವನ್ನು ಕೊಟ್ಟಿಲ್ಲ. ಅವರು ಲಂಕೇಶ್ ಪತ್ರಿಕೆಯಲ್ಲಿ ಒಳ್ಳೆಯ ಪತ್ರಕರ್ತರಾಗಿದ್ದು, ಅವರ ಕುಟುಂಬದ ಮಕ್ಕಳು ಕೂಡ ವಿಜಯ ಕರ್ನಾಟಕ, ಪ್ರಜಾವಾಣಿ ಪತ್ರಿಕೆಯಲ್ಲಿ ಕೆಲಸ ಮಾಡತಕ್ಕಂತಹ ಒಬ್ಬರ ಕೊಲೆಯಾಗಿದೆ. ಈ ಎಲ್ಲಾ ಕಾರಣಗಳಿಂದ ಹಿಂದೆ ಕೋರ್ಟಿನಲ್ಲೂ ಕೂಡ ದೊಡ್ಡ ಮನೆತನದ, ಪ್ರತಿಷ್ಠಿತ ರಾಜಕಾರಣಿಯನ್ನೂ ಸಹ ಕೊಲೆ ಮಾಡಿದ್ದಾರೆ. ನಾನು ಹೇಳುವುದೇನೆಂದರೆ ಈ ಎಲ್ಲಾ ಕೊಲೆಗಳಿಗೆ ಮೂಲ ಕಾರಣ ಎಂದರೆ ಅಲ್ಲಿ ಇರತಕ್ಕಂತಹ ನಿಮ್ಮ ಸಿಬ್ಬಂದಿ ಏನು ಇದೆ, ಅದರ ಕೊರತೆಯಾಗಿದ್ದು, ಸಿಬ್ಬಂದಿಯನ್ನು ಹೆಚ್ಚು ಮಾಡಬೇಕು. ಅದೇ ರೀತಿ ಅವರುಗಳಿಗೆ ವಾಹನಗಳನ್ನು ಹೆಚ್ಚಾಗಿ ಒದಗಿಸುವುದರ ಮೂಲಕ ಪೊಲೀಸ್ ಇಲಾಖೆಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದಾದರೆ, ಇದನ್ನು ತಡೆಗಟ್ಟಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ, ಜನರು ನೆಮ್ಮದಿಯಿಂದ ತಿರುಗಾಡದೇ ಇರುವಂತಹ ಪರಿಸ್ಥಿತಿ ಇದೆ. ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಇವತ್ತು ಬಹಳಷ್ಟು ಹಳ್ಳಿಗಳಲ್ಲಿ ನಾವು ಪ್ರಶ್ನೆ ಮಾಡುತ್ತೇವೆ. ಇಲ್ಲಿ ಗಲಾಟೆ ನಡೆದಿದೆ ಬರಬೇಕೆಂದು ಪೊಲೀಸ್ ಠಾಣೆಗೆ ಹೇಳುತ್ತೇವೆ. ಆಗ ಅವರು ಆಗುವುದಿಲ್ಲ, ಮತ್ತೊಂದು ಕಡೆ strike

ನಡೆದಿದೆ, ಅದನ್ನು ಬಂದೋಬಸ್ತು ಮಾಡಲಿಕ್ಕೆ ಹೋಗಿದ್ದಾರೆ, ಮಂತ್ರಿಗಳು ಬಂದಿದ್ದಾರೆ, ಬಂದೋಬಸ್ತ್‌ಗೆ ಹೋಗಿದ್ದಾರೆ, ಈ ರೀತಿಯ ಉತ್ತರಗಳು ಬಹಳಷ್ಟು ಪೊಲೀಸ್ ಠಾಣೆಗಳಿಂದ ಬರುತ್ತದೆ. Strike ಆಗಲಿ, ಮಂತ್ರಿಗಳು ಬಂದಾಗ ಬಂದೋಬಸ್ತು ಮಾಡಲಿಕ್ಕೆ ಪ್ರತ್ಯೇಕವಾಗಿ ಏನಾದರೂ ಒಂದು ವ್ಯವಸ್ಥೆ ಮಾಡಿದರೆ, ಆ ಪೊಲೀಸ್ ಠಾಣೆಯಲ್ಲಿರುವಂತಹ ಎಲ್ಲಾ ಸಿಬ್ಬಂದಿಯು ಕೆಲಸ ನಿರ್ವಹಿಸಿದರೆ. ಈ ಕೊಲೆಗಳನ್ನು ತಡೆಗಟ್ಟಲಿಕ್ಕೆ ಅನುಕೂಲವಾಗುತ್ತದೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಆದರೆ, ತಾವು ಕೆಲವೊಂದು ತಾಲ್ಲೂಕುಗಳಲ್ಲಿ ಆಗಿರುವಂತಹ ಕೊಲೆಗಳ ಬಗ್ಗೆ ಉತ್ತರವನ್ನು ಕೊಟ್ಟು ಕೈತೊಳೆದುಕೊಂಡಿದ್ದೀರಿ. ಕೊಲೆಯಾದಂತಹ ಪೊಲೀಸ್ ಠಾಣೆಯಲ್ಲಿ ಪೊಲೀಸರು ಮೇಲಿನಿಂದ ಡಿಜಿಯವರ ಒತ್ತಡ ತರುತ್ತಾರೆ, ಗೃಹ ಮಂತ್ರಿಗಳು ಒತ್ತಡ ತರುತ್ತಾರೆಂದು ಹೇಳಿ, ಏನಾದರೂಂದು ರೀತಿಯಲ್ಲಿ ಇದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುವಂತಹದ್ದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಎಲ್ಲಾ ಉದಾಹರಣೆಗಳಲ್ಲ. ಜೇವರ್ಗಿ ತಾಲ್ಲೂಕಿನಲ್ಲಿ 2–3 ತಿಂಗಳ ಹಿಂದೆ ಜೇವರ್ಗಿಯಿಂದ ಶಹಾಪುರಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿನ ಕೆರೆಯ ಹತ್ತಿರ ಒಬ್ಬನ ಕೊಲೆಯಾಗಿದೆ. ಒಬ್ಬ ಸಂಶಯಾಸ್ಪದವಾಗಿ ಉರುಳು ಹಾಕಿಕೊಂಡಿದ್ದಾನೆ. ಆ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಅಲ್ಲಿ ಇರತಕ್ಕಂತಹ ಎಸ್.ಪಿ ಮತ್ತು ಐ.ಜಿ.ಯವರ ಗಮನಕ್ಕೆ ತಂದು ಇದು ಕೊಲೆಯಾಗಿದೆ, ಜೇವರ್ಗಿ ತಾಲ್ಲೂಕಿನವರು ಉರುಳು ಹಾಕಿಕೊಳ್ಳಬೇಕಾದರೆ ಅವನು ಅವನ ಹೊಲದಲ್ಲಿ ಹಾಕಿಕೊಳ್ಳುತ್ತಿದ್ದ. ಶಹಾಪುರ ತಾಲ್ಲೂಕಿನ ಕೆರೆಯ ಹತ್ತಿರ ಅಂದರೆ canal ಹತ್ತಿರ ಹೋಗಿ ಅವನು ಸಾಯುವಂತಹ ಪರಿಸ್ಥಿತಿ ಇರಲಿಲ್ಲ. ದಯಮಾಡಿ ಇದರ ಬಗ್ಗೆ ವಿಚಾರಣೆ ಮಾಡಿ ಎಂದು ಹೇಳಿದೆ. ಒಂದೆರಡು ಬಾರಿ ಒಬ್ಬನನ್ನು arrest ಮಾಡಿ ಮತ್ತೆ ಅವನನ್ನು ಬಿಟ್ಟು ಬಿಟ್ಟರು. ಅದೇ ವರದಿ ಎಂದರೆ, ಇಲ್ಲ ಇದು ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರವೆಂದು ಹೇಳಿದರು. ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದರೆ, ಸಿನಿಮೀಯ ರೀತಿಯಲ್ಲಿ ಕೊಲೆಗಡುಕರು ಬಹಳ ಜಾಣರಿದ್ದಾರೆ. ಆದಕಾರಣ, ಏನೋ ಒಂದು ನೆಪ

ಮಾಡಿ ಕೈತೊಳೆದುಕೊಂಡು ಅಂಕಿ-ಸಂಖ್ಯೆಗೆ ಸರಿಸಮ ಮಾಡಿ ಉತ್ತರ ಕೊಟ್ಟಿರುವಂತಹ ಮಾತು ಬರಬಾರದು. ದಯಮಾಡಿ, ನಿಜವಾಗಿ enquiry ಮಾಡಿ ಯಾರು ತಪ್ಪಿತಸ್ಥರಿದ್ದಾರೆ, ಅವರಿಗೆ ಶಿಕ್ಷೆಯಾಗಬೇಕು.

ಸರ್ಕಾರಕ್ಕೆ ಮತ್ತು ಗೃಹ ಮಂತ್ರಿಗಳಿಗೆ ನನ್ನ ಕಳಕಳಿ ಏನೆಂದರೆ ಗೃಹ ಮಂತ್ರಿಗಳು ಉಪ ಮುಖ್ಯಮಂತ್ರಿಗಳಾಗಿಯೂ ಸಹ ಆಗಿದ್ದಾರೆ, ಆದ್ದರಿಂದ, ಯಾದಗಿರಿ ಮತ್ತು ಗುಲ್ಬರ್ಗ ಭಾಗದಲ್ಲಿ ಹೆಚ್ಚಿನ ಪೊಲೀಸ್‌ನ ವ್ಯವಸ್ಥೆಯಾಗಬೇಕು. ಮತ್ತು ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ವಾಹನಗಳ ಸೌಕರ್ಯಗಳಾಗಬೇಕು. ಎಲ್ಲಾ ವ್ಯವಸ್ಥೆಗಳನ್ನು ಕೊಟ್ಟರೆ ಕೊಲೆಗಳನ್ನು ತಡೆಗಟ್ಟಲಿಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ವಿನಂತಿ.

**ಶ್ರೀ ಆರ್. ಅಶೋಕ:-** ಸನ್ಮಾನ್ಯ ಸಭಾಪತಿಯವರೆ, ಯಾದಗಿರಿ ಮತ್ತು ಗುಲ್ಬರ್ಗ ಜಿಲ್ಲೆಗಳ ಭಾಗದಲ್ಲಿ ಹಲವಾರು ಕೊಲೆ ಪ್ರಕರಣಗಳಾಗಿರುವಂತಹದ್ದರ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ಅಲ್ಲಮಪ್ರಭು ಪಾಟೀಲ್‌ರವರಿಗೆ ನಾನು ಅಂಕಿ-ಅಂಶಗಳನ್ನು ಕೊಟ್ಟಿದ್ದೇನೆ. ಎಷ್ಟು ಕೊಲೆಗಳಾಗಿದೆ, ಪೊಲೀಸರು ಎಷ್ಟು ಕೊಲೆ ಪ್ರಕರಣಗಳನ್ನು ಗುರುತಿಸಿ, ಅಪರಾಧಿಗಳನ್ನು ನ್ಯಾಯಾಲಯಕ್ಕೆ Submit ಮಾಡಿದ್ದಾರೆನ್ನುವ ಬಗ್ಗೆ ಎಲ್ಲಾ ಅಂಕಿ-ಅಂಶಗಳನ್ನು ಕೊಟ್ಟಿದ್ದೇನೆ. ಅವರು ಹೇಳಿದಂತೆ ವಿಶೇಷವಾಗಿ ಸಿಬ್ಬಂದಿಗಳ ಕೊರತೆಯಿಂದಲೇ ಈ ರೀತಿಯಾಗುವುದಕ್ಕೆ ಮುಖ್ಯ ಕಾರಣವೆಂದು ಹೇಳಿದ್ದಾರೆ. ಈಗಾಗಲೇ ರಾಜ್ಯದಲ್ಲಿ 9 ಸಾವಿರ ಜನ ಪೊಲೀಸರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದಾರೆ. 9 ಸಾವಿರ ಜನ ಪೊಲೀಸರ ನೇಮಕಾತಿ ಮುಗಿದ ಕೂಡಲೇ ಎಲ್ಲಾ ಕಡೆ ಇನ್ನು ಹೆಚ್ಚಿನ ಪೊಲೀಸ್ ಸಿಬ್ಬಂದಿ ವ್ಯವಸ್ಥೆಯನ್ನು ಮಾಡಲಾಗುತ್ತದೆ. ವಿಶೇಷವಾಗಿ ಯಾದಗಿರಿ ಭಾಗದಲ್ಲಿ ಹೆಚ್ಚಿನ ಅಪರಾಧಗಳು ಅಗುವಂತಹದ್ದು ನಮ್ಮ ಗಮನಕ್ಕೆ ಬಂದಿದೆ. ಬಹಳ ಮುಖ್ಯವಾದ ಕಾರಣ ಎಂದರೆ ಭೂ-ವಿವಾದ, ಹಳೆಯ ದ್ವೇಷಗಳು, ಅನೈತಿಕ ಸಂಬಂಧ ಮತ್ತು ವೈಯಕ್ತಿಕ ದ್ವೇಷಗಳಿಂದಲೇ ಹೆಚ್ಚು ಕೊಲೆಗಳಾಗುತ್ತಿವೆ. ಆದ್ದರಿಂದ, ಈ ರೀತಿಯ ಸಂಪರ್ಕ ಸಭೆಗಳನ್ನು ಮಾಡುವಂತಹದ್ದು, ಯಾವ ಕಡೆ ಹಳ್ಳಿಗಳಲ್ಲಿ, ಪ್ರದೇಶಗಳಲ್ಲಿ ಈ ರೀತಿಯಲ್ಲಿ regular ಆಗಿ ಕೊಲೆಗಳನ್ನು ಮಾಡುವಂತಹ

ಒಂದು ವ್ಯವಸ್ಥೆಗಳಾಗುತ್ತಿವೆ, ಅಲ್ಲಿ ಹೆಚ್ಚು ಸಿಬ್ಬಂದಿಯನ್ನು ಹಾಕುವಂತಹದ್ದು, ಮತ್ತು ಆ ಕಡೆಗಳಲ್ಲಿ ಪೊಲೀಸರು ಹೆಚ್ಚು ಗಮನ ಕೊಡುವ ವ್ಯವಸ್ಥೆಯನ್ನು ಮಾಡುವಲ್ಲಿ ನಾನು ಗಮನಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಅದೇ ರೀತಿ ವಾಹನಗಳು ಅಂದರೆ ಜೀಪು, ಮೋಟಾರ್ ಬೈಕು ಈ ರೀತಿಯ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ. ಇಡಿ ದೇಶದ ಬೇರೆ ಬೇರೆ ರಾಜ್ಯಗಳನ್ನು ಹೋಲಿಕೆ ಮಾಡಿ ನೋಡಿದರೆ ನಮ್ಮಲ್ಲಿಯೇ ಹೆಚ್ಚು ವಾಹನಗಳಿವೆ. ನಮ್ಮಷ್ಟು ವಾಹನಗಳು ಎಲ್ಲಿಯೂ ಇಲ್ಲ. ಅದರಲ್ಲೂ ವಿಶೇಷವಾಗಿ ನಮ್ಮಲ್ಲಿ ವಿಶೇಷ ವ್ಯವಸ್ಥೆ ಎಂದರೆ ಇಷ್ಟು ವರ್ಷಗಳಿಂದ ಪೊಲೀಸರಿಗೆ ತನಿಖೆಗಳಿಗೆ ಹಣವನ್ನು ಕೊಡುತ್ತಿರಲಿಲ್ಲ. ಅವರು ಯಾವುದಾದರೂ ತನಿಖೆಯಾಗಬೇಕು, ಬೇರೆ ರಾಜ್ಯಗಳಿಗೆ ಹೋಗಬೇಕು ಅಥವಾ ಬೇರೆ ಜಿಲ್ಲೆಗಳಿಗೆ ಹೋಗಬೇಕು ಎಂದರೆ ಅಲ್ಲಿನ Sub-Inspector ಮತ್ತು Circle Inspector ಗಳು ಕೊಡಬೇಕಾಗಿತ್ತು. ಆ ರೀತಿಯಲ್ಲಿ ಈಗ ಇಲ್ಲ. ಈಗ ಪ್ರತಿ ಠಾಣೆಯಲ್ಲಿಯೂ ತನಿಖೆಗೋಸ್ಕರವೇ ಹಣ ಮೀಸಲು ಇಡುವಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ನೀವು ಯಾವುದಾದರೊಂದು escort ಜೊತೆಗೆ ಹೋದರೆ ಒಂದು ತಾಸಿಗೆ ಹೋಗುವುದಿದ್ದರೆ ಮೂರು ತಾಸಿಗೆ ಹೋಗುತ್ತಾನೆ. ಅವನು ಹಳೆಯ ವಾಹನವನ್ನಿಟ್ಟುಕೊಂಡು ಏನು ಮಾಡುತ್ತಾನೆ? ಅವನು ಹೊಸ ವಾಹನವನ್ನು ಕೇಳಲಿಕ್ಕೆ ದಮ್ಮು ಇರುವುದಿಲ್ಲ. ಆದ್ದರಿಂದ, ಹಳೆ ವಾಹನಗಳನ್ನು ತೆಗೆದು ಹೊಸ ವಾಹನಗಳನ್ನು ತೆಗೆದುಕೊಳ್ಳಿ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಹೆಚ್ಚು ವಾಹನಗಳಿವೆ, ಅದನ್ನು ಒಪ್ಪುತ್ತೇವೆ. ಆದರೆ, ಆ ವಾಹನಗಳು ಉಪಯೋಗವಿಲ್ಲ. ಈ ರೀತಿಯಲ್ಲಿರುವುದರಿಂದ ಕಳ್ಳರು ಕಳ್ಳತನ ಮಾಡಿಕೊಂಡು ಹೋದ ಮೇಲೆ ನಿಮ್ಮ ವಾಹನಗಳು ಹೋಗುತ್ತವೆ. ಅದಕ್ಕೋಸ್ಕರ ನಿಮ್ಮ ಪೊಲೀಸ್ ಇಲಾಖೆಯ ವಾಹನಗಳು ಸರಿ ಇರಬೇಕು.

**ಶ್ರೀ ಅಲ್ಲಮಪ್ರಭು ಪಾಟೀಲ್:–** ಮಾನ್ಯ ಸಭಾಪತಿಯವರೆ, ನನ್ನ ಉದ್ದೇಶ ಏನೆಂದರೆ, ಇಷ್ಟೊಂದು ಕೊಲೆಗಳಾಗಿವೆ, ಇದನ್ನು ಮುಚ್ಚಿ ಹಾಕಲಿಕ್ಕೆ ಪ್ರಯತ್ನ ಮಾಡಿರುವ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮೊನ್ನೆ ಕೂಡ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಸುಸಲಾ ತಿಂದು 7 ಕೊಲೆಗಳು ಆಗಿವೆ. ಸುಸಲಾ ತಿಂದು ವಿಷವಾಗಿ 7 ಜನ ಸತ್ತು ಹೋದರು ಎಂದು ಒಂದು B-Report ಅನ್ನು ಹಾಕಿದರು. ನಾವು ಅದರ ಬಗ್ಗೆ ಒಂದು ತನಿಖೆಯಾಗಬೇಕೆಂದು ಡಿಜಿ–ಐಜಿಯವರಲ್ಲಿ ಒಂದು ಅರ್ಜಿಯನ್ನು ಕೊಟ್ಟೆವು. ತನಿಖೆಯಾದ ಮೇಲೆ ಏನು ಗೊತ್ತಾಯಿತು ಎಂದರೆ ಯಾರೋ ಅವರ ಮನೆಯಲ್ಲಿ ಒಬ್ಬರು ಆಸ್ತಿಗಾಗಿ ಆ ಚಿರುಮುರಿಯಲ್ಲಿ ವಿಷ ಬೇರಿಸಿ 7 ಜನ ಸತ್ತಿದ್ದಾರೆಂದು, ಇವತ್ತು ಅವರನ್ನು arrest ಮಾಡಿದ್ದಾರೆ. ಮೊನ್ನೆ ಕೂಡ ಸುಸಲಾ ತಿಂದು 3 ಜನ ಸತ್ತಿದ್ದಾರೆ, 3 ಜನ ಆಸ್ಪತ್ರೆಯಲ್ಲಿದ್ದಾರೆಂದು ತಾವು ಬಹಳ ಸ್ಪಷ್ಟ ಉತ್ತರವನ್ನು ಕೊಟ್ಟಿದ್ದೀರಿ. ವಿಷ ಹಾಕಿದ್ದಾರೆ, ವಿಷ ತಿಂದು ಅವರು ಸತ್ತಿದ್ದಾರೆ. ಅಲ್ಲಿಗೆ ಮುಗಿಯಿತು ಪ್ರಶ್ನೆ. ಈ ರೀತಿಯ ಉತ್ತರ ಆಗಬಾರದು. ವಿಷ ಹಾಕಿದ್ದಾರೆ, ಅವರು ತಿಂದು ಸತ್ತಿದ್ದಾರೆ ಹೇಳುತ್ತೀರಿ. ಏತಕ್ಕೆ ಸತ್ತಿದ್ದಾರೆಂದು ನಾನು ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆ ಮಾಡಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಶ್ರೀಯುತ ಅಲ್ಲಮಪ್ರಭು ಪಾಟೀಲ್‌ರವರೆ, ಸುಸಲಾ ಎಂದರೆ ಗೊತ್ತಾಗುವುದಿಲ್ಲ.

**ಶ್ರೀ ಅಲ್ಲಮಪ್ರಭು ಪಾಟೀಲ್:–** ಅದನ್ನು ಮಂಡಕ್ಕಿ ಎಂದು ಹೇಳುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಸುಸಲಾ ಎಂದರೆ ನಮ್ಮಲ್ಲಿ ಚಿರುಮರಿ ಎನ್ನುತ್ತಾರೆ. ಸುಸಲಾ ಎಂದರೆ ಯಾರದ್ದೋ ಹೆಣ್ಣುಮಕ್ಕಳ ಹೆಸರನ್ನು ಹೇಳಿದಂತಾಗುತ್ತದೆ.

**ಶ್ರೀ ಅಲ್ಲಮಪ್ರಭು ಪಾಟೀಲ್:–** ಚಿರುಮರಿಗೆ ನಮ್ಮಲ್ಲಿ ಸುಸಲಾ ಎಂದು ಹೇಳುತ್ತಾರೆ. ಮಾನ್ಯ ಗೃಹಮಂತ್ರಿಗಳಿಗೆ ನನ್ನ ಪ್ರಶ್ನೆ ಇಷ್ಟೆ. ತಾವು ಬಹಳ ಚಿಕ್ಕವರಿದ್ದೀರಿ, ಉತ್ಸಾಹಿಗಳಿದ್ದೀರಿ. ನಿಮ್ಮಿಂದ ನಿಜವಾಗಿ

ಅಪರಾಧಿಗಳನ್ನು ಪತ್ತೆ ಹಚ್ಚುವಂತಹ ಕೆಲಸವಾಗಬೇಕೆನ್ನುವುದು ನನ್ನ ಉದ್ದೇಶ. ಮೊನ್ನೆ ಈ ವಿಷಯವಾಗಿ ಶೂನ್ಯವೇಳೆಯಲ್ಲಿ ಹೇಳಿದ್ದೇನೆ. ಅದಕ್ಕೆ ಉತ್ತರವೂ ಸಹ ಬಂದಿದೆ. ಏನು ಬಂದಿದೆ ಎಂದರೆ ವಿಷವನ್ನು ತಿಂದು ಸತ್ತ ಎಂದು ಬಂದಿದೆ. ಈ ರೀತಿಯಲ್ಲಿ ಆಗಬಾರದು. ಅದನ್ನು ಪತ್ತೆಹಚ್ಚಬೇಕೆಂದು ನಾನು ಹೇಳಿದ್ದೇನೆ. ಪತ್ತೆ ಹಚ್ಚಿದ ಉತ್ತರವನ್ನು ಪ್ರಶ್ನೋತ್ತರ ವೇಳೆಯಲ್ಲಿ ಕೊಟ್ಟಿಲ್ಲ. ದಯಮಾಡಿ ತಾವು ಅದನ್ನು ಪತ್ತೆ ಹಚ್ಚಿ. 3 ಜನರು ಸಾಯಬೇಕಾದರೆ ಯಾರು ಕಾರಣರು? ಶಹಪುರ ತಾಲ್ಲೂಕಿನ ಕೊಂಕಲ್‌ನಲ್ಲಿ 7 ಜನರು ಸತ್ತಾಗ ನಿಮ್ಮವರು ಕೈತೊಳೆದುಕೊಂಡು ಪ್ರಕರಣವನ್ನು ಮುಗಿಸಿದರು. ಆ ಪ್ರಕರಣವನ್ನು ಮತ್ತೆ ಎತ್ತಿದಾಗ ಅದು ಕೊಲೆ ಎಂದು ಸಾಬೀತಾಯಿತು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, POLICE ಅಂದರೆ Politeness, Obedience, Loyality, Integrity, Courageous and Efficient ಅನ್ನುವಂತಹ ಶಬ್ಧಕ್ಕೆ ಬೆಲೆ ಬರುವಂತೆ ಇಲಾಖೆಯನ್ನು ಸನ್ನದ್ದುಗೊಳಿಸಬೇಕಾಗಿದೆ. ಇವತ್ತು ಅವರ ಹಳೆಯ ದ್ವೇಷಗಳಿರುತ್ತವೆ. ಭೂ-ವಿವಾದಗಳಿರುತ್ತವೆ. 'Prevention is better than cure' ಎನ್ನುವಂತೆ ತಮ್ಮ ಇಲಾಖೆಯವರು ಆದಷ್ಟು ಘಟನೆಯಾದ ನಂತರ ಹೋಗಿ ಪಂಚನಾಮ ಮಾಡುವುದು, ನಂತರ charge sheet ಹಾಕುವುದು, conviction ಮಾಡುವುದು ಇದು ನಿತ್ಯ procedure. ಅದಕ್ಕಿಂತ ಪೂರ್ವದಲ್ಲಿ to defuse the tension, ಅವರ ಮಧ್ಯೆದಲ್ಲಿ ಏನು ದ್ವೇಷ-ಅಸೂಯೆಗಳಿವೆ, ಅವುಗಳನ್ನು ಕಡಿಮೆ ಮಾಡುವಂತಹ ಕೆಲಸವನ್ನು ನಿಮ್ಮ ಪೊಲೀಸ್ ಇಲಾಖೆ ಮಾಡಬೇಕೆಂದು ಹೇಳಿ ನನ್ನದೊಂದು ಮನವಿ. ಆ ರೀತಿಯಲ್ಲಿ ಒಂದು ಪ್ರಯತ್ನ ಮಾಡಿದರೆ ಒಳ್ಳೆಯದು. Crime ಘಟನೆ ನಡೆದ ನಂತರ ಹೋಗಿ ಕಾನೂನು ಭದ್ಧವಾಗಿ ಮಾಡುವುದಕ್ಕಿಂತ ಪೂರ್ವದಲ್ಲಿ crime ಘಟಿಸಲಾರದ್ದಕ್ಕೆ ಕ್ರಮ ಕೈಗೊಳ್ಳುವುದಕ್ಕೆ ನಿಮ್ಮ ಇಲಾಖೆಯನ್ನು ಸನ್ನದ್ದು ಮಾಡಿದರೆ ಬಹುತರವಾಗಿ ಈ crime rate ಕಡಿಮೆಯಾಗಲಿಕ್ಕೆ ಸಾಧ್ಯವಿದೆ. ಆ ದಿಸೆಯಲ್ಲಿ ತಾವು ಚಿಂತನೆ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೆ, ನಮ್ಮ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ವಿಷದ ವಿಚಾರವಾಗಿ ಅದನ್ನು ಆತ್ಮಹತ್ಯೆ ಎಂದು ಪೊಲೀಸರು ಎಂದು ಹೇಳಿದ್ದು, ಈಗ ಅದು detect ಆಗಿದೆ ಎಂದು ಹೇಳಿದ್ದಾರೆ. ಆ ರೀತಿಯ ಘಟನೆ ಇನ್ನು ಮುಂದೆ ಆಗದಂತೆ ನೋಡಿಕೊಳ್ಳುತ್ತೇನೆ. ತಾವು ಹೇಳಿರುವ ಎರಡು ಘಟನೆಯ ಬಗ್ಗೆ ಮತ್ತೊಮ್ಮೆ ಅದರ file ಅನ್ನು ತರಿಸಿ, ಅದರ ಬಗ್ಗೆ ಪರೀಕ್ಷೆ ಮಾಡಿ ಇದರ ಬಗ್ಗೆ ಮತ್ತೊಮ್ಮೆ ವರದಿಯನ್ನು ಕೊಡಬೇಕೆನ್ನುವ ಸೂಚನೆಯನ್ನು ಕೊಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಯುತ ಬಸವರಾಜ ಹೊರಟ್ಟಿಯವರು ಮಾತನಾಡುತ್ತಾ, ನಿಮ್ಮ ವಾಹನಗಳು ಜಾಸ್ತಿ ಇದೆ ನಿಜ, ಆದರೆ, ಯಾವ ವಾಹನಗಳು ಓಡುವುದಿಲ್ಲವೆಂದು ಹೇಳಿದ್ದಾರೆ.

**ಶ್ರೀ ದಯಾನಂದ:–** ಅವು ಎಷ್ಟು ಕಿಲೋಮಿಟರ್‌ಗಳವರೆಗೆ ಓಡುತ್ತವೆ?

**ಶ್ರೀ ಆರ್. ಅಶೋಕ:–** ಇಷ್ಟು ಕಿಲೋ ಮೀಟರ್‌ಗಳಲ್ಲಿ ಓಡಬೇಕೆಂದು ಇದೆ. ಏಕೆಂದರೆ, ನಾವು ವಾಹನವನ್ನು ಖರೀದಿ ಮಾಡಿದ ಮೇಲೆ ಇಷ್ಟು ಕಿಲೋಮೀಟರ್ run ಆಗಬೇಕೆಂದು ಇದೆ. ಅಷ್ಟಾದಮೇಲೆ ಅದನ್ನು ನಾವು scrap ಗೆ ಹಾಕಲಿಕ್ಕೆ ಸಾಧ್ಯ. ಅದಕ್ಕೆ ಮುನ್ನ ಹಾಕಲಿಕ್ಕೆ ಸಾಧ್ಯವಿಲ್ಲ. ಆದರೂ ಸಹ ಮಾನ್ಯ ಸದಸ್ಯರು ಹೇಳಿದಂತೆ ಅದನ್ನು ಪರಿಶೀಲಿನೆ ಮಾಡಿ. ಅದನ್ನು ಸುಸ್ಥಿತಿಯಲ್ಲಿಡುವುದಕ್ಕೆ, ಕೆಟ್ಟು ಹೋಗಿರುವಂತಹ ವಾಹನ ಸರಿಯಾಗಿ ಓಡುವುದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ಅದ್ದರಿಂದ, ಆಗುವಂತಹ ಅನಾಹುತ ಏನೆಂದರೆ ಈಗ ಮಂತ್ರಿಗಳಿಗೆಲ್ಲಾ Skoda, Bolero and Innova ಕೊಟ್ಟಿದ್ದೀರಿ. ಆದರೆ, ಅವರ ಹಿಂದೆ ಹೋಗುವಂತಹ escort ಗಳಿಗೆ 1944–45 model ಗಳನ್ನು ಕೊಟ್ಟಿದ್ದೀರಿ. ಮಂತ್ರಿಗಳ ಕಾರು 120 ಕಿಲೋಮೀಟರ್ ವೇಗದಲ್ಲಿ ಹೋದರೆ, ಅವರ ಹಿಂದೆ ಅವರ ಜೊತೆ ಹೋಗಲಿಕ್ಕೆ ಹೋಗಿ ಎಲ್ಲೋ ಒಂದು ಕಡೆ ಹೊಡೆದು ಅಲ್ಲಿ ಅವನು ಸಾಯುತ್ತಾನೆ. ಈ ರೀತಿಯಲ್ಲಿ 3–4 ಜನ ಅಪಘಾತಕ್ಕೆ ಒಳಗಾಗಿರುವುದು ತಮಗೆ ಗೊತ್ತಿರಬಹುದು. ನೀವು 120

ಕಿಲೋಮೀಟರ್ ವೇಗದಲ್ಲಿ ಹೋದರೆ ಹಿಂದುಗಡೆ ಬರುವವನು 120 ಕಿಲೋಮೀಟರ್ ವೇಗದಲ್ಲಿ ಹೋಗಲಿಕ್ಕೆ ಸಾಧ್ಯವೇ ಇಲ್ಲ.

ಮಾನ್ಯ ಉಪ ಮುಖ್ಯಮಂತ್ರಿಗಳೇ, ತಾವೂ ಕೂಡ ಕಾರಿನಲ್ಲಿ 70–80 ಕಿ.ಮೀ ಗಿಂತ ಹೆಚ್ಚಿನ ವೇಗದಲ್ಲಿ ಹೋಗಬೇಡಿ. ಆ ಕಾರುಗಳು ಸೈರನ್ ಹೊಡೆದುಕೊಂಡು ಬರುವುದನ್ನು ನೋಡಿದರೆ ಭಯವಾಗುತ್ತದೆ. ನಮ್ಮಂಥಹವರ ಮತ್ತು ಸಾರ್ವಜನಿಕರ ಪ್ರಾಣವನ್ನು ಉಳಿಸಿ. ಸಾರ್ವಜನಿಕರಿಗೆ ಆ ಮೂಲಕ ರಕ್ಷಣೆಯನ್ನು ಕೊಡಿ. ನೀವುಗಳು ಪ್ರಯಾಣ ಮಾಡುವ ಕಾರಿನ ವೇಗವನ್ನು ನೋಡಿದರೆ ಅವುಗಳು ಎಲ್ಲಿ ನಮ್ಮ ಮೇಲೆ ಬಿದ್ದು ನಮ್ಮ ಪ್ರಾಣವನ್ನು ಬಲಿ ತೆಗೆದುಕೊಳ್ಳುತ್ತದೆಯೋ ಎಂದು ಅನ್ನಿಸುತ್ತದೆ. ನಿಮ್ಮ ಸಚಿವ ಸಂಪುಟದ ಇತರ ಎಲ್ಲಾ ಮಂತ್ರಿಗಳೂ ಕಾರಿನಲ್ಲಿ 70–80 ಕಿ.ಮೀ ಗಿಂತ ಹೆಚ್ಚಿನ ವೇಗದಲ್ಲಿ ಹೋಗಬೇಡಿ ಎಂದು ಹೇಳಿ. ನಿಮ್ಮ ಅಂದರೆ ಮಂತ್ರಿಗಳ ಕಾರನ್ನು overtake ಮಾಡಿ ಮತ್ತೊಂದು ಕಾರು ಮುಂದೆ ಹೋದರೆ ಆ ಕಾರನ್ನು ನಿಲ್ಲಿಸಿ ಚಾಲಕನಿಗೆ ಹೊಡೆದಂತಹ ಪರಿಸ್ಥಿತಿಯನ್ನು ಕೂಡ ನೋಡಿದ್ದೇವೆ. ಈ ರಾಜ್ಯದ ಗೃಹ ಮಂತ್ರಿಗಳಾಗಿ ದಯವಿಟ್ಟು ಸಾರ್ವಜನಿಕರಿಗೆ ಮತ್ತು ನಮ್ಮಂತಹವರಿಗೆ ರಕ್ಷಣೆಯನ್ನು ಕೊಡಿ.

**ಶ್ರೀ ಅಲ್ಲಮ ಪ್ರಭು ಪಾಟೀಲ್:–** ಈ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ತಾವು ಅವರ ಜೊತೆಯಲ್ಲಿ ಮಾತನಾಡಿ ಕ್ರಮವನ್ನು ತೆಗೆದುಕೊಳ್ಳಿ.

**ಶ್ರೀ ಆರ್ ಅಶೋಕ್:–** ನಾನು ಚರ್ಚೆ ಮಾಡುತ್ತೇನೆ.

**ರಾಜ್ಯದಲ್ಲಿ ಸಮರ್ಪಕವಾಗಿ ಪೊರೈಸಲು ಬೇಕಾಗಿರುವ ವಿದ್ಯುತ್ ಬಗ್ಗೆ**

**549 ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿ ಸಮರ್ಪಕವಾಗಿ ಪೂರೈಸಲು ಬೇಕಾಗಿರುವ ವಿದ್ಯುತ್ ಎಷ್ಟು;

**ಆ)** ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಎಷ್ಟು;

**ಇ)** ಕೇಂದ್ರದಿಂದ ರಾಜ್ಯಕ್ಕೆ ನೀಡುವ ವಿದ್ಯುತ್ ಎಷ್ಟು;

**ಈ)** ರಾಜ್ಯಕ್ಕೆ ಕೊರತೆ ಇರುವ ವಿದ್ಯುತ್‌ನ್ನು ಯಾವ ಮೂಲದಿಂದ ಒದಗಿಸಲಾಗುತ್ತದೆ ಇದರ ಕಾರ್ಯ ಯೋಜನೆಗಳಾವುವು;

**ಉ)** ರಾಜ್ಯದಲ್ಲಿ ಖಾಸಗಿಯಾಗಿ ಸ್ಥಾಪನೆಯಾಗಿರುವ ವಿದ್ಯುತ್ ಕಂಪನಿಗಳು ಯಾವುವು, ಅವುಗಳಿಂದ ಸರ್ಕಾರವು ವಿದ್ಯುತ್‌ನ್ನು ಖರೀದಿಸುತ್ತಿರುವುದು ಯಾವ ದರದಲ್ಲಿ? (ವಿವರ ನೀಡುವುದು)

**ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು)**

**ಅ)** ರಾಜ್ಯದಲ್ಲಿ ಸಮರ್ಪಕವಾಗಿ ವಿದ್ಯುತ್‌ನ್ನು ಪೂರೈಸಲು ಪ್ರಸಕ್ತ 2012–13ನೇ ಸಾಲಿಗೆ, ಕೆ. ಇ. ಆರ್. ಸಿ ಆದೇಶದ ಪ್ರಕಾರ ರಾಜ್ಯದಲ್ಲಿ 60,638 ಮಿಲಿಯನ್ ಯೂನಿಟ್‌ಗಳ ವಿದ್ಯುತ್ ಅವಶ್ಯಕತೆ ಇರುತ್ತದೆ.

**ಆ)** **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ:–** ಪ್ರಸಕ್ತ ಸಾಲಿನಲ್ಲಿ (2012–13) ಜೂನ್ 2012ರ ತಿಂಗಳಿನಲ್ಲಿ ರಾಜ್ಯದಲ್ಲಿ ವಿವಿಧ ಮೂಲಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಒಟ್ಟು ಪ್ರಮಾಣ 3676.475 ಮಿಲಿಯನ್ ಯೂನಿಟ್‌ಗಳು.

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತ:–** ಕರ್ನಾಟಕ ವಿದ್ಯುತ್ ನಿಗಮ

ನಿಯಮಿತವು ವಿವಿಧ ಮೂಲಗಳಾದಂತಹ ಜಲವಿದ್ಯುತ್, ಶಾಖೋತ್ಪನ್ನ, ಡೀಸೆಲ್, ಪವನ ಶಕ್ತಿ ಹಾಗೂ ಸೌರಶಕ್ತಿ ಗಳಿಂದ ವಿದ್ಯುತ್ ಉತ್ಪಾದಿಸುತ್ತಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಉತ್ಪಾದಿಸಿದ ವಿದ್ಯುತ್ ವಿವರ ಈ ಕೆಳಕಂಡಂತಿದೆ.

| **ಅವಧಿ** | **ವಿದ್ಯುತ್ ಉತ್ಪಾಧನೆ (ದ.ಲ.ಯೂ ಗಳಲ್ಲಿ)** |
|---|---|
| 2008–09 | 25080 |
| 2009–10 | 26020 |
| 2010–11 | 22685 |
| 2011–12 | 28238 |
| 2012–13 (30.06.2012 ರ ವರೆಗೆ) | 6505 |

ಇ) ಪ್ರಸಕ್ತ ಸಾಲಿನ ಜೂನ್ –2012ರಲ್ಲಿ ಒಟ್ಟು 921.143 ದಶಲಕ್ಷ ಯೂನಿಟ್‌ಗಳ ವಿದ್ಯುತ್‌ನ್ನು ಕೇಂದ್ರದಿಂದ ಪಡೆಯಲಾಗಿದೆ.

**ಈ)** ರಾಜ್ಯಕ್ಕೆ ಕೊರತೆ ಇರುವ ವಿದ್ಯುತ್‌ನ್ನು ಸ್ವಲ್ಪ ಮಟ್ಟಿಗೆ ಬಗೆಹರಿಸುವ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಲ್ಲಿ ಹೊರ ರಾಜ್ಯಗಳಿಂದ 750 ಮೆಗಾವ್ಯಾಟ್ ಮತ್ತು ರಾಜ್ಯದ ಖಾಸಗಿ ಉತ್ಪಾದನಾ ಘಟಕಗಳಿಂದ 530 ಮೆಗಾವ್ಯಾಟ್‌ನಂತೆ ಒಟ್ಟು 1280 ಮೆಗಾವ್ಯಾಟ್‌ನಷ್ಟು ವಿದ್ಯುತ್‌ನ್ನು ವಿವಿದ ಮೂಲಗಳಿಂದ ಖರೀದಿ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಖಾಸಗಿಯಾಗಿ ಸ್ಥಾಪನೆಯಾಗಿರುವ ವಿದ್ಯುತ್ ಕಂಪನಿಗಳು ವಿವಿಧ ಮಾದರಿಯ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿದ್ದು, ಅವುಗಳಿಂದ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಖರೀದಿಸಿದ ಸರಾಸರಿ ಯೂನಿಟ್ ದರಗಳ ವಿವರಗಳು ಕೆಳಕಂಡಂತಿವೆ.

| **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ** | | |
|---|---|---|
| **ಕ್ರ.ಸಂ** | **ಉತ್ಪಾದನಾ ಘಟಕದ ಮಾದರಿ** | **ಸರಾಸರಿ ದರ (₹/ ಯೂನಿಟ್ )** |
| 1 | ಟಾಟ | 7.78 |
| 2 | ರಾಯಲ ಸೀಮ | 9.01 |
| 3 | ಯು.ಪಿ.ಸಿ.ಎಲ್ | 3.13 |
| 4 | ಸಕ್ಕರೆ ಸಹ ಉತ್ಪಾದನೆ | 3.85 |
| 5 | ಬಯೋಮಾಸ್ | 2.12 |
| 6 | ಕಿರು ಜಲ ವಿದ್ಯುತ್ | 3.11 |
| 7 | ಪವನ ವಿದ್ಯುತ್ | 3.54 |
| **ಮಂಗಳೂರು ವಿದ್ಯುತ್ ಸರಬರಾಜು ಕಂಪನಿ** | | |
| 1 | ಬೃಹತ್ ಸ್ವತಂತ್ರ ಉತ್ಪಾದಕರು | 3.47 |
| 2 | ಕಿರು ಜಲ ವಿದ್ಯುತ್ | 3.15 |
| 3 | ಪವನ ವಿದ್ಯುತ್ | 3.56 |

| | | |
|---|---|---|
| **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ** | | |
| 1 | ಬೃಹತ್ ಸ್ವತಂತ್ರ ಉತ್ಪಾದಕರು | 3.06 |
| 2 | ಸಕ್ಕರೆ ಸಹ ಉತ್ಪಾದನೆ | 3.57 |
| 3 | ಬಯೋಮಾಸ್ | 3.52 |
| 4 | ಕಿರು ಜಲ ವಿದ್ಯುತ್ | 3.25 |
| 5 | ಪವನ ವಿದ್ಯುತ್ | 3.47 |
| **ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ** | | |
| 1 | ಸಕ್ಕರೆ ಸಹ ಉತ್ಪಾದನೆ | 3.37 |
| 2 | ಬಯೋಮಾಸ್ | 3.93 |
| 3 | ಕಿರು ಜಲ ವಿದ್ಯುತ್ | 3.02 |
| 4 | ಪವನ ವಿದ್ಯುತ್ | 3.52 |
| 5 | ಕ್ಯಾಪ್ಟಿವ್ ಪವರ್ | 3.56 |
| **ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ** | | |
| 1 | ಬೃಹತ್ ಸ್ವತಂತ್ರ ಉತ್ಪಾದಕರು | 3.88 |
| 2 | ಸಕ್ಕರೆ ಸಹ ಉತ್ಪಾದನೆ | 3.16 |
| 3 | ಕಿರು ಜಲ ವಿದ್ಯುತ್ | 3.21 |
| 4 | ಪವನ ವಿದ್ಯುತ್ | 3.41 |

**(ಆಚಾರ್ ಹಾಲಪ್ಪ ಬಸಪ್ಪ ಇವರ ಪರವಾಗಿ ಮಾನ್ಯ ಮೋಹನ ಎ. ಲಿಂಬೀಕಾಯಿ ಅವರು ಪ್ರಶ್ನೆಯನ್ನು ಕೇಳಿದರು)**

**ಶ್ರೀ ಮೋಹನ ಎ. ಲಿಂಬೀಕಾಯಿ:-** ಮಾನ್ಯ ಸಭಾಪತಿಯವರೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರದ ಎರಡನೇ ಭಾಗವನ್ನು ನೋಡಿದರೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ವಿವಿಧ ಮೂಲಗಳಿಂದ ಅಂದರೆ ಜಲ ವಿದ್ಯುತ್ ಶಾಖೋತ್ಪನ್ನ ಡೀಸೆಲ್, ಪವನಶಕ್ತಿ ಹಾಗೂ ಸೌರಶಕ್ತಿಗಳಿಂದ ಇಂತಿಷ್ಟು ವಿದ್ಯುತ್ ಅನ್ನು ಉತ್ಪಾದನೆ

ಮಾಡಲಾಗಿದೆ ಎಂದು ಇಲ್ಲಿ ಹೇಳಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಉತ್ಪಾದನೆಯಾಗಿರುವ ವಿವರವನ್ನು ಕೊಟ್ಟಿದ್ದಾರೆ. ಪುಟ ಎರಡರಲ್ಲಿ ಯಾವ್ಯಾವ ವಿದ್ಯುತ್ ಉತ್ಪಾದನಾ ಘಟಕಗಳಿಂದ ಎಷ್ಟೆಷ್ಟು ವಿದ್ಯುತ್ ಯೂನಿಟ್ ಅನ್ನು ಎಷ್ಟೆಷ್ಟು ದರವನ್ನು ನೀಡಿ ಖರೀದಿ ಮಾಡಿದ್ದೇವೆಂಬ ಬಗ್ಗೆ ಕೂಡ ವಿವರವನ್ನು ಕೊಟ್ಟಿದ್ದಾರೆ ಆದರೆ ಸೌರಶಕ್ತಿಯಿಂದ ಉತ್ಪಾದನೆ ಮಾಡಿದ ವಿದ್ಯುತ್ ಅನ್ನು ಎಷ್ಟು ದರದಲ್ಲಿ, ಎಷ್ಟು ವಿದ್ಯುತ್ ಅನ್ನು ಖರೀದಿ ಮಾಡಲಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಕೊಟ್ಟಿಲ್ಲ. ಮತ್ತು ಸಕ್ಕರೆ ಕಾರ್ಖಾನೆಗಳು ಈ ಪವನ ಶಕ್ತಿಯ ವಿದ್ಯುತ್ ಅನ್ನು ಏನು ಸರಬರಾಜು ಮಾಡುತ್ತಾರೆ ಅವರಿಗೆ ಕೊಡಬೇಕಾದಂತಹ ಬಾಕಿ ಹಣ ಎಷ್ಟು ಇದೆ.? ಎಷ್ಟು ದಿವಸದಿಂದ ಅವರಿಗೆ ಹಣ ಕೊಟ್ಟಿಲ್ಲ ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕು. ಇದಲ್ಲದೆ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಮತ್ತು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಗೆ ಈ ಪವನ ವಿದ್ಯುತ್ ಖರೀದಿ ಮತ್ತು ಸಕ್ಕರೆ ಸಹ ಉತ್ಪಾದನೆಯಲ್ಲಿ, ಮತ್ತು ಆ ಬೆಲೆಯಲ್ಲಿ ವ್ಯತ್ಯಾಸ ಇದೆ. ಅಲ್ಲಿ ಖರೀದಿ ಮಾಡುವವರು ಆ ಕಂಪನಿಗಳಿಗೆ ವಿವಿಧ ರೀತಿಯ ವಿದ್ಯುತ್ ದರವನ್ನು ನೀಡಬೇಕಾಗುತ್ತದೆ. ಚಾಮುಂಡೇಶ್ವರಿ ಸೌರಶಕ್ತಿಯ ವಿದ್ಯುತ್ ಸರಬರಾಜು ಕಂಪನಿ ಇವರಿಂದ ಸಕ್ಕರೆಯ ಸಹ ಉತ್ಪಾದನೆಯಿಂದ ಖರೀದಿ ಆಗುವ ವಿದ್ಯುತ್ತಿಗೆ 3–57 ಪೈಸೆ ಕೊಟ್ಟು ಖರೀದಿ ಮಾಡುತ್ತಾರೆ ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಸಕ್ಕರೆಯ ಸಹ ಉತ್ಪಾದನೆಯಿಂದ ಖರೀದಿ ಆಗುವ ವಿದ್ಯುತ್ತಿಗೆ 3–37 ಪೈಸೆ ಇದೆ. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವತಿಯಿಂದ ಉತ್ಪಾದನೆ ಮಾಡುತ್ತಿರುವ ಸಕ್ಕರೆ ಸಹ ಉತ್ಪಾದನೆಯಿಂದ ಖರೀದಿ ಆಗುವ ವಿದ್ಯುತ್ತಿಗೆ 3.16 ಪೈಸೆ ಇದೆ. ಈ ರೀತಿಯ ವ್ಯತ್ಯಾಸಕ್ಕೆ ಕಾರಣವೇನು ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕೆಂದು ವಿನಂತಿಸುತ್ತೇನೆ.

**ಕುಮಾರಿ ಶೋಭಾ ಕರಂದ್ಲಾಜೆ:–** ಮಾನ್ಯ ಸಭಾಪತಿಗಳೇ, ಈ ಸೌರಶಕ್ತಿ ವಿದ್ಯುತ್‌ಗೆ ಸಂಬಂಧಿಸಿದಂತೆ ಕೆ.ಪಿ.ಸಿ.ಎಲ್. ನವರ ಎರಡು ಘಟಕಗಳು ಇವೆ ಎಂದು ಹಲವಾರು ಬಾರಿ ಸದನದಲ್ಲಿ ಹೇಳಿದ್ದೇನೆ. ಕೋಲಾರದಲ್ಲಿ ಒಂದು, ಮತ್ತೊಂದು ಬೆಳಗಾಂ ಜಿಲ್ಲೆಯಲ್ಲಿ ಇದೆ. ಈಗ ಕೆ.ಇ.ಆರ್.ಸಿ ಏನು ಇದೆ ಅದು ನಮ್ಮ ರಾಜ್ಯದಲ್ಲಿ ಸೌರ ವಿದ್ಯುತ್ತಿಗೆ ಒಂದು ಯೂನಿಟ್‌ಗೆ 14 ರೂಪಾಯಿ ಎಂದು ನಿಗದಿ ಮಾಡಿದೆ. ಈಗ ಕೆ.ಪಿ.ಸಿ.ಎಲ್ ನವರದ್ದು ಎರಡು ಘಟಕ ಇದೆ. ಉಳಿದ ಕಡೆಗಳಲ್ಲಿ ಇನ್ನು ಮುಂದಕ್ಕೆ ಶುರು ಮಾಡಬೇಕಾಗಿದೆ. 2016ನೇ ಇಸವಿಯೊಳಗೆ 200 ಮೆಗಾವ್ಯಾಟ್‌ನ Gridಗೆ ಸೋಲಾರ್‌ನಿಂದ ಸೇರಿಸಬೇಕೆಂಬ ಒಂದು ಸೂಚನೆಯನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. 80 ಮೆಗಾವ್ಯಾಟಗೆ ಸಂಬಂಧಿಸಿದಂತೆ ಟೆಂಡರ್ ಅನ್ನು ಕರಿದಿದ್ದೇವೆ. ಈ ಟೆಂಡರ್‌ನಲ್ಲಿ 7–76 ಪೈಸೆಯಿಂದ ಸುಮಾರು 8–00 8–50 ರೂಪಾಯಿಯವರೆಗೆ ರೇಟನ್ನು ನಿಗದಿ ಮಾಡಿದ್ದಾರೆ. ಕೆಲವರು 10 ಮೆಗಾವ್ಯಾಟ್‌ಗೆ 7–76 ಪೈಸೆ ಕೊಟ್ಟರೆ ಇನ್ನು ಕೆಲವರು 8–00 ರೂಪಾಯಿಗೆ ಕೋಟ್ ಮಾಡಿದ್ದಾರೆ. ನಾವು 80 ಮೆಗಾವ್ಯಾಟ್‌ಗೆ ಸಂಬಂಧಿಸಿದಂತೆ ಟೆಂಡರ್ ಅನ್ನು ಕರೆದಿದ್ದು ಈ ಬೆಲೆ ವ್ಯತ್ಯಾಸ ಇದೆ. ಈ ಘಟಕಗಳು ಇನ್ನೂ ಶುರುವಾಗಬೇಕಾಗಿದೆ. ಈಗ ಕೇವಲ ಕೆ.ಪಿ.ಸಿ.ಎಲ್ ಘಟಕಗಳು ಇವೆ. ಸಕ್ಕರೆ ಕಾರ್ಖಾನೆ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಟೆಂಡರ್ ಅನ್ನು ಕರೆಯುತ್ತಾರೆ. ಆಗ ಬೇರೆ ಬೇರೆ ದರ ನಿಗದಿಯಾಗುತ್ತದೆ, ಮತ್ತು ಅದು ಹೋಗುವಂತಹ ದೂರ ಎಲ್ಲಿಯತನಕ ಇದೆ, ಅದರ ಆಧಾರದಲ್ಲಿ ಬೇರೆ ಬೇರೆ ದರ ನಿಗದಿಯಾಗುತ್ತದೆ. ಮತ್ತು ಈ ಕಾರ್ಖಾನೆ ಎಷ್ಟು ದೂರದಲ್ಲಿ ಇದೆ ಅದರ ಆಧಾರದ ಮೇಲೆ ಈ ದರಗಳಲ್ಲಿ ವ್ಯತ್ಯಾಸಗಳು ಇರುತ್ತವೆ. ಮತ್ತು ಈ ಕೆ.ಇ.ಆರ್.ಸಿ ಅವರು ಇಷ್ಟು ಸಹಜವಾಗಿ ಏನು ನಿಗದಿ ಮಾಡುತ್ತಾರೆ, ಅದರ ಜೊತೆಯಲ್ಲಿ ಈ ಸಾಗಾಣಿಕೆ ವೆಚ್ಚಗಳು ಎಷ್ಟು ಆಗುತ್ತದೆ ಅದರ ಮೇಲೆ ಕೂಡ ವಿದ್ಯುತ್ ದರ ನಿಗದಿ ಆಗುತ್ತದೆ. ಎಷ್ಟು ಸಾಗಾಣಿಕೆ ವೆಚ್ಚ ಜಾಸ್ತಿಯಾಗುತ್ತದೆಯೋ ಅಷ್ಟು ವಿದ್ಯುತ್ ಖರೀದಿ ದರ ಕೂಡ ಜಾಸ್ತಿಯಾಗುತ್ತದೆ.

**ಇಂದಿರಾ ಆವಾಸ್ ಯೋಜನೆ ಅಡಿ ಮಂಜೂರಾದ ಮನೆಗಳ ಬಗ್ಗೆ**

**344; ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ ಸ್ಥಳೀಯ ಸಂಸ್ಥೆಗಳ ಕ್ಷೇತ್ರ**

**ಅ)** ಇಂದಿರಾ ಆವಾಸ್ ಹಾಗೂ ಆಶ್ರಯ ಮನೆಗಳ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಿಂದ ಮಂಜೂರು ಮಾಡಿರುವ ಮನೆಗಳೆಷ್ಟು;

**ಆ)** ಸದರಿ ಯೋಜನೆಯಲ್ಲಿ ಬೆಳಗಾಂ ಜಿಲ್ಲೆಗೆ ಹಂಚಿಕೆ ಮಾಡಿರುವ ಮನೆಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

**ಇ)** ಸದರಿ ಯೋಜನೆಗೆ ಇದುವರೆವಿಗೆ ಬಂದಿರುವ ಪ್ರಸ್ತಾವನೆಗಳೆಷ್ಟು? (ತಾಲ್ಲೂಕುವಾರುವಿವರ ನೀಡುವುದು)

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು)**

**ಅ)** ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಇಂದಿರಾ ಆವಾಸ್ ಯೋಜನೆಯಡಿ ಒಟ್ಟು 515598 ಮನೆಗಳನ್ನು ಈ ಕೆಳಕಂಡಂತೆ ಮಂಜೂರು ಮಾಡಲಾಗಿದೆ.

ಆಶ್ರಯ ಯೋಜನೆಯ ಬದಲಾಗಿ ಸರ್ಕಾರವು 2010–2011 ನೇ ಸಾಲಿನಲ್ಲಿ ಬಸವ ವಸತಿ ಯೋಜನೆ ಎಂಬ ನೂತನ ಯೋಜನೆಯನ್ನು ಜಾರಿಗೆ ತಂದು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 4000 ಮನೆಗಳ ಗುರಿಯನ್ನು ನಿಗದಿಪಡಿಸಿ ಈ ಕೆಳಕಂಡಂತೆ ಮಂಜೂರು ಮಾಡಲಾಗಿದೆ.

| **ಯೋಜನೆ** | **ಮಂಜೂರು ಮಾಡಲಾದ ಮನೆಗಳು** | | | | **ಒಟ್ಟು** |
|---|---|---|---|---|---|
| | **2009–10** | **2010–11** | **2011–12** | **2012–13** | |
| ಇಂದಿರಾ ಆವಾಸ | 185288 | 0 | 185297 | 145013 | 515598 |
| ಬಸವ ವಸತಿ ಯೋಜನೆ | 0 | 1270925 | 0 | 0 | 1270925 |
| **ಒಟ್ಟು** | **185288** | **1270925** | **185297** | **145013** | **1786523** |

**ಆ)** ಸದರಿ ಯೋಜನೆಯಲ್ಲಿ ಕಳೆದ 3 ವರ್ಷಗಳಿಂದ ಬೆಳಗಾವಿ ಜಿಲ್ಲೆಯಲ್ಲಿ 31675 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ.

ನಿರ್ಮಿಸಿ ಹಂಚಿಕೆ ಮಾಡಲಾದ ತಾಲ್ಲೂಕುವಾರು/ವಿಧಾನಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

| **ಇಂದಿರಾ ಆವಾಸ್ ಯೋಜನೆ** | |
|---|---|
| **ತಾಲ್ಲೂಕು** | **ನಿರ್ಮಿಸಿ ಹಂಚಿಕೆ ಮಾಡಿದ ಮನೆಗಳು** |
| ಅಥಣಿ | 2395 |
| ಬೈಲಹೊಂಗಲ | 2666 |
| ಬೆಳಗಾವಿ | 1895 |
| ಚಿಕ್ಕೋಡಿ | 2393 |
| ಗೋಕಾಕ್ | 2241 |
| ಹುಕ್ಕೇರಿ | 2422 |
| ಕಾನಾಪುರ | 2026 |
| ರಾಮದುರ್ಗ | 1633 |
| ರಾಯಬಾಗ್ | 1389 |
| ಸೌದತ್ತಿ | 2099 |
| **ಒಟ್ಟು** | **21159** |

| **ಬಸವ ವಸತಿ ಯೋಜನೆ** | |
|---|---|
| **ವಿಧಾನಸಭಾ ಕ್ಷೇತ್ರ** | **ನಿರ್ಮಿಸಿ ಹಂಚಿಕೆ ಮಾಡಿದ ಮನೆಗಳು** |
| ಅರಭಾಂವಿ | 733 |
| ಅಥಣಿ | 827 |
| ಬೈಲಹೊಂಗಲ | 520 |
| ಬೆಳಗಾವಿ ದಕ್ಷಿಣ | 0 |
| ಬೆಳಗಾವಿ ಗ್ರಾಮೀಣ | 124 |
| ಬೆಳಗಾವಿ ಉತ್ತರ | 0 |

| | |
|---|---|
| ಚಿಕ್ಕೋಡಿ –ಸದಲಗಾ | 596 |
| ಗೋಕಾಕ್ | 791 |
| ಹುಕ್ಕೇರಿ | 1067 |
| ಕಾಗವಾಡ | 861 |
| ಖಾನಾಪುರ | 458 |
| ಕಿತ್ತೂರ | 481 |
| ಕುಡಚಿ | 860 |
| ನಿಪ್ಪಾಣಿ | 368 |
| ರಾಮದುರ್ಗ | 766 |
| ರಾಯಬಾಗ | 696 |
| ಸವದತ್ತಿ ಯಲ್ಲಮ್ಮ | 709 |
| ಯಮಕನಮರಡಿ | 659 |
| **ಒಟ್ಟು** | **10516** |

ಇ) ಇಂದಿರಾ ಆವಾಸ್ ಮತ್ತು ಬಸವ ವಸತಿ ಯೋಜನೆಯಡಿ 2009–10 ರಿಂದ 2012–13 ಸಾಲಿನ ವರೆಗೆ ಈ ಕೆಳಕಂಡಂತೆ ಫಲಾನುಭವಿಗಳ ಅನುಮೂದನೆಗೆ ಪ್ರಸ್ತಾವನೆಗಳು ನಿಗಮಕ್ಕೆ ಬಂದಿದ್ದು, ಒಟ್ಟು 98794 ಫಲಾನುಭವಿಗಳಿಗೆ ಅನುಮೋದನೆ ನೀಡಲಾಗಿದೆ.

ತಾಲ್ಲೂಕುವಾರು /ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

| **ಇಂದಿರಾ ಆವಾಸ್ ಯೋಜನೆ** | | |
|---|---|---|
| **ತಾಲ್ಲೂಕು** | **ಗುರಿ** | **ಅನುಮೋದನೆ ಪಡೆದ ಫಲಾನುಭವಿಗಳ ಸಂಖ್ಯೆ** |
| ಅಥಣಿ | 5967 | 5348 |
| ಬೈಲಹೊಂಗಲ | 5967 | 4687 |
| ಬೆಳಗಾವಿ | 6318 | 3418 |
| ಚಿಕ್ಕೋಡಿ | 7605 | 10034 |
| ಗೋಕಾಕ್ | 5967 | 3758 |

| | | |
|---|---|---|
| ಹುಕ್ಕೇರಿ | 5967 | 3933 |
| ಖಾನಾಪುರ | 5967 | 3313 |
| ರಾಮದುರ್ಗ | 3861 | 4024 |
| ರಾಯಭಾಗ್ | 4095 | 3173 |
| ಸೌದತ್ತಿ | 5031 | 4772 |
| **ಒಟ್ಟು** | **56745** | **46460** |
| **ಬಸವ ವಸತಿ ಯೋಜನೆ** | | |
| **ವಿಧಾನಸಭಾ ಕ್ಷೇತ್ರ** | **ಗುರಿ** | **ಅನುಮೋದನೆ ಪಡೆದ ಫಲಾನುಭವಿಗಳ ಸಂಖ್ಯೆ** |
| ಅರಭಾಂವಿ | 8469 | 1957 |
| ಅಥಣಿ | 15000 | 8437 |
| ಭೈಲಹೊಂಗಲ | 8000 | 1700 |
| ಬೆಳಗಾವಿ ದಕ್ಷಿಣ | 4000 | 319 |
| ಬೆಳಗಾವಿ ಗ್ರಾಮೀಣ | 7734 | 3834 |
| ಬೆಳಗಾವಿ ಉತ್ತರ | 4000 | 0 |
| ಚಿಕ್ಕೋಡಿ –ಸದಲಗಾ | 12324 | 6794 |
| ಗೋಕಾಕ್ | 4000 | 1895 |
| ಹುಕ್ಕೇರಿ | 9000 | 8378 |
| ಕಾಗವಾಡ | 4251 | 3941 |
| ಖಾನಾಪುರ | 4000 | 1838 |
| ಕಿತ್ತೂರ | 6000 | 1441 |
| ಕುಡಚಿ | 6000 | 1980 |
| ನಿಪ್ಪಾಣಿ | 5456 | 1609 |
| ರಾಮದುರ್ಗ | 11217 | 2001 |
| ರಾಯಭಾಗ | 7382 | 1895 |
| ಸವದತ್ತಿ ಯಲ್ಲಮ್ಮ | 6000 | 2001 |
| ಯಮಕನ ಮರಡಿ | 4780 | 2314 |
| **ಒಟ್ಟು** | **127613** | **52334** |

**ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್:-** ಮಾನ್ಯ ಸಭಾಪತಿಯವರೆ, ಪ್ರತಿಯೊಂದು ಶಾಸಕರ ಕ್ಷೇತ್ರದಲ್ಲಿ 4000 ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಈ ಪಟ್ಟಿ ಪ್ರಕಾರ ನೋಡಿದರೆ ಈಮನೆಗಳಿಗೆ ಸಾಕಷ್ಟು ಬೇಡಿಕೆ ಇದೆ ಎಂಬುದು ತಿಳಿಯುತ್ತದೆ. ಮಾಜಿ ಮುಖ್ಯ ಮಂತ್ರಿಯವರಾದ ಮಾನ್ಯ ಯಡಿಯೂರಪ್ಪನವರು ಘೋಷಣೆಯನ್ನು ಮಾಡಿದ್ದಾರೆ. ಇನ್ನು ಮುಂದೆ ನಮ್ಮ ರಾಜ್ಯ ಗುಡಿಸಲು ಮುಕ್ತ ರಾಜ್ಯವಾಗುತ್ತದೆ ಎಂದು ಘೋಷಣೆ ಮಾಡಿದ್ದಾರೆ. ನಿಮ್ಮ ಉತ್ತರದಲ್ಲಿನ ಅಂಕಿಅಂಶವನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಇನ್ನೂ 10.50 ಲಕ್ಷ ಗುಡಿಸಲುಗಳು ಇವೆ. ನಿಮ್ಮ ಅಧಿಕಾರಾವಧಿ ಇನ್ನು ಹತ್ತು ತಿಂಗಳು ಮಾತ್ರ ಇದೆ. ಈ ಅವದಿಯಲ್ಲಿ ಇಷ್ಟು ಗುಡಿಸಲುಗಳನ್ನು ಹೇಗೆ ತೆಗೆದು ಹಾಕುತ್ತೀರಿ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ನೀಡಬೇಕು.

**ಶ್ರೀ ವಿ ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಕಳೆದ ಮೂರು ವರ್ಷದಲ್ಲಿ ಇಂದಿರಾ ಆವಾಸನಿಂದ 5,15,598 ಮನೆಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಇಲ್ಲಿಯವರೆಗೆ 3,92,000 ಮನೆಗಳಿಗೆ ಫಲಾನುಭವಿಗಳ ಆಯ್ಕೆಯಾಗಿದೆ. ಇದರಲ್ಲಿ 1,49,179 ಮನೆಗಳನ್ನು ಪೂರ್ಣ ಮಾಡಿದ್ದೇವೆ. ಇನ್ನೂ 1,26,143 ಮನೆಗಳು ಪ್ರಾರಂಭವಾಗಿವೆ. ಕೆಲಸ ಮುಗಿಯುತ್ತಿದೆ. 2010-11ನೇ ಸಾಲಿನಲ್ಲಿ ಒಂದೂಂದು ಕ್ಷೇತ್ರಕ್ಕೆ 4000 ಮನೆಗಳಂತೆ ಬಸವ ವಸತಿ ಯೋಜನೆಯಿಂದ 12,709 ಮನೆಗಳನ್ನು ನೀಡುವ ಗುರಿಯನ್ನು ನಿಗದಿಪಡಿಸಿದ್ದೇವೆ. ಈಗಾಗಲೇ 6,03,354 ಫಲಾನುಭವಿಗಳನ್ನು ನಾವು ಆಯ್ಕೆ ಮಾಡಿದ್ದೇವೆ. 6 ಲಕ್ಷ ಚಿಲ್ಲರೆ ಮನೆಗಳ ಪೈಕಿ ಈಗಾಗಲೇ ಸರ್ಕಾರದ ವತಿಯಿಂದ ಬಸವ ವಸತಿ ಯೋಜನೆಯಿಂದ 72,954 ಮನೆಗಳನ್ನು ಪೂರ್ತಿ ಮಾಡಿದ್ದೇವೆ. 1,85,871 ಮನೆಗಳು ಪ್ರಗತಿಯಲ್ಲಿವೆ ಇನ್ನೂ ಉಳಿದ ಮನೆಗಳು ಪ್ರಾರಂಭವಾಗಬೇಕಾಗಿದೆ. ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ, 2009-10 ರಲ್ಲಿ ಇಂದಿರಾ ಆವಾಸ್ ಯೋಜನೆ, ಮತ್ತು ಬಸವ ವಸತಿ ಯೋಜನೆ ಜಾರಿಗೆ ಬಂದ ಮೇಲೆ ಇವೆರಡನ್ನೂ ಒಂದೇ ಸೂರಿನ ಅಡಿಯಲ್ಲಿ ತರುವುದಕ್ಕೆ ಆಗುವುದಿಲ್ಲ. ಗೊಂದಲವಾಗುತ್ತದೆ

ಎಂದು ಕೇಂದ್ರ ಸರ್ಕಾರ ಹೇಳಿದ್ದರಿಂದ ಇದನ್ನು ತರುವುದಕ್ಕೆ ಆಗಲಿಲ್ಲ. ತದನಂತರ ನಾವು ಇಂದಿರಾ ಆವಾಸ್ ಯೋಜನೆಯನ್ನು ಬೇರ್ಪಡಿಸಿದ್ದೆವು. ಮತ್ತು ರಾಜ್ಯ ಸರ್ಕಾರದ ವತಿಯಿಂದ ಆಶ್ರಯ ಮನೆಗಳ ಯೋಜನೆಯ ಬದಲಾಗಿ ಬಸವ ವಸತಿ ಯೋಜನೆ ಎಂದು ಮಾಡಿದ್ದೇವೆ. ಒಟ್ಟು 12 ಲಕ್ಷ ಮನೆಗಳ ಪೈಕಿ ಒಟ್ಟು ರಾಜ್ಯದಲ್ಲಿ 17,86,525 ಮನೆಗಳನ್ನು ಗುರುತಿಸಲಾಗಿದೆ. ಅದರಲ್ಲಿ ಬಸವ ವಸತಿ ಯೋಜನೆಯಲ್ಲಿ 12 ಲಕ್ಷ ಚಿಲ್ಲರೆ ಮನೆಗಳು ಹಾಗೂ 5 ಲಕ್ಷ ಚಿಲ್ಲರೆ ಮನೆಗಳೆಂದು ಗುರುತು ಮಾಡಿದ್ದೇವೆ. ಗುಡಿಸಲು ರಹಿತ ರಾಜ್ಯವನ್ನು ಮಾಡುತ್ತೇವೆಂದು ಈ ಹಿಂದಿನ ನಿಕಟ ಪೂರ್ವ ಮುಖ್ಯಮಂತ್ರಿಗಳು ಏನು ಹೇಳಿದ್ದರು, ಅದಕ್ಕೆ ಚಾಲನೆಯನ್ನು ಕೊಟ್ಟಿದ್ದೇವೆ. ಆದರೆ ನಾವು ಜಿ.ಪಿ.ಎಸ್. ಅನ್ನು ಮಾಡಿದ ಮೇಲೆ ಇದರ ಮೂಲಕವಾಗಿ ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆಯನ್ನು ಕಾಪಾಡುವುದರಿಂದ ಅರ್ಹರಿಗೆ ಮನೆಗಳು ಸಿಗುವಂತಾಗಿವೆ. ಈ ಮೊದಲು ಯಾರೆಂದರೆ ಅವರು ಮನೆಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ಜಿ.ಪಿ.ಎಸ್. ಅನ್ನು ಮಾಡಿದ ಮೇಲೆ ಯಾರು ನಿಜವಾಗಲೂ ಈ ಮನೆಯನ್ನು ಪಡೆಯಲು ಅರ್ಹರಿದ್ದಾರೆ ಯಾರಿಗೆ ಈ ಮನೆಯನ್ನು ನೀಡಬೇಕಾಗಿದೆ ಅವರಿಗೆ ಸಿಗುತ್ತಿದೆ. ಮತ್ತು ಅಂತಹವರನ್ನು ಆಯ್ಕೆ ಮಾಡದೇ ಹೋದರೆ ಕಾನೂನು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಗ್ರಾಮ ಸಭೆಗಳು ಇರಬಹುದು, ಜಾಗೃತ ಸಮಿತಿಗಳು ಇರಬಹುದು ಎಲ್ಲಾ ಕಡೆಗಳಲ್ಲೂ ಇಂತಹ ಒಂದು ಎಚ್ಚರಿಕೆಯನ್ನು ನೀಡಿರುತ್ತೇವೆ. ನಮ್ಮ ಇ.ಓ.ಗಳು ಇರಬಹುದು ನಮ್ಮ ಪಿ.ಡಿ.ಓ., ಸಿ.ಡಿ.ಓ.ಗಳು ಇರಬಹುದು ಇಲ್ಲವೇ ನೋಡಲ್ ಆಫೀಸರ್ಸ್ ಇರಬಹುದು ಇವರೆಲ್ಲರು ಒಟ್ಟಾಗಿ ಸೇರಿ ಕೆಲಸವನ್ನು ಮಾಡಬೇಕಾಗಿದೆ. ಆದ್ದರಿಂದ ನಮಗೆ ಆಯ್ಕೆಯಲ್ಲಿಯೇ ತೊಂದರೆ ಆಗುತ್ತಿರುವುದನ್ನು ತಪ್ಪಿಸುವ ಸಲುವಾಗಿ ಯಾರು ಅರ್ಹ ಫಲಾನುಭವಿಗಳಿದ್ದಾರೆ ಅವರಿಗೆ ಮಾತ್ರ ಈ ಮನೆಗಳನ್ನು ಕೊಡುವುದರಿಂದ ಭ್ರಷ್ಟಾಚಾರವನ್ನು ತಪ್ಪಿಸುವುದಕ್ಕೆ ಸಹಾಯವಾಗುತ್ತದೆ. ಈ ಜಿ.ಪಿ.ಎಸ್. ಅನ್ನು ಮತ್ತು ಮನೆಗಳನ್ನು ಹೆಣುಮಕ್ಕಳಿಗೆ ಮಾತ್ರ ಕೊಡುವಂತೆ ಮಾಡುವುದರಿಂದ ಹಾಗೂ ಇದಕ್ಕೆ ₹ 75,000 ಮಾಡಿದ ಮೇಲೆ ಆಯ್ಕೆ ಪ್ರಕ್ರಿಯೆಯಲ್ಲಿ

ಪಾರದರ್ಶಕತೆಯನ್ನು ಕಾಪಾಡದೆ ಹೋದರೆ ಕಷ್ಟವಾಗುತ್ತದೆ. ಕಾನೂನು ಚೌಕಟ್ಟಿನಲ್ಲಿ ಈ ಒಂದು ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಾಗಿದೆ. ಇನ್ನೂ 10 ತಿಂಗಳಲ್ಲಿಯೇ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಆದರೆ ಈ ರಾಜ್ಯದ ಗುಡಿಸಲು ನಿವಾಸಿಗಳಿಗೆ ಈ ಒಂದು ಕಾರ್ಯದ ಮೂಲಕ ಸಂದೇಶವನ್ನು ನೀಡಿದ್ದೇವೆ. ಮನೆಗಳಿಲ್ಲದೆ ಯಾರು ನೋವನ್ನು ಅನುಭವಿಸುತ್ತಿದ್ದರು, ಅಂತಹವರ ಪೈಕಿ ಕೆಲವರಿಗಾದರೂ ಈ ಮನೆಗಳನ್ನು ನೀಡುವುದಕ್ಕೆ ಸಾಧ್ಯವಾಗಿದೆ. ಸರ್ಕಾರ ತಮ್ಮ ಕಳಕಳಿಯನ್ನು ಅರ್ಥ ಮಾಡಿಕೊಂಡಿದೆ, ಎಲ್ಲಾ ವಿಧಾನಸಭಾ ಕ್ಷೇತ್ರಕ್ಕೆ 4000 ಮನೆಗಳನ್ನು ನೀಡುವ ಗುರಿಯನ್ನು ನಿಗದಿಪಡಿಸಿದ್ದೇವೆ ಈ ಮನೆಗಳನ್ನು ಕಟ್ಟಿ ಮುಗಿಸುವ ಜೊತೆಯಲ್ಲಿ ಇನ್ನೂ ಎಲ್ಲೆಲ್ಲಿ ಹೆಚ್ಚಿನ ಮನೆಗಳ ಅಗತ್ಯವಿದೆ ಅಲ್ಲಿ ಇನ್ನೂ ಹೆಚ್ಚಿನ ಮನೆಗಳ ಅಗತ್ಯಗಳನ್ನು ಗುರುತಿಸುವ ಕೆಲಸವನ್ನು ಮಾಡುತ್ತೇವೆ.

**ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್:-** ಮಾನ್ಯ ಸಭಾಪತಿಯವರೆ, ಕಳೆದ ಸಲ ಒಂದು ಘೋಷಣೆಯನ್ನು ಮಾಡಿದ್ದೀರಿ. ಎಲ್ಲೆಲ್ಲಿ ಈ ವಿಧಾನ ಪರಿಷತ್ತಿನ ಸದಸ್ಯರ ಕ್ಷೇತ್ರಗಳಲ್ಲಿನ ಸಮಿತಿಗಳು ಇವೆ ಅಲ್ಲಿಗೆ ಆಯಾಯ ಕ್ಷೇತ್ರಗಳಲ್ಲಿನ ವಿಧಾನ ಪರಿಷತ್ತಿನ ಸದಸ್ಯರನ್ನು ಉಪಾಧ್ಯಕ್ಷರನ್ನಾಗಿ ನೇಮಕ ಮಾಡುತ್ತೇವೆಂದು ಹೇಳಿದ್ದೀರಿ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೆ, ನನಗೆ ಎಷ್ಟರಮಟ್ಟಿಗೆ ಇದು ಗೊಂದಲ ಅಂದರೆ ಎಲ್ಲೆಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ ಸದಸ್ಯರು ಆಯ್ಕೆಯಾಗಿದ್ದಾರೆ ಅವರು ಯಾವ ಕ್ಷೇತ್ರದಲ್ಲಿ ವಾಸ ಮಾಡುತ್ತಾರೆ. ಆ ಕ್ಷೇತ್ರಕ್ಕೆ ಅವರನ್ನು ಸಹ ಅಧ್ಯಕ್ಷರನ್ನಾಗಿ ಮಾಡತಕ್ಕಂಥದಕ್ಕೆ ನಾವು ತೀರ್ಮಾನ ಮಾಡಿ ಘೋಷಣೆ ಮಾಡಿದ ಮೇಲೆ ನನ್ನ ಅನುಪಸ್ಥಿತಿಯಲ್ಲಿ ಮಾನ್ಯ ಕಾರಜೋಳ್‌ರವರು ಅದನ್ನು ತಡೆಹಿಡಿದಿದ್ದರು. ಇವೊತ್ತು ಕೂಡ ಅಲ್ಲಿ ಒಂದು ಪ್ರಶ್ನೆ ಬಂದಿದೆ. ನಾನು ಆ ಸದನದಲ್ಲಿ ಉತ್ತರ ಕೊಡುತ್ತಿದ್ದೇನೆ. ಸ್ಥಳೀಯಸಂಸ್ಥೆಗಳಿಂದ ಆಯ್ಕೆಯಾದಂತಹ ಈ ಸದನದ ಸದಸ್ಯರು ಯಾರು ಇದ್ದಾರೆ ಅವರನ್ನು ಒಂದು ಕ್ಷೇತ್ರಕ್ಕೆ ನಾನು ಸಹ ಅಧ್ಯಕ್ಷರನ್ನಾಗಿ ಮಾಡತಕ್ಕಂಥದ್ದಕ್ಕೆ ನಾನು ಅವರ ಮನಸ್ಸನ್ನು ಒಪ್ಪಿಸಿ ತಕ್ಷಣವೇ

ಅದಕ್ಕೆ ಆದೇಶವನ್ನು ಮಾಡುತ್ತೇನೆ. ಉಳಿದಂಥವರು ಯಾರು ಇದ್ದಾರೆ ಅವರಿಗೆಲ್ಲಾ ಆಯಾ ಕ್ಷೇತ್ರಗಳಲ್ಲಿ ಆಯಾ ಇತಿ–ಮಿತಿಯಲ್ಲಿ ಅವರು ಸದಸ್ಯರಾಗಿ ಕೆಲಸ ಮಾಡುವುದಕ್ಕೆ ಅವಕಾಶ ಇದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸದನದ ಸದಸ್ಯರೆಲ್ಲರನ್ನು ಸಮಾನವಾಗಿ ನೋಡಿಕೊಳ್ಳಬೇಕು. ನೀವು ಇಲ್ಲಿ ಆರಿಸಿ ಬಂದವರು, ಅಲ್ಲಿ ಆರಿಸಿ ಬಂದವರು ಎಂದು ಭೇದ ಭಾವ ಮಾಡಬೇಡಿ. ಹಾಗೆ ಮಾಡಿದಲ್ಲಿ ನಮ್ಮ ನಮ್ಮಲ್ಲಿ ಬೇದ ಭಾವ ಮಾಡಿದ ಹಾಗೆ ಆಗುತ್ತದೆ. ನೀವು ಏನಾದರೊಂದು ನಿಯಮ ಮಾಡಿ ಹಾಗೂ ಕಾನೂನು ಎಲ್ಲರಿಗೂ ಒಂದೆ ಮಾಡಿ. ವಿಧಾನ ಸಭೆಯ ಸದಸ್ಯರು ಮಾತ್ರ ಮಂತ್ರಿಗಳಾಗಬೇಕು, ವಿಧಾನ ಪರಿಷತ್ತಿನ ಸದಸ್ಯರು ಮಂತ್ರಿಗಳಾಗಬಾರದು ಎಂದು ಬಂದರೆ ಹೇಗೆ? ಅದು ಸರಿಯಾದ ಕ್ರಮವಲ್ಲ. ಸದನದ ಸದಸ್ಯರೆಲ್ಲರೂ ಒಂದೆ. ಅವರು ನಾಮನಿರ್ದೇಶಿತರಿರಲಿ, ವಿಧಾನ ಸಭೆಯಿಂದ ಚುನಾಯಿತರಿರಲಿ, ಸ್ಥಳೀಯಸಂಸ್ಥೆಗಳಿಂದ ಚುನಾಯಿತರಿರಲಿ, ಕ್ಷೇತ್ರದಿಂದ ಚುನಾಯಿತರಿರಲಿ, ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಿರಲಿ, ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಿರಲಿ, ಎಲ್ಲರೂ ಒಂದೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯರೆ, ಈಗಾಗಲೇ ಅವರು ಸದಸ್ಯರಿದ್ದಾರೆ. ಅದನ್ನು ಮುಂದುವರೆಯುದಕ್ಕೆ ಯಾವುದೇ ಅಡೆತಡೆಗಳಿಲ್ಲ. ನಮ್ಮಲ್ಲಿ ಬೇಲೂರು ಘೋಷಣೆಯಾದ ಮೇಲೆ ಯಾವುದೇ ಆಯ್ಕೆ ಪ್ರಕ್ರಿಯೆ ಗ್ರಾಮ ಸಭೆಗಳಿಂದ ಆಗಬೇಕೆನ್ನುವುದು ಇದೆ. ಆದಾದ ಮೇಲೆ ಜಾಗೃತ ಸಮಿತಿಯ ಅಧ್ಯಕ್ಷರಾಗಿ ಶಾಸಕರು ಎನ್ನುವುದನ್ನು specific ಆಗಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣಾರವರು ಮಾಡಿದ್ದಾರೆ. ಆದ್ದರಿಂದ ನಾವು..

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ ನಾವು ಅದನ್ನು ಒಪ್ಪುವುದಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ವಿವರಣೆ ನೀಡುವ ಅವಶ್ಯಕತೆ ಇಲ್ಲ.

**ಸಭಾಪತಿಯವರು:–** ಎಲ್ಲರು ದಯಮಾಡಿ ಕುಳಿತುಕೊಳ್ಳಿ. ಅದರ ಬಗ್ಗೆ ನಾನು ಹೇಳುತ್ತೇನೆ. ಹಿರಿಯ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಒಂದು ವಿಷಯವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ಸದನದಲ್ಲಿ ಈ ಹಿಂದೆ ಚರ್ಚೆಯಾದಾಗ ಒಂದು ತೀರ್ಮಾನ ಆಗಿದೆ ಎಂದು ನಾನು ಅಂದಕೊಂಡಿದ್ದೇನೆ. ನಮ್ಮ ಸದನದ ಎಲ್ಲಾ ಸದಸ್ಯರುಗಳು ಅವರ ನೋಡಲ್ ತಾಲ್ಲೂಕು ಯಾವುದು ಎಂದು ಅವರು diclare ಮಾಡಿಕೊಂಡಿರುತ್ತಾರೆ. ಅವರು ಆಯ್ಕೆ ಮಾಡಿಕೊಂಡಿರುವ ನೋಡಲ್ ತಾಲ್ಲೂಕಿನಲ್ಲಿ ಅವರನ್ನು ಸಹ ಅಧ್ಯಕ್ಷರನ್ನಾಗಿ ನೇಮಕ ಮಾಡುತ್ತೇವೆಂದು ಈ ಹಿಂದೆ ಸರ್ಕಾರ ಹೇಳಿತ್ತು. ಹಾಗೆಯೇ ಮಾಡಬೇಕು ಹೊರತು ಬರೀ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದಂಥ ಸದಸ್ಯರನ್ನು ನೇಮಕ ಮಾಡುವುದು ಸರಿಯಲ್ಲ. ನಮ್ಮ ಸದನದ ಎಲ್ಲಾ ಸದಸ್ಯರನ್ನು ನೀವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಂದೇ ತಾಲ್ಲೂಕನ್ನು ಇಬ್ಬರು ಸದಸ್ಯರು ಆಯ್ಕೆ ಮಾಡಿಕೊಂಡಿದ್ದರೆ, ಆ ಸಾಧ್ಯತೆ ಇದೆ. ಆಗ ಅವರಿಬ್ಬರನ್ನು ಕರೆದು ಮಾತನಾಡಿ ಯಾರಾದರು ಒಬ್ಬರು ಒಂದು ತಾಲ್ಲೂಕಿನ ಅಧ್ಯಕ್ಷತೆಯನ್ನು ತೆಗೆದುಕೊಳ್ಳಿ, ಇನ್ನೊಬ್ಬ ಸದಸ್ಯರು ಇನ್ನೊಂದು ತಾಲ್ಲೂಕಿನ ಸಹ ಅಧ್ಯಕ್ಷತೆಯನ್ನು ಒಪ್ಪಿಕೊಳ್ಳಿ ಎಂದು ಮಾತನಾಡಿ ಬಗೆಹರಿಸಬೇಕು. ಆ ಜವಾಬ್ದಾರಿ ಸರ್ಕಾರದ್ದು, ಸರ್ಕಾರದಲ್ಲಿರತಕ್ಕಂಥ ಅಧಿಕಾರಿಗಳದ್ದು. ನಮ್ಮದು ಒಟ್ಟು 75 ತಾಲ್ಲೂಕುಗಳು. ಆ 75 ತಾಲ್ಲೂಕುಗಳಿಗೆ ಅವರಿಗೆ ಸಹ ಅಧ್ಯಕ್ಷತೆ ಸಿಗುವ ಹಾಗೆ ಸರ್ಕಾರ ನೋಡಿಕೊಳ್ಳಬೇಕು. ಹಾಗೆ ಅವರನ್ನು ಆ 75 ತಾಲ್ಲೂಕುಗಳಿಗೆ ಸಹ ಅಧ್ಯಕ್ಷತೆಯನ್ನು ಮಾಡಿದರೆ ಈ ಸಮಸ್ಯೆ ಸಂಪೂರ್ಣ ಬಗೆಹರಿಯುತ್ತದೆ. ಇದರ ಬಗ್ಗೆ ಚರ್ಚೆ ಬೇಡ. ಈ ರೀತಿಯೆ ಸರ್ಕಾರ ಹಿಂದೆ ಮಾಡುತ್ತೇನೆಂದು ಹೇಳಿತ್ತು. ಹಾಗೇಯೆ ಮಾಡುವುದು ಸರಿ.

**ಶ್ರೀ ಅಲ್ಲಂಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಗ್ರಾಮ ಸಭೆಗಳು ಆಗದೆ ಮನೆಗಳು ಚುರುಮುರಿ ಮಾರಿದ ಹಾಗೆ ಬಿಕರಿ ಆಗುತ್ತಿವೆ. ಅದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇಷ್ಟು ಮನೆಗಳನ್ನು ಯಾರೂ ಕೊಟ್ಟಿಲ್ಲಾ, ದನ್ಯವಾದಗಳು. ಆದರೆ ಗ್ರಾಮ ಸಭೆಗಳು ಆಗುತ್ತಿಲ್ಲ. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೆ, ನಾನು ಹಿಂದಿನ ಮುಖ್ಯಮಂತ್ರಿಯವರಾದ ಶ್ರೀ ಸದಾನಂದಗೌಡರು ಇದ್ದಂಥ ಕಾಲದಲ್ಲಿ ಅಕ್ರಮ ಸಕ್ರಮ ಸಮಿತಿಯ ಬಗ್ಗೆ ಕೂಡ ಸದನದಲ್ಲಿ ಚರ್ಚೆಯಾಯಿತು. ಆಗ ಅವರು ಕೂಡಲೇ ಈ ಅಕ್ರಮ ಸಕ್ರಮ ಸಮಿತಿ, ಹೌಸಿಂಗ್ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರಿಗೆ ಅವರವರ ಕ್ಷೇತ್ರಗಳಿಗನುಗುಣವಾಗಿ ಪ್ರತಿಯೊಬ್ಬರನ್ನು ನಾಮಕರಣ ಮಾಡಲಿಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದರು. ಇವೂತ್ತು ತಾವು ಸಭಾನಾಯಕರಾಗಿದ್ದೀರಿ ತಾವು ಎರಡೂ ಒಟ್ಟೊಟ್ಟಿಗೆ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳಿ.

**ವಾಯವ್ಯ ಸಾರಿಗೆ ಸಂಸ್ಥೆ ನಷ್ಟದಲ್ಲಿರುವ ಬಗ್ಗೆ**

**704: ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ)**

ಅ) ವಾಯವ್ಯ ಸಾರಿಗೆ ಸಂಸ್ಥೆಯನ್ನು ಯಾವ ಕಾರಣಗಳಿಂದಾಗಿ ಎಂದು ಸ್ಥಾಪಿಸಲಾಯಿತು;

ಆ) ಸದರಿ ಸಂಸ್ಥೆಯು ನಿರಂತರವಾಗಿ ನಷ್ಟ ಅನುಭವಿಸಲು ಕಾರಣಗಳೇನು; (ವಿವರಗಳನ್ನು ಒದಗಿಸುವುದು)

ಇ) ಡಾ. ನಂಜುಂಡಪ್ಪ ವರದಿ ಪ್ರಕಾರ ಹಣ ಒದಗಿಸಲಾಗಿದೆಯೆ? ಸದರಿ ಸಂಸ್ಥೆಯನ್ನು ಸುಸಂಘಟಿತಗೊಳಿಸಿ ಪ್ರಯಾಣಿಕರಿಗೆ ಉತ್ತಮ ಸೇವೆ ಒದಗಿಸುವುದಲ್ಲದೇ ಇತರರೊಂದಿಗೆ ಪೈಪೋಟಿ ಮಾಡಿ ಲಾಭದತ್ತ ನಡೆಸಲು ಯಾವ ಕ್ರಮವನ್ನು ಕೈಗೊಳ್ಳಲಾಗುತ್ತಿದೆ

**ಶ್ರೀ ಆರ್.ಅಶೋಕ ಉಪ ಮುಖ್ಯಮಂತ್ರಿಗಳು, (ಗೃಹ ಮತ್ತು ಸಾರಿಗೆ)**

ಅ) ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ದಿ: 01–11–1997 ರಂದು ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಭೇರ್ಪಡಿಸಿ, ಈ ಭಾಗದಲ್ಲಿ ಪ್ರಯಾಣಿಕರಿಗೆ ಉತ್ತಮ ಸೇವೆಯನ್ನು ಹಾಗೂ ಆಡಳಿತ ವಿಕೇಂದ್ರಿಕರಣನ್ನು ಮಾಡಬೇಕೆಂಬ ಹಾಗೂ ಕಾರ್ಯಾಚರಣೆಯ ಮೇಲೆ ಹೆಚ್ಚಿನ ನಿಯಂತ್ರಣವನ್ನು ಮಾಡಬೇಕೆಂಬ ಉದ್ದೇಶದಿಂದ ಸ್ಥಾಪಿಸಲಾಯಿತು.

ಆ)

1. ಸಂಸ್ಥೆಯ ವ್ಯಾಪ್ತಿ ಸಂಪೂರ್ಣ ರಾಷ್ಟ್ರೀಕೃತವಾಗಿರುವುದರಿಂದಾಗಿ ಸಂಸ್ಥೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಳ್ಳಿಗಳಿಗೆ ಸಾಮಾಜಿಕ ಹೊಣೆಗಾರಿಕೆಯಾಗಿ ಬಸ್ಸುಗಳ ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿದಿನ 4.82 ಲಕ್ಷಗಳಷ್ಟು ಕಿ.ಮಿ.ಗಳ ಗ್ರಾಮಾಂತರ ಕಾರ್ಯಾಚರಣೆ ಮಾಡಲಾಗುತ್ತಿದ್ದು ಈ ಮಾರ್ಗಗಳ ಮೇಲೆ ನಿರೀಕ್ಷಿತ ಆದಾಯ ಅಂದರೆ ಕಾರ್ಯಾಚರಣೆ ವೆಚ್ಚಕ್ಕೆ ಸಮನಾಗಿ ಆದಾಯ ಬರದೇ ಇರುವುದರಿಂದಾಗಿ ಪ್ರತಿ ದಿನ ಸುಮಾರು ₹ 28.00 ಲಕ್ಷಗಳಷ್ಟು ನಷ್ಟವಾಗುತ್ತಿದೆ.
2. ಹುಬ್ಬಳ್ಳಿ ಧಾರವಾಡ ಅವಳಿ ನಗರ ಮದ್ಯದಲ್ಲಿ ಮತ್ತು ಧಾರವಾಡ ನಗರದಲ್ಲಿ ಬೇಂದ್ರೆ ಖಾಸಗಿ ಸಾರಿಗೆ 40 ವಾಹನಗಳ ಪರವಾನಗಿ ಪಡೆದಿರುವುದರಿಂದಾಗಿ ಸಂಸ್ಥೆಯ ಆದಾಯಕ್ಕೆ ದಕ್ಕೆಯಾಗಿದೆ.
3. ರೈಲ್ವೈ ಇಲಾಖೆಯ ಪ್ರಯಾಣದ ದರಗಳು ಕಡಿಮೆ ಇರುವುದರಿಂದ ಹೆಚ್ಚು ಹೆಚ್ಚು ಪ್ರಯಾಣಿಕರು ರೈಲ್ವೈ ಕಡೆಗೆ ಆಕರ್ಷಿತರಾಗಿರುತ್ತಾರೆ.
4. ಟೈರ್, ಬಿಡಿಭಾಗಗಳು, ಕೀಲೆಣ್ಣೆ, ಇತರೆ ಸಾಮಗ್ರಿಗಳ ಬೆಲೆಗಳು ಹೆಚ್ಚಳವಾಗುತ್ತಿರುವುದರಿಂದಾಗಿ ಮತ್ತು ಕಾಲ ಕಾಲಕ್ಕೆ ಸರಕಾರವು ಬಿಡುಗಡೆಗೊಳಿಸುತ್ತಿರುವ ತುಟ್ಟಿ ಭತ್ಯೆಯನ್ನು ಸಿಬ್ಬಂದಿಗಳಿಗೆ ನೀಡುತ್ತಿರುವುದರಿಂದಾಗಿ ಕಾರ್ಯಾಚರಣೆ ವೆಚ್ಚ ಹೆಚ್ಚಾಗಿರುತ್ತದೆ.

ಈ ಮೇಲಿನ ಕಾರಣಗಳಿಂದಾಗಿ ಸಂಸ್ಥೆಯು ನಷ್ಟ ಅನುಭವಿಸುತ್ತಿದೆ.

ಇ) ಡಾ. ನಂಜುಂಡಪ್ಪ ವರದಿ ಪ್ರಕಾರ ಹಣ ಒದಗಿಸಲಾಗಿದೆ.

ನಷ್ಟದಲ್ಲಿರುವ ಸಂಸ್ಥೆಯನ್ನು ಸುಸಂಘಟಿತಗೊಳಿಸಿ ಪ್ರಯಾಣಿಕರಿಗೆ ಉತ್ತಮ ಸುರಕ್ಷಿತ ಹಾಗೂ ನಿಯಮಿತ ಸಾರಿಗೆ ಸೇವೆಯನ್ನು ಒದಗಿಸಿ ಸಾರಿಗೆ ಆದಾಯವನ್ನು ಹೆಚ್ಚಿಸಲು ಮತ್ತು ಕಾರ್ಯಾಚರಣೆಯ ವೆಚ್ಚವನ್ನು ಕಡಿತಗೊಳಿಸಲು/ನಿಯಂತ್ರಿಸಲು ಎಲ್ಲಾ ಕಟ್ಟು ನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. 2008–09 ನೇ ಸಾಲಿನಲ್ಲಿ ₹ 40.00 ಕೋಟಿ ಹಾಗೂ 2011–12 ನೇ ಸಾಲಿನಲ್ಲಿ ₹ 25.00 ಕೋಟಿ ಅನುದಾನವನ್ನು ಅನುಕ್ರಮವಾಗಿ ಪುನ:ಶ್ಚೇತನ ಹಾಗೂ ಬಸ್ಸುಗಳ ಖರೀದಿಗೆ ನೀಡಿ, ಬಂಡವಾಳ ಒದಗಿಸಲಾಗಿದೆ. ಈ ಮೂಲಕ ಸಂಸ್ಥೆಯು ಮಾಡಬೇಕಾದ ಸಾಲದ ಹೊರೆ ಹಾಗೂ ಬಡ್ಡಿಯ ಮೊತ್ತವನ್ನು ಕಡಿಮೆ ಮಾಡಲು ಕ್ರಮ ಕೈಗೊಂಡಿದೆ.
2. ₹ 1.25 ಕೋಟಿ ಅನುದಾನವನ್ನು ಚಾಲಕರ ತರಬೇತಿ ಕೇಂದ್ರದ ನಿರ್ಮಾಣದ ಸಲುವಾಗಿ ನೀಡಿದೆ.
3. 2011–12ನೇ ಸಾಲಿನಲ್ಲಿ 628 ಹೊಸ ಬಸ್ಸುಗಳನ್ನು ಮತ್ತು 2012–13 ನೇ ಸಾಲಿನಲ್ಲಿ 18–07–2012 ರವರೆಗೆ 412 ಹೊಸ ಬಸ್ಸುಗಳನ್ನು ಖರೀದಿಸಲಾಗಿದೆ.
4. ದಿ: 01–08–2008 ರಿಂದ ಮೋಟಾರು ವಾಹನ ತೆರಿಗೆ ಪ್ರಮಾಣವನ್ನು ಶೇ. 7.0 ರಿಂದ 5.0 ಗೆ ಕಡಿಮೆ ಮಾಡಲಾಗಿದೆ.
5. ಡೀಸೆಲ್ ಮೇಲಿನ ಮಾರಾಟ ತೆರಿಗೆಯ ಪ್ರಮಾಣವನ್ನು ಶೇ. 1.25 ರಷ್ಟನ್ನು ದಿ;01–04–2012 ರಿಂದ ಕಡಿತಗೊಳಿಸಲಾಗಿದೆ.
6. ಹೆಚ್ಚು ಹೊಸ ಬಸ್ಸುಗಳನ್ನು ಅಳವಡಿಸಿ, ಹಳೆಯ ವಾಹನಗಳನ್ನು ತೆಗೆಯುವ ಮೂಲಕ ಸಾರಿಗೆ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಲಾಗಿದೆ.

7. ಆಧುನಿಕ ವೋಲ್ವೋ, ಮಲ್ಟಿ ಆಕ್ಸಲ್, ಸ್ಲೀಪರ ಕೋಚ, ರಾಜಹಂಸ, ವಾಹನಗಳನ್ನು ಕಾರ್ಯಾಚರಣೆಗೆ ನೀಡಲಾಗಿದೆ.
8. ಖಾಸಗಿ ವಾಹನಗಳು ಕಾರ್ಯಾಚರಣೆಯಾಗುತ್ತಿರುವ ಮಾರ್ಗಗಳ ಮೇಲೆ ಸ್ಪರ್ಧಾತ್ಮಕ ಪೈಪೋಟಿಯನ್ನು ನೀಡಲು ಪ್ರೋತ್ಸಾಹಕರ ದರಗಳನ್ನು ಅಳವಡಿಸಿ ಪ್ರಯಾಣಿಕರನ್ನು ಆಕರ್ಷಿಸಲು ಕ್ರಮಕೈಕೊಳ್ಳಲಾಗುತ್ತಿದೆ.
9. ಸಾರಿಗೆ ಆದಾಯದ ಸೋರಿಕೆಯನ್ನು ತಡೆಗಟ್ಟಲು ಇಲೆಕ್ಟ್ರಾನಿಕ್ ಟಿಕೇಟ್ ವಿತರಣಾ ಯಂತ್ರಗಳನ್ನು ಸಂಪೂರ್ಣವಾಗಿ ಸಂಸ್ಥೆಯಲ್ಲಿ ಅಳವಡಿಸಲಾಗಿದೆ.

ಆಡಳಿತದಲ್ಲಿ ದಕ್ಷತೆ ಹೆಚ್ಚಿಸಲು ಗಣಕ ಯಂತ್ರಗಳನ್ನು ಸಂಪೂರ್ಣವಾಗಿ ಅಳವಡಿಸಲಾಗಿದೆ.

ಈ ಎಲ್ಲಾ ಮೇಲಿನ ಕಾರಣಗಳಿಂದಾಗಿ ಸಂಸ್ಥೆಯ ನಷ್ಟದ ಪ್ರಮಾಣವು ಈ ಕೆಳಗಿನಂತೆ ಕಡಿಮೆಯಾಗಿದೆ.

| ವರ್ಷ | ನಷ್ಟ (₹ ಕೋಟಿಗಳಲ್ಲಿ) |
|---|---|
| 2008–09 | –68.57 |
| 2009–10 | –57.81 |
| 2010–11 | –30.44 |
| 2011–12 | –23.44 |

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ 1–11–1997ರಲ್ಲಿ ಉದ್ಘಾಟನೆಯಾಯಿತೆಂದು ತಿಳಿಸಿದ್ದಾರೆ. ಸದು ಸತ್ಯವೂ ಹೌದು. ಈ ಸಂಸ್ಥೆಯು ಯಾವ ರೀತಿ ಮೇಲಿಂದ ಮೇಲೆ ಹಾನಿಗೊಳಗಾಗಲಿಕ್ಕೆ ಕಾರಣಗಳೇನು ಎಂದು ಕೇಳಿದ್ದಕ್ಕೆ ಅವರು ಕೆಲವು ಮೂಲಭೂತ ವಿಷಯಗಳನ್ನು ತಿಳಿಸಿದ್ದಾರೆ. ಈಗ ನಮ್ಮ ಸಂಸ್ಥೆಯಲ್ಲಿ ಹಳೆಯ ಬಸ್ಸುಗಳು ಬಹಳ ಇವೆ. ಒಂದು ಬಸ್ಸು ಓಡುವಾಗ ಹೆಚ್ಚು ಓಡಿದರೆ, ಅದರ

ಉಪಯುಕ್ತತೆ ಹೆಚ್ಚು ಆದಾಗ ಲಾಭದ ಪ್ರಮಾಣ ಹೆಚ್ಚಾಗುತ್ತದೆ, ನಷ್ಟದ ಪ್ರಮಾಣ ಕಡಿಮೆಯಾಗುತ್ತದೆ. ಆ ರೀತಿಯ ಒಂದು ಸಂಯೋಜನೆಯನ್ನು ಮಾಡಿಕೊಳ್ಳತಕ್ಕಂಥ ನ್ಯೂನ್ಯತೆ ಅಧಿಕಾರಿಗಳಿಗಿದೆ. ಅದರ ಬಗ್ಗೆ ತಾವು ಕ್ರಮ ಕೈಗೋಳ್ಳುತೀರಾ ಹೇಗೆ? ಇನ್ನು ಹುಬ್ಬಳ್ಳಿ–ದಾರವಾಡ ಅವಳಿ ನಗರದ ಮದ್ಯದಲ್ಲಿ ಬೇಂದ್ರೆ ಖಾಸಗಿ ಸಾರಿಗೆ 40 ವಾಹನಗಳ ಪರವಾನಗಿ ಪಡೆದಿರುವುದರಿಂದಾಗಿ ಸಂಸ್ಥೆಯ ಆದಾಯಕ್ಕೆ ದಕ್ಕೆಯಾಗಿದೆ ಎಂದು ಕೂಡ ತಿಳಿಸಿದ್ದೀರಿ. ಅವರು ಎನು ಮಾಡುತ್ತಾರೆಂದು ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸಿಗಿಂತ ಮೊದಲು ಹೋಗಿ ನಿಲ್ಲಿಸಿರುತ್ತಾರೆ. ನಮ್ಮ ಕೆ.ಎಸ್.ಆರ್.ಟಿ.ಸಿ. ಹೆಚ್ಚು ಜನರಿಗೆ ಉದ್ಯೋಗ ಕೊಡುವುದಕ್ಕೆ ಮತ್ತು service oriented ಆಗಿರಬೇಕು. ತಾವು ಈ ಹಿಂದೆ ಹಲವಾರು ಬಾರಿ ಸಭೆ ಕರೆದಾಗ ನಾವು ಈ ವಿಚಾರವಾಗಿ ಮಾತನಾಡಿದಾಗ ಸರ್ಕಾರ ನೂರು ಕೋಟಿ ಕೋಡಬೇಕೆಂದು ಹೇಳಿದಾಗ 2008–2009ನೇ ಸಾಲಿನಲ್ಲಿ ನೀವು ಅದಕ್ಕೆ ನಲವತ್ತು ಕೋಟಿ ಕೊಟ್ಟಿದ್ದೀರಿ. ಮತ್ತೋಮ್ಮೆ ನಾವು 50 ಕೋಟಿ ಕೇಳಿದಾಗ 25 ಕೋಟಿ ಕೊಟ್ಟಿದ್ದೀರಿ. ಎಷ್ಟು ಆದ್ಯತೆಯನ್ನು ನೀವು ಇಲ್ಲಿ ಕೊಡುತ್ತೀರಿ? ಇಲ್ಲಿ ನಿಮಗೆ ಕೇಂದ್ರದಿಂದ ಸಾಕಷ್ಟು ಹಣ ಬರುತ್ತದೆ. ನಮ್ಮ ಭಾಗದಲ್ಲಿನ ಬಸ್ಸುಗಳಲ್ಲಿ ಅಡ್ಡಾಡುವಾಗ ಇಲ್ಲಿ ಅಡ್ಡಾಡುವಾಗ ನೋಡಿದರೆ ಅಜಗಜಾಂತರ ವ್ಯತ್ಯಾಸವಿದೆ. ಅದನ್ನು ನೋಡಿದಾಗ ನಾವು ಈ ರಾಜ್ಯದಲ್ಲಿ ಇದ್ದೆವೆಯೋ ಇಲ್ಲವೋ ಎಂಬ ಭಾವನೆ ಬರುತ್ತದೆ. ಆದ್ದರಿಂದ ದಯಮಾಡಿ ಆದ್ಯತೆಯ ಮೇಲೆ ಹೆಚ್ಚು ಹಣವನ್ನು ಅನುದಾನದ ರೂಪದಲ್ಲಿ ಕೊಡುವ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯರೆ, ಈ ವಾಯವ್ಯ ರಸ್ತೆ ಸಾರಿಗೆ ಸಂಸ್ಥೆ ಬಹಳ ನಷ್ಟದಲ್ಲಿ ನಡೆಯುತ್ತಿರುವಂಥ ಸಂಸ್ಥೆಯಾಗಿದೆ. ಕಳೆದ ನಾಲ್ಕು ವರ್ಷದಿಂದ ಈ ಸಂಸ್ಥೆಯನ್ನು ಇನ್ನು ಹೆಚ್ಚು ಮೇಲ್ಮಟ್ಟಕ್ಕೆ ತರಬೇಕೆಂದು ಹಲವಾರು ಸುಧಾರಣಾ ಕ್ರಮಗಳನ್ನು ನಾವು ಮಾಡಿದ್ದೇವೆ. ಒಮ್ಮೆ ನಾನು ಶಾಸಕರ ಸಭೆಯನ್ನು ಕೂಡ ಮಾಡಿದ್ದೇನೆ. ನಮ್ಮ ಶಾಸಕರ ಮನಸ್ಸಿನಲ್ಲಿ ಹಾಗೂ ಜನಸಾಮಾನ್ಯರ ಮನಸ್ಸಿನಲ್ಲಿ ಏನಿದೆ ಅಂದರೆ ಇದು

ಸರ್ಕಾರದ್ದು ಇದಕ್ಕೆ ಇವರು ಎಲ್ಲೂ ಸರ್ಕಾರಕ್ಕೆ ತೆರಿಗೆಯನ್ನು ಕಟ್ಟುವುದಿಲ್ಲ ಎಂದು ಇದೆ. ಆದರೆ ನಾವು ಸಹ ಸರ್ಕಾರಕ್ಕೆ ತೆರಿಗೆಯನ್ನು ಕಟ್ಟಬೇಕು. ನಮ್ಮ turnover ಏನಿದೆ ಅದರ ಮೇಲೆ ಶೇಕಡ 7 ರಷ್ಟು ತೆರಿಗೆಯನ್ನು ನಾವು ಸರ್ಕಾರಕ್ಕೆ ಕಟ್ಟಬೇಕು. ಖಾಸಗಿಯವರಿಗೆ turnover ತೆರಿಗೆ ಇಲ್ಲ. ಅವರಿಗೆ ಸೀಟ್ ಮೇಲೆ ತೆರಿಗೆ ಹಾಕುತ್ತಾರೆ. ಅವರಿಗೆ ತೆರಿಗೆ ಕಡಿಮೆ ಬೀಳುತ್ತದೆ. ನಮಗೆ ತೆರಿಗೆ ಜಾಸ್ತಿಯಾಗುತ್ತದೆ. ಅದರ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡಿ ಶೇಕಡ 7ರಷ್ಟು ಇರುವ ತೆರಿಗೆಯನ್ನು ಶೇಕಡ 5ಕ್ಕೆ ಇಳಿಸಿದ್ದೇವೆ. ಸರ್ಕಾರ ಇದರ ಬೆಳವಣಿಗೆಯಾಗಬೇಕೆಂದು ಎರಡು ಭಾರಿ ಇಪ್ಪತ್ತೈದು ಕೋಟಿ ರೂಪಾಯಿಗಳ ಸಬ್ಸಿಡಿ ಹಣವನ್ನು ಈಗಾಗಲೆ ಕೊಟ್ಟಿದೆ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರಿಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಬಹಳ ಆತ್ಮೀಯ ಸ್ನೇಹಿತರು. ಅವರು ಈಗ ಮುಖ್ಯಮಂತ್ರಿಗಳಾಗಿರುವುದರಿಂದ ಅವರು ಇನ್ನು ಇಪ್ಪತ್ತೈದು ಕೋಟಿ ಕೊಡಬೇಕಾಗಿದೆ. ನನಗೆ ತಿಳಿದ ಪ್ರಕಾರ ಸಚಿವ ಸಂಪುಟದ ನಿರ್ಣಯ 50 ಕೋಟಿ ರೂಪಾಯಿ ಆಗಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಈಗ ಮುಖ್ಯಮಂತ್ರಿಗಳ ಹತ್ತಿರವೆಲ್ಲಾ ಅಶೋಕ್ ಅವರದೇ ನಡೆಯುತ್ತದೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೆ, ಇಲ್ಲ. ಈಗ ಎಲ್ಲಾ ಮತ್ತೀಕಟ್ಟಿಯವರದೇ ನಡೆಯುತ್ತದೆ.

**ಸಭಾಪತಿಯವರು:–** ಈಗ ಯಾರದು ನಡೆಯುತ್ತದೆ ಎಂದು ನೋಡುವುದು ಬೇಡ. ಆ ಸಾರಿಗೆ ಸಂಸ್ಥೆಯನ್ನು ರಿಪೇರಿ ಮಾಡೋಣ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ನಾವು ಯಾರಾದರು ಇಲ್ಲಿರಬೇಕಲ್ಲ. ಈ ಕೆಂಪೇಗೌಡರ ನಾಡಿನಲ್ಲಿ ಬದುಕಬೇಕಲ್ಲ. ತಾವು ಏನೇನು ನಡೆಯುತ್ತದೆಂದು ನೋಡಿದ್ದೀರಿ. ಆದ್ದರಿಂದ ಮಾನ್ಯ ಉಪಮುಖ್ಯಮಂತ್ರಿಗಳೇ, ತಮ್ಮದೆ ಅಲ್ಲಿ ನಡೆಯುತ್ತದೆ.

**ಸಭಾಪತಿಯವರು:–** ಯಾರದು ನಡೆಯುತ್ತದೆಂದು ತಿಳಿದುಕೊಳ್ಳುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡೋಣ. ಮೊದಲು ಸಾರಿಗೆ ಸಂಸ್ಥೆಯನ್ನು ರಿಪೇರಿ ಮಾಡೋಣ.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಗುಪ್ತಚರ ಇಲಾಖೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಇದ್ದರೂ ಕೂಡ ಗುಪ್ತಚರ ಇಲಾಖೆಯಿಂದ ಬಹಳಷ್ಟು ಮಾಹಿತಿಗಳು ಗೃಹ ಸಚಿವರಾದ ಉಪ ಮುಖ್ಯಮಂತ್ರಿಯವರಿಗೆ ಸಿಗುತ್ತದೆ. ಈಗ ಗೃಹ ಸಚಿವರು ಈ ಸದನದಲ್ಲಿ ಬಹಿರಂಗವಾಗಿ ವಿರೋಧ ಪಕ್ಷದಲ್ಲಿರತಕ್ಕಂಥ ವೀರಣ್ಣ ಮತ್ತಿಕಟ್ಟಿಯವರಿಗೆ ನೀವು ಮುಖ್ಯಮಂತ್ರಿಗಳ ಬಹಳ ಪಕ್ಕದಲ್ಲಿದ್ದೀರಿ ಎಂದು ಹೇಳಿದರೆ ನಾಳೆ ಬಹುಶ: ಅವರನ್ನು ಸಂಶಯದ ದೃಷ್ಟಿಯಿಂದ ಅವರ ಪಕ್ಷದವರು ಅವರನ್ನು ನೋಡುವುದಕ್ಕೆ ಪ್ರಾರಂಭ ಮಾಡಬಹುದೇ? ನನಗೆ ಗೊತ್ತಿಲ್ಲ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ನಂತರ ಯಾರ ಮಾತು ನಡೆಯುತ್ತದೆಂದು ತಿಳಿದುಕೊಳ್ಳುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡೋಣ. ಮೊದಲು ಸಾರಿಗೆ ಸಂಸ್ಥೆಯನ್ನು ರಿಪೇರಿ ಮಾಡೋಣ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ನಾಣಯ್ಯನವರು ಹಿರಿಯ ಸದಸ್ಯರು. ಮಾನ್ಯ ಅಶೋಕ್‌ರವರು ಪ್ರೀತಿಯಿಂದ ಒಂದು ಮಾತನ್ನು ಹೇಳಿದರು. ಸತ್ಯ ಏನೆಂದರೆ ನನ್ನ ಬದ್ಧತೆಯನ್ನು ಯಾರೂ ಪ್ರಶ್ನೆ ಮಾಡುವುದಕ್ಕೆ ಶಕ್ಯವೇ ಇಲ್ಲ. ಅದು ಕಟು ಸತ್ಯ. ನಗ್ನ ಸತ್ಯವೂ ಹೌದು. ಅದಕ್ಕಾಗಿ ಅದರ ಬಗ್ಗೆ ನಾನು ಚಿಂತನೆ ಮಾಡುವುದಿಲ್ಲ. ಅವರು ಆ ಮಾತನ್ನು ಏಕೆ ಹೇಳಿದ್ದಾರೆಂದು ನಾನು ಸಭಾಪತಿಯಾಗಿದ್ದಾಗ ಅವರು ಸಭಾಧ್ಯಕ್ಷರಿದ್ದಾಗ ಇವರು ಸಾರಿಗೆ ಸಚಿವರಾಗಿದ್ದರು. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯವರಾಗಿದ್ದರು. ನಾವು ಎರಡು ಬಾರಿ ಸಭೆಯನ್ನು ಮಾಡಿದ್ದೇವೆ.

(2–00 ಗಂಟೆ)

ಆ ಭಾಗದಲ್ಲಿ ಏನು ನಷ್ಟವಾಗುತ್ತಿತ್ತು ಅದಕ್ಕೆ ಒಂದು 100 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳಲಾಯಿತು. ಆಗ 40 ಕೋಟಿ ರೂಪಾಯಿಗಳನ್ನು ಮಾತ್ರ ಕೊಡಲಾಯಿತು. ಆ ವಿಚಾರವಾಗಿ ಮಾನ್ಯ ಆರ್. ಅಶೋಕ್‌ರವರು ಹೇಳಿರಬಹುದು. ನಮಗೆ ಯಾರು ಈ ರಾಜ್ಯಕ್ಕೆ ಒಳ್ಳೆಯದನ್ನು ಮಾಡುತ್ತಾರೆ ಅವರ ಬಗ್ಗೆ ನಮಗೆ ಒಳ್ಳೆಯ ಅಭಿಪ್ರಾಯ ಇದೆ. ಆದರೆ ತತ್ವ ನಿಷ್ಠೆಯನ್ನು ಬಿಟ್ಟು ನಾನು ರಾಜಕೀಯವನ್ನು ಮಾಡಿಲ್ಲ. ತಮಗೂ ಗೊತ್ತಿರುವಂತೆ ನನಗೆ ಬೇರೆ ಬೇರೆ ಸಂದರ್ಭದಲ್ಲಿ ಒತ್ತಡಗಳು ಬಂತು. ನನ್ನ ಬದ್ಧತೆ ಕಾಂಗ್ರೆಸ್ ಪಕ್ಷಕ್ಕೆ, ನಾನೊಬ್ಬ ಸಾಮಾನ್ಯ ಮನುಷ್ಯ. ನನ್ನನ್ನು ಇಷ್ಟು ಎತ್ತರದಲ್ಲಿ ಬೆಳೆಸಿದ್ದು ಕಾಂಗ್ರೆಸ್ ಪಕ್ಷ. ಅದಕ್ಕೆ ನಾನು ಮಾನ್ಯ ಸಭಾಪತಿಯವರೆ ಈ ಸದನದ ಮುಖಾಂತರ ಹೇಳುವುದೇನೆಂದರೆ, ವಿದ್ಯಾರ್ಥಿ ನಾಯಕನಾಗಿ, ವಿದ್ಯಾರ್ಥಿ ಕಾಂಗ್ರೆಸ್ ಸೇವಾದಳ, ಯುವ ಕಾಂಗ್ರೆಸ್, ಕಿಸಾನ್ ಕಾಂಗ್ರೆಸ್, ಮೈನ್ ಕಾಂಗ್ರೆಸ್, ಎಲ್ಲಾ ಹಂತದಲ್ಲಿ, ಯಾವ ರೀತಿಯಾಗಿ ನೀವು ವಿದ್ಯಾರ್ಥಿ ಪರಿಷತ್ತು, ಆರ್‌ಎಸ್‌ಎಸ್ ಎಂದು ಹೆಮ್ಮೆಯಿಂದ ಹೇಳುತ್ತೀರಿ ಅದೇ ರೀತಿಯಲ್ಲಿ ವಿದ್ಯಾರ್ಥಿ ನಾಯಕರ, ರಾಷ್ಟ್ರೀಯ ವಿದ್ಯಾರ್ಥಿ ಸಂಘ, ಸೇವಾದಳ, ಭಾರತೀಯ ಏಕತೆ, ಕಿಸಾನ್ ಕಾಂಗ್ರೆಸ್, ರಾಷ್ಟ್ರೀಯ ಕಾಂಗ್ರೆಸ್ ಎಂದು ಹೇಳುತ್ತೇನೆ. ಅದುದರಿಂದ ಯಾರು ಸಂಶಯವನ್ನು ಮಾಡಿಕೊಳ್ಳುವುದಿಲ್ಲವೆಂದು ಶ್ರೀ ಎಂ.ಸಿ. ನಾಣಯ್ಯನವರಿಗೆ ತಮ್ಮ ಮುಖಾಂತರ ಕೇಳುತ್ತಿದ್ದೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ನನಗೆ ಸಂಶಯವಿಲ್ಲ. ಅವರ ಪಾರ್ಟಿಯವರೆ ಎಲ್ಲಿಯಾದರು ಸಂಶಯವನ್ನು ಪಟ್ಟುಕೊಂಡಾರು ಎಂದು ಹೆದರಿಕೆ ಅಷ್ಟೇ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೆ, ಸ್ನೇಹ ಬೇರೆ, ಪಕ್ಷ ಬೇರೆ. ನಾವೆಲ್ಲರೂ ಕರ್ನಾಟಕ ರಾಜ್ಯದವರೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಪ್ರೇಮ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೆ, ಹೌದು ಪ್ರೇಮ. ಕೊಡಗಿನಲ್ಲಿ ಶ್ರೀ ಎಂ.ಸಿ. ನಾಣಯ್ಯನವರ ಸ್ಥಿತಿ ಯಾವ ರೀತಿಯಾಗಿದೆಯೋ, ಬೆಂಗಳೂರಿನಲ್ಲಿಯೂ ಕೂಡ ನಮ್ಮದು ಅದೇ ಸ್ಥಿತಿಯಾಗಿದೆ. ಬೇರೆಯವರದು ಜಾಸ್ತಿ ಈಗ ಇದೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಆರ್. ಅಶೋಕ್‌ರವರೆ ನೀವು ಆ ರೀತಿಯಾಗಿ ಹೇಳಬೇಡಿ. ಮೊನ್ನೆಯ ದಿವಸ ಮೂರು ದಿವಸ ನೋಡಿದ್ದೀರಿ. ಒಬ್ಬರು ಹೇಳಿದರು ಅವರ ಹೆಸರನ್ನು ತೆಗೆದುಕೊಳ್ಳುವುದು ಬೇಡ. ಹಿಂದೆ 1994ರಲ್ಲಿ ಯಾವ ರೀತಿಯಾಗಿತ್ತು ಆ ರೀತಿಯಾಗಿ ಮಾಡುತ್ತೇವೆಂದು ಹೇಳಿದರು. ನಾನು ನಡುಗೆ ಹೋದೆ. ಅದಕ್ಕೆ ಬೆಂಗಳೂರಿನಲ್ಲಿ ಅಶೋಕ್‌ರವರದೇ ನಡೆಯುವುದು.

**ಸಭಾಪತಿಯವರು:-** ಯಾರದು ನಡೆಯುವುದು ಎಂದು ಆಮೇಲೆ ನೋಡೋಣ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೆ, ವಾಯುವ್ಯ ಸಾರಿಗೆಯನ್ನು ಅಭಿವೃದ್ಧಿ ಪಡಿಸುವಂತಹ ದೃಷ್ಟಿಯಲ್ಲಿ ಈಗಾಗಲೇ ಡಾ॥ ನಂಜುಂಡಪ್ಪ ವರದಿಯಲ್ಲಿ ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಮತ್ತೆ ಪ್ರತಿವರ್ಷವೂ ಸಹಾ ಸುಮಾರು 25 ಕೋಟಿ ರೂಪಾಯಿಯಷ್ಟು ಡಾ॥ ನಂಜುಂಡಪ್ಪ ವರದಿಯ ಆಧಾರದ ಮೇಲೆ ಹಣವನ್ನು ಕೊಡಲಾಗುತ್ತಿದೆ. ಈ ಸಂಸ್ಥೆಯನ್ನು ಸಹಾ ಮೇಲ್ಮಟ್ಟಕ್ಕೆ ಬರಬೇಕು. ಹಳೆ ಬಸ್‌ಗಳ ಬದಲಾಗಿ ಕಳೆದ ಮೂರು ವರ್ಷಗಳಲ್ಲಿ ಹೊಸ ಬಸ್‌ಗಳನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ಹೊಸ ಬಸ್‌ಗಳನ್ನು ಕಳೆದ 2009-10ನೇ ಸಾಲಿನಲ್ಲಿ 624, 2010-11ನೇ ಸಾಲಿನಲ್ಲಿ 481 ಮತ್ತು 2011-12ನೇ ಸಾಲಿನಲ್ಲಿ 628 ಹೊಸ ಬಸ್‌ಗಳನ್ನು ತೆಗೆದುಕೊಂಡಿದ್ದೇವೆ. ಹಂತ ಹಂತವಾಗಿ ಈ ಹೊಸ ಬಸ್‌ಗಳನ್ನು ತೆಗೆದುಕೊಂಡು, ಅಲ್ಲಿಯೂ ಬೆಂಗಳೂರಿನಲ್ಲಿ ಯಾವ ರೀತಿಯಾಗಿದೆ, ಬೇರೆ ಬೇರೆ ರಾಜ್ಯದ ಮೂಲೆಗಳಲ್ಲಿ ಒಳ್ಳೆಯ ಬಸ್‌ಗಳಿದೆ ಅಲ್ಲಿಯೂ ಒಳ್ಳೆಯ ಬಸ್‌ಗಳು ಬರುವಂತೆ ವ್ಯವಸ್ಥೆಯನ್ನು ಮಾಡುತ್ತೇನೆ.

ಸರ್ಕಾರದಿಂದಲೂ ಸಹಾ ಇನ್ನು 25 ಕೋಟಿ ರೂಪಾಯಿಗಳು ಬಾಕಿ ಇದೆ. ಅದನ್ನು ಕೊಡಬೇಕೆಂದು ಮುಖ್ಯಮಂತ್ರಿಗಳು ನಮ್ಮ ಶ್ರೀ ಜಗದೀಶ್ ಶೆಟ್ಟರ್ ಆಗಿರುವುದರಿಂದ ಮತ್ತೊಂದು ಸಾರಿ ನಾನು ಸ್ನೇಹಿತರು ಎಂದು ಹೇಳುವುದಿಲ್ಲ. ಅದನ್ನು ಕೊಡಿಸುವಂಥದ್ದಕ್ಕೆ ನಾನು ಪ್ರಯತ್ನ ಮಾಡುತ್ತೇನೆಂದು ತಮ್ಮ ಮುಖಾಂತರ ಹೇಳುತ್ತಿದ್ದೇನೆ.

## ಬೆಂಗಳೂರು ನಗರದಲ್ಲಿ ಚಳುವಳಿ ಮತ್ತು ಮುಷ್ಕರಗಳಿಗೆ ಪ್ರತ್ಯೇಕ ಪೋಲಿಸ್ ತಂಡ ರಚನೆ ಬಗ್ಗೆ

**226; ಶ್ರೀ ಕೆ. ಗೋವಿಂದರಾಜು (ವಿಧಾನ ಸಭಾ ಕ್ಷೇತ್ರ)**

ಅ) ಬೆಂಗಳೂರು ನಗರದ ಸೆಂಟ್ರಲ್ ಡಿವಿಷನ್ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿಗಳ ಕೊರತೆಯಿರುವುದು ನಿಜವೇ; (ಮಾಹಿತಿ ಒದಗಿಸುವುದು)

ಆ) ಕಬ್ಬನ್ ಪಾರ್ಕ್ ಮತ್ತು ವಿಧಾನಸೌಧ ಠಾಣಾ ವ್ಯಾಪ್ತಿಯಲ್ಲಿ ಚಳುವಳಿ, ಮುಷ್ಕರಗಳಿಗೆ ಆಯಾ ಠಾಣಾ ಸಿಬ್ಬಂದಿಯನ್ನು ನಿಯೋಜಿಸುತ್ತಿರುವುದರಿಂದ, ಸಾರ್ವಜನಿಕರಿಗೆ, ಸಿಬ್ಬಂದಿಗಳು ಮತ್ತು ಅಧಿಕಾರಿಗಳು ಇಂತಹ ಸಂದರ್ಭಗಳಲ್ಲಿ ಬಹುತೇಕ ಅಲಭ್ಯವಾಗುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; (ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು)

ಇ) ಚಳುವಳಿ ಮತ್ತು ಮುಷ್ಕರಗಳಂತಹ ಚಟುವಟಿಕೆಗಳ ಬಂದೋಬಸ್ತಿಗಾಗಿ ಪ್ರತ್ಯೇಕ ಪೊಲೀಸ್ ತಂಡವನ್ನು ರಚಿಸುವ ಮತ್ತು ನಿಯೋಜಿಸುವ ನಿಟ್ಟಿನಲ್ಲಿ ಸರ್ಕಾರವು ಆಲೋಚಿಸಿದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ಆರ್. ಅಶೋಕ (ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ)

ಅ) ಹೌದು. ಕೇಂದ್ರ ವಿಭಾಗಗಳಲ್ಲಿ ಠಾಣಾವಾರು ಹಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಮತ್ತು ಖಾಲಿ ಇರುವ ಸಿಬ್ಬಂದಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. ಹಾಲಿ ಇರುವ ಒಟ್ಟು 796 ಪೊಲೀಸ್ ಕಾನ್‌ಸ್ಟೇಬಲ್‌ಗಳ ಪೈಕಿ 202 ಪೊಲೀಸ್ ಕಾನ್‌ಸ್ಟೇಬಲ್‌ಗಳು ಬುನಾದಿ ತರಬೇತಿಗೆ ಹೋಗಿರುತ್ತಾರೆ. ತರಬೇತಿ ಮುಗಿದ ಮೇಲೆ ಕರ್ತವ್ಯಕ್ಕೆ ಹಾಜರಾಗುತ್ತಾರೆ.

ಆ) ಕಬ್ಬನ್ ಪಾರ್ಕ್ ಮತ್ತು ವಿಧಾನಸೌಧ ಠಾಣಾ ವ್ಯಾಪ್ತಿಯಲ್ಲಿ ಚಳುವಳಿ, ಮುಷ್ಕರಗಳಿಗೆ ಆಯಾ ಠಾಣೆಗಳಿಂದ ಸಿಬ್ಬಂದಿಗಳನ್ನು ನಿಯೋಜಿಸುತ್ತಿರುವುದಲ್ಲದೆ, ಇತರೆ ಠಾಣೆಗಳಿಂದಲೂ ಸಿಬ್ಬಂದಿಗಳನ್ನು ನಿಯೋಜಿಸಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ಲಭ್ಯವಾಗುವಂತೆ ನೋಡಿಕೊಳ್ಳಲಾಗುತ್ತಿದೆ.

ಇ) –ಇಲ್ಲ–

**ಶ್ರೀ ಕೆ. ಗೋವಿಂದರಾಜು:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಇದರಲ್ಲಿ ಈ ಕಬ್ಬನ್ ಪಾರ್ಕ್, ವಿಧಾನಸೌಧ ಮತ್ತು ಹಲಸೂರು ಠಾಣೆಗಳ ವ್ಯಾಪ್ತಿಯಲ್ಲಿ ಮುಷ್ಕರಗಳು ಸಾಮಾನ್ಯವಾಗಿ ಪ್ರತಿದಿವಸ ನಡೆಯುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳಿ ಬಹಳಷ್ಟು ಜನ ಸಾರ್ವಜನಿಕರು ನಮಗೆ ತಿಳಿಸಿದ್ದಾರೆ. ವಿಷಯ ಏನೆಂದರೆ ಇವತ್ತು Law and Order and Crime ಈ ವಿಚಾರಗಳಲ್ಲಿ ಎಲ್ಲಾ ಪೊಲೀಸ್ ಅಫಿಸರ್ಸ್ ಮತ್ತು ಸಿಬ್ಬಂದಿಗಳು ಅವರು ಬಂದೂಬಸ್ತ್ ಡ್ಯೂಟಿಯಲ್ಲಿ ಈ ವ್ಯಾಪ್ತಿಯಲ್ಲಿ ಕೆಲಸವನ್ನು ನಿರ್ವಹಿಸುವುದರಿಂದ ಪೊಲೀಸ್ ಠಾಣೆಯಲ್ಲಿ ಬರುವ ಸಾರ್ವಜನಿಕರಿಗೆ ಕಿರಿಕಿರಿ ಮತ್ತು ತೊಂದರೆಯಾಗುತ್ತಿದೆ ಎನ್ನುವುದು ಗಮನಕ್ಕೆ ಬಂದಿದೆ. ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಒಂದು ಪ್ರತೇಕ

ಡಿವಿಜನ್‌ನಲ್ಲಿ ಬಂದುಬಸ್ತ್‌ಗೋಸ್ಕರ ಒಂದು ವಿಂಗ್‌ನ್ನು ತಯಾರು ಮಾಡಿದರೆ ಈ ಒಂದು ಕಿರಿಕಿರಿ ಸಾರ್ವಜನಿಕರಿಗೆ ಅಗುವಂತಹ ತೊಂದರೆ ತಪ್ಪುತ್ತದೆ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ಸುಪ್ರೀಂ ಕೋರ್ಟ್ 2008ನೇ ಇಸವಿಯಲ್ಲಿ ಒಂದು ಆರ್ಡರ್ ಮಾಡಿ ಅದರಲ್ಲಿ Law and Order separate ಮಾಡಿ ಮತ್ತು Crime ಅನ್ನು separate ಮಾಡಿ ಎಂದು ಹೇಳಿದೆ. ಇದನ್ನೂ ಕೂಡ ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ. ಇದನ್ನು ಮಾಡಿದಾಗ Law and Order ನ್ನು ಮತ್ತು Crime ನ್ನು separate separate ಮಾಡಿದಾಗ ಜನರಿಗೆ ಅನುಕೂಲವಾಗುತ್ತದೆ ಮತ್ತು Crime rate ಕಡಿಮೆಯಾಗುತ್ತದೆ. ವಿಶೇಷವಾಗಿ ಈ ವ್ಯಾಪ್ತಿಯಲ್ಲಿ ನಡೆಯುವಂತಹ ಘಟನೆಗಳು ಪಾಪ ಪೊಲೀಸ್‌ನವರಿಗೆ ಎಷ್ಟು ಕಿರಿಕಿರಿ ಇದೆ ಎನ್ನುವುದು ನನಗೂ ಕೂಡ ಗೊತ್ತಿದೆ. ಅದನ್ನು ತಪ್ಪಿಸುವುದಕ್ಕೆ ಏನಾದರು ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ಗೋವಿಂದರಾಜುರವರು ಪೊಲೀಸ್‌ನವರ ಬಗ್ಗೆ ವಿಶೇಷವಾದಂತಹ ಪ್ರೀತಿಯನ್ನು ತೋರಿಸಿದ್ದಾರೆ ಅವರಿಗೆ ಮೊದಲನೆಯದಾಗಿ ಧನ್ಯವಾದಗಳು. ಮಾನ್ಯ ಸದಸ್ಯರು ಇವತ್ತು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಅವಶ್ಯಕತೆ ಇತ್ತು. ಏಕೆಂದರೆ ವಿಧಾನಸೌಧದ ಸುತ್ತಮುತ್ತಲು ಪೊಲೀಸ್‌ರವರ ಮೇಲೆ ಬಹಳ ಒತ್ತಡ ಇದೆ. ಏಕೆಂದರೆ ಈ ಭಾಗದಲ್ಲಿ ಬಂದು ಹೋಗುವ ಗಣ್ಯ ವ್ಯಕ್ತಿಗಳು ಇರಬಹುದು, ವಿಧಾನಸೌಧ ಇರಬಹುದು, ಮುಷ್ಕರಗಳು ಇರಬಹುದು ಎಲ್ಲಾ ಇದೇ ಭಾಗದಲ್ಲಿ ಬರುತ್ತಿರುವುದರಿಂದ ಪೊಲೀಸ್‌ರಿಗೆ ಒತ್ತಡ ಇದೆ. ಪೊಲೀಸ್‌ರ ಸಂಖ್ಯೆ ಕೂಡ ಬಹಳ ಕಡಿಮೆ ಇದೆ. ಅವರ ಸಲಹೆ ಮೇರೆಗೆ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಇಲ್ಲಿ ವಿಶೇಷವಾದ ವ್ಯವಸ್ಥೆ, ಹೆಚ್ಚಿನ ಸಿಬ್ಬಂದಿ, ನೇಮಕ ಮಾಡುವುದಕ್ಕೆ ಪ್ರಸ್ತಾಪನೆಯನ್ನು ತರುವುದಕ್ಕೆ ನಮ್ಮ ಅಧಿಕಾರಿಗಳಿಗೆ ನಾನು ಈಗಾಗಲೇ ಸೂಚನೆಯನ್ನು ಕೊಡುತ್ತೇನೆ.

**ಶ್ರೀ ಕೆ. ಗೋವಿಂದ ರಾಜು:–** ಮಾನ್ಯ ಸಭಾಪತಿವರೆ, ಗೃಹ ಇಲಾಖೆಯ ಸಚಿವರಲ್ಲಿ ತಮ್ಮ ಮುಖಾಂತರ ಒಂದು ಮನವಿ ಏನೆಂದರೆ, ಇವತ್ತಿನ ದಿವಸ ಕ್ರಿಡಾಪಟುಗಳಿಗೆ ಪೊಲೀಸ್ ಇಲಾಖೆಯಿಂದ ಅನ್ನ ಸಿಗುತ್ತದೆ. ದಯವಿಟ್ಟು ಸಿ ಅಂಡ್ ಆರ್ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಿ, ಕ್ರಿಡಾಪಟುಗಳ Recruitment ಆಗಬೇಕಾಗಿದೆ. ಇದನ್ನು ಶೀಘ್ರವಾಗಿ ಮಾಡಿಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೆ, ಮಾಡುತ್ತೇವೆ.

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಸರ್ಕಾರದ ಸೌಕರ್ಯ ಕುರಿತು**

**478; ಶ್ರೀ ಮೃತ್ಯುಂಜಯ ಜಿನಗಾ**

**ಅ)** ಕಳೆದ 3 ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಸರ್ಕಾರದ ಯಾವ ಯಾವ ಯೋಜನೆಗಳ ಸೌಕರ್ಯ ಒದಗಿಸಿಕೊಡಲಾಗಿದೆ.

**ಆ)** ಸದರಿ ಯೋಜನೆಗಳಿಂದ ಬಿಡುಗಡೆಗೊಳಿಸಲಾಗಿರುವ ಮೊತ್ತವೆಷ್ಟು? (ವರ್ಷವಾರು ತಾಲ್ಲೂಕುವಾರು ಮೊತ್ತವೆಷ್ಟು)

**ಇ)** ಸದರಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿವೆಯೇ (ಫಲಾನು ಭವಿಗಳವಾರು ಹೆಸರು. ಜಾತಿ ವಯಸ್ಸು ತಾಲ್ಲೂಕುವಾರು ವಿವರ ನೀಡುವುದು)

**ಈ)** ಸದರಿ ಯೋಜನೆಗಳನ್ನು ಸಮರ್ಪಕವಾಗಿ ಅನಿಷ್ಠಾನಗೊಳಿಸದ ಅಧಿಕಾರಿಗಳ ವಿರುದ್ದ ಯಾವ ಕ್ರಮವನ್ನು ಸರ್ಕಾರ ತೆಗೆದು ಕೊಂಡಿದೆ?

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)**

**ಅ) ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ರಾಜ್ಯ ವಲಯ**

ಪರಿಶಿಷ್ಟ ಜಾತಿ ಮಹಿಳೆಯರು ರಚಿಸಿದ ಸ್ವ-ಸಹಾಯ ಗುಂಪುಗಳಿಗೆ ಸಹಾಯಧನ, ಅಂಗವಿಕಲರಿಗೆ ಪ್ರೋತ್ಸಾಹಧನ. ದೌರ್ಜನ್ಯದಲ್ಲಿ ನೊಂದ ಸಂತ್ರಸ್ಥರಿಗೆ ಸಹಾಯಧನ

**ಜಿಲ್ಲಾ ವಲಯದಿಂದ** ಮಹಿಳಾ ಹೊಲಿಗೆ ತರಬೇತಿ ಕೇಂದ್ರಗಳು, ನವಚೇತನ ಹೊಲಿಗೆ ಯಂತ್ರಗಳ ಸರಬರಾಜು, ನೂತನ ಕಾನೂನು ಪದವಿದರರಿಗೆ ತರಬೇತಿ ಶಿಷ್ಯವೇತನ. ಅಂತರ್‌ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ, ಹೈನುಗಾರಿಕೆ ಲಘುವಾಹನ ತರಬೇತಿ, ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯ, ಬಂಜಾರ ತಾಂಡಾಗಳಲ್ಲಿ ಮೂಲಭೂತ ಸೌಲಭ್ಯ

**ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ**

ಗಿರಿಜನ ಉಪಯೋಜನೆ ಅಡಿಯಲ್ಲಿ ಕ್ರೋಢೀಕರಿಸಿದ ಅನುದಾನದಲ್ಲಿ ಪ.ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಭಾರತ ಸಂವಿಧಾನ ಅನುಚ್ಛೇದ 275(1) ರಡಿ ಪ.ವರ್ಗದ ಕಾಲೋನಿಗಳಿಗೆ ಮೂಲ ಭೂತ ಸೌಕರ್ಯಗಳನ್ನು ಒದಗಿಸುತ್ತಿದೆ.

ವಿಶೇಷ ಕೇಂದ್ರಿಯ ಸಹಾಯ ಧನದಡಿ ಸ್ವಯಂ ಉದ್ಯೋಗಕ್ಕಾಗಿ ಸ್ವಸಹಾಯ ಗುಂಪುಗಳಿಗೆ ಸಹಾಯ ಧನ ಇತ್ಯಾದಿ ಕಾರ್ಯಕ್ರಮಗಳನ್ನು ಅನಿಷ್ಠಾನಗೊಳಿಸಲಾಗಿದೆ.

**ಆ) ಪರಿಶಿಷ್ಟ ಜಾತಿ:**

### ರಾಜ್ಯ ವಲಯ

₹ ಲಕ್ಷಗಳಲ್ಲಿ

| ಕ್ರ.ಸಂ. | ವಿಷಯ | 2009–10 | 2010–11 | 2011–12 |
|---|---|---|---|---|
| 1 | ಪರಿಶಿಷ್ಟ ಜಾತಿ ಮಹಿಳೆಯರು ರಚಿಸಿದ ಸ್ವ–ಸಹಾಯ ಗುಂಪುಗಳಿಗೆ ಸಹಾಯಧನ | 39.60 | – | – |
| 2 | ಅಂಗವಿಕಲರಿಗೆ ಪ್ರೋತ್ಸಾಹಧನ | 6.90 | – | – |
| 3 | ದೌರ್ಜನ್ಯದಲ್ಲಿ ನೊಂದ ಸಂತ್ರಸ್ಥರಿಗೆ ಸಹಾಯಧನ | 34.05 | 10.45 | 3.37 |

### ಜಿಲ್ಲಾ ವಲಯ

₹ ಲಕ್ಷಗಳಲ್ಲಿ

| ಕ್ರ.ಸಂ. | ವಿಷಯ | 2009–10 | 2010–11 | 2011–12 |
|---|---|---|---|---|
| 1 | ಮಹಿಳಾ ಹೊಲಿಗೆ ತರಬೇತಿ ಕೇಂದ್ರಗಳು | 4.48 | 2.55 | 4.02 |
| 2 | ನವಚೇತನ | 0.99 | – | – |
| 3 | ಹೊಲಿಗೆ ಯಂತ್ರಗಳ ಸರಬರಾಜು | 1.52 | 1.50 | 1.50 |
| 4 | ನೂತನ ಕಾನೂನು ಪಧವಿದರರಿಗೆ ತರಬೇತಿ ಶಿಷ್ಯವೇತನ | 7.20 | 7.20 | 7.20 |
| 5 | ಅಂತರ್‌ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ | 4.00 | 4.00 | 4.00 |

| | | | | |
|---|---|---|---|---|
| 6 | ಹೈನುಗಾರಿಕೆ | 1.30 | 1.30 | 6.50 |
| 7 | ಲಘುವಾಹನ ತರಬೇತಿ. | – | – | 3.75 |
| 8 | ಪರಿಶಿಷ್ಟ ಜಾತಿ ಕಾಲೋನಿ/ ಬಂಜಾರ ತಾಂಡಗಳ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯ | 79.52 | 225.00 | 850.00 |
| 9 | ಬಂಜಾರ ತಾಂಡಗಳಲ್ಲಿ ಮೂಲಭೂತ ಸೌಲಭ್ಯ | 20.00 | 130.00 | – |

**ಪರಿಶಿಷ್ಟ ಪಂಗಡ:**

| **ಕಾರ್ಯಕ್ರಮಗಳ ವಿವರ** | **ವರ್ಷವಾರು ಬಿಡುಗಡೆ ಮಾಡಿದ ಅನುದಾನ** | | |
|---|---|---|---|
| | **2009–10** | **2010–11** | **2011–12** |
| 1. ಗಿರಿಜನ ಉಪಯೋಜನೆ ಅಡಿಯಲ್ಲಿ ಕ್ರೋಢೀಕರಿಸಿದ ಅನುದಾನದಲ್ಲಿ ಪ.ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳಾದ ಸಿ.ಸಿ.ರಸ್ತೆ, ಚರಂಡಿ, ಶೌಚಾಲಯ, ಬೀದಿ ದೀಪ ಮತ್ತು ಕುಡಿಯುವ ನೀರು ಇತ್ಯಾದಿ ಕಾರ್ಯಕ್ರಮಗಳನ್ನು ಒದಗಿಸಲಾಗುತ್ತಿದೆ. | 156.00 | 196.65 | 90.00 ವಿಧಾನಸಭಾ 525.00 ಕ್ಷೇತ್ರವಾರು ಒಟ್ಟು 615.00 |
| 2. ಭಾರತ ಸಂವಿಧಾನ ಅನುಚ್ಛೇದ 275(1) ರಡಿ ಪ.ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳಾದ | 112.00 | 90.00 | 186.00 |

| | | | |
|---|---|---|---|
| ಸಿ.ಸಿ. ರಸ್ತೆ ಚರಂಡಿ, ಸಮುದಾಯಭವನ, ಕುಡಿಯುವ ನೀರು ಮತ್ತು ಬೀದಿದೀಪ ಇತ್ಯಾದಿ ಕಾರ್ಯಕ್ರಮಗಳನ್ನು ಒದಗಿಸಲಾಗುತ್ತಿದೆ. | | | |
| 3. ವಿಶೇಷ ಕೇಂದ್ರಿಯ ಸಹಾಯ ಧನದಡಿ ಸ್ವಯಂ ಉದ್ಯೋಗಕ್ಕಾಗಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಹಾಯ ಧನ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. | 81.00 | 76.00 | 0.00 |

ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕ ಒದಗಿಸಲಾಗಿದೆ

ಇ) ಹೌದು

ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ

**ಈ)** ಇದರ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ.

**ಶ್ರೀ ಮೃತ್ಯಂಜಯ ಜಿನಗಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ 2011-12ನೇ ಸಾಲಿನಲ್ಲಿ ತಾಲ್ಲೂಕುವಾರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ರಚಿಸಿದ ಸ್ವಸಹಾಯ ಗುಂಪುಗಳಿಗೆ ಸಹಾಯಧನ ಮತ್ತು ನವಚೇತನ ಯೋಜನೆಯಲ್ಲಿ 2011-12 ಸಾಲಿನಲ್ಲಿ ಇದ್ಯಾವುದಕ್ಕೂ ಸಹಾ ಅನುದಾನ ಮಾಡದೇ ಇರುವುದನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅದೇ ರೀತಿಯಲ್ಲಿ

ಬಂಜಾರ ತಾಂಡಗಳಿಗೆ ಮೂಲಭೂತ ಸೌಲಭ್ಯವನ್ನು 2011–12ನೇ ಸಾಲಿನಲ್ಲಿ ಸಂಪೂರ್ಣವಾಗಿ ಕೈ ಬಿಡಲಾಗಿದೆ. ನನಗನ್ನಿಸುತ್ತದೆ ಬಂಜಾರ ತಾಂಡಗಳು ಬಳ್ಳಾರಿ ಜಿಲ್ಲೆ ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದೆ ಎನ್ನುವಂತಹ ಕಲ್ಪನೆ ಏನಾದರು ಮಾನ್ಯ ಸಚಿವರಿಗೆ ಇದ್ದರೆ ನಾನು ಮನವಿ ಮಾಡುವುದೇನೆಂದರೆ ದಯವಿಟ್ಟು ಅಲ್ಲಿಯ ಯಾವುದಾದರು ಒಂದು ಬಂಜಾರ ತಾಂಡಕ್ಕೆ ಭೇಟಿ ನೀಡಿ ನೋಡಬೇಕು. ಏಕೆ ಇದನ್ನು ಕೈ ಬಿಡಲಾಗಿದೆ ಎಂದು ತಮ್ಮ ಮುಖಾಂತರ ಸಚಿವರನ್ನು ಕೇಳುತ್ತಿದ್ದೇನೆ. ಅದರ ಜೊತೆಗೆ ಇವತ್ತು ಕೆಲವು ಯೋಜನೆಗಳಿಗೆ ಉತ್ತರವನ್ನು ಸಚಿವರು ಕೊಟ್ಟಿದ್ದಾರೆ. ಇವತ್ತು ಪ್ರಮುಖವಾದಂತಹ ಎಸ್‌ಸಿ/ಎಸ್‌ಟಿ ಯೋಜನೆಯಲ್ಲಿ ಅವರಿಗೆ ನೇರವಾದಂತಹ ವಾಹನದ ಮೇಲಿನ ಸಾಲ ಕೊಡುವುದರ ಬಗ್ಗೆ ಮಾಹಿತಿಯನ್ನು ಕೊಟ್ಟಿಲ್ಲ. ಇವತ್ತು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗೆ ಕೊಡುವಂತಹ ಸಾಲದ ಬಗ್ಗೆಯೂ ಕೂಡ ಮಾಹಿತಿಯನ್ನು ಕೊಟ್ಟಿಲ್ಲ. ಇದರ ಬಗ್ಗೆಯೂ ಕೂಡ ಮಾಹಿತಿಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಅದಲ್ಲದೇ ಹೊಸ ಹಾಸ್ಟೆಲ್‌ಗಳ ನಿರ್ಮಾಣದ ಬಗ್ಗೆ, ಕಂಪ್ಯೂಟರ್ ತರಬೇತಿ ಯೋಜನೆ ಬಗ್ಗೆ, ಮಹತ್ತರವಾದಂತಹ ಗಂಗಾ ಕಲ್ಯಾಣ ಯೋಜನೆ ಬಗ್ಗೆ ಅವರು ಕೊಟ್ಟಿರುವಂತಹ ಉತ್ತರದಲ್ಲಿ ಇಲ್ಲ. ಹಾಗಾಗಿ ಇವುಗಳಿಗೆ ಕೂಡ ಮಾನ್ಯ ಸಚಿವರು ಕೊಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡುತ್ತಿದ್ದೇನೆ.

**ಶ್ರೀ ಎ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಇರುವಂತಹ ಯೋಜನೆಗಳ ಬಗ್ಗೆ ಕೇಳಿರುವಂತಹ ಪ್ರಶ್ನೆಗೆ ಎಲ್ಲಾ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಜೊತೆಗೆ ಬಂಜಾರಾ ತಾಂಡಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಹಿಂದಿನ ವರ್ಷ ಬಳ್ಳಾರಿ ಜಿಲ್ಲೆಗೆ ಒಂದು ಕೋಟಿ ಮುವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಬಂಜಾರಾ ನಿಗಮ ಎನ್ನುವಂತಹ ಒಂದು ಪ್ರತ್ಯೇಕ ನಿಗಮವಿದ್ದು ಅದಕ್ಕೆ ಈ ವರ್ಷ ಈಗಾಗಲೇ 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ವಿಶೇಷವಾಗಿ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಇಡೀ ಜಿಲ್ಲೆಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ 8 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇನೆ.

ಈಗಾಗಲೇ ಹೊಸ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕಾಗಿ ಮಂಜೂರಾತಿಯನ್ನು ನೀಡಲಾಗಿದೆ. ಕೆಲವು ಯೋಜನೆಗಳಲ್ಲಿ ನಮ್ಮನ್ನು ಕೈಬಿಟ್ಟಿದ್ದಾರೆ ಎನ್ನುವಂತಹ ವಿಷಯವನ್ನು ಅವರು ವಿಶೇಷವಾಗಿ ಪ್ರಸ್ತಾಪಿಸಿದ್ದು, ಬಿ.ಎಸ್ಸಿ., ನರ್ಸಿಂಗ್ ಟ್ರೈನಿಂಗ್ ಇರಬಹುದು, ಟಿ.ಸಿ.ಹೆಚ್. ಟ್ರೈನಿಂಗ್ ಇರಬಹುದು, ಅಂಬೇಡ್ಕರ್ ಭವನಗಳು ಮತ್ತು ಜಗಜೀವನ್‌ರಾಮ್ ಭವನಗಳ ನಿರ್ಮಾಣ ಇರಬಹುದು, ಭೂ ಒಡೆಯ ಯೋಜನೆಗೆ ಸಂಬಂಧಿದಂತೆ ಮಾಹಿತಿಯನ್ನು ನೀಡಿಲ್ಲ ಎನ್ನುವಂತಹ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಭೂ ಒಡೆಯ ಯೋಜನೆಯನ್ನು 2 ಲಕ್ಷದಿಂದ 5 ಲಕ್ಷಕ್ಕೆ ಏರಿಸಿದ್ದೇವೆ, ವಿಶೇಷವಾಗಿ ಗಂಗಾ ಕಲ್ಯಾಣ ಯೋಜನೆಯನ್ನು ಒಂದು ಲಕ್ಷದಿಂದ ಒಂದೂವರೆ ಲಕ್ಷಕ್ಕೆ ಏರಿಸಿದ್ದೇವೆ. ಹಿಂದೆ ಒಂದು ಲಕ್ಷ ರೂಪಾಯಿ ಇದ್ದಂತಹ ಸಂದರ್ಭದಲ್ಲಿ ಈ ಯೋಜನೆ ಅಷ್ಟು ಫಲಕಾರಿಯಾಗುತ್ತಿರಲಿಲ್ಲ. ಜೊತೆಗೆ ದೌರ್ಜನ್ಯಕ್ಕೆ ಒಳಗಾದಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮಾಜದವರಿಗೆ ನೀಡಲಾಗುತ್ತಿದ್ದಂತಹ ಪರಿಹಾರವನ್ನು 2 ಲಕ್ಷದಿಂದ 5 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಪರಿಶಿಷ್ಟ ಪಂಗಡದ ನಿಗಮಗಳ ವತಿಯಿಂದ ಎಲ್ಲ ಯೋಜನೆಗಳಿಗೂ ಹಣವನ್ನು ಒದಗಿಸುತ್ತಿದ್ದೇವೆ. ವಿಶೇಷವಾಗಿ ಈ ಸಾಲಿನ ಆಯವ್ಯಯದಲ್ಲಿ pooled amount 1250 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದರಿಂದ ಯಾವುದೇ ಯೋಜನೆಗಳಿಗೆ ಹಣದ ಕೊರತೆಯಾಗುವುದಿಲ್ಲ ಎನ್ನುವುದನ್ನು ತಮ್ಮ ಮೂಲಕ ಹೇಳಬಯಸುತ್ತೇನೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಮಂಗಳವಾಡದಲ್ಲಿ 26 ವಿದ್ಯಾರ್ಥಿಗಳಿ ಎಸ್.ಸಿ./ಎಸ್.ಟಿ ವಿದ್ಯಾರ್ಥಿ ನಿಲಯದಲ್ಲಿದ್ದಾರೆ. ಆ ವಿದ್ಯಾರ್ಥಿ ನಿಲಯವನ್ನು ರದ್ದುಪಡಿಸಬೇಕೆಂದು ಈಗಾಗಲೇ ಸರ್ಕಾರದಿಂದ ಆದೇಶವಾಗಿದೆ, ಸರ್ಕಾರ ಅದನ್ನು ರದ್ದುಪಡಿಸಿದರೆ ಅಲ್ಲಿರುವಂತಹ ಎಲ್ಲ ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತದೆ. ಆದ್ದರಿಂದ ದಯಮಾಡಿ ಅದನ್ನು ರದ್ದುಪಡಿಸಬಾರದೆಂದು ವಿನಂತಿಸುತ್ತೇನೆ.

**ಸಭಾಪತಿಯವರು:-** ವಿಷಯವನ್ನು ಈ ರೀತಿ ಹೇಳಿದರೆ ಆಗುವುದಿಲ್ಲ, ಅದನ್ನು ದಯಮಾಡಿ ಮಾನ್ಯ ಸಚಿವರಿಗೆ ಬರೆದು ಕಳುಹಿಸಿಕೊಡಿ.

**ಹಾಸ್ಟೆಲ್‌ಗಳ ಅಭಿವೃದ್ಧಿ ಕುರಿತು**

**575; ಶ್ರೀ ಸಿದ್ಧರಾಜು (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಮೈಸೂರು ಜಿಲ್ಲೆಯಲ್ಲಿರುವ ಹಾಸ್ಟೆಲ್‌ಗಳು ಹಾಗೂ ವಾರ್ಡ್‌ನ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

**ಆ)** ಮೈಸೂರು ಜಿಲ್ಲೆಯಲ್ಲಿ ನೂತನ ಹಾಸ್ಟೆಲ್‌ಗಳನ್ನು ನಿರ್ಮಿಸುವ ಯೋಜನೆ ಸರ್ಕಾರದಲ್ಲಿ ಇದೆಯೇ; (ಇದ್ದಲ್ಲಿ ವಿವರ ಒದಗಿಸುವುದು)

**ಇ)** ಹಾಸ್ಟೆಲ್‌ಗಳ ಶೌಚಾಲಯಗಳು ಹಾಗೂ ಆಹಾರದ ಗುಣಮಟ್ಟ ಉತ್ತಮ ಮಟ್ಟದಲ್ಲಿರುವಂತೆ ಕಾಯ್ದುಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧೀಖಾನ ಸಚಿವರು)**

**ಅ)** ಮೈಸೂರು ಜಿಲ್ಲೆಯಲ್ಲಿರುವ ಹಾಸ್ಟೆಲ್‌ಗಳು ಮತ್ತು ವಾರ್ಡನ್‌ಗಳ ಸಂಖ್ಯೆ ಈ ಕೆಳಕಂಡಂತಿದೆ.

| ಪ್ರವರ್ಗ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ವಾರ್ಡನ್‌ಗಳ ಸಂಖ್ಯೆ |
|---|---|---|
| ಪರಿಶಿಷ್ಟ ಜಾತಿ | 67 | 55 |
| ಪರಿಶಿಷ್ಟ ಪಂಗಡ | 12 | 11 |
| ಹಿಂದುಳಿದ ವರ್ಗ | 73 | 73 |
| **ಒಟ್ಟು** | **152** | **139** |

ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು

ನಿವೇಶನಗಳು ಹಾಗೂ ಅನುದಾನದ ಲಭ್ಯತೆಯನ್ನು ಆಧರಿಸಿ ಹಂತಹಂತವಾಗಿ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ನಿರ್ಮಿಸಲು ಕ್ರಮವಹಿಸಲಾಗುವುದು.

ಇ) ಮೈಸೂರು ಜಿಲ್ಲೆಯಲ್ಲಿ ಹಾಸ್ಟೆಲ್‌ಗಳಲ್ಲಿನ ಶೌಚಾಲಯಗಳು ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2012–13ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಳಾಖೆಯ ವತಿಯಿಂದ ಪರಿಶಿಷ್ಟ ಜಾತಿ ಹಾಸ್ಟೆಲ್‌ಗಳಿಗೆ ₹ 200 ಲಕ್ಷಗಳು ಹಾಗೂ ಹಿಂದುಳಿದ ವರ್ಗಗಳ ಹಾಸ್ಟಲ್‌ಗಳಿಗೆ ₹ 40 ಲಕ್ಷಗಳು ಬಿಡುಗಡೆ ಮಾಡಿದೆ.

ಹಾಸ್ಟೆಲ್‌ಗಳ ಶೌಚಾಲಯಗಳನ್ನು ದಿನನಿತ್ಯ ಸ್ವಚ್ಚಗೊಳಿಸಲು ಮಾಹೆಯಾನ ₹ 600/– ನೀಡಲಾಗುತ್ತಿದೆ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ನೀಡಲಾಗುವ ಆಹಾರದ ಗುಣಮಟ್ಟವನ್ನು ಉತ್ತಮ ಪಡಿಸಲು ಮೆನುಛಾರ್ಟ್ ಸಹ ನೀಡಲಾಗಿದೆ. ಅದರಂತೆ ಆಹಾರವನ್ನು ತಯಾರಿಸಿ ನೀಡಲಾಗುತ್ತಿದೆ.

## ಅನುಬಂಧ

## ಮೈಸೂರು ಜಿಲ್ಲೆಯಲ್ಲಿ ಇರುವ ವಿದ್ಯಾರ್ಥಿನಿಲಯಗಳ ತಾಲ್ಲೂಕುವಾರು ವಿವರ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳು.

| ತಾಲ್ಲೂಕು | ವಿದ್ಯಾರ್ಥಿನಿಲಯಗಳು | | ಕಾರ್ಯನಿರ್ವಹಿಸುತ್ತಿರುವ ವಾರ್ಡನ್‌ಗಳು | |
|---|---|---|---|---|
| | ಮೆ. ಪೂರ್ವ | ಮೆ. ನಂತರ | ಮೆ. ಪೂರ್ವ | ಮೆ. ನಂತರ |
| ಹೆಚ್.ಡಿ. ಕೋಟೆ | 07 | 03 | 05 | 01 |
| ಹುಣಸೂರು | 08 | 02 | 07 | 02 |
| ಕೆ.ಆರ್. ನಗರ | 05 | 01 | 05 | 01 |
| ಟಿ. ನರಸೀಪುರ | 08 | 02 | 05 | 02 |
| ಪಿರಿಯಾಪಟ್ಟಣ | 03 | 02 | 02 | 02 |
| ನಂಜನಗೂಡು | 09 | 02 | 08 | 02 |
| ಮೈಸೂರು | 07 | 08 | 07 | 06 |
| **ಒಟ್ಟು** | **47** | **20** | **39** | **16** |

## ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳು

| ತಾಲ್ಲೂಕು | ವಿದ್ಯಾರ್ಥಿನಿಲಯಗಳು | ಕಾರ್ಯನಿರ್ವಹಿಸುತ್ತಿರುವ ವಾರ್ಡನ್‌ಗಳು |
|---|---|---|
| ಮೈಸೂರು | 2 | 1 |
| ಹೆಚ್.ಡಿ. ಕೋಟೆ | 4 | 4 |
| ಹುಣಸೂರು | 2 | 2 |
| ಕೆ.ಆರ್. ನಗರ | 1 | 1 |
| ಪಿರಿಯಾಪಟ್ಟಣ | 3 | 3 |
| **ಒಟ್ಟು** | **12** | **11** |

## ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳು

| ತಾಲ್ಲೂಕು | ವಿದ್ಯಾರ್ಥಿನಿಲಯಗಳು | | ಕಾರ್ಯನಿರ್ವಹಿಸುತ್ತಿರುವ ವಾರ್ಡನ್‌ಗಳು | |
|---|---|---|---|---|
| | ಮೆ. ಪೂರ್ವ | ಮೆ. ನಂತರ | ಮೆ. ಪೂರ್ವ | ಮೆ. ನಂತರ |
| ಹೆಚ್.ಡಿ. ಕೋಟೆ | 07 | 01 | 07 | 01 |
| ಹುಣಸೂರು | 07 | 02 | 07 | 02 |
| ಕೆ.ಆರ್. ನಗರ | 09 | 03 | 09 | 03 |
| ಟಿ. ನರಸೀಪುರ | 05 | 02 | 05 | 02 |
| ಪಿರಿಯಾಪಟ್ಟಣ | 07 | 02 | 07 | 02 |
| ನಂಜನಗೂಡು | 08 | 03 | 08 | 03 |
| ಮೈಸೂರು | 04 | 13 | 04 | 13 |
| **ಒಟ್ಟು** | **47** | **26** | **47** | **26** |

**ಶ್ರೀ ಸಿದ್ದರಾಜು:–** ಮಾನ್ಯ ಸಭಾಪತಿಯವರೇ, ಸಚಿವರು ನೀಡಿರುವಂತಹ ಲಿಖಿತ ಉತ್ತರದಲ್ಲಿ ವಿಶೇಷವಾಗಿ ಮೈಸೂರು ಜಿಲ್ಲೆಯಲ್ಲಿ 152 ವಿದ್ಯಾರ್ಥಿ ನಿಲಯಗಳಿದ್ದು ಅವುಗಳಲ್ಲಿ 139ಕ್ಕೆ ಮಾತ್ರ ವಾರ್ಡನ್‌ಗಳಿದ್ದಾರೆ, ಇನ್ನುಳಿದ 13 ವಿದ್ಯಾರ್ಥಿ ನಿಲಯಗಳಿಗೆ ವಾರ್ಡನ್‌ಗಳಿಲ್ಲ ಎನ್ನುವಂತಹ ವಿಚಾರವನ್ನು ತಿಳಿಸಿದ್ದಾರೆ. ಜೊತೆಗೆ ಅಲ್ಲಿ ವಾರ್ಡನ್‌ಗಳು ಕಡಿಮೆ ಸಂಖ್ಯೆಯಲ್ಲಿದ್ದು ಅವರು ಹಾಸ್ಟೆಲ್‌ಗಳ ನಿರ್ವಹಣೆಯನ್ನು ಅಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿದುಬಂದಿದೆ. ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳು ಈಗ ಹೆಚ್ಚಿನ ಸಂಖ್ಯೆಯಲ್ಲಿ ಹಾಸ್ಟೆಲ್‌ಗಳಿಗೆ ಸೇರ್ಪಡೆಯಾಗುತ್ತಿದ್ದಾರೆ. ಆದರೆ ಶಾಲೆಗಳು ಪ್ರಾರಂಭವಾದರೂ ಸಹ ಹಾಸ್ಟೆಲ್‌ಗಳಲ್ಲಿ ಸರಿಯಾದ ಸಮಯಕ್ಕೆ ಊಟ ತಯಾರಿಸುತ್ತಿರಲಿಲ್ಲ, ಜೊತೆಗೆ ಹಾಸ್ಟೆಲ್‌ಗಳ ಕಟ್ಟಡಗಳು ಬಹಳ ಹಳೆಯದಾಗಿದ್ದು ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲ. ಛಾವಣಿಗಳು ಕಿತ್ತು ಹೋಗಿವೆ, ಕುಡಿಯುವ ನೀರಿಗೆ ಸಮಸ್ಯೆ ಇದೆ, ಜೊತೆಗೆ ಹೆಚ್ಚು ಮಳೆ ಬೀಳುವಂತಹ ಪ್ರದೇಶದಲ್ಲಿನ

ಹಾಸ್ಟೆಲ್‌ಗಳ ನಿರ್ವಹಣೆಗೆ ಸಹ ಹಣವನ್ನು ಬಿಡುಗಡೆ ಮಾಡದಿರುವುದು ಕಂಡುಬರುತ್ತಿದೆ. ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎ. ನಾರಾಯಣ ಸ್ವಾಮಿ:–** ಹಾಸ್ಟೆಲ್‌ಗಳ ರಿಪೇರಿ ಮತ್ತು ನಿರ್ವಹಣೆ ಕಾರ್ಯವನ್ನು ಜಿಲ್ಲಾ ಪಂಚಾಯಿತಿ ನಿರ್ವಹಿಸುತ್ತದೆ. ಆದ್ದರಿಂದ ಆ ಮಾಹಿತಿಯನ್ನು ಮಾನ್ಯ ಸದಸ್ಯರು ಜಿಲ್ಲಾ ಪಂಚಾಯಿತಿಯಿಂದ ಪಡೆಯಬಹುದು. ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ 1.35 ಲಕ್ಷ ರೂಪಾಯಿಗಳನ್ನು ರಿಪೇರಿ ಇರಬಹುದು, ನೀರಿನ ವ್ಯವಸ್ಥೆ ಇರಬಹುದು ಇಂತಹ ಯಾವುದೇ ಕೊರತೆಗಳಿರಬಾರದು ಎನ್ನುವಂತಹ ಉದ್ದೇಶದಿಂದ ಪ್ರತಿ ಜಿಲ್ಲೆಗೂ ಹಣವನ್ನು ಬಿಡುಗಡೆ ಮಾಡಿದ್ದೇವೆ. ಆದ್ದರಿಂದ ಹಾಸ್ಟೆಲ್ ಕಟ್ಟಡಗಳ ರಿಪೇರಿ ವಿಚಾರದಲ್ಲಿ ಹಣದ ಕೊರತೆಯಾಗುವುದಿಲ್ಲ. ಆದರೆ ಸ್ವಲ್ಪಮಟ್ಟಿಗೆ ವಾರ್ಡನ್‌ಗಳ ಕೊರತೆ ಇದೆ, ಆದಷ್ಟು ಬೇಗನೆ ಆ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ. ಈ ವಿಚಾರವಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬರೆದಿದ್ದು ಈಗಾಗಲೇ ಕೆಲವು ಹುದ್ದೆಗಳು ಅಲ್ಲಿಂದ ಸೆಲೆಕ್ಷನ್ ಆಗಿದ್ದು ಆದಷ್ಟು ಬೇಗನೆ ಆ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಕರ್ನಾಟಕದಲ್ಲಿ ಹೊಸದಾಗಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲಾಗಿದ್ದು ಅದರಲ್ಲಿಯೂ ವಿಶೇಷವಾಗಿ ಮೈಸೂರು ನಗರ ಮತ್ತು ಕೆ.ಆರ್. ನಗರದಲ್ಲಿ ಮೆಟ್ರಿಕ್‌ಪೂರ್ವ ಹಾಸ್ಟೆಲ್‌ಗಳನ್ನು ಎಸ್.ಸಿ. ಜನಾಂಗದವರಿಗೆ ಪ್ರಾರಂಭಿಸಲಾಗಿದೆ. ಅಲ್ಲದೆ ಎಸ್.ಟಿ. ಜನಾಂಗದವರಿಗೆ ಸಹ 2 ಹಾಸ್ಟೆಲ್‌ಗಳನ್ನು ಪ್ರಾರಂಭಿಸಲಾಗಿದೆ, ಒಂದು ಮೆಟ್ರಿಕ್‌ಪೂರ್ವ ಹೆಣ್ಣು ಮಕ್ಕಳ ಹಾಸ್ಟೆಲ್ ಮಾಡಿದ್ದೇವೆ, ಆಶ್ರಮ ಶಾಲೆಯೊಂದನ್ನು ಸಹ ಪ್ರಾರಂಭಿಸಲಾಗಿದೆ. ಜೊತೆಗೆ ಬಿ.ಸಿ.ಎಂ. ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳನ್ನು ಸಹ ಪಿರಿಯಾಪಟ್ಟಣದಲ್ಲಿ ಹಾಗೂ ಮೈಸೂರು ನಗರದಲ್ಲಿ ಗಂಡು ಮಕ್ಕಳಿಗಾಗಿ ಪ್ರಾರಂಭಿಸಲಾಗಿದೆ.

ಹಾಸ್ಟೆಲ್‌ಗಳ ನಿರ್ವಹಣೆಯನ್ನು ಜಿಲ್ಲಾ ಪಂಚಾಯತಿಯವರು ಮಾಡುತ್ತಿದ್ದಾರೆ, ಆದರೂ ಸಹ ನಾನು ಪ್ರತಿ ಜಿಲ್ಲೆಗೆ ಪರಿಶಿಷ್ಟ ಜಾತಿ ಹಾಸ್ಟೆಲ್‌ಗಳ ನಿರ್ವಹಣೆ ಮತ್ತು ಹೊಸ ಕಟ್ಟಡಗಳ ನಿರ್ಮಾಣಕ್ಕೆ 2 ಕೋಟಿ ರೂಪಾಯಿಗಳ ಬಿಡುಗಡೆಗೆ ಆದೇಶವನ್ನು ಮಾಡಿದ್ದೇನೆ. ಅಲ್ಲದೆ ಬಿ.ಸಿ.ಎಂ. ನಿಂದ ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದು ಅದರಲ್ಲಿ 40 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಒಟ್ಟಾರೆಯಾಗಿ ಪ್ರತಿ ಜಿಲ್ಲೆಗೆ ಎಸ್.ಸಿ. ಬಿ.ಸಿ.ಎಂ. ಮತ್ತು ಎಸ್.ಟಿ. ಜನಾಂಗದ ಹಾಸ್ಟೆಲ್‌ಗಳಿಗೆ 4 ಕೋಟಿ ರೂಪಾಯಿಗಳಂತೆ ಹಣವನ್ನು ಬಿಡುಗಡೆ ಮಾಡಲು ಈಗಾಗಲೇ ನಾನು ಆದೇಶ ಮಾಡಿದ್ದೇನೆ. ಸಧ್ಯದಲ್ಲಿಯೇ ಹಣವನ್ನು ಬಿಡುಗಡೆ ಮಾಡಲಾಗುತ್ತದೆ, ಎಸ್ಟಿಮೇಟ್ ತರಿಸಿಕೊಂಡು ಅನುಮತಿಯನ್ನು ನೀಡಲಾಗುತ್ತಿದೆ. ಹಾಸ್ಟೆಲ್‌ಗಳ ನಿರ್ವಹಣೆಯ ಬಗ್ಗೆ ಸ್ಥಳೀಯ ಶಾಸಕರು ಹೆಚ್ಚು ಗಮನ ಕೊಟ್ಟರೆ ಈ ವ್ಯವಸ್ಥೆ ಇನ್ನಷ್ಟು ಹೆಚ್ಚು ಫಲಕಾರಿಯಾಗುತ್ತದೆ ಎನ್ನುವ ವಿಶ್ವಾಸ ನನಗಿದೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ನಿಮ್ಮ ಪ್ರಶ್ನೆ ಸಂಖ್ಯೆ: 711ಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ, ಆದ್ದರಿಂದ ಆ ಪ್ರಶ್ನೆ ಗುರುವಾರದ ಸಮೂಹದಲ್ಲಿ ಬರುತ್ತದೆ. ಇನ್ನು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ 708ನೇ ಪ್ರಶ್ನೆ ವರ್ಗಾವಣೆಯಾಗಿದೆ, ಅದು ಯಾವ ಸಮೂಹದಲ್ಲಿ ಬರುತ್ತದೆಯೋ ನೋಡಿ ಹಾಕಿಸಿಕೊಡುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ ನನ್ನ ಪ್ರಶ್ನೆ ಯಾವ ಸಮೂಹದಲ್ಲಿ ಬರುತ್ತದೆ?

**ಸಭಾಪತಿಯವರು:–** ಅದು ಗೊತ್ತಿಲ್ಲ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ತಮಗೆ ಗೊತ್ತಿಲ್ಲವೆಂದರೆ ಮತ್ತೆ ಯಾರಿಗೆ ಗೊತ್ತಿರುತ್ತದೆ?

**ಸಭಾಪತಿಯವರು:–** ಆ ಪ್ರಶ್ನೆಗೆ ಉತ್ತರ ಕೊಡಲು ಸರ್ಕಾರ ಸಮಯ ಕೇಳಿದೆ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

**ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆಯ ಬಗ್ಗೆ**

**570; ಶ್ರೀ ಆರ್.ವಿ. ವೆಂಕಟೇಶ್ (ವಿಧಾನ ಸಭಾ ಕ್ಷೇತ್ರ)**

**1)** ಮಹಿಳೆಯರ ಮತ್ತು ಮಕ್ಕಳ ಕಳ್ಳ ಸಾಗಣಿಕೆಯು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**2)** ಮಹಿಳೆಯರ ಮತ್ತು ಮಕ್ಕಳ ಕಳ್ಳ ಸಾಗಣಿಕೆಯು ಕಳೆದ 5 ವರ್ಷಗಳಿಂದ ಎಷ್ಟು ಪ್ರಕರಣಗಳು ದಾಖಲಾಗಿವೆ; ಹಾಗೂ ಸಾಗಾಣಿಕೆಗೆ ಒಳಪಟ್ಟ ಎಷ್ಟು ಮಹಿಳೆಯರನ್ನು ಹಾಗೂ ಮಕ್ಕಳನ್ನು ಪುನರ್‌ವಸತಿ ಮಾಡಲಾಗಿದೆ?

**3)** ಈ ಪಿಡುಗುಗಳನ್ನು ಸ್ಥಳೀಯವಾಗಿಯೇ ತಡೆಗಟ್ಟಲು ಸರ್ಕಾರವು ಅನುಸರಿಸುತ್ತಿರುವ ಕ್ರಮಗಳೇನು?

**ಶ್ರೀ ಆರ್. ಅಶೋಕ (ಉಪಮುಖ್ಯಮಂತ್ರಿಗಳು)**

**1)** ಬಂದಿದೆ.

**2)** ಕಳೆದ 5 ವರ್ಷಗಳಿಂದ 2012ರ ಜೂನ್ ಅಂತ್ಯಕ್ಕೆ ದಾಖಲಾದ ಪ್ರಕರಣಗಳ ಮಾಹಿತಿ ಈ ಕೆಳಕಂಡಂತಿದೆ.

| ವರ್ಷ | ದಾಖಲಾದ ಪ್ರಕರಣಗಳು |
|---|---|
| 2007 | 440 |
| 2008 | 488 |
| 2009 | 534 |
| 2010 | 697 |
| 2011 | 672 |
| 2012 (ಜೂನ್) | 403 |

ಮೇಲೀನ ಕಂಡಿಕೆಯಲ್ಲಿ ತಿಳಿಸಿದಂತೆ, ಇತ್ತೀಚಿನ ದಿನಗಳಲ್ಲಿ ಘಟಿಸುತ್ತಿರುವ ಇಂತಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವ, ಸಿಐಡಿ ಘಟಕದಲ್ಲಿನ ಮಾನವ ಕಳ್ಳ ಸಾಗಣಿಕೆ ನಿಷೇಧ ದಳದ ಅಧಿಕಾರಿಗಳು 15 ರಕ್ಷಣಾ ಕಾರ್ಯಗಳನ್ನು ಕೈಗೊಂಡಿದ್ದು, 88 ಮಹಿಳೆ/ಮಕ್ಕಳನ್ನು ರಕ್ಷಣೆ ಮಾಡಿ, ಮಹಿಳಾ ಮತ್ತು ಮಕ್ಕಳ ಸ್ವೀಕಾರ ಕೇಂದ್ರಗಳಿಗೆ ದಾಖಲಿಸಿ, ಅವರುಗಳಿಗೆ ಪುನರ್‌ವಸತಿ ಕಲ್ಪಿಸಲು ಕ್ರಮ ಕೈಗೊಂಡಿರುತ್ತಾರೆ.

**3)** ಈ ಪಿಡುಗುಗಳನ್ನು ಸ್ಥಳೀಯವಾಗಿಯೇ ತಡೆಗಟ್ಟಲು ರಾಜ್ಯದಲ್ಲಿ ಹೆಚ್ಚು ಮಾನವ ಸಾಗಾಣಿಕೆಯಾಗುತ್ತಿರುವ ಜಿಲ್ಲೆಗಳನ್ನು ಗುರುತಿಸಿ, 5 ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ.

ಅವುಗಳು ಕೆಳಕಂಡಂತಿವೆ:

1. ಬೆಂಗಳೂರು ನಗರ,
2. ಮೈಸೂರು ಜಿಲ್ಲೆ,
3. ಹುಬ್ಬಳ್ಳಿ – ಧಾರವಾಡ ನಗರ,
4. ಬೆಳಗಾಂ ಜಿಲ್ಲೆ ಮತ್ತು
5. ದಕ್ಷಿಣ ಕನ್ನಡ ಜಿಲ್ಲೆ

ಈ ಸಂಬಂಧ ಈ ಕೆಳಗೆ ನಮೂದಿಸಿದ, ಇನ್ನು 4 ಜಿಲ್ಲೆಗಳನ್ನು ಗುರುತಿಸಲಾಗಿದೆ.

1) ಗುಲ್ಬರ್ಗಾ,
2) ರಾಯಚೂರು,
3) ಕೋಲಾರ,
4) ದಾವಣಗೆರೆ,

ಈ ಜಿಲ್ಲೆಗಳಲ್ಲೂ ಸಹ 4 ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕಗಳನ್ನು ಸ್ಥಾಪಿಸಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಮಾನವ ಕಳ್ಳ ಸಾಗಾಣಿಕೆ ವಿಷಯವಾಗಿ ಪೊಲೀಸ್ ಅಧಿಕಾರಿ ಮತ್ತು ಸರ್ಕಾರಿ ಅಭಿಯೋಜಕರುಗಳಿಗೆ ತರಬೇತಿಯನ್ನು ನೀಡಲಾಗಿದೆ.

ಘಟಕಾಧಿಕಾರಿಗಳ ಹಂತದಲ್ಲಿ ಮಾನವ ಕಳ್ಳ ಸಾಗಾಣಿಕೆಯನ್ನು ನಿರ್ಬಂಧಿಸುವ ಕುರಿತು ಅವರುಗಳಿಗೆ ಸುತ್ತೋಲೆ ಮತ್ತು ತಿಳುವಳಿಕೆ ಪತ್ರಗಳನ್ನು ನೀಡಲಾಗಿದೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಸಚಿವರು ನೀಡಿರುವಂತಹ ಲಿಖಿತ ಉತ್ತರವನ್ನು ನೋಡಿದಾಗ ನಮಗೆ ಸ್ಪಷ್ಟವಾಗುವುದೇನೆಂದರೆ, ಕಳೆದ 5 ವರ್ಷಗಳಲ್ಲಿ ವರದಿಯಾಗಿರುವಂತಹ ಪ್ರಕರಣಗಳ ಸಂಖ್ಯೆಯನ್ನು ನೋಡಿದಾಗ ಈ ವಿಚಾರದಲ್ಲಿ ಗೃಹ ಇಲಾಖೆಯ ವೈಫಲ್ಯತೆ ಎದ್ದುಕಾಣುತ್ತಿದೆ. ಪ್ರತಿ ವರ್ಷ ಈ ಸಂಖ್ಯೆ ಏರಿಕೆಯಾಗಿದೆ, ಈ ವರ್ಷ ಜೂನ್ ತಿಂಗಳ ವೇಳೆಗೆ, ಅಂದರೆ ಕಳೆದ ಆರು ತಿಂಗಳಲ್ಲಿ 403 ಪ್ರಕರಣಗಳು ದಾಖಲಾಗಿವೆ. ವ್ಯವಸ್ಥೆ ಗೊತ್ತಿಲ್ಲದಂತಹ ಎಷ್ಟೋ ನಿರ್ಗತಿಕರು ಈ ಪ್ರಕರಣವನ್ನು ಪೊಲೀಸ್ ಇಲಾಖೆಯಲ್ಲಿ ದಾಖಲಿಸಬೇಕೆನ್ನುವಂತಹ ತಿಳುವಳಿಕೆ ಇಲ್ಲದವರು ಸಹ ಇದ್ದಾರೆ. ಇಲ್ಲದಿದ್ದರೆ ಈ ಪ್ರಕರಣಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗುತ್ತಿತ್ತು. ಆದರೆ ಈಗ ಸರ್ಕಾರ ಉತ್ತರದಲ್ಲಿ ಕೊಟ್ಟಿರುವಂತಹ ಅಂಕಿಅಂಶಗಳ ಪ್ರಕಾರವಾಗಿಯೇ ಪ್ರತಿನಿತ್ಯ ಸರಾಸರಿ 2 ರಿಂದ 3 ಅಪಹರಣ ಪ್ರಕರಣಗಳು ವರದಿಯಾಗುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಕಳೆದ 5 ವರ್ಷಗಳಲ್ಲಿ ವರದಿಗಳಲ್ಲಿ ವರದಿಯಾಗಿರುವಂತಹ ಪ್ರಕರಣಗಳ ಒಟ್ಟು ಸಂಖ್ಯೆ: 2834 ಇದ್ದು ಅದರಲ್ಲಿ ಕೇವಲ 88 ಮಹಿಳೆಯರು ಮತ್ತು ಮಕ್ಕಳಿಗೆ ಮಾತ್ರ ಪುನರ್ವಸತಿಯನ್ನು ಕಲ್ಪಿಸಲಾಗಿದೆ. ಅಂದರೆ ಒಟ್ಟು ಪ್ರಕರಣಗಳಲ್ಲಿ ಕೇವಲ ಶೇಕಡ 3ರಷ್ಟಕ್ಕೆ ಮಾತ್ರ ಪುನರ್ವಸತಿಯನ್ನು ಕಲ್ಪಿಸಿದಂತಾಗಿದೆ. ಅದಕ್ಕಾಗಿ ಕಾರ್ಯಪಡೆಯನ್ನು ರಚಿಸಲಾಗಿದೆ ಎನ್ನುವಂತಹ ಉತ್ತರವನ್ನು ಕೊಟ್ಟಿದಾರೆ. ಆ ಕಾರ್ಯಪಡೆಯನ್ನು ರಚಿಸಿರುವುದಕ್ಕೆ ಕಾರಣವೇನೆಂದರೆ

ಕೇಂದ್ರ ಸರ್ಕಾರದಿಂದ ಒಂದು ಸುತ್ತೋಲೆ ಬಂದಿದೆ, ಆ ವಿಚಾರವನ್ನು ಸಹ ಉತ್ತರದಲ್ಲಿ ತಿಳಿಸಿದ್ದಾರೆ. ಅಂದರೆ ಕೇಂದ್ರ ಸರ್ಕಾರದಿಂದ ಒತ್ತಡ ಬಂದ ಮೇಲೆ ಈ ತಂಡಗಳನ್ನು ರಚಿಸಿ ಕಾರ್ಯಪ್ರವೃತ್ತರಾಗಿದ್ದಾರೆ. ಪೊಲೀಸರಿಗೆ ಯಾವ ಜಿಲ್ಲೆಯಲ್ಲಿ, ಯಾವ ರೀತಿಯ ವ್ಯವಸ್ಥೆ ಇದೆ ಎನ್ನುವಂಥದ್ದೆಲ್ಲಾ ಗೊತ್ತಿರುತ್ತದೆ. ಆದರೆ ಅವರು ಈ ಪ್ರಕರಣಗಳನ್ನು ನಿಯಂತ್ರಿಸುವಲ್ಲಿ ಏಕೆ ಪರಿಣಾಮಕಾರಿಯಾಗಿ ಕಾರ್ಯಪ್ರವೃತ್ತರಾಗುತ್ತಿಲ್ಲ ಎನ್ನುವುದು ಗೊತ್ತಾಗುತ್ತಿಲ್ಲ. ಈಗಲೂ ಪ್ರತಿ ದಿವಸ ಎರಡು–ಮೂರು ಅಪಹರಣ ಪ್ರಕರಣಗಳು ನಡೆಯುತ್ತಿದ್ದರೆ ಇನ್ನು ಮುಂದಿನ ದಿನಗಳಲ್ಲಿ ಇವುಗಳ ಪ್ರಮಾಣ ಇನ್ನೆಷ್ಟಾಗಬಹುದು ಎನ್ನುವಂತಹ ಆತಂಕ ಉಂಟಾಗುತ್ತಿದೆ. ಈ ವಿಚಾರದಲ್ಲಿ ಸರ್ಕಾರ ಕೊಟ್ಟಿರುವಂತಹ ಉತ್ತರ ಸಮಂಜಸವಾಗಿಲ್ಲ, ಆದ್ದರಿಂದ ನಾನು ಮಾನ್ಯ ಸಚಿವರಿಂದ ಸರಿಯಾದಂತಹ ಉತ್ತರವನ್ನು ಬಯಸುತ್ತೇನೆ.

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ಒಂದು ಸ್ಪಷ್ಟೀಕರಣವನ್ನು ಮಾನ್ಯ ಸಚಿವರಿಗೆ ಕೊಡಬಯಸುತ್ತೇನೆ. ಕಳೆದ ಆರು ತಿಂಗಳಲ್ಲಿ 403 ಪ್ರಕರಣಗಳು ವರದಿಯಾಗಿವೆ ಎನ್ನುವಂತಹ ಅಂಕಿಅಂಶವನ್ನೇನು ಕೊಟ್ಟಿದ್ದೇವೆ ಅದರಲ್ಲಿ ನಮ್ಮ ಕಾನೂನಿನ ಪ್ರಕಾರ ಅಪಹರಣ ಪ್ರಕರಣ (ಕಿಡ್ನಪಿಂಗ್ ಕೇಸ್) ಎಂದರೆ, ಯಾರು ಪ್ರೇಮಿಗಳು ಮನೆಬಿಟ್ಟು ಹೋಗುತ್ತಾರೆ ಅಥವಾ ಉದ್ಯೋಗವನ್ನರಸಿ ಮನೆ ಬಿಟ್ಟು ಹೋಗಿರುತ್ತಾರೆ ಆ ಎಲ್ಲ ಸಂದರ್ಭಗಳಲ್ಲಿಯೂ ಅವರ ಪೊಷಕರು ಕೊಡುವುದು ಕಿಡ್ನಪಿಂಗ್ ಕೇಸ್ ಎಂಬುದಾಗಿಯೇ ದೂರು ದಾಖಲಿಸುತ್ತಾರೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅಂತಹ ಪ್ರಕರಣಗಳನ್ನು ಮಿಸಿಂಗ್ ಕೇಸ್ ಎಂದು ಪರಿಗಣಿಸಲಾಗುತ್ತದೆ ಅಲ್ಲವೆ?

**ಶ್ರೀ ಆರ್.ಅಶೋಕ:–** ಇಲ್ಲ, ಆ ಪ್ರಕರಣಗಳನ್ನು ಸಹ Kidnapping case ಎಂಬುದಾಗಿಯೇ ದಾಖಲಿಸಿಕೊಳ್ಳಲಾಗುತ್ತದೆ. ಹೀಗಾಗಿ ಈ ಪ್ರಕರಣಗಳು ಸಹ ಅಪಹರಣ ಪ್ರಕರಣಗಳ ಪಟ್ಟಿಯಲ್ಲಿಯೇ ಬರುತ್ತವೆ. ವಾಸ್ತವವಾಗಿ ಮಹಿಳೆಯರು ಮತ್ತು ಮಕ್ಕಳ ಅಪಹರಣ ಪ್ರಕರಣಗಳ ಪ್ರಮಾಣ ಇರುವುದು

ಕೇವಲ ಶೇಕಡ 5ರಷ್ಟು ಮಾತ್ರ. ಆರು ತಿಂಗಳಲ್ಲಿ 403 ಪ್ರಕರಣಗಳು ವರದಿಯಾಗಿವೆ ಎನ್ನುವಂತಹ ಮಾಹಿತಿಯನ್ನೇನು ಕೊಡಲಾಗಿದೆ ಅದರಲ್ಲಿ ವಾಸ್ತವವಾಗಿ ಶೇಕಡ 5ರಷ್ಟು ಮಾತ್ರ ಅಪಹರಣ ಪ್ರಕರಣಗಳಾಗಿವೆ. ಆದರೆ ಪೊಲೀಸ್ ಕಾಯಿದೆಯ ಸೆಕ್ಷನ್ ಮಾತ್ರ ಒಂದೇ ಇರುತ್ತದೆ. ನಮ್ಮ ಪೊಲೀಸ್ ಕಾಯಿದೆಯ ಪ್ರಕಾರ 'ಅಪಹರಣ' ಎಂದು ದೂರು ಕೊಟ್ಟ ತಕ್ಷಣ ಅದೇ ಸೆಕ್ಷನ್ ಅಡಿಯಲ್ಲಿ ದೂರನ್ನು ದಾಖಲಿಸಿಕೊಳ್ಳಲಾಗುತ್ತದೆ. ಆದ್ದರಿಂದ ನಾವು ಅದನ್ನು ಆ ಮಾಹಿತಿಯನ್ನು ಒಟ್ಟಾರೆಯಾಗಿ ಕೊಟ್ಟಿದ್ದೇವೆ. ಹೀಗಾಗಿ ಆ ಒಟ್ಟು ಪ್ರಕರಣಗಳಲ್ಲಿ ಕೇವಲ ಶೇಕಡ 5ರಷ್ಟು ಮಾತ್ರ ಮಹಿಳೆಯರು ಮತ್ತು ಮಕ್ಕಳ ಅಪಹರಣ ಪ್ರಕರಣಗಳಾಗಿವೆ.

ಕೇಂದ್ರ ಸರ್ಕಾರದಲ್ಲಿ ಕೂಡ ಹಿಂದೆ ಈ ಕಳ್ಳ ಸಾಗಾಣಿಕೆ ಪ್ರಮಾಣ ಬಹಳಷ್ಟಿತ್ತು, ಈಗ ಅದು ಬಹಳ ಕಡಿಮೆಯಾಗಿದೆ. ಅದಕ್ಕೆ ತಂಡಗಳನ್ನು ರಚನೆ ಮಾಡಿದ್ದೇವೆ. ಈಗಾಗಲೇ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬೆಳಗಾವಿ, ದಕ್ಷಿಣ ಕನ್ನಡದಲ್ಲಿ ಒಂದೊಂದು ತಂಡವನ್ನು ರಚನೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಈ ಅಪಹರಣ ಪ್ರಕರಣಗಳ ಸಂಖ್ಯೆಯನ್ನು ಮತ್ತಷ್ಟು ಕಡಿಮೆ ಮಾಡುವುದಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡು ಅದನ್ನು ತಡೆಯುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾವು ಎಲ್ಲಾ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಈ ರೀತಿಯ ಮಕ್ಕಳನ್ನು ನೋಡುತ್ತೇವೆ, ಅವರು ಯಾರೂ ಸಹ ನಮ್ಮ ರಾಜ್ಯದವರಲ್ಲ. ಅದೇ ರೀತಿ ನಮ್ಮ ರಾಜ್ಯದ ಮಕ್ಕಳು ಬೇರೆ ಬೇರೆ ರಾಜ್ಯದಲ್ಲಿರುತ್ತಾರೆ. ಈ ರೀತಿಯ ಸಾವಿರಾರು ಮಕ್ಕಳಿದ್ದಾರೆ. ಅವರೆಲ್ಲರೂ ಬೇರೆ ಬೇರೆ ರಾಜ್ಯದಿಂದ ಕಿಡ್ನಾಪ್ ಆಗಿರುವಂಥವರು. ಆದುದರಿಂದ ನಾವು ಹೇಳುವುದೇನೆಂದರೆ, ನಮ್ಮ ಪೊಲೀಸ್ ಇಲಾಖೆ ಇದರ ಬಗ್ಗೆ ಸರಿಯಾಗಿ ಆಲೋಚನೆ ಮಾಡುತ್ತಿಲ್ಲ, ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಎರಡು, ಮೂರು ವರ್ಷದಿಂದ ಈ ಬಗ್ಗೆ ನಾವು ಬಹಳಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ಹಿಂದೆ ಬೆಂಗಳೂರು, ಉತ್ತರ ಕರ್ನಾಟಕ ಹಾಗೂ ಇನ್ನಿತರ ಭಾಗಗಳಲ್ಲಿ ಹೆಣ್ಣು ಮಕ್ಕಳನ್ನು ಮಾರಾಟ ಮಾಡುತ್ತಿದ್ದರು. ಈಗ ಹೆಣ್ಣು ಮಕ್ಕಳ ಮಾರಾಟ ಮಾಡುವಂತಹ ಪ್ರಕರಣಗಳನ್ನು ಶೇಕಡ 100ರಷ್ಟು ತಡೆಗಟ್ಟುವಂತಹ ಕೆಲಸವನ್ನು ಮಾಡಿದ್ದೇವೆ. ಈ ವರ್ಷ ಆ ರೀತಿ ಯಾವುದೇ ಪ್ರಕರಣಗಳು ಬಂದಿಲ್ಲ, ನಮ್ಮ ಲೆಕ್ಕದಲ್ಲಿ ಬರುತ್ತಿರುವಂಥದ್ದು ಪ್ರೇಮಿಗಳು ಮನೆ ಬಿಟ್ಟು ಹೋಗಿರುವಂತಹ ಪ್ರಕರಣ ಅಥವಾ ಕೆಲಸವನ್ನು ಹುಡುಕಿಕೊಂಡು ಮನೆ ಬಿಟ್ಟು ಹೋಗಿರುವಂತಹ ಪ್ರಕರಣಗಳು ಬಂದಿವೆ. ಆದರೆ ಮಾನ್ಯ ಸದಸ್ಯರಾದಂತಹ ವೆಂಕಟೇಶ್‌ರವರು ಆ ರೀತಿಯಾದಂತಹ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಕಠಿಣ ಕ್ರಮವನ್ನು ಜರುಗಿಸುತ್ತೇವೆ. ಇದಕ್ಕಾಗಿಯೇ ಪ್ರತ್ಯೇಕ ತಂಡವನ್ನು ರಚಿಸಲಾಗಿದೆ. ಆ ತಂಡ ಇದನ್ನು ಸೂಪರ್‌ವೈಸ್ ಮಾಡುತ್ತದೆ. ಅದರಲ್ಲೂ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣದಲ್ಲಿ ಪ್ರತ್ಯೇಕವಾದಂತಹ ತಂಡಗಳು ಈ ರೀತಿಯಾದಂತಹ ಘಟನೆಗಳು ಜರುಗಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಾಯುತ್ತಿರುತ್ತವೆ. ಬಹಳಷ್ಟು ಪ್ರಕರಣಗಳಲ್ಲಿ ರೈಲ್ವೆ ಮುಖಾಂತರ ಹೋಗುವಂಥ ಮಕ್ಕಳನ್ನು ಮತ್ತು ಮಹಿಳೆಯರನ್ನು ಪುನಃ ವಾಪಸ್ಸು ಕರೆದುಕೊಂಡು ಬಂದು ಅವರಿಗೆ ಸರ್ಕಾರದ ವತಿಯಿಂದ ಪುನರ್ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಬಿ.ಪಿ.ಎಲ್. ಬಳಕೆದಾರರಿಗೆ ಉಚಿತ ವಿದ್ಯುತ್ ನೀಡುವ ಬಗ್ಗೆ**

**222; ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಬಿ.ಪಿ.ಎಲ್. ಬಳಕೆದಾರರಿಗೆ ಭಾಗ್ಯಜ್ಯೋತಿ/ಕುಟೀರ ಜ್ಯೋತಿಯಲ್ಲಿ ಒಂದೇ ದೀಪ ಮತ್ತು 20 ಯೂನಿಟ್‌ವರೆಗೆ ಇರುವ ಗರಿಷ್ಠ ಮಿತಿಯನ್ನು ಮುಂದುವರಿಸಲಾಗಿದೆಯೇ;

**ಆ)** ಹಾಗಿದ್ದಲ್ಲಿ, ಒಂದು ದೀಪ ಮತ್ತು 20 ಯೂನಿಟ್ ಮಿತಿಯನ್ನು ಕಾಲಕಾಲಕ್ಕೆ ಅನುಗುಣವಾಗಿ ಈ ಮಿತಿಯನ್ನು ಹೆಚ್ಚಿಸಲು ಸಾಧ್ಯವಿಲ್ಲವೇ;

**ಇ)** ಬಿ.ಪಿ.ಎಲ್. ಬಳಕೆದಾರರ ಫಲಾನುಭವಿಗಳಿಗೆ ಉಚಿತವಾಗಿ ವಿದ್ಯುತ್ತನ್ನು ನೀಡಲು ಸರ್ಕಾರ ಕ್ರಮ ಜರುಗಿಸಲಾಗುವುದೇ?

**ಶೋಭಾ ಕರಂದ್ಲಾಜೆ (ಇಂಧನ ಸಚಿವರು)**

**ಅ)** ದಿನಾಂಕ 15-03-2005ರ ಸರ್ಕಾರದ ಆದೇಶ ಸಂಖ್ಯೆ ಇಎನ್ 145 ಪಿಎಸ್ಆರ್ 2004 ರ ಪ್ರಕಾರ ಭಾಗ್ಯಜ್ಯೋತಿ/ಕುಟೀರಜ್ಯೋತಿ ಬಳಕೆದಾರರಿಗೆ ಒಂದು ಪಾಯಿಂಟ್‌ಗೆ ಮಿತಿಗೊಳಿಸಿ, ಮಾಹೆಯಾನ ಬಳಸಿದ 18 ಯೂನಿಟ್‌ಗಳವರೆಗೆ ಒಳಪಟ್ಟು ಉಚಿತ ವಿದ್ಯುತ್‌ನ್ನು ವಿದ್ಯುತ್ ಸರಬರಾಜು ಕಂಪನಿಗಳು ಪೂರೈಸುತ್ತಿವೆ.

**ಆ)** ಸಧ್ಯಕ್ಕೆ ಈ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿಲ್ಲ.

**ಇ)** ಭಾಗ್ಯಜ್ಯೋತಿ/ಕುಟೀರಜ್ಯೋತಿ ಬಳಕೆದಾರರಿಗೆ ಒಂದು ಪಾಯಿಂಟ್‌ಗೆ ಮಿತಿಗೊಳಿಸಿ, ಮಾಹೆಯಾನ ಬಳಸಿದ 18 ಯೂನಿಟ್‌ಗಳವರೆಗೆ ಒಳಪಟ್ಟು ಉಚಿತ ವಿದ್ಯುತ್‌ನ್ನು ವಿದ್ಯುತ್ ಸರಬರಾಜು ಕಂಪನಿಗಳು ಪೂರೈಸುತ್ತಿವೆ.

**ಶ್ರೀ ಭಾನುಪ್ರಕಾಶ್ (ವಿಧಾನ ಸಭಾ ಕ್ಷೇತ್ರ) (ಶ್ರೀ ಡಿ.ಎಸ್. ವೀರಯ್ಯನವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದಾರೆ. ಬಿ.ಪಿ.ಎಲ್ ಬಳಕೆದಾರರಿಗೆ ಭಾಗ್ಯಜ್ಯೋತಿ/ಕುಟೀರಜ್ಯೋತಿಯಲ್ಲಿ ಒಂದೇ ದೀಪ ಮತ್ತು 20 ಯೂನಿಟ್‌ವರೆಗೆ ಇರುವ ಗರಿಷ್ಠ ಮಿತಿಯನ್ನು ಮುಂದುವರಿಸಲಾಗಿದೆಯೇ ಎಂಬ ಪ್ರಶ್ನೆಗೆ ಉತ್ತರವಾಗಿ 2005ರಲ್ಲಿ ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಬಳಕೆದಾರರಿಗೆ ಒಂದು ಪಾಯಿಂಟ್‌ಗೆ ಮಿತಿಗೊಳಿಸಿ, ಮಾಹೆಯಾನ ಬಳಸಿದ 18 ಯೂನಿಟ್‌ಗಳವರೆಗೆ ಒಳಪಟ್ಟು ಉಚಿತ ವಿದ್ಯುತ್‌ನ್ನು ವಿದ್ಯುತ್ ಸರಬರಾಜು ಕಂಪನಿಗಳು ಪೂರೈಸುತ್ತಿವೆ

ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಸರ್ಕಾರ ಇದನ್ನು ಮರುಪರಿಶೀಲನೆ ಮಾಡಬೇಕೆಂಬುದು ನನ್ನ ಆಗ್ರಹ. ಏಕೆಂದರೆ, ಸರ್ಕಾರ ಶಿಕ್ಷಣಕ್ಕೆ ಹೆಚ್ಚು ಆಧ್ಯತೆ ಕೊಟ್ಟು ಕೆಲಸ ಮಾಡುತ್ತಿರುವಂಥ ಸಂದರ್ಭದಲ್ಲಿ ಬಡವರ ಮನೆಯ ಸಾಕಷ್ಟು ಮಕ್ಕಳು ಸಹ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಗೆ ಓದುವಂತಹ ಪರಿಸ್ಥಿತಿಗೆ ಬಂದು ಮುಟ್ಟಿದ್ದಾರೆ. ಹಾಗಾಗಿ ಬಡವರ ಮನೆ ಎಂದರೆ 15X20 ಅಡಿ ಅಳತೆಯ ಸೈಟಿನಲ್ಲಿರುತ್ತದೆ. ಆ ಮನೆಗೆ ಒಂದೇ ಒಂದು ದೀಪ ಕೊಟ್ಟರೆ ತಂದೆ ತಾಯಿ ಮಲಗಿದಾಗ ಮಕ್ಕಳು ಹೇಗೆ ಓದಬೇಕು, ಒಂದು ವೇಳೆ ತಂದೆ–ತಾಯಿ ಒಳಗಡೆ ಮಲಗಿದಾಗ ಹೊರಗಡೆ ಒಂದು ದೀಪವನ್ನು ಹಾಕುವುದಕ್ಕೆ ಅವಕಾಶ ಕೊಟ್ಟರೆ, ಅವರು ಹೊರಗಡೆ ದೀಪ ಹಾಕಿಕೊಂಡು ಓದುತ್ತಾರೆ. ಮಕ್ಕಳ ಹಿತದೃಷ್ಟಿಯಿಂದ ಮತ್ತು ಸಂಸಾರದ ಹಿತದೃಷ್ಟಿಯಿಂದ ದಯಮಾಡಿ ಇದನ್ನು ಪರಿಶೀಲನೆ ಮಾಡಿ, ಮೂರು ದೀಪಗಳಿಗೆ ಇದನ್ನು ವಿಸ್ತಾರ ಮಾಡಿಕೊಡಬೇಕು ಮತ್ತು 25 ಯೂನಿಟ್‌ಗಳವರೆಗೆ ಜಾಸ್ತಿ ಮಾಡುವುದಕ್ಕೆ ಸರ್ಕಾರದ ಯೋಚನೆ ಏನಾದರು ಇದೆಯೇ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ.

**ಕುಮಾರಿ. ಶೋಭಾ ಕರಂದ್ಲಾಜೆ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ 31/03/2012ರ ಅಂತ್ಯಕ್ಕೆ ಸುಮಾರು ಇಪ್ಪತ್ತೈದು ಲಕ್ಷದ ಎರಡು ಸಾವಿರ ಐನೂರ ಎಂಭತ್ತಾರು ಮನೆಗಳು ಕುಟೀರ ಜ್ಯೋತಿ ಮತ್ತು ಭಾಗ್ಯಜ್ಯೋತಿ ಯೋಜನೆಯ ಉಪಯೋಗವನ್ನು ಪಡೆದುಕೊಂಡಿದೆ. ಇಪ್ಪತ್ತೈದು ಲಕ್ಷ ಎಂದರೆ ಎಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆಂದು ತಮಗೆ ತಿಳಿಯಬಹುದು. ಈ ವರ್ಷ ಮುಖ್ಯವಾಗಿ ನಾವು ಬಹಳ ಕೆಟ್ಟ ಬರಗಾಲದಲ್ಲಿದ್ದೇವೆ. ನಮ್ಮ ಜಲಾಶಯಗಳಲ್ಲಿ ನೀರಿಲ್ಲ. ಬರುವಂತಹ ದಿನಗಳಲ್ಲಿ ಅಂದರೆ ಇನ್ನೊಂದು ತಿಂಗಳಲ್ಲಿ ಮಳೆ ಬರದಿದ್ದರೆ ಲಿಂಗನಮಕ್ಕಿ ಮತ್ತು ಸೂಪರ್ ಡ್ಯಾಂಗಳಿಗೆ ನೀರು ಬರಲಿಲ್ಲ ಎಂದರೆ ವಿದ್ಯುತ್ ಖರೀದಿ ಮಾಡಿಯೇ ಜನರಿಗೆ ಕೊಡುವಂತಹ ದುಸ್ಥಿತಿ ಬರುತ್ತದೆ. ಬರುವಂತಹ ದಿನಗಳಲ್ಲಿ ಬಹಳ ದೊಡ್ಡ ಸಂಕಷ್ಟವನ್ನು ಎದುರಿಸುವುದಕ್ಕೆ ನಾವು ಸಜ್ಜಾಗಬೇಕಾಗಿದೆ. ಇಂತಹ ಸ್ಥಿತಿಯಲ್ಲಿ ನಾನು ಯಾವುದೇ ಭರವಸೆಯನ್ನು

ಕೊಡುವ ಸ್ಥಿತಿಯಲ್ಲಿಲ್ಲ. ಆದರೆ ಮುಂದಿನ ದಿನಗಳಲ್ಲಿ ಅಂದರೆ ನಮ್ಮ ಪರಿಸ್ಥಿತಿ ಸುಧಾರಣೆ ಆದಮೇಲೆ ನಾವು ಇದರ ಬಗ್ಗೆ ಯೋಚನೆಯನ್ನು ಮಾಡಬಹುದೇ ಹೊರತು ಈ ವರ್ಷ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಕಳೆದ ವರ್ಷ ಈ ಅವಧಿಗೆ ಡ್ಯಾಂಗಳಲ್ಲಿ ಸುಮಾರು 80 ಟಿಎಂಸಿ ನೀರಿತ್ತು. ಆದರೆ ಈ ವರ್ಷ ಕೇವಲ 30 ಟಿಎಂಸಿ ನೀರಿದೆ. ಅಂದರೆ ಇಷ್ಟೊಂದು ದೊಡ್ಡ ಪ್ರಮಾಣದ ವ್ಯತ್ಯಾಸ ಕಳೆದ ವರ್ಷ ಮತ್ತು ಈ ವರ್ಷಕ್ಕೆ ಇದೆ.

ಇದರ ಜೊತೆಗೆ ಪ್ರತಿದಿನದ ಬೇಡಿಕೆ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ಬರುತ್ತಿದೆ. ಕಳೆದ ವರ್ಷದ ಜುಲೈ ತಿಂಗಳಿಗೂ, ಈ ವರ್ಷದ ಜುಲೈ ತಿಂಗಳಿಗೂ ಹೋಲಿಕೆ ಮಾಡಿದರೆ ಸುಮಾರು ಶೇಕಡ 24ರಷ್ಟು ಬೇಡಿಕೆ ಜಾಸಿಯಾಗಿದೆ. ಕಾರಣ ಪಂಪ್‌ಸೆಟ್ ಜಾಸ್ತಿಯಾಗಿರಬಹುದು, ಅಥವಾ ಬೋರ್‌ವೆಲ್‌ಗಳನ್ನು ಹೆಚ್ಚು ಕೊರೆದಿರಬಹುದು. ಒಂದು ಬೋರ್‌ವೆಲ್ ಕೊರೆದಾಗ ಅದರಲ್ಲಿ ನೀರು ಬರದೆ ಇದ್ದರೆ ಅದರ ಪಕ್ಕದಲ್ಲಿಯೇ ಇನ್ನೊಂದು ಬೋರ್‌ವೆಲ್ ಕೊರೆಯುತ್ತಾರೆ. ಸಹಜವಾಗಿ ವಿದ್ಯುತ್ ಉಪಯೋಗಿಸುವುದು ಜಾಸ್ತಿಯಾಗುತ್ತದೆ. ಮಳೆ ಕಡಿಮೆ ಇರುವ ಕಾರಣ ಯಾವುದೇ ಡ್ಯಾಂಗೆ ನೀರು ಬರುತ್ತಿಲ್ಲ. ಈ ಕಾರಣಕ್ಕಾಗಿ ಈ ವರ್ಷದಲ್ಲಿ ವಿದ್ಯುತ್ ಸಮಸ್ಯೆ ಹೆಚ್ಚು ಕಾಡಬಹುದು ಎನ್ನಿಸುತ್ತಿದೆ. ವಿದ್ಯುತ್ ಖರೀದಿ ಮಾಡೋಣ ಎಂದರೆ ನಮ್ಮ ದುರಾದೃಷ್ಟಕ್ಕೆ ಉತ್ತರದಿಂದ ಯಾವುದೇ ರಾಜ್ಯದಿಂದ ನಮಗೆ ಕಾರಿಡಾರ್ ಸಿಗುತ್ತಿಲ್ಲ. ಈ ಕಾರಣಕ್ಕೆ ನಮಗೆ ಸಮಸ್ಯೆ ಉಂಟಾಗಿದೆ. ಮುಂದಿನ ದಿನಗಳಲ್ಲಿ ನಾವು ವಿದ್ಯುತ್‌ನ ಪೂರೈಕೆ ಅಥವಾ ಉತ್ಪಾದನೆ ಹೆಚ್ಚಾದಂತಹ ಸಂದರ್ಭದಲ್ಲಿ ಈ ವಿಷಯವನ್ನು ಪರಿಗಣಿಸಲಾಗುವುದು ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

## ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡುವ ಬಗ್ಗೆ

## 702; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)

ಅ) ವಿದ್ಯುತ್ ಕೊರತೆಯಿಂದಾಗಿ ಗದಗ್ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿನ ರೈತರು ತೀವ್ರ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಗದಗ್, ಧಾರವಾಡ ಮತ್ತು ಹಾವೇರಿ ಭಾಗದ ರೈತರ ನೀರಾವರಿ ಪಂಪ್‌ಗಳಿಗೆ ಮತ್ತು ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ವಿದ್ಯುತ್ ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು;

ಇ) ಸಂಪೂರ್ಣ ಸೋಲಾರ ಗ್ರಾಮಗಳನ್ನು ಸ್ಥಾಪಿಸುವುದು ಮತ್ತು ಗಾಳಿ ವಿದ್ಯುತ್ ಯೋಜನೆಗಳ ಮೂಲಕ ಈ ಸಮಸ್ಯೆಗೆ ಪರಿಹಾರ ನೀಡಲಾಗುವುದೇ?

### ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು)

ಅ) ಗದಗ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳೂ ಸೇರಿದಂತೆ ರಾಜ್ಯಾದ್ಯಂತ ವಿದ್ಯುತ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ:–** ಕೊರತೆ ಇರುವ ವಿದ್ಯುತ್ತನ್ನು ಸ್ವಲ್ಪ ಮಟ್ಟಿಗೆ ಸರಿದೂಗಿಸಲು ಪ್ರಸಕ್ತ ವರ್ಷದಲ್ಲಿ 1280 ಮೆ.ವ್ಯಾ.ನಷ್ಟು ವಿದ್ಯುತ್ತನ್ನು ಹೆಚ್ಚುವರಿಯಾಗಿ ಖರೀದಿಸಲಾಗುತ್ತಿದೆ.

ಹೆಸ್ಕಾಂ ವ್ಯಾಪ್ತಿಯ ಗದಗ್, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಾಗೂ ಗ್ರಾಮೀಣ ಭಾಗದ ಕುಡಿಯುವ ನೀರು ಯೋಜನೆಗಳಿಗೆ ದಿನವಹಿ 6 ಗಂಟೆಗಳ ಕಾಲ 3ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ. ಹೆಸ್ಕಾಂ ವ್ಯಾಪ್ತಿಯ

ನಗರ ಪ್ರದೇಶಗಳಲ್ಲಿನ ಕುಡಿಯುವ ನೀರು ಯೋಜನೆಗಳಿಗೆ 24 ಗಂಟೆಗಳ ಕಾಲ 3 ಫೇಸ್‌ನಲ್ಲಿ ವಿದ್ಯುತ್ ಪೂರೈಸಲಾಗುತ್ತಿದೆ.

**ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ:–** ವಿದ್ಯುತ್ ಕೊರತೆ ಎದುರಿಸುತ್ತಿರುವ ಜಿಲ್ಲೆಗಳಲ್ಲಿ ಹಾಗೂ ನೀರಿನ ಮಟ್ಟ 150 ಅಡಿ ಮೇಲ್ಪಟ್ಟಿರುವ ರೈತರ ನೀರಾವರಿ ಪಂಪ್‌ಗಳಿಗೆ ಹಾಗೂ ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಸೋಲಾರ್ ಮುಖಾಂತರ ವಿದ್ಯುತ್ ಒದಗಿಸಲು ಕೇಂದ್ರ ಸರ್ಕಾರದಿಂದ ಪ್ರತಿಶತ 30 ರಷ್ಟು ಅನುದಾನ ನೀಡಲಾಗುತ್ತಿದೆ. ರಾಜ್ಯ ಸರ್ಕಾರದ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗಳನ್ನು ಹಂತಹಂತವಾಗಿ ಕೈಗೊಳ್ಳಲಾಗುವುದು.

ಇ) ಪವನ ವಿದ್ಯುತ್ ಅನಿಶ್ಚಿತವಿದ್ದು, ಸೋಲಾರ್ ವಿದ್ಯುತ್ ಈಗಲೂ ದುಬಾರಿಯಾಗಿದೆ. ಈ ಯೋಜನೆಗಳು ಒಂದು ಹಳ್ಳಿಯ ಪೂರ್ಣ ಅಗತ್ಯಗಳನ್ನು ಪೂರೈಸಲು ವೆಚ್ಚ ಹಾಗೂ ನಿಶ್ಚಿತ ಪೂರೈಕೆಯ ದೃಷ್ಟಿಯಿಂದ ಸಮರ್ಪಕವಾಗಿರುವುದಿಲ್ಲ. ಎಲ್ಲೆಲ್ಲಿ ಸಾಧ್ಯವಾಗುತ್ತದೋ ಅಂತಹ ಸ್ಥಳಗಳಲ್ಲಿ ಈ ಯೋಜನೆಗಳ ಅನುಷ್ಠಾನವನ್ನು ಮಾಡಲು ನೋಡಲ್ ಸಂಸ್ಥೆಯಾದ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಕ್ರಮ ಕೈಗೊಳ್ಳುತ್ತದೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ವಿದ್ಯುತ್ ಕೊರತೆಯಿಂದಾಗಿ ಗದಗ್, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿನ ರೈತರು ತೀವ್ರ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರವಾಗಿ ಗದಗ್, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲೂ ಸೇರಿದಂತೆ ರಾಜ್ಯಾದ್ಯಂತ ವಿದ್ಯುತ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ನನಗೆ ತಿಳಿದಿರುವ ಮಟ್ಟಿಗೆ ಅಲ್ಲಿ ವಿದ್ಯುತ್ ಕೊರತೆ ಬಹಳ ಜಾಸ್ತಿ ಇದೆ. ಎಲ್ಲಾ ಜಲಾವಿದ್ಯುತ್ ಕೇಂದ್ರಗಳಿಂದ ನಾವು ಎಷ್ಟು ವಿದ್ಯುತ್ ಉತ್ಪಾದನೆ

ಮಾಡಬಹುದಾಗಿತ್ತು, ಅಷ್ಟು ನೈಸರ್ಗಿಕ ತೊಂದರೆಯಿಂದ ಉತ್ಪಾದನೆ ಮಾಡುವುದಕ್ಕೆ ಆಗುತ್ತಿಲ್ಲ. ಆದರೆ ರಾಯಚೂರಿನಲ್ಲಿರುವಂತಹ ರಾಯಚೂರ್ ಥರ್ಮಲ್ ವಿದ್ಯುತ್ ಘಟಕದಲ್ಲಿ ಕಲ್ಲಿದ್ದಿಲಿನಿಂದ ಏನು ವಿದ್ಯುತ್ ಉತ್ಪಾದನೆ ಮಾಡುತ್ತೇವೆ ಅವುಗಳು ಪ್ರತಿಶತ ಆರರಲ್ಲಿ ನಾಲ್ಕು ಘಟಕಗಳು ಹಲವಾರು ತೊಂದರೆಗಳಿಂದ ಕೆಲಸ ನಿರ್ವಹಿಸುತ್ತಿಲ್ಲ. ಅಂದರೆ ಅದು ಟೆಕ್ನಿಕಲ್ ತೊಂದರೆಯಿಂದ ಇರಬಹುದು, ಆಡಳಿತಾತ್ಮಕವಾದಂತಹ ತೊಂದರೆಯಿಂದ ಇರಬಹುದು ಅಥವಾ ಕಲ್ಲಿದ್ದಲಿನ ಸಮಸ್ಯೆ ಇರಬಹುದು. ಆದುದರಿಂದ ಅದಕ್ಕೆ ನಿಶ್ಚಿತವಾದ planning ಮಾಡಿಕೊಂಡು ಅವುಗಳು ಕೆಲಸ ನಿರ್ವಹಿಸುವುದಕ್ಕೆ ಹೆಚ್ಚು ಆಧ್ಯತೆಯನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಎರಡನೆಯದಾಗಿ ಹೇಳಬಯಸುವುದೇನೆಂದರೆ, ಈಗಿರುವಂತಹ ಪರಿಸ್ಥಿತಿಯಲ್ಲಿ 24 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಪೂರೈಸುವುದಕ್ಕೆ ಆಗುವುದಿಲ್ಲ. ಅದು ನಮಗೂ ಸಹ ತಿಳಿದಿರುವಂತಹ ವಿಷಯ. ಆದರೆ ಹೆಸ್ಕಾಂ ವ್ಯಾಪ್ತಿಯ ಗದಗ್, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಾಗೂ ಗ್ರಾಮೀಣ ಭಾಗದ ಕುಡಿಯುವ ನೀರು ಯೋಜನೆಗಳಿಗೆ ದಿನವಹಿ ಆರು ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ. ಅದನ್ನು ಯಾವ ಸಮಯದಲ್ಲಿ ಕೊಡುತ್ತೀರಿ? ಅಂದರೆ ನಿರ್ಧಿಷ್ಟ ವೇಳೆಯಲ್ಲಿ ಕೊಡುತ್ತೀರಿ ಎಂಬುದನ್ನು ಪತ್ರಿಕೆಗಳ ಮುಖಾಂತರವಾಗಲಿ ಅಥವಾ ಪ್ರಕಟಣೆಗಳ ಮುಖಾಂತರವಾಗಿ ತಿಳಿಸಬೇಕು. ಇಲ್ಲದೆ ಹೋದರೆ ರೈತರಿಗೆ ಯಾವಾಗ ನೀರನ್ನು ಹಾಯಿಸಬೇಕು ಎಂಬುದು ಗೊತ್ತಾಗುವುದಿಲ್ಲ. ವಿದ್ಯಾರ್ಥಿಗಳಿಗೂ ಸಹ ಸಮಸ್ಯೆಯಾಗುತ್ತದೆ. ಆದಕಾರಣ ಸರ್ಕಾರ ಅದರ ಕಡೆ ಹೆಚ್ಚು ಗಮನ ಹರಿಸಿ ಕೆಲಸ ಮಾಡಬೇಕು. ಪ್ರತೀ ವರ್ಷ ವಿದ್ಯುತ್ ಬೇಡಿಕೆ ಶೇಕಡ 13ರಿಂದ ಶೇಕಡ 24ರಷ್ಟು ಹೆಚ್ಚಾಗುತ್ತಿದೆ. ಆ ದೃಷ್ಟಿಯಿಂದ ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಸೌರಶಕ್ತಿಯಿಂದ ಏಕೆ ವಿದ್ಯುತ್ ಕೊಡುವಂತಹ ಪ್ರಯತ್ನ ಮಾಡಬಾರದೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಕುಮಾರಿ. ಶೋಭಾ ಕರಂದ್ಲಾಜೆ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಬಳ್ಳಾರಿ ಮತ್ತು ರಾಯಚೂರಿನಲ್ಲಿ ಏಕೆ ವಿದ್ಯುತ್ ಸುಧಾರಣೆ ಮಾಡುವುದಕ್ಕೆ ಆಗುತ್ತಿಲ್ಲವೆಂದು ಕೇಳುತ್ತಿದ್ದಾರೆ. ಇವತ್ತು ಬಳ್ಳಾರಿಯ ಮೊದಲನೆ ಘಟಕ ಆರಂಭವಾಗಿದೆ. ಈಗ ಅಲ್ಲಿ ಗರಿಷ್ಠ ವಿದ್ಯುತ್ ಉತ್ಪಾದನೆ ಆಗುತ್ತಿದೆ. ನಾವು ಕಳೆದ ಫೆಬ್ರವರಿ 23ನೇ ತಾರೀಖಿಗೆ ಎರಡನೇ ಘಟಕದಲ್ಲಿ 500 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲು ಪ್ರಾರಂಭಿಸಬೇಕಾಗಿತ್ತು. ಆದರೆ ಕಲ್ಲಿದ್ದಲಿನ ಕೊರತೆಯಿಂದಾಗಿ ಇದು ಮುಂದಕ್ಕೆ ಹೋಗಿದೆ. ಆಗಸ್ಟ್ ಮೊದಲನೆ ವಾರದಲ್ಲಿ ಈ ಘಟಕವನ್ನು ಪ್ರಾರಂಭಿಸಬಹುದು. ಆಗ ಹೊಸದಾಗಿ ನಮ್ಮ ಗ್ರಿಡ್‌ಗೆ ಸುಮಾರು 500 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಬರುತ್ತದೆ. ಇದು ನಮಗೆ ಪ್ಲಸ್ ಪಾಯಿಂಟ್ ಆಗುತ್ತದೆ.

ಎರಡನೆಯದಾಗಿ, ತಮಗೆಲ್ಲರಿಗೂ ತಿಳಿದಿರುವಂತೆ ಮೊದಲನೆಯ ಮತ್ತು ಎರಡನೆಯ ಘಟಕ ಸುಮಾರು 25 ವರ್ಷಗಳಷ್ಟು ಹಳೆಯದಾದಂತಹ ಘಟಕ. ಹಾಗಾಗಿ ಒಂದಲ್ಲಾ ಒಂದು ಸಮಸ್ಯೆ ಬರುತ್ತದೆ. ಯಾವಾಗ ರಿಪೇರಿ ಮಾಡಿಸಬೇಕು ಎಂಬುದೇ ಈಗ ಕಾಡುತ್ತಿರುವಂಥ ಪ್ರಶ್ನೆ. ಕಾರಣ ಇದನ್ನು ರಿಪೇರಿ ಮಾಡಿಸಬೇಕೆಂದರೆ ಸುಮಾರು ಆರೇಳು ತಿಂಗಳುಗಳು ಬೇಕಾಗುತ್ತದೆ. ಸಹಜವಾಗಿ ಪ್ರತೀವರ್ಷ ನಾವು ಎಲ್ಲಾ ಯೂನಿಟ್‌ಗಳನ್ನು maintenance ಗೆಂದು ಮಳೆಗಾಲದ ಸಮಯದಲ್ಲಿ ತೆಗೆದುಕೊಳ್ಳುತ್ತೇವೆ. ಜೂನ್ ತಿಂಗಳಿನಿಂದ ಡಿಸೆಂಬರ್ ತಿಂಗಳಿನವರೆಗೆ ಒಂದಾದ ಮೇಲೆ ಒಂದು ಯೂನಿಟ್‌ನ್ನು maintenance ಗೆಂದು ತೆಗೆದುಕೊಳ್ಳುತ್ತೇವೆ. ಆದರೆ ಈ ವರ್ಷ ಬರಗಾಲ ಬಂದಿರುವುದರಿಂದ ಈಗ ಮಳೆಗಾಲ ಎಂದು ಅನ್ನಿಸುತ್ತಿಲ್ಲ. ಹಾಗಾಗಿ ಇದು ಸಮಸ್ಯೆಯಾಗಿದೆ. ಈ ಕಾರಣಕ್ಕಾಗಿ ನಾವು ಸಹಜವಾಗಿ ವರ್ಷದ maintenance ಮಾಡಬೇಕು. ಇಲ್ಲವೆಂದರೆ ಜನವರಿ ತಿಂಗಳ ನಂತರ ಸಹಜವಾಗಿ ನಮಗೆ ಸಮಸ್ಯೆ ಉಂಟಾಗುತ್ತದೆ. ಏಕೆಂದರೆ ಜನವರಿ ತಿಂಗಳ ನಂತರ ನಿಜವಾದ ಬೇಸಿಗೆ ಪ್ರಾರಂಭವಾಗುತ್ತದೆ. ಈಗಾಗಲೇ ನಮ್ಮ ಬಹಳಷ್ಟು ಯೂನಿಟ್‌ಗಳು maintenance ನಲ್ಲಿವೆ. ಗುಜರಾತಿನಲ್ಲಿ ಈ ರೀತಿ ಹಳೆಯದಾದಂತಹ ವಿದ್ಯುತ್ ಘಟಕವನ್ನು ಯಾವುದೋ ಒಂದು ಕಂಪನಿಯ

ಮೂಲಕ World Technology ಯೋಜನೆಯ ಮೂಲಕ ನಾಲ್ಕೈದು ತಿಂಗಳುಗಳಲ್ಲಿ ರಿಪೇರಿ ಮಾಡಿಸುತ್ತಿದ್ದಾರೆ ಎಂಬ ಮಾಹಿತಿ ಬಂದಿದೆ. ಆದಕಾರಣ ಅದರ ಬಗ್ಗೆಯೇ ಅಭ್ಯಾಸ ಮಾಡುವುದಕ್ಕೆ ನಮ್ಮ ಸಿಬ್ಬಂದಿಯನ್ನು ಕಳುಹಿಸಿದ್ದೇನೆ. ಅಲ್ಲಿ ರಿಪೇರಿ ಕಾರ್ಯ ಬೇಗ ಆದರೆ ನಮ್ಮ ರಾಜ್ಯದಲ್ಲಿರುವಂತಹ ತುಂಬಾ ಹಳೇಯದಾದಂತಹ ಮೊದಲನೆ ಮತ್ತು ಎರಡನೆ ಯೂನಿಟ್‌ಗಳ ರಿಪೇರಿಗಾಗಿ ವಿಶೇಷ ಪ್ರಯತ್ನವನ್ನು ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಮತ್ತೊಂದು ವಿಷಯವನ್ನು ಹೇಳಿದರು. ಏನೆಂದರೆ, ಸರ್ಕಾರ ಆರು ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದಿರಿ. ಅದನ್ನು ಯಾವ ಸಮಯದಲ್ಲಿ ಕೊಡುತ್ತೀರ ಅಂದರೆ ನಿರ್ಧಿಷ್ಟ ವೇಳೆಯಲ್ಲಿ ಕೊಡುತ್ತೀರಿ, ಯಾವಾಗ ವಿದ್ಯುತ್ ಕಟ್ ಮಾಡುತ್ತೀರಿ ಎಂಬುದನ್ನು ಎಂಬುದನ್ನು ಪತ್ರಿಕೆಗಳ ಮುಖಾಂತರವಾಗಲಿ ಅಥವಾ ಪ್ರಕಟಣೆಗಳ ಮುಖಾಂತರವಾಗಿ ತಿಳಿಸಬೇಕು. ಇಲ್ಲದೆ ಹೋದರೆ ರೈತರಿಗೆ ಯಾವಾಗ ನೀರನ್ನು ಹಾಯಿಸಬೇಕು ಎಂಬುದು ಗೊತ್ತಾಗುವುದಿಲ್ಲ. ವಿದ್ಯಾರ್ಥಿಗಳು ಸಹ ಸಮಸ್ಯೆಯಾಗುತ್ತದೆ. ಸಹಜವಾಗಿ ತಮಗೆ ತಿಳಿದಿರುವಂತೆ ಹಗಲಿನಲ್ಲಿ ಇಷ್ಟು ಸಮಯ, ರಾತ್ರಿ ವೇಳೆಯಲ್ಲಿ ಇಷ್ಟು ಸಮಯ ಎಂದು ಕೊಡುತ್ತಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಸರ್ಕಾರ ವಿದ್ಯುತ್ ಅನ್ನು ಯಾವಾಗ ಬೇಕಾದರೂ ಎಷ್ಟು ಗಂಟೆಯಾದರು ಕೊಡಲಿ, ಅದರ ಸಮಸ್ಯೆ ಏನು ಎಂದು ನಮಗೂ ಸಹ ತಿಳಿದಿದೆ. ಆದರೆ ಅದಕ್ಕೆಂದೇ ಒಂದು ಸಮಯ ನಿಗದಿಪಡಿಸಬೇಕು. ಆಯಾಯಾ ಏರಿಯಾಗೆ ಒಂದು ಟೈಂ ಫಿಕ್ಸ್ ಮಾಡಬೇಕು. ಆ ರೀತಿ ಮಾಡಿದರೆ ಜನರು ಆ ಸಮಯದಲ್ಲಿ ತಮ್ಮ ಎಲ್ಲಾ ಕೆಲಸಗಳನ್ನು ಪೂರೈಸಿಕೊಳ್ಳುತ್ತಾರೆ. ಆದರೆ ಇಲ್ಲಿ ಏನಾಗುತ್ತಿದೆ ಎಂದರೆ ಒಂದು ಸಲ ಹತ್ತು ಗಂಟೆಗೆ ಕೊಡುತ್ತೇವೆಂದು ಹೇಳುತ್ತಾರೆ, ಮತ್ತೊಮ್ಮೆ ಎರಡು ಗಂಟೆಗೆ

ಕೊಡುತ್ತೇವೆಂದು ಹೇಳುತ್ತಾರೆ. ಈ ರೀತಿ ಆಗುತ್ತಿರುವುದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತಿದೆ.

**2–30 ಗಂಟೆ**

**ಶ್ರೀ ಬಸವರಾಜ ಹೊರಟ್ಟಿ:–** ನೀವು ಯಾವಾಗಾದರೂ ಕೊಡಿ, ಎಷ್ಟಾದರು ವಿದ್ಯುತ್ ಕೊಡಿ, ಆದರೆ ಆಯಾ ಏರಿಯಾ ಪ್ರಕಾರ ಸಮಯವನ್ನು ನಿಗದಿ ಮಾಡಿ. ಏಕೆಂದರೆ ಒಂದು ಸಾರಿ 10 ಗಂಟೆಗೆ ಕೊಟ್ಟರೆ ಇನ್ನೊಂದು ಸಾರಿ 4 ಗಂಟೆಗೆ ಕೊಡುತ್ತಾರೆ. ಇದರಿಂದ ರೈತರ ಕೆಲಸಗಳು ಆಗುವುದಿಲ್ಲ. ವಿದ್ಯುತ್ ಸಮಸ್ಯೆ ಎಲ್ಲರಿಗೂ ಗೊತ್ತಿದೆ. ಸಮಯವನ್ನು ನಿಗದಿ ಮಾಡಿದರೆ ರೈತರು ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಹಾಗೂ ಹೇಳಿದ ಸಮಯಕ್ಕೆ ಸರಿಯಾಗಿ ಕೊಡಿ.

**ಕುಮಾರಿ ಶೋಭಾ ಕರಂದ್ಲಾಜೆ:–** ಮಾನ್ಯ ಸಭಾಪತಿಗಳೆ, ಬೆಸ್ಕಾಂ ಏರಿಯಾದಲ್ಲಿ ಇದನ್ನು ಪ್ರಾಯೋಗಿಕವಾಗಿ ಪ್ರಾರಂಭ ಮಾಡಿದ್ದೇವೆ. ಸಮಯ ನಿಗದಿ ಮಾಡಿ ತಿಂಗಳಗಟ್ಟಲೆ ಮಾಡಿದರೆ ರೈತರು ಗಲಾಟೆ ಮಾಡುತ್ತಾರೆ. ನಮಗೆ ಇಷ್ಟು ಸಮಯಕ್ಕೆ ಬೇಕು ಎನ್ನುತ್ತಾರೆ. ಅದಕ್ಕಾಗಿ ಅದು turning ನಲ್ಲಿ ಆಗುತ್ತದೆ. 10 ಅಥವಾ 15 ದಿನಕ್ಕೆ ಒಂದು ಸಾರಿ ಯಾವ–ಯಾವ ಏರಿಯಾಕ್ಕೆ ಯಾವ ಸಮಯದಲ್ಲಿ ವಿದ್ಯುತ್ ಕೊಡಲಾಗುತ್ತದೆ ಎನ್ನುವುದನ್ನು ನಿಗದಿ ಮಾಡುತ್ತೇವೆ.

**ಪ್ರೊ: ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಗಳೆ, ಮಾನ್ಯ ಮತ್ತಿಕಟ್ಟಿ ಸಾಹೇಬರ ಇನ್ನೊಂದು ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ನಾನು ಅದನ್ನೆ ಕೇಳಬೇಕು ಎಂದುಕೊಂಡಿದ್ದೆ. ಬಹಳ ಬಿಸಿಲು ಇರುವ ಗ್ರಾಮಗಳನ್ನು ಆರಿಸಿಕೊಂಡು ಅಲ್ಲಿ ಪೂರ್ತಿ ಸೋಲಾರ್‌ನ್ನು ಅಳವಡಿಸಿ ವಿದ್ಯುತ್‌ನ್ನು ಪಡೆಯುವಂತಹ ಪ್ರಯತ್ನವನ್ನು ಏಕೆ ಮಾಡಬಾರದು. ಇದರಿಂದ ಮನೆಗಳಿಗೆ ವಿದ್ಯುತ್‌ನ್ನು ಕೊಡಲು ಅನುಕೂಲವಾಗುತ್ತದೆ. ಮತ್ತು ಆಗುತ್ತಿರುವ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಿದ ಹಾಗೆ ಆಗುತ್ತದೆ. ಇದನ್ನು

ಪ್ರಾಯೋಗಿಕವಾಗಿ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಕುಮಾರಿ ಶೋಭಾ ಕರಂದ್ಲಾಜೆ:–** ಮಾನ್ಯ ಸಭಾಪತಿಗಳೆ, ಸೋಲಾರ್ ಗ್ರಾಮಗಳನ್ನಾಗಿ ಈ ವರ್ಷ ಸುಮಾರು 150 ರಿಂದ 180 ಗ್ರಾಮಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದ್ದೇವೆ. ಕ್ರೆಡಿಲ್ ಸಂಸ್ಥೆಯಿಂದ ಅದಕ್ಕಾಗಿ ಹಣವನ್ನು ಮೀಸಲಿಡಲಾಗಿದೆ. ಈ ರೀತಿ ಮಾಡಿ ವಿಶೇಷವಾಗಿ ಬೀದಿ ದೀಪಗಳಿಗೆ ಸೋಲಾರ್‌ನ್ನು ಅಳವಡಿಸಬೇಕು, ಮತ್ತು ಎಲ್ಲಿ 200–300 ಅಡಿಗೆ ನೀರು ಸಿಗುತ್ತದೆ. ಅಂತಹ ಕಡೆಗಳಲ್ಲಿ ಪಂಪ್‌ಗೆ ಅಳವಡಿಸಬೇಕೆನ್ನುವ ಪ್ರಯತ್ನವನ್ನು ನಾವು ಈ ವರ್ಷ ಮಾಡುತ್ತಿದ್ದೇವೆ.

**ಸಾರಿಗೆ ಸಂಸ್ಥೆಯಲ್ಲಿ ತರಬೇತಿ ನಿರತ ಸಿಬ್ಬಂದಿಯ ವೇತನ ಹೆಚ್ಚಿಸುವ ಬಗ್ಗೆ**

**677; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

**ಅ)** ಸಾರಿಗೆ ಸಂಸ್ಥೆಯ ವಿವಿಧ ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ತರಬೇತಿ ನಿರತ ಸಿಬ್ಬಂದಿ ಎಷ್ಟು; ಯಾವ ಯಾವ ಹುದ್ದೆಗಳಲ್ಲಿ ತರಬೇತಿ ನಿರತ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ; (ನಿಗಮವಾರು ಸಂಪೂರ್ಣ ವಿವರ ನೀಡುವುದು):

**ಆ)** ತರಬೇತಿನಿರತ ಸಿಬ್ಬಂದಿಗೆ ಯಾವ ಪ್ರಕಾರ ವೇತನ ನೀಡಲಾಗುತ್ತಿದೆ: ಇವರಿಗೆ ನೀಡುತ್ತಿರುವ ವೇತನ ಎಷ್ಟು;

**ಇ)** ಸಾರಿಗೆ ಸಚಿವರು ತರಬೇತಿ ನಿರತ ಸಿಬ್ಬಂದಿಗೆ ಒಂದು ಸಾವಿರ ವೇತನ ಹೆಚ್ಚಿಸುವುದಾಗಿ ಹೇಳಿಕೆ ನೀಡಿರುವ ಸಂಗತಿ ನಿಜವೆ; ಹಾಗಿದ್ದಲ್ಲಿ. ವೇತನ ಹೆಚ್ಚಳವನ್ನು ಯಾವಾಗಿನಿಂದ ಮಾಡಲಾಗುವುದು;

**ಈ)** ಸಾರಿಗೆ ಸಂಸ್ಥೆಯಲ್ಲಿ ತರಬೇತಿ ನಿರತ ಸಿಬ್ಬಂದಿಯ ಹಾಗೂ ಖಾಯಂ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯ ವೇತನ ಪ್ರಮಾಣದಲ್ಲಿ ಇರುವ ವ್ಯತ್ಯಾಸವೆಷ್ಟು;

**ಉ)** ತರಬೇತಿ ನಿರತ ಸಿಬ್ಬಂದಿಯಿಂದ ಎಷ್ಟು ವರ್ಷ ಸೇವೆ ಪಡೆಯಲಾಗುತ್ತಿದೆ;

**ಊ)** ಇವರ ಸೇವೆ ತೃಪ್ತಿಕರವಾಗಿದ್ದರೆ ಇನ್ನು ಹೆಚ್ಚಿನ ವೇತನ ನೀಡಲಾಗುವುದೆ; ಹಾಗೂ ಸಂಸ್ಥೆಯಲ್ಲಿ ಇವರನ್ನು ಖಾಯಂಗೊಳಿಸಲಾಗುವುದೇ?

**ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು, ಗೃಹ ಮತ್ತು ಸಾರಿಗೆ.)**

**ಅ)** ರಾಜ್ಯ ಸಾರಿಗೆ ನಿಗಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ತರಬೇತಿ ನಿರತ ಸಿಬ್ಬಂದಿಗಳ ವಿವರಗಳನ್ನು **ಅನುಬಂಧ–'ಅ'** ನಲ್ಲಿ ಒದಗಿಸಿದೆ.

**ಆ)** ತರಬೇತಿ ಸಿಬ್ಬಂದಿಗೆ ತರಬೇತಿ ಅವಧಿಯಲ್ಲಿ ತರಬೇತಿ ಭತ್ಯೆ ನೀಡಲಾಗುತ್ತಿದೆ. ಇವರಿಗೆ ನೀಡುತ್ತಿರುವ ತರಬೇತಿ ಭತ್ಯೆ ವಿವರಗಳನ್ನು ಸುತ್ತೋಲೆ ಸಂಖ್ಯೆ–1466 ದಿ: 19–05–2012ರಂತೆ ನೀಡಲಾಗುತ್ತಿದ್ದು ಸದರಿ ಸುತ್ತೋಲೆಯ ಪ್ರತಿಯನ್ನು ಅಡಕಗೊಳಿಸಿದೆ **(ಅನುಬಂಧ–ಬಿ)** ವಿವರ **ಅನುಬಂಧ–ಅ** ನಲ್ಲಿ ನೀಡಿದೆ.

ಇ) ನಿಜ.

ದಿನಾಂಕ: 01–05–2012ರಿಂದ ಜಾರಿಗೆ ಬರುವಂತೆ ತರಬೇತಿ ಭತ್ಯೆಯ ಹೆಚ್ಚಳವನ್ನು ಮಾಡಲಾಗಿರುತ್ತದೆ.

**ಈ)** ತರಬೇತಿ ಸಿಬ್ಬಂದಿ ಹಾಗೂ ಖಾಯಂ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯ ವೇತನ ಪ್ರಮಾಣದ ವ್ಯತ್ಯಾಸದ ವಿವರಗಳನ್ನು **"ಅನುಬಂಧ–ಅ"** ನಲ್ಲಿ ಒದಗಿಸಲಾಗಿದೆ.

**ಉ)** ಮೇಲ್ವಿಚಾರಕ ಸಿಬ್ಬಂದಿಗೆ ಒಂದು ವರ್ಷ ಹಾಗೂ ಮೇಲ್ವಿಚಾರಕೇತರ ಸಿಬ್ಬಂದಿಗೆ ಎರಡು ವರ್ಷ ತರಬೇತಿಯ ಮೇಲೆ ಸೇವೆ ಪಡೆಯಲಾಗುತ್ತದೆ.

**ಊ)** –ಹೌದು–

## ಅನುಬಂಧ–ಅ

### ಸಾರಿಗೆ ಸಂಸ್ಥೆಯ ವಿವಿಧ ನಿಗಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ತರಬೇತಿ ನಿರತ ಸಿಬ್ಬಂದಿ ವಿವರಗಳು ಕೆಳಕಂಡಂತಿವೆ.

| ಹುದ್ದೆಗಳು | KSRTC | BMTC | NWKRTC | NEKRTC | ನೀಡುತ್ತಿರುವ ಮಾಸಿಕ ವೇತನ (₹. ಗಳಲ್ಲಿ) | ಖಾಯಂ ಉದ್ಯೋಗಿಗಳ ವೇತನ (₹. ಗಳಲ್ಲಿ) | ವ್ಯತ್ಯಾಸ |
|---|---|---|---|---|---|---|---|
| ಸಿಬ್ಬಂದಿ ಮೇಲ್ವಿಚಾರಕ | | | 02 | | 5800.00 | 16020.00 | 9024.00 |
| ಲೆಕ್ಕಪತ್ರ ಮೇಲ್ವಿಚಾರಕ | | | 01 | 05 | 5800.00 | 16020.00 | 9024.00 |
| ಉಗ್ರಾಣ ರಕ್ಷಕ | | | | 02 | 5800.00 | 16020.00 | 9024.00 |
| ವಿಭಾಗೀಯ ಭದ್ರತಾ ನಿರೀಕ್ಷಕ | 19 | | | | 5800.00 | 16020.00 | 9024.00 |

| | | | | | | | |
|---|---|---|---|---|---|---|---|
| ಪಾರುಪತ್ತೇಗಾರ | | 02 | 04 | 02 | 5800.00 | 16020.00 | 9024.00 |
| ಸಂಚಾರ ನಿರೀಕ್ಷಕ | | 03 | 09 | 06 | 5800.00 | 16020.00 | 9024.00 |
| ಗಣಕ ಮೇಲ್ವಿಚಾರಕ | | | | | 5800.00 | 16020.00 | 9024.00 |
| ಕಿರಿಯ ಅಭಿಯಂತರ | | | | | 5800.00 | 16020.00 | 9024.00 |
| ಸಹಾಯಕ ಸಂಚಾರ ನಿರೀಕ್ಷಕ | | 04 | | 23 | | 13378.00 | 6718.00 |
| ಸಹಾಯಕ ಉಗ್ರಾಣ ರಕ್ಷಕ | 2402 | | | 01 | 5500.00 | 14322.00 | 7662.00 |
| ಕುಶಲಕರ್ಮಿ | | 04 | | 23 | 550.00 | 13378.00 | 6718.00 |

| | | | | | | | |
|---|---|---|---|---|---|---|---|
| ಚಾಲಕ | | 2102 | 28 | 1057 | 5500.00 | 11868.00 | 5208.00 |
| ಕಿರಿಯ ಸಹಾಯಕ ಕಂ–ಡೇಟಾ ಎಂಟ್ರಿ ಆಪರೇಟರ್ | 271 | 123 | 55 | 138 | 5100.00 | 12057.00 | 5845.00 |
| ಸಹಾಯಕ ಕುಶಲಕರ್ಮಿ | 05 | 02 | 03 | 43 | 5200.00 | 11868.00 | 5544.00 |
| ನಿರ್ವಾಹಕ | | 689 | 814 | 38 | 5200.00 | 11134.00 | 5034.00 |
| ಚಾಲಕ–ಕಂ–ನಿರ್ವಾಹಕ | 5481 | 3129 | 2228 | 1773 | 5000.00 | 11134.00 | 5034.00 |
| ತಾಂತ್ರಿಕ ಸಹಾಯಕ | | 796 | 82 | 474 | 5000.00 | 11134.00 | 5034.00 |
| ಭದ್ರತಾ ರಕ್ಷಕ | | 79 | 03 | 15 | 5000.00 | 11134.00 | 5034.00 |

| | | | | | | | |
|---|---|---|---|---|---|---|---|
| ಶುಚಿಗಾರ ಹಾಗೂ ಕಛೇರಿ ಸಹಾಯಕ | 34 | | 17 | 32 | 4600.00 | 1084.00 | 5188.00 |
| ಕಿರಿಯ ಶೀಘ್ರಲಿಪಿಗಾರ | | | | 01 | 5500.00 | 14322.00 | 7662.00 |
| ಸಹಾಯಕ ಲೆಕ್ಕಿಗ | | | | 02 | 5500.00 | 14322.00 | 7662.00 |
| ಅಂಕಿಅಂಶ ಸಹಾಯಕ | | | | 01 | 5500.00 | 14322.00 | 7662.00 |
| **ಒಟ್ಟು** | **8,212** | **6933** | **3246** | **3634** | | | |

**ಸುತ್ತೋಲೆ ಸಂಖ್ಯೆ :– 1466**
**(ನೇಮಕಾತಿ ಶಾಖೆಯಿಂದ ಹೊರಡಿಸಲಾಗಿದೆ)**

**ವಿಷಯ:** ನೇರ ನೇಮಕಾತಿ ಮೂಲಕ ಮತ್ತು ಅನುಕಂಪದ ಆಧಾರದ ಮೇಲೆ, ದರ್ಜೆ–3 ರ ಮೇಲ್ವಿಚಾರಕ, ದರ್ಜೆ–3 ಮತ್ತು 4ರ ಮೇಲ್ವಿಚಾರಕೇತರ ಹುದ್ದೆಗಳಿಗೆ ನೇಮಕಗೊಂಡು ತರಬೇತಿಯಲ್ಲಿರುವವರಿಗೆ ತರಬೇತಿ ಭತ್ಯೆಯನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ: 1) ಸುತ್ತೋಲೆ ಸಂಖ್ಯೆ–1437 ದಿನಾಂಕ : 11–04–2011

2) ಸೂಕ್ತಾಧಿಕಾರಿಗಳ ಆದೇಶ ದಿನಾಂಕ: 11–05–2012

–000–

ಸಂಸ್ಥೆಯಲ್ಲಿ ವೃತ್ತಿ ತರಬೇತಿಯಲ್ಲಿರುವವರಿಗೆ ಉಲ್ಲೇಖ–1 ರಲ್ಲಿನ ಸುತ್ತೋಲೆ ನಿರ್ದೇಶನಗಳಡಿ, ನೀಡಲಾಗುತ್ತಿರುವ ಮಾಸಿಕ ತರಬೇತಿ ಭತ್ಯೆಯನ್ನು ಪರಿಷ್ಕರಿಸಲು ನಿರ್ಧರಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

ಬೆಂಗಳೂರು ಕೇಂದ್ರ ಸ್ಥಾನ ಮತ್ತು ಮಂಗಳೂರು ಕೇಂದ್ರ ಸ್ಥಾನದ ತರಬೇತುದಾರರಿಗೆ 500/– ನ್ನು ಪರಿಶ್ರಮ ಭತ್ಯೆಯಾಗಿ ನೀಡುತ್ತಿದ್ದು, ಈ ಭತ್ಯೆ ಪಡೆಯಲು ಮಾಸದಲ್ಲಿ ಕನಿಷ್ಟ 20 ದಿನಗಳ ಹಾಜರಾತಿಯನ್ನು ಹೊಂದಿರಬೇಕಿರುತ್ತದೆ.

ಚಾಲಕ–ಕಂ–ನಿರ್ವಾಹಕ ಹುದ್ದೆಗೆ ನೇಮಕವಾದ ತರಬೇತುದಾರರು, ಚಾಲಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದಲ್ಲಿ ಚಾಲಕ ಹುದ್ದೆಗೆ ನಿಗದಿಪಡಿಸಿರುವ ದರದಲ್ಲಿ ಹಾಗೂ ನಿರ್ವಾಹಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದಲ್ಲಿ, ನಿರ್ವಾಹಕ ಹುದ್ದೆಗೆ ನಿಗದಿಪಡಿಸಿರುವ ದರದಲ್ಲಿ ತರಬೇತಿ ಭತ್ಯೆಯನ್ನು ಪಡೆಯುವರು. ಒಂದು ವೇಳೆ, ಎರಡು ಹುದ್ದೆಗಳನ್ನು ಒಟ್ಟಿಗೆ ನಿರ್ವಹಿಸಿದಲ್ಲಿ, ಪ್ರಚಲಿತ ನಿಯಮಾವಳಿಗಳ ಪ್ರಕಾರ ವಿಶೇಷ ಭತ್ಯೆಯನ್ನು ಪಡೆಯುವರು.

**ಮಾಸಿಕ ತರಬೇತಿ ಭತ್ಯೆ–ವಿವರ**

| | ಹುದ್ದೆ | ಪ್ರಸ್ತುತ ನೀಡುತ್ತಿರುವ ತರಬೇತಿ ಭತ್ಯೆ | | ಪರಿಸ್ಕೃತ ತರಬೇತಿ ಭತ್ಯೆ | |
|---|---|---|---|---|---|
| | | 1ನೇ ವರ್ಷ | 2ನೇ ವರ್ಷ | 1ನೇ ವರ್ಷ | 2ನೇ ವರ್ಷ |
| 1 | ಸಂಚಾರ ನಿರೀಕ್ಷಕ, ಪಾರುಪತ್ತೆಗಾ (ತಾಂತ್ರಿಕ ಮುದ್ರಣ), ಸಿಬ್ಬಂದಿ ಮೇಲ್ವಿಚಾರಕ, ಲೆಕ್ಕಪತ್ರ ಮೇಲ್ವಿಚಾರಕ, ಅಂಕಿ ಅಂಶ ಪರಿವೀಕ್ಷಕ, ಉಗ್ರಾಣ ರಕ್ಷಕ, ಕಿರಿಯ ಅಭಿಯಂತರ, ವಿಭಾಗೀಯ ಭದ್ರತಾ ನಿರೀಕ್ಷಕ. | 4800 | --- | 5800 | --- |
| 2 | ಸಹಾಯಕ ಉಗ್ರಾಣ ರಕ್ಷಕ, ಸಹಾಯಕ ಲೆಕ್ಕಿಗ, ಕಿರಿಯ ಶೀಘ್ರಲಿಪಿಗಾರ, ಸ್ಟಾಫ್‌ನರ್ಸ್ ಮತ್ತು ತತ್ಸಮಾನ ಹುದ್ದೆ | 4500 | 4500 | 5500 | 5500 |
| 3 | ಸಹಾಯಕ ಸಂಚಾರ ನಿರೀಕ್ಷಕ, ಕುಶಲಕರ್ಮಿ, ಮತ್ತು ತತ್ಸಮಾನ ಹುದ್ದೆ | 4500 | 4500 | 5500 | 5500 |
| 4 | ಚಾಲಕ | 4500 | 4000 | 5500 | 5500 |
| 5 | ನಿರ್ವಾಹಕ, ಚಾಲಕ–ವ–ನಿವಾಹಕ | 4000 | 4000 | 5000 | 5000 |
| 6 | ಕಿರಿಯ ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್, ಫಾರ್ಮಸಿಸ್ಟ್ ಮತ್ತು ತತ್ಸಮಾನ ಹುದ್ದೆ | 4100 | 4100 | 5100 | 5100 |
| 7 | ಸಹಾಯಕ ಕುಶಲಕರ್ಮಿ ಮತ್ತು ತತ್ಸಮಾನ ಹುದ್ದೆ | 4200 | 4200 | 5200 | 5200 |
| 8 | ತಾಂತ್ರಿಕ ಸಹಾಯಕ, ಭದ್ರತಾ ರಕ್ಷಕ | 4000 | 4000 | 5000 | 5000 |
| 9 | ಇತರೆ ದರ್ಜೆ–4 ಹುದ್ದೆಗಳು | 3600 | 3600 | 4600 | 4600 |

ಈ ಪರಿಷ್ಕೃತ ತರಬೇತಿ ಭತ್ಯೆಯು ದಿನಾಂಕ:01–05–2012 ರಿಂದ ಜಾರಿಗೆ ಬರುತ್ತದೆ ಈ ಸುತ್ತೋಲೆ ತಲುಪಿದಕ್ಕೆ ಸ್ವೀಕೃತಿ ನೀಡುವುದು ಹಾಗೂ ಆದೇಶವನ್ನು ಜಾರಿಗೊಳಿಸಿರುವುದರ ಬಗ್ಗೆ ಧೃಢೀಕರಣ ನೀಡುವುದು.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** ಮಾನ್ಯ ಸಭಾಪತಿಗಳೆ, ತರಬೇತಿ ಸಿಬ್ಬಂದಿಗೆ ತರಬೇತಿ ಅವಧಿಯಲ್ಲಿ ಭತ್ಯೆ ನೀಡಲಾಗುತ್ತದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಇವರು ತರಬೇತಿ ಸಮಯದಲ್ಲಿ ಕೊಡುವ ಭತ್ಯೆ ಯಾವುದಕ್ಕೂ ಸಾಕಾಗುವುದಿಲ್ಲ. ಖಾಯಂ ಸಿಬ್ಬಂದಿ ಯಾವ ರೀತಿ ಕೆಲಸ ಮಾಡುತ್ತಾರೆ, ಇವರು ಸಹ ಅಷ್ಟೆ ಪ್ರಮಾಣಿಕವಾಗಿ ಶ್ರದ್ಧೆಯಿಂದ ಕೆಲಸವನ್ನು ಮಾಡುತ್ತಾರೆ. 22,025 ಜನ ತರಬೇತಿ ನಿರತ ಸಿಬ್ಬಂದಿಗಳಿದ್ದಾರೆ ಎಂದು ಹೇಳಿದ್ದಾರೆ. ಅದರಲ್ಲಿ 15,000 ಚಾಲಕರು ಮತ್ತು ಚಾಲಕರ & ನಿರ್ವಾಹಕರು ಕೆಲಸ ಮಾಡುತ್ತಿದ್ದಾರೆ. ತರಬೇತಿ ಸಿಬ್ಬಂದಿಗೆ ಕೇವಲ 1000 ರೂ.ಗಳ ಭತ್ಯೆಯನ್ನು ಹೆಚ್ಚಿಗೆ ಮಾಡಿದ್ದಾರೆ. ಇದು ಯಾವುದಕ್ಕೂ ಸಾಕಾಗುವುದಿಲ್ಲ ಆದ್ದರಿಂದ ದಯಮಾಡಿ ಇನ್ನು ಸ್ವಲ್ಪ ಹೆಚ್ಚಿಗೆ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಗಳೆ, ತರಬೇತಿ ನಿರತ ಸಿಬ್ಬಂದಿಗಳಿಗೆ 1–5–2012ರಂದು ಯಾರು ಕೇಳಿರಲಿಲ್ಲ ನಾನೇ ಸ್ವ ಇಚ್ಚೆಯಿಂದ 1000 ಹೆಚ್ಚಿಗೆ ಕೊಡುತ್ತೇನೆ ಎಂದು ಹೇಳಿದ್ದೇನೆ. ನಮ್ಮ ಸಂಸ್ಥೆ ಏಕೆ ಲಾಭದಾಯಕವಾದ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದಕ್ಕೆ ಇನ್ನೊಂದು ಕಾರಣ ಎಂದರೆ, ನಮ್ಮ ಸಾರಿಗೆ ಸಂಸ್ಥೆಯ ಎಲ್ಲ ಚಾಲಕರಿಗೆ ಮತ್ತು ನಿರ್ವಾಹಕರಿಗೆ ಕಮೀಷನ್ ಕೊಡಲಾಗುತ್ತದೆ. ಅಂದರೆ ದಿನದ ಕಲೆಕ್ಷನ್ ಎಷ್ಟು ಆಗುತ್ತದೆ ಅದಕ್ಕೆ 2% ಕಮೀಷನ್‌ನ್ನು ಆಗಲೇ ಕೊಟ್ಟುಬಿಡಲಾಗುತ್ತದೆ. 1000 ರೂ.ಗಳ ಕಲೆಕ್ಷನ್ ಮಾಡಿದರೆ ಅದಕ್ಕೆ 2% ಹಾಗೆ ಎಷ್ಟು ಸಾವಿರ ರೂ.ಗಳ ಕಲೆಕ್ಷನ್ ಮಾಡುತ್ತಾರೆ ಅಷ್ಟು ಕಮೀಷನ್ ಕೊಡಲಾಗುತ್ತದೆ. ಇದರಿಂದ ಅವರಿಗೆ ದಿನಕ್ಕೆ 100 ರೂ.ಗಳಷ್ಟು ಕಮೀಷನ್ ಸಿಗಬಹುದು. ಮತ್ತು ಒಂದು ಗಂಟೆ – ಎರಡು ಗಂಟೆ extra duty ಯು ಸಿಗುತ್ತದೆ. ಆದ್ದರಿಂದ ಇವತ್ತು ಸಂಸ್ಥೆ ಲಾಭದಾಯಕವಾಗಿ ನಡೆಯುತ್ತಿದೆ. ಅದಕ್ಕೆ ತಕ್ಕ ಎಲ್ಲ ಕ್ರಮಗಳನ್ನು ನಾವು

ತೆಗೆದುಕೊಂಡಿದ್ದೇವೆ. ವಿಶೇಷವಾಗಿ ಹೊಸದಾಗಿ ನೇಮಕವಾಗಿ ತರಬೇತಿಯಲ್ಲಿರುವವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ನಾನು ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ, ಇನ್ನೇನು ಹೆಚ್ಚಿನ ಸೌಲಭ್ಯ ಕೊಡಲು ಸಾಧ್ಯ. ಅದನ್ನು ಪ್ರಮಾಣಿಕವಾಗಿ ಮಾಡುತ್ತೇನೆ. ಮೊದಲು ತರಬೇತಿಯಲ್ಲಿರುವವರನ್ನು ನಾಲ್ಕು ವರ್ಷಗಳಾದರು ಖಾಯಂ ಮಾಡಿರಲಿಲ್ಲ, ಅವರಿಗೆ ಎರಡು ವರ್ಷದ ನಂತರ ಖಾಯಂ ಮಾಡಬೇಕೆಂದು ಇದೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಎರಡು ತಿಂಗಳು ಕುಳಿತು ಯಾರ್ಯಾರು ಎರಡು ವರ್ಷಗಳಾಗಿ ಅವರನ್ನು ಮತ್ತು ಮೂರು–ನಾಲ್ಕು ವರ್ಷಗಳಾದವರನ್ನು ಅವರು ಏನೇ ತಪ್ಪುಗಳನ್ನು ಮಾಡಿದರು ಎಲ್ಲರನ್ನು ಒಂದೇ ಸಾರಿ ಖಾಯಂಗೊಳಿಸಲು ಕ್ರಮವನ್ನು ತೆಗೆದುಕೊಂಡಿದ್ದೇನೆ. ಆದ್ದರಿಂದ ತರಬೇತಿ ಸಿಬ್ಬಂದಿಗಳ ಬಗ್ಗೆಯ ಒಳ್ಳೆಯ ಕ್ರಮವನ್ನು ತೆಗೆದುಕೊಂಡಿದ್ದೇನೆ.

**ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ವಿವರ ಒದಗಿಸುವ ಬಗ್ಗೆ**

**717+718; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

**ಅ)** ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳು ಎಷ್ಟು ಹಾಗೂ ಈ ವಸತಿ ನಿಲಯದಲ್ಲಿ ಇರುವ ವಿದ್ಯಾರ್ಥಿಗಳೆಷ್ಟು:

**ಆ)** ಸರ್ಕಾರ ಈ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಮಾಡುತ್ತಿರುವ ವೆಚ್ಚವೆಷ್ಟು:

**ಇ)** ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳಿಗೆ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ;

**ಈ)** ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಎಷ್ಟು ವಸತಿ ನಿಲಯಗಳು ಇರುತ್ತವೆ ಹಾಗೂ ಈ ವಸತಿ ನಿಲಯದಲ್ಲಿ ಎಷ್ಟು ವಿದ್ಯಾರ್ಥಿಗಳು ಇರುವರು; (ತಾಲ್ಲೂಕು ವಾರು ವಿವರ ನೀಡುವುದು)

ಉ) ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯುವವರ ಸಂಖ್ಯೆ ಕಡಿಮೆ ಆಗುತ್ತಿರುವ ಸಂಗತಿ ನಿಜವೇ;

ಊ) ವಸತಿ ನಿಲಯಗಳಲ್ಲಿ ಮೇಲ್ವಿಚಾರಕರು ವಾಸಿಸದೇ ಇರುವುದು, ಹಾಗೂ ರಾತ್ರಿವೇಳೆ ವಿದ್ಯಾಭ್ಯಾಸ ಮಾಡಿಸಲು ಟ್ಯೂಟರ್ ಇಲ್ಲದೆ ಇರುವುದು, ಇದ್ದರೂ ಸರಿಯಾಗಿ ಕಲಿಸದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೇಯೇ?

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)**

ಅ) ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಸತಿ ನಿಲಯ 1224, ವಿದ್ಯಾರ್ಥಿಗಳ ಸಂಖ್ಯೆ 74,124 ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯ 490, ವಿದ್ಯಾರ್ಥಿಗಳ ಸಂಖ್ಯೆ 41,746 ಇದೆ.

ಆ) ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಿಗೆ ತಗಲುವ ವಾರ್ಷಿಕ ವೆಚ್ಚ.

| ಮೆಟ್ರಿಕ್ ಪೂರ್ವ | ಮೆಟ್ರಿಕ್ ನಂತರ |
|---|---|
| 1. ₹. 63.83 ಕೋಟಿಗಳು ವಿದ್ಯಾರ್ಥಿಗಳ ಊಟದ ವೆಚ್ಚ, ಇತರೆ ವೆಚ್ಚ (ಸೋಪುಗಳು, ಕೊಬ್ಬರಿ ಎಣ್ಣೆ, ಟೂಥ್ ಪೇಸ್ಟ್+ಬ್ರಷ್) ಲೇಖನ ಸಾಮಗ್ರಿ ಮತ್ತು ತಲೆ ಕ್ಷೌರ ವೆಚ್ಚಗಳಿಗಾಗಿ (ನೇರವಾಗಿ ವಿದ್ಯಾರ್ಥಿಗೆ ಪ್ರಯೋಜನ ವಾಗುವ)<br>2. ₹. 19.76 ಕೋಟಿಗಳು ವಾರ್ತಾಪತ್ರಿಕೆ. ಅರೆಕಾಲಿಕಬೋಧಕರು, ವೈದ್ಯಕೀಯ ವೆಚ್ಚ, ವಿದ್ಯುತ್ ಮತ್ತು ನೀರಿನ | 1. ₹. 39.05 ಕೋಟಿಗಳು ಊಟದ ವೆಚ್ಚಕ್ಕಾಗಿ ಮಾತ್ರ.<br>2. ₹. 1.60 ಕೋಟಿಗಳು ವಾರ್ತಾಪತ್ರಿಕೆ, ವಿದ್ಯುತ್ ಮತ್ತು ನೀರಿನ ವೆಚ್ಚಗಳು (₹ 1000/- ಮಾಹೆಗೆ ಅಥವಾ ವಾಸ್ತವಿಕ) ಶೌಚಾಲಯ ಸ್ವಚ್ಛತೆ ವೆಚ್ಚ, ಕಟ್ಟಡದ ಬಾಡಿಗೆ (₹ 3000/- ಮಾಹೆಯಾನ |

| | |
|---|---|
| ವೆಚ್ಚಗಳು (₹. 1000/– ಮಾಹೆಗೆ ಅಥವಾ ವಾಸ್ತವಿಕ) ಶೌಚಾಲಯ ಸ್ವಚ್ಛತೆ ವೆಚ್ಚ. (₹ ಕಟ್ಟಡದ ಬಾಡಿಗೆ) (₹ 3000/– ಮಾಹೆಯಾನ ಅಥವಾ ಪಿ.ಡಬ್ಲ್ಯೂ.ಡಿ ನಿಗಧಿ ಪಡಿಸಿರುವ ದರ) (ಪರೋಕ್ಷವಾಗಿ ವಿದ್ಯಾರ್ಥಿಗಳಿಗೆ ತಗಲುವ ವೆಚ್ಚ) | ಅಥವಾ ಪಿ.ಡಬ್ಲ್ಯೂ.ಡಿ. ನಿಗಧಿಪಡಿಸಿರುವ ದರ) (ಪರೋಕ್ಷವಾಗಿ ವಿದ್ಯಾರ್ಥಿ ಗಳಿಗೆ ತಗಲುವ ವೆಚ್ಚ) |

ಇ) ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳಿಗೆ ವೈಯಕ್ತಿಕವಾಗಿ ತಗಲುವ ವೆಚ್ಚ ಬೋಜನಕ್ಕಾಗಿ ₹. 750/–, ಇತರೆ ವೆಚ್ಚ (ಸೋಪುಗಳು, ಕೊಬ್ಬರಿ ಎಣ್ಣೆ, ಟೂಥ್ ಪೇಸ್ಟ್+ಬ್ರಷ್) ಗಳಿಗಾಗಿ ₹. 40/– ಹಾಗೂ ಇತರೆ ವೆಚ್ಚವಾಗಿ ₹. 5/– (ವರ್ಷಕ್ಕೆ ಪ್ರತಿ ವಿದ್ಯಾರ್ಥಿಗೆ ₹. 60/–ಗಳು) ಗಳಾಗಿರುತ್ತವೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳಿಗೆ ಊಟದ ವೆಚ್ಚ ₹. 850/– ಮಾತ್ರ ಭರಿಸಲಾಗುವುದು.

ಈ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ) ಹೌದು

ಊ) ಪರಿಶಿಷ್ಟ ಜಾತಿ ವಸತಿ ನಿಲಯಗಳಲ್ಲಿ ಮೇಲ್ವಿಚಾರಕರು ಬೆಳಿಗ್ಗೆಯಿಂದ ರಾತ್ರಿಯವರೆಗೆ ನಿಗಧಿತ ಅವಧಿಗಳಲ್ಲಿ ಕೆಲಸ ಮುಗಿಸಿ ಅದೇ ಊರಲ್ಲಿ ಇರುತ್ತಾರೆ. ವಿದ್ಯಾರ್ಥಿ ನಿಲಯಗಳಲ್ಲಿ ರಾತ್ರಿ ವೇಳೆ ಒಬ್ಬರು ಅಡುಗೆಯವರು/ಅಡುಗೆ ಸಹಾಯಕರು ಇರುತ್ತಾರೆ. ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯದಲ್ಲಿ ಒಬ್ಬರು ಮಹಿಳಾ ರಾತ್ರಿ ಕಾವಲು ಗಾರರಿರುತ್ತಾರೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ 8ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇಂಗ್ಲೀಷ್, ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಅರೆಕಾಲೀಕ ಬೋಧನೆ ನೀಡಲು ಮೂವರು ಅಧ್ಯಾಪಕರುಗಳನ್ನು ಸ್ಥಳೀಯವಾಗಿ

ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ನೇಮಕ ಮಾಡಿಕೊಳ್ಳುತ್ತಾರೆ.ಇವರುಗಳು ಸರಿಯಾಗಿ ಕಲಿಸದೇ ಇದ್ದಲ್ಲಿ ಅವರನ್ನು ಬದಲಿಸಿ ಬೇರೆಯವರನ್ನು ತಾಲ್ಲೂಕು ಮಟ್ಟದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತದೆ. ಈ ಭೋದಕರಿಗೆ ₹. 1000/– ಒಂದು ತಿಂಗಳಿಗೆ ಗೌರವಧನ ನೀಡಲಾಗುತ್ತದೆ.

**ಅನುಬಂಧ**

**ಪರಿಶಿಷ್ಟ ಜಾತಿ:**

| **ಬೆಳಗಾವಿ** | | | **ಬಾಗಲಕೋಟೆ** | | | **ಬಿಜಾಪುರ** | | |
|---|---|---|---|---|---|---|---|---|
| ತಾಲ್ಲೂಕು | ವಿದ್ಯಾರ್ಥಿ ನಿಲಯಗಳು | ವಿದ್ಯಾರ್ಥಿಗಳ ಸಂಖ್ಯೆ | ತಾಲ್ಲೂಕು | ವಿದ್ಯಾರ್ಥಿ ನಿಲಯಗಳು | ವಿದ್ಯಾರ್ಥಿಗಳ ಸಂಖ್ಯೆ | ತಾಲ್ಲೂಕು | ವಿದ್ಯಾರ್ಥಿ ನಿಲಯಗಳು | ವಿದ್ಯಾರ್ಥಿಗಳ ಸಂಖ್ಯೆ |
| ಖಾನಾಪೂರ | 3 | 133 | ಜಮಖಂಡಿ | 3 | 525 | ಬಿಜಾಪುರ | 11 | 973 |
| ಬೆಳಗಾವಿ | 10 | 853 | ಬಾದಾಮಿ | 10 | 684 | ಇಂಡಿ | 17 | 1098 |
| ಚಿಕ್ಕೋಡಿ | 16 | 1068 | ಬಾಗಲಕೋಟೆ | 10 | 575 | ಸಿಂಧಗಿ | 15 | 1131 |
| ಬೈಲಹೊಂಗಲ | 10 | 537 | ಬೀಳಗಿ | 6 | 372 | ಬ.ಬಾಗೇವಾಡಿ | 11 | 750 |
| ರಾಯಭಾಗ | 4 | 211 | ಮುಧೋಳ | 7 | 472 | ಮುದ್ದೇಬಿಹಾಳ | 10 | 665 |
| ಹುಕ್ಕೇರಿ | 10 | 504 | ಹುನಗುಂದ | 6 | 252 | | | |
| ಸವದತ್ತಿ | 6 | 193 | | | | | | |
| ರಾಮದುರ್ಗ | 6 | 455 | | | | | | |
| ಅಥಣಿ | 9 | 681 | | | | | | |
| ಗೋಕಾಕ್ | 11 | 722 | | | | | | |
| **ಒಟ್ಟು** | **85** | **5357** | **ಒಟ್ಟು** | **47** | **2880** | **ಒಟ್ಟು** | **64** | **4597** |

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:-** ಮಾನ್ಯ ಸಭಾಪತಿಗಳೆ, ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಸತಿ ನಿಲಯ 1224, ವಿದ್ಯಾರ್ಥಿಗಳ ಸಂಖ್ಯೆ 74,124 ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯ 490, ವಿದ್ಯಾರ್ಥಿಗಳ ಸಂಖ್ಯೆ 41,764 ಇದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯುವವರ ಸಂಖ್ಯೆ ಕಡಿಮೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದಕ್ಕೆ ಹೌದು ಎಂದು ಹೇಳಿದ್ದಾರೆ. ಈ ಸಂಖ್ಯೆಯನ್ನು ಹೆಚ್ಚು ಮಾಡಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ. ಎನ್ನುವುದು ನನ್ನ ಮೊದನೆಯ ಪ್ರಶ್ನೆ. ಎರಡನೆಯದಾಗಿ, ರಾತ್ರಿಯ ವೇಳೆ ಅಭ್ಯಾಸ ಮಾಡಲು ಒಂದು ವಸತಿ ನಿಲಯಕ್ಕೆ ಮೂರು ವಿಷಯಗಳಂತೆ ಅಭ್ಯಾಸ ಮಾಡಲು Tutor ಗಳನ್ನು ನೇಮಕಾತಿ ಮಾಡುತ್ತಾರೆ. ಆದರೆ ಯಾವುದೇ ಒಂದು ವಸತಿ ನಿಲಯದಲ್ಲಿ ಅವರು ಕ್ಲಾಸ್ ತೆಗೆದುಕೊಳ್ಳುವುದನ್ನು ನಾವು ನೋಡಿರುವುದಿಲ್ಲ. ನಾಮಕಾವಾಸ್ತೆ ಅವರ ನೇಮಕಾತಿಯಾಗುತ್ತದೆ, ಅವರಿಗೆ ಸಂಬಳ ಬರುತ್ತದೆ. ಆದರೆ ಯಾರು ಸರಿಯಾಗಿ ನಿಗದಿತ ಸಮಯಕ್ಕೆ ಬರುವುದಿಲ್ಲ ಕ್ಲಾಸ್ ತೆಗೆದುಕೊಳ್ಳುವುದಿಲ್ಲ. ಆ ನಿಟ್ಟಿನಲ್ಲಿ ಯಾರು ಸರಿಯಾಗಿ ಕೆಲಸವನ್ನು ಮಾಡುವುದಿಲ್ಲ ಅಂತಹವರ ಮೇಲೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ಹೇಳಬೇಕು.

**ಶ್ರೀ ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಈಗಾಗಲೇ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ನೀಡಲಾಗಿದೆ. 1714 ವಿದ್ಯಾರ್ಥಿ ನಿಲಯಗಳು ಇವೆ, 1,15,000 ವಿದ್ಯಾರ್ಥಿ ನಿಲಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಮೆಟ್ರಿಕ್ ಪೂರ್ವ ವಸತಿ ನಿಲಯಗಳಿಗೆ 83 ಕೋಟಿ ರೂ.ಗಳನ್ನು ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ 40 ಕೋಟಿ ರೂ.ಗಳನ್ನು ವೆಚ್ಚ ಮಾಡುತ್ತಿದ್ದೇವೆ. 1990ರಲ್ಲಿ ಪ್ರತಿ ವಿದ್ಯಾರ್ಥಿಗಳ ವೆಚ್ಚಕ್ಕೆ ಪ್ರತಿ ವಿದ್ಯಾರ್ಥಿಗೆ 450 ರೂ.ಗಳನ್ನು ಕೊಡಲಾಗುತ್ತಿತ್ತು ಈಗ 750ರೂ. ಗಳನ್ನು ಕೊಡಲಾಗುತ್ತಿದೆ.ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 500 ರೂ.ಗಳನ್ನು ಕೊಡಲಾಗುತ್ತಿತ್ತು, ಈಗ 850 ರೂ.ಗಳನ್ನುಕೊಡಲಾಗುತ್ತಿದೆ.ಇದರ

ಜೊತೆಗೆ ರಾತ್ರಿ ಬಂದು ಪಾಠ ಮಾಡುವ ಶಿಕ್ಷಕರಿಗೆ 1000 ರೂ.ಗಳನ್ನು ಕೊಡಲಾಗುತ್ತಿತ್ತು, ಆದರೆ ಅವರು ಬಂದು ಹೋಗುವ ಮಾಹಿತಿ ನೀಡುತ್ತಿರಲಿಲ್ಲ. ಈ ರೀತಿಯ ಸಮಸ್ಯೆಗಳು ಇದ್ದುದರಿಂದ ಬಯೋಮೆಟ್ರಿಕ್ ತರಲಾಗಿದೆ. ಮೂರು ಡಿವಿಜನ್‌ಗಳಾಗಿ ಮಾಡಿ, ಮೂರು ಡಿವಿಜನ್‌ಗಳಿಗೆ ಬಯೋಮೆಟ್ರಿಕ್ ಅಳವಡಿಸಲು ಆದೇಶವನ್ನು ಮಾಡಿದ್ದೇವೆ. ಇದರಿಂದ ವಾರ್ಡನ್ ಯಾವಾಗ ಬರುತ್ತಾರೆ, ಉಪಧ್ಯಾಯರು ಬರುತ್ತಾರೊ ಇಲ್ಲವೊ, ಎಷ್ಟು ಸಮಯಕ್ಕೆ ಬರುತ್ತಾರೆ, ಎಷ್ಟು ಸಮಯ ಪಾಠ ಮಾಡುತ್ತಾರೆ, ಎಷ್ಟು ಸಮಯಕ್ಕೆ ಹೊರಡುತ್ತಾರೆ ಎನ್ನುವ ಮಾಹಿತಿ ಸಿಗುತ್ತದೆ.ಇದರಿಂದ ಈ ಸಮಸ್ಯೆ ಪರಿಹಾರವಾಗುತ್ತದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರ ಮಾತ್ರ ಮಾಡುತ್ತಿತ್ತು, ನಾನು ಕೇಂದ್ರ ಸರ್ಕಾರಕ್ಕೆ ಹೋಗಿ ಅವರಲ್ಲಿ ಮನವಿ ಮಾಡಿಕೊಂಡ ಮೇಲೆ ಈ ವರ್ಷ 8ನೇ ತರಗತಿ ಮತ್ತು 10ನೇ ತರಗತಿಗಳಿಗೆ ವಿಶೇಷವಾಗಿ ಹೆಚ್ಚಿನ ಅನುದಾನವನ್ನು ನೀಡುತ್ತಿದೆ. ಪ್ರತಿ ತಿಂಗಳಿಗೆ 150 ರೂ.ಗಳಂತೆ 10 ತಿಂಗಳಿಗೆ 1500 ರೂ.ಗಳನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಸ್ಟೇಷನರಿ ಕೊಡಲು 1000 ರೂ.ಗಳನ್ನು ಕೊಡಲು ಕೇಂದ್ರ ಸರ್ಕಾರ ಆದೇಶ ಮಾಡಿದೆ. ಪ್ರತಿ ವಸತಿ ನಿಲಯಗಳ ನಿರ್ವಹಣೆಗೆ 350 ರೂ.ಗಳನ್ನು ನೀಡುತ್ತದೆ. 40 ವರ್ಷಗಳಲ್ಲಿ ಮೊಟ್ಟಮೊದಲಬಾರಿಗೆ ಕೇಂದ್ರ ಸರ್ಕಾರ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷವಾದ ಅನುದಾನವನ್ನು ನೀಡುತ್ತಿದೆ. ಎಲ್ಲಾ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿಲ್ಲ. ಬಿಸಿಎಂ ವಸತಿ ನಿಲಯಗಳಲ್ಲಿ ಪ್ರತಿ ವರ್ಷ 10,000 ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಎಸ್‌ಟಿ ಯಲ್ಲಿ ಕಡಿಮೆಯಾಗಿಲ್ಲ ಆದರೆ ಎಸ್‌ಸಿ ವಸತಿ ನಿಲಯಗಳಲ್ಲಿ ಕಡಿಮೆಯಾಗುತ್ತಿದೆ. ಎಸ್‌ಸಿ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏಕೆ ಕಡಿಮೆಯಾಗುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡಲಾಗುತ್ತಿದೆ. ಈ ವಸತಿ ನಿಲಯಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡುವ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟ ನಂತರ ಮಕ್ಕಳ ಸಂಖ್ಯೆ ಹೆಚ್ಚಾಗುತ್ತದೆ. ಆದರೆ ಯಾವ ವಸತಿ ನಿಲಗಳಲ್ಲಿ 10% ಗಿಂತ ಕಡಿಮೆ ಇದೆ

ಮಕ್ಕಳ ಸಂಖ್ಯೆ ಅಂತಹ ವಸತಿ ನಿಲಯಗಳನ್ನು ಮುಚ್ಚದೆ ಅವುಗಳನ್ನು ಅಪ್‌ಗ್ರೇಡ್ ಮಾಡಿ District Head Quarters ನಲ್ಲಿ ವಸತಿ ನಿಲಯಗಳನ್ನು ಪ್ರಾರಂಭ ಮಾಡುತ್ತೇವೆ. ಇದರಿಂದ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ ಎನ್ನುವ ವಿಶ್ವಾಸ ನನಗೆ ಇದೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** ಮಾನ್ಯ ಸಭಾಪತಿಗಳೆ, ಬಯೋಮೆಟ್ರಿಕ್ ಪದ್ದತಿ ನನಗೆ ತಿಳಿದಮಟ್ಟಿಗೆ ಯಾವ ವಸತಿ ನಿಲಯಗಳಲ್ಲಿಯು ಇಲ್ಲ.

**ಶ್ರೀ ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ಈಗಾಗಲೆ ಆದೇಶ ಮಾಡಿ ESSL Limited, Bangalore ಇವರಿಗೆ 10 ಜಿಲ್ಲೆಗಳನ್ನು, Zenith Controls & Systems, Bangalore ಇದಕ್ಕೆ 10 ಜಿಲ್ಲೆಗಳನ್ನು, Manthra Software Limited, Bangalore ಇವರಿಗೆ 10 ಜಿಲ್ಲೆಗಳನ್ನು ಕೊಟ್ಟು ಆದೇಶ ಮಾಡಿದ್ದೇವೆ. ಅವರು ಬಯೋಮೆಟ್ರಿಕ್ ಯಂತ್ರವನ್ನು ಅಳವಡಿಸುವ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

**ಸಭಾಪತಿಯವರು:–** ಯಂತ್ರಗಳನ್ನು ಅಳವಡಿಸುವ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಇನ್ನು ಅವು ಕೆಲಸವನ್ನು ಮಾಡುತ್ತಿಲ್ಲ. ಈಗ ತಡೆಹಿಡಿಯಲಾದ ಪ್ರಶ್ನೆಗಳು.

**ಮಂಡ್ಯ ಮತ್ತು ಮೈಸೂರು ಮೆಡಿಕಲ್ ಕಾಲೇಜುಗಳಿಗೆ ಬೋಧಕ/ಬೋಧಕೇತರ ಹುದ್ದೆಗಳ ಬಗ್ಗೆ**

**551; ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)**

**ಅ)** ಮಂಡ್ಯ ಮತ್ತು ಮೈಸೂರು ಮೆಡಿಕಲ್ ಕಾಲೇಜುಗಳಿಗೆ ಬೋಧಕ ವರ್ಗದ ಹುದ್ದೆಗಳಾದ ಸೀನಿಯರ್ ರೆಸಿಡೆಂಟ್, ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾದ್ಯಾಪಕರು ಮತ್ತು ಪ್ರಾಧ್ಯಾಪಕರ ಎಷ್ಟು ಹುದ್ದೆಗಳು ಮಂಜೂರಾಗಿವೆ; ವಿಭಾಗವಾರು ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಹಾಲಿ ಎಷ್ಟು ಬೋಧಕ ಹುದ್ದೆಗಳು ಭರ್ತಿಯಾಗಿವೆ; ಭರ್ತಿಯಾಗದೆ ಖಾಲಿ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು; ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುತ್ತದೆ;

ಇ) ಖಾಲಿ ಉಳಿದಿರುವ ಬೋಧಕ ಹುದ್ದೆಗಳನ್ನು ಯಾವ ನಿಯಮಾವಳಿಯನುಸಾರ ನೇಮಕಾತಿ ಪ್ರಕ್ರಿಯೆ ಮಾಡಲಾಗುತ್ತದೆ;

ಈ) ಸದರಿ ಮೆಡಿಕಲ್ ಕಾಲೇಜುಗಳಲ್ಲಿ ಎಷ್ಟು ಬೋಧಕೇತರ ಹುದ್ದೆಗಳು ಮಂಜೂರಾಗಿವೆ; (ಬೋಧಕೇತರ ಹುದ್ದೆಗಳ ಪ್ರತ್ಯೇಕ ವಿವರ ನೀಡುವುದು)

ಉ) ಬೋಧಕೇತರ ಎಷ್ಟು ಹುದ್ದೆಗಳು ಭರ್ತಿಯಾಗಿವೆ; ಖಾಲಿ ಉಳಿದಿರುವ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುತ್ತದೆ; ಮತ್ತು ಯಾವ ನಿಯಮಾವಳಿಯನುಸಾರ ಈ ಬೋಧಕೇತರ ಹುದ್ದೆಗಳಿಗೆ ನೇಮಕಾತಿ ಮಾಡಲಾಗುವುದು?

**ಶ್ರೀ ಎಸ್.ಎ. ರಾಮದಾಸ್ ( ವೈದ್ಯಕೀಯ ಶಿಕ್ಷಣ ಸಚಿವರು)**

ಅ) ಮಂಡ್ಯ ವೈದ್ಯಕೀಯ ಕಾಲೇಜಿಗೆ ಒಟ್ಟು 220 ಬೋಧಕ ಹುದ್ದೆಗಳು ಮಂಜೂರಾಗಿರುತ್ತವೆ. ಈ ಮೊದಲು ಈ ಹುದ್ದೆಗಳನ್ನು ವಿಭಾಗವಾರು ವಿಂಗಡಣೆ ಮಾಡಿರಲಿಲ್ಲ. ಈಗ ಈ ರೀತಿ ವಿಭಾಗವಾರು ವಿಂಗಡಣೆ ಮಾಡಿ, ಹುದ್ದೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

ಮೈಸೂರು ವೈದ್ಯಕೀಯ ಕಾಲೇಜಿಗೆ ಒಟ್ಟು 365 ಬೋಧಕ ಹುದ್ದೆಗಳು ಮಂಜೂರಾಗಿರುತ್ತವೆ.
ವಿಭಾಗವಾರು ಮಂಜೂರಾಗಿರುವ ಹುದ್ದೆಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.

ಸದರಿ ಸಂಸ್ಥೆಗಳಲ್ಲಿ ಹಾಲಿ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಬೋಧಕ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

| | **ಮೈಸೂರು ವೈದ್ಯಕೀಯ ಕಾಲೇಜು** | **ಮಂಡ್ಯ ವೈದ್ಯಕೀಯ ಕಾಲೇಜು** |
|---|---|---|
| ಭರ್ತಿಯಾಗಿರುವ ಬೋಧಕ ಹುದ್ದೆಗಳು | 235 | 146 |
| ಖಾಲಿ ಇರುವ ಬೋಧಕ ಹುದ್ದೆಗಳು | 130 | 74 |

ಖಾಲಿ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಯಾ ಸಂಸ್ಥೆಗಳಿಗೆ ಸೂಚನೆ ನೀಡಲಾಗುವುದು.

ಇ) ಆಯಾ ಸಂಸ್ಥೆಗಳ ಬೈಲಾಗಳನ್ವಯ ಹಾಗೂ ಭಾರತೀಯ ವೈದ್ಯಕೀಯ ಪರಿಷತ್ತಿನ ಮಾರ್ಗ ಸೂಚಿಗಳನ್ವಯ ಬೋಧಕ ಹುದ್ದೆಗಳನ್ನು ನೇರ ಸಂದರ್ಶನದ ಮುಖಾಂತರ ಆಯಾ ಸಂಸ್ಥೆಗಳ ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ನಿಯಮಾನುಸಾರ ನೇಮಕಾತಿ ಮಾಡಲಾಗುವುದು.

**ಈ)** ಸದರಿ ಸಂಸ್ಥೆಗಳಲ್ಲಿ ಮಂಜೂರಾದ ಒಟ್ಟು ಬೋಧಕೇತರ ಹುದ್ದೆಗಳ ವಿವರಗಳು ಕೆಳಕಂಡಂತಿವೆ:

| **ಮೈಸೂರು ವೈದ್ಯಕೀಯ ಕಾಲೇಜು** | **ಮಂಡ್ಯ ವೈದ್ಯಕೀಯ ಕಾಲೇಜು** |
|---|---|
| 1489 | 524 |

ವಿವರಗಳನ್ನು **ಅನುಬಂಧ 3 ಮತ್ತು 4**ರಲ್ಲಿ ನೀಡಲಾಗಿದೆ.

**ಉ)** ಸದರಿ ಸಂಸ್ಥೆಗಳಲ್ಲಿ ಭರ್ತಿಯಾಗಿರುವ ಬೋಧಕೇತರ ಹುದ್ದೆಗಳ ವಿವರಗಳು ಕೆಳಕಳಡಂತಿವೆ:

| **ಮೈಸೂರು ವೈದ್ಯಕೀಯ ಕಾಲೇಜು** | **ಮಂಡ್ಯ ವೈದ್ಯಕೀಯ ಕಾಲೇಜು** |
|---|---|
| 853 | 136 |

ಖಾಲಿ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಸ್ಥೆಗಳಿಗೆ ಸೂಚನೆ ನೀಡಲಾಗುವುದು.

ಖಾಲಿ ಹುದ್ದೆಗಳನ್ನು ಆಯಾ ಸಂಸ್ಥೆಗಳ ಬೈಲಾಗಳನ್ವಯ ಹಾಗೂ ಸರ್ಕಾರದ ಸಾಮಾನ್ಯ ನಿಯಮಗಳ ಮೇರೆಗೆ ಆಯಾ ಸಂಸ್ಥೆಗಳ ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ನಿಯಮಾನುಸಾರ ನೇಮಕಾತಿ ಮಾಡಲಾಗುವುದು.

**ಅನುಬಂಧ–1**

| MANDYA INSTITUTE OF MEDICAL SCIENCES, MANDYA | | | |
|---|---|---|---|
| INFORMATION RELATING TO THE TEACHING POSTS OF MIMS | | | |
| | **Sanctioned** | **Working** | **Vacant** |
| DEPARTMENT OF ANTOMY | | | |
| Professor | 1 | 1 | - |
| Associate Professor | 1 | 1 | - |
| Assistant Professor | 3 | 3 | - |
| Tutor | 2 | 2 | - |
| DEPARTMENT OF PHYSIOLOGY | | | |
| Professor | 1 | 1 | - |
| Associate Professor | 1 | 1 | - |
| Assistant Professor | 2 | 2 | - |
| Tutor | 3 | 3 | - |
| DEPARTMENT OF BIOCHEMISTRY | | | |
| Professor | | | |
| Associate Professor | | | |
| Assistant Professor | | | |
| Tutor | | | |
| DEPARTMENT OF PATHOLOGY | | | |
| Professor | 1 | 1 | - |

| | | | |
|---|---|---|---|
| Associate Professor | 4 | 4 | - |
| Assistant Professor | 3 | 3 | - |
| Tutor | 5 | 5 | - |
| DEPARTMENT OF MICROBIOLOGY | | | |
| Professor | 1 | 1 | - |
| Associate Professor | 2 | 2 | - |
| Assistant Professor | 1 | 1 | - |
| Tutor | 1 | 1 | - |
| DEPARTMENT OF PHARMACOLOGY | | | |
| Professor | 1 | 1 | - |
| Associate Professor | 1 | 1 | - |
| Assistant Professor | 2 | 2 | - |
| Tutor | 2 | 2 | - |
| DEPARTMENT OF FORENSIC MEDICINE | | | |
| Professor | 1 | - | 1 |
| Associate Professor | 1 | 1 | - |
| Assistant Professor | 2 | 1 | 1 |
| Tutor | 2 | 2 | - |
| DEPARTMENT OF COMMUNITY MEDICINE | | | |
| Professor | 1 | 1 | - |
| Associate Professor | 2 | 2 | - |
| Assistant Professor | 3 | 3 | - |
| Epidemiologist/Assistant Professor | 1 | - | 1 |
| Statistician/ Assistant Professor | 1 | 1 | - |
| Medical officer of Health/Lecturer | 1 | - | 1 |
| Tutor | 4 | 2 | 2 |

| | | | |
|---|---|---|---|
| DEPARTMENT OF GENERAL MEDICINE | | | |
| Professor | 1 | 1 | - |
| Associate Professor | 3 | 2 | 1 |
| Assistant Professor | 6 | 4 | 2 |
| Senior Resident | 6 | 4 | 2 |
| Junior Resident | 12 | 4 | 8 |
| DEPARTMENT OF T.B AND CHEST | | | |
| Professor | 1 | 1* | - |
| Associate Professor | - | - | - |
| Assistant Professor | 1 | - | 1 |
| Senior Resident | 1 | - | 1 |
| Junior Resident | 3 | - | 3 |
| DEPARTMENT OF DERMATOLOGY VENEROLOGY & LEPROSY (SKIN) | | | |
| Professor | 1 | - | 1 |
| Associate Professor | 1 | 1 | - |
| Assistant Professor | 1 | 1 | - |
| Senior Resident | 1 | 1 | - |
| Junior Resident | 3 | 3 | - |
| DEPARTMENT OF PSYCHIATRY | | | |
| Professor | 1 | 1 | - |
| Associate Professor | 1 | - | 1 |
| Assistant Professor | 1 | 1 | - |
| Senior Resident | 1 | - | 1 |
| Junior Resident | 3 | 3 | - |
| | | | |
| DEPARTMENT OF PAEDIATRICS | | | |
| Professor | 1 | 1 | - |
| Associate Professor | 1 | 1 | - |

| | | | |
|---|---|---|---|
| Assistant Professor | 2 | 2 | - |
| Senior Resident | 3 | 2 | 1 |
| Junior Resident | 6 | 2 | 4 |
| | | | |
| DEPARTMENT OF ORTHOPAEDICS | | | |
| Professor | 1 | 1 | - |
| Associate Professor | 1 | 1 | - |
| Assistant Professor | 2 | 1 | 1 |
| Senior Resident | 3 | 2 | 1 |
| Junior Resident | 6 | - | 6 |
| DEPARTMENT OF E.N.T | | | |
| Professor | 1 | 1 | - |
| Associate Professor | 1 | 1 | - |
| Assistant Professor | 2 | 1 | 1 |
| Senior Resident | 1 | 1 | - |
| Junior Resident | 3 | 2 | 1 |
| DEPARTMENT OF OPTHALMOLOGY | | | |
| Professor | 1 | 1 | - |
| Associate Professor | 1 | - | 1 |
| Assistant Professor | 2 | 1 | 1 |
| Senior Resident | 1 | 1 | - |
| Junior Resident | 3 | 3 | - |
| DEPARTMENT OF GENERAL SURGERY | | | |
| Professor | 1 | 1 | - |
| Associate Professor | 3 | 1 | 2 |
| Assistant Professor | 5 | 4 | 1 |
| Senior Resident | 6 | 4 | 2 |
| Junior Resident | 12 | 6 | 6 |
| DEPARTMENT OBG | | | |
| Professor | 1 | 1 | - |

| | | | |
|---|---|---|---|
| Associate Professor | 2 | 2 | - |
| Assistant Professor | 3 | 3 | - |
| Senior Resident | 3 | 1 | 2 |
| Junior Resident | 6 | 2 | 4 |
| DEPARTMENT OF RADIODIAGNOSIS | | | |
| Professor | 1 | 1* | - |
| Associate Professor | 1 | - | 1 |
| Assistant Professor | 1 | - | 1 |
| Tutors | 5 | - | 5 |
| DEPARTMENTOF ANAESTHESIOLOGY | | | |
| Professor | 1 | - | 1 |
| Associate Professor | 2 | 2 | - |
| Assistant Professor | 3 | 3 | - |
| Tutors | 8 | 4 | 4 |
| DEPARTMENT OF DENTISTRY | | | |
| Professor | 1 | 1 | - |
| Associate Professor | 1 | 1 | - |
| Assistant Professor | 1 | 1 | - |
| Junior Resident | 1 | 1 | - |
| **Total** | **220** | **146** | **74** |

Note:- *Two Professors working against sanctioned posts.

ಅನುಬಂಧ-2

## ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

### ಬೋಧಕ ಹುದ್ದೆಗಳ ವಿವರ 19-07-2012 ರಂತೆ

| Sl. No. | ವಿಭಾಗ | ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು | | | ಸಹಾಯಕ ಪ್ರಾಧ್ಯಾಪಕರು | | | ಉಪನ್ಯಾಸಕರು/ಸೀನಿಯರ್ ರೆಸಿಡೆಂಟ್ | | |
|---|---|---|---|---|---|---|---|---|---|---|
| | | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ |
| | ನಿರ್ದೇಶಕರು ಮತ್ತು ಡೀನ್ | 1 | 1 | 0 | | | | | | |
| 1 | ಅನಾಟಮಿ | 4 | 4 | 0 | 5 | 4 | 1 | 9 | 2 | 7 |
| 2 | ಫಿಸಿಯಾಲಜಿ | 4 | 4 | 0 | 4 | 2 | 2 | 8 | 4 | 4 |
| 3 | ಬಯೋಕೆಮಿಸ್ಟ್ರಿ | 3 | 3 | 0 | 3 | 2 | 1 | 6 | 3 | 3 |
| 4 | ಫಾರ್ಮಕಾಲಜಿ | 4 | 4 | 0 | 3 | 2 | 1 | 5 | 2 | 3 |
| 5 | ಪೆಥಾಲಜಿ | 7 | 6 | 1 | 6 | 6 | 0 | 11 | 2 | 9 |
| 6 | ಮೈಕ್ರೋಬಯಾಲಜಿ | 4 | 3 | 1 | 4 | 4 | 0 | 6 | 1 | 5 |
| 7 | ಪಿ ಎಸ್ ಎಂ | 4 | 4 | 0 | 9 | 5 | 4 | 6 | 3 | 3 |
| 8 | ಫೊರೆನ್ಸಿಕ್ ಮೆಡಿಸಿನ್ | 3 | 2 | 1 | 3 | 2 | 1 | 3 | 3 | 0 |
| 9 | ಮೆಡಿಸಿನ್ | 9 | 5 | 4 | 9 | 8 | 1 | 10 | 8 | 2 |
| 10 | ಪಿಡಿಯಾಟ್ರಿಕ್ಸ್ | 5 | 5 | 0 | 5 | 2 | 3 | 6 | 6 | 0 |
| 11 | ಸ್ಕಿನ್ & ಎಸ್‌ಟಿಡಿ | 3 | 4 | 0 | 2 | 2 | 0 | 3 | 0 | 3 |
| 12 | ಪಲ್ಮನರಿ ಮೆಡಿಸಿನ್ | 2 | 1 | 1 | 2 | 1 | 1 | 3 | 2 | 1 |

| Sl. No. | ವಿಭಾಗ | ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು | | | ಸಹಾಯಕ ಪ್ರಾಧ್ಯಾಪಕರು | | | ಉಪನ್ಯಾಸಕರು/ಸೀನಿಯರ್ ರೆಸಿಡೆಂಟ್ | | |
|---|---|---|---|---|---|---|---|---|---|---|
| | | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ |
| 13 | ಸೈಕಿಯಾಟ್ರಿ | 2 | 1 | 1 | 2 | 2 | 0 | 2 | 2 | 0 |
| 14 | ನೆಫ್ರಾಲಜಿ | 1 | 0 | 1 | 1 | 1 | 0 | 1 | 0 | 1 |
| 15 | ನ್ಯೂರಾಲಜಿ | 1 | 0 | 1 | 1 | 1 | 0 | 2 | 0 | 2 |
| 16 | ಮೆಡಿಕಲ್ ಅಂಕಾಲಜಿ | 1 | 0 | 1 | 1 | 1 | 0 | 1 | 0 | 1 |
| 17 | ಎಂಡೋಕ್ರೈನಾಲಜಿ | 1 | 1 | 0 | 1 | 1 | 0 | 1 | 0 | 1 |
| 18 | ಕಾರ್ಡಿಯಾಲಜಿ | 1 | 1 | 0 | 2 | 1 | 1 | 2 | 0 | 2 |
| 19 | ಸರ್ಜರಿ | 9 | 6 | 3 | 9 | 9 | 0 | 10 | 4 | 6 |
| 20 | ಆರ್ಥೋಪೆಡಿಕ್ಸ್ | 5 | 5 | 0 | 5 | 5 | 0 | 6 | 5 | 1 |
| 21 | ಇಎನ್‌ಟಿ | 3 | 3 | 0 | 3 | 3 | 0 | 4 | 2 | 2 |
| 22 | ಇಎನ್‌ಟಿ ಸ್ಪೀಚ್ ಥೆರಪಿಸ್ಟ್ | 0 | 0 | 0 | 0 | 0 | 0 | 1 | 0 | 1 |
| 23 | ಇಎನ್‌ಟಿ ಆಡಿಯಾಲಜಿಸ್ಟ್ | 0 | 0 | 0 | 0 | 0 | 0 | 1 | 0 | 1 |
| 24 | ಆಪ್ತಲ್ಮಾಲಜಿ | 3 | 2 | 1 | 2 | 2 | 0 | 5 | 1 | 4 |
| | ಎನ್‌ಪಿಸಿಬಿ ಸ್ಕೀಮ್ | | | | | | | | | |
| 26 | ಆಪ್ತಲ್ಮಾಲಜಿ | 0 | 0 | 0 | 1 | 1 | 0 | 2 | 0 | 2 |
| 27 | ಪೀಡಿಯಾಟ್ರಿಕ್ ಸರ್ಜರಿ | 1 | 1 | 0 | 1 | 0 | 1 | 2 | 0 | 1 |

| Sl. No. | ವಿಭಾಗ | ಪ್ರಾಧ್ಯಾಪಕರು ಸಹ ಪ್ರಾಧ್ಯಾಪಕರು | | | ಸಹಾಯಕ ಪ್ರಾಧ್ಯಾಪಕರು | | | ಉಪನ್ಯಾಸಕರು/ಸೀನಿಯರ್ ರೆಸಿಡೆಂಟ್ | | |
|---|---|---|---|---|---|---|---|---|---|---|
| | | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ | ಮಂಜೂರಾತಿ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಹುದ್ದೆ |
| 28 | ನ್ಯೂರೋ ಸರ್ಜರಿ | 1 | 1 | 0 | 1 | 1 | 0 | 1 | 0 | 1 |
| 29 | ಯೂರಾಲಜಿ | 1 | 0 | 1 | 1 | 1 | 0 | 2 | 0 | 2 |
| 30 | ಮೆಡಿಕಲ್ ಅಂಕಾಲಜಿ | 1 | 0 | 1 | 1 | 1 | 0 | 1 | 0 | 1 |
| 31 | ಕಾರ್ಡಿಯೋ ಥೊರಾಸಿಕ್ ಸರ್ಜರಿ | 1 | 1 | 0 | 1 | 1 | 0 | 1 | 0 | 1 |
| 32 | ಪಿ ಎಸ್ ಎಮ್ | 5 | 5 | 0 | 5 | 5 | 0 | 7 | 3 | 4 |
| 33 | ಅನಸ್ತೇಷಿಯಾ | 7 | 5 | 2 | 7 | 5 | 2 | 10 | 7 | 3 |
| 34 | ರೇಡಿಯೋ ಡಯಾಗ್ನಸಿಸ್ | 6 | 3 | 3 | 6 | 2 | 4 | 4 | 4 | 0 |
| 35 | ರೇಡಿಯೋ ಥೆರಪಿ | 1 | 0 | 1 | 1 | 1 | 0 | 2 | 2 | 0 |
| 36 | ದಂತ | 2 | 1 | 1 | 1 | 1 | 0 | 2 | 2 | 0 |
| 37 | ಪ್ಲಾಸ್ಟಿಕ್ ಸರ್ಜರಿ | 2 | 1 | 1 | 2 | 1 | 1 | 3 | 0 | 3 |
| ಒಟ್ಟು | | 107 | 81 | 26 | 110 | 86 | 24 | 148 | 68 | 80 |

(ವಿ. [illegible])
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

[illegible]

[illegible] - 3

**STAFF POSITION OF MYSORE MEDICAL COLLEGE AND RESEARCH INSTITUTE, MYSORE as on 19.07.2012**

| Sl. No. | POSTS | M.M.C & R.I. | | | M.M.C | | | K.R.HOSPITAL | | | CHELUVAMBA | | | P.K.T.B. | | | TOTAL | | |
|---|---|---|---|---|---|---|---|---|---|---|---|---|---|---|---|---|---|---|---|
| | | S | W | V | S | W | V | S | W | V | S | W | V | S | W | V | S | W | V |
| | **GROUP-A** | | | | | | | | | | | | | | | | | | |
| 1 | Director and Dean | 1 | 1 | 0 | | | | | | | | | | | | | 1 | 1 | 0 |
| 2 | Chief Administrative Officer | 1 | 0 | 1 | | | | | | | | | | | | | 1 | 1 | 0 |
| 3 | Blood Bank Officer | | | | 1 | 1 | 0 | | | | | | | | | | 1 | 1 | 0 |
| 4 | Residents | | | | 8 | 4 | 4 | | | | | | | | | | 8 | 4 | 4 |
| 5 | R.M.O. | | | | | | | 1 | 0 | 1 | 1 | 0 | 1 | | | | 2 | 0 | 2 |
| 6 | O.P.D. Surgeon | | | | | | | | | | 1 | 0 | 1 | | | | 1 | 0 | 1 |
| 7 | Civil Surgeons | | | | | | | 2 | 0 | 2 | | | | | | | 2 | 0 | 2 |
| 8 | Asst. Surgeons | | | | | | | 20 | 13 | 7 | | | | | | | 20 | 13 | 7 |
| 9 | Asst. Professor | | | | | | | 1 | 0 | 1 | | | | | | | 1 | 0 | 1 |
| 10 | Sr. Specialist | | | | | | | | | | 6 | 3 | 3 | 5 | 0 | 5 | 11 | 3 | 8 |
| 11 | Specialist | | | | | | | | | | | | | 3 | 1 | 2 | 3 | 1 | 2 |
| 12 | Dental Surgeon | | | | | | | 1 | 0 | 1 | | | | | | | 1 | 0 | 1 |
| 13 | Ophthalmologist | | | | | | | 1 | 0 | 1 | | | | | | | 1 | 0 | 1 |
| 14 | Asst. Surgeon (Opthal Eye Bank) | | | | | | | 1 | 0 | 1 | | | | | | | 1 | 0 | 1 |
| 15 | Asst. Surgeons (Mobile Opthal Unit) | | | | | | | 1 | 0 | 1 | | | | | | | 1 | 0 | 1 |
| | TOTAL | 2 | 1 | 1 | 9 | 5 | 4 | 28 | 13 | 15 | 8 | 3 | 5 | 8 | 1 | 7 | 55 | 24 | 31 |
| | **GROUP-B** | | | | | | | | | | | | | | | | | | |
| 16 | Asst. Surgeons Gr-3 | | | | | | | 2 | 0 | 2 | | | | | | | 2 | 0 | 2 |
| 17 | Assistant Administrative Officer | | | | 1 | 1 | 0 | 1 | 1 | 0 | 1 | 1 | 0 | 1 | 1 | 0 | 4 | 4 | 0 |
| 18 | Principal (School of Nursing) | | | | | | | 1 | 1 | 0 | | | | | | | 1 | 1 | 0 |
| 19 | Clinical Psychologist | | | | 2 | 0 | 2 | | | | | | | | | | 2 | 0 | 2 |
| 20 | Medical Record Officer | | | | 1 | 0 | 1 | | | | | | | | | | 1 | 0 | 1 |
| 21 | Chief Pharmacist | | | | | | | 1 | 0 | 1 | | | | | | | 1 | 0 | 1 |
| 22 | Graduate Pharmacist | | | | | | | 2 | 1 | 1 | | | | | | | 2 | 1 | 1 |
| 23 | Nursing Superintendent Gr-1 | | | | | | | 3 | 3 | 0 | 2 | 1 | 1 | 1 | 1 | 0 | 6 | 5 | 1 |

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| | TOTAL | | | | 4 | 1 | 3 | 10 | 6 | 4 | 3 | 2 | 1 | 2 | 2 | 0 | 19 | 11 | 8 |
| | GROUP-C | | | | | | | | | | | | | | | | | | |
| [illegible] | [illegible] Superintendent Gr-I | | | | 1 | 1 | 0 | 14 | 8 | 6 | 5 | 3 | 2 | 1 | 1 | 0 | 21 | 13 | 8 |
| [illegible] | [illegible] | | | | | | | 34 | 29 | 5 | 10 | 8 | 2 | 10 | 10 | 0 | 54 | 47 | 7 |
| [illegible] | [illegible] | | | | | | | 8 | 2 | 6 | | | | | | | 8 | 2 | 6 |
| [illegible] | [illegible] | | | | | | | 6 | 6 | 0 | 3 | 3 | 0 | 1 | 1 | 0 | 10 | 10 | 0 |
| [illegible] | [illegible] on Officer | | | | | | | 1 | 1 | 0 | | | | | | | 1 | 1 | 0 |
| [illegible] | [illegible] | | | | | | | 4 | 4 | 0 | 2 | 1 | 1 | 1 | 1 | 0 | 7 | 6 | 1 |
| [illegible] | Dietician | | | | | | | 1 | 0 | 1 | | | | | | | 1 | 0 | 1 |
| 31 | Office Superintendent | | | | 3 | 2 | 1 | 2 | 2 | 0 | 2 | 2 | 0 | 1 | 0 | 1 | 8 | 6 | 2 |
| 32 | FDA (cum Internal Auditor) | | | | | | | 1 | 0 | 1 | | | | | | | 1 | 0 | 1 |
| 33 | Food Supervisor/FDA | | | | | | | 1 | 0 | 1 | | | | | | | 1 | 0 | 1 |
| 34 | Physiotherapist | | | | | | | 4 | 3 | 1 | | | | | | | 4 | 3 | 1 |
| 35 | Dental Mechanic | | | | | | | 1 | 0 | 1 | | | | | | | 1 | 0 | 1 |
| 36 | Dental Hygienist | | | | | | | 1 | 1 | 0 | | | | | | | 1 | 1 | 0 |
| 37 | Prosthetist | | | | | | | 1 | 0 | 1 | | | | | | | 1 | 0 | 1 |
| 38 | Orthotist | | | | | | | 1 | 0 | 1 | | | | | | | 1 | 0 | 1 |
| 39 | Technician | | | | | | | 2 | 0 | 2 | | | | | | | 2 | 0 | 2 |
| 40 | Neurology Technician | | | | | | | 1 | 0 | 1 | | | | | | | 1 | 0 | 1 |
| 41 | Revenue Inspector/FDA | | | | | | | 1 | 0 | 1 | | | | | | | 1 | 0 | 1 |
| 42 | E.C.G. Technician | | | | | | | 1 | 0 | 1 | | | | | | | 1 | 0 | 1 |
| 43 | B.C.G. Technician | | | | | | | | | | 1 | 1 | 0 | | | | 1 | 1 | 0 |
| 44 | Blood Bank Technician | | | | | | | 1 | 0 | 1 | | | | | | | 1 | 0 | 1 |
| 45 | P.M.W. | | | | | | | 1 | 0 | 1 | | | | | | | 1 | 0 | 1 |
| 46 | First Division Assistant | | | | 11 | 11 | 0 | 7 | 7 | 0 | 1 | 1 | 0 | 3 | 3 | 0 | 22 | 22 | 0 |
| 47 | Second Division Assistant | | | | 16 | 9 | 7 | 15 | 14 | 1 | 7 | 4 | 3 | 5 | 3 | 2 | 43 | 30 | 13 |
| 48 | Computer Programmer and Operators | | | | 3 | 3 | 0 | | | | | | | | | | 3 | 3 | 0 |
| 49 | Stenographers | | | | 5 | 4 | 1 | | | | | | | | | | 5 | 4 | 1 |
| 50 | Junior Stenographers | | | | 2 | 2 | 0 | 1 | 0 | 1 | | | | | | | 3 | 2 | 1 |
| 51 | Typist | | | | 8 | 6 | 2 | 2 | 1 | 1 | 1 | 0 | 1 | 1 | 0 | 1 | 12 | 7 | 5 |
| 52 | Clerk Cum Typist | | | | 8 | 1 | 7 | | | | | | | | | | 8 | 1 | 7 |
| 53 | Sr. Lab Technician | | | | 36 | 33 | 3 | | | | 1 | 0 | 1 | | | | 37 | 33 | 4 |
| 54 | Jr. Lab Technician | | | | 28 | 28 | 0 | 5 | 4 | 1 | 1 | 1 | 0 | 2 | 2 | 0 | 36 | 35 | 1 |
| 55 | X-Ray Technician | | | | | | | 3 | 3 | 0 | | | | 1 | 1 | 0 | 4 | 4 | 0 |
| 56 | Senior Librarian | | | | 1 | 0 | 1 | | | | | | | | | | | | |

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 57 | Librarian Gr-I | | | | 1 | 1 | 0 | | | | | | | | | | 1 | 1 | 0 |
| 58 | Library Assistant | | | | 1 | 1 | 0 | | | | | | | | | | 1 | 1 | 0 |
| 59 | Asst. Medical Record Officer | | | | 1 | 0 | 1 | | | | | | | | | | 1 | 0 | 1 |
| 60 | Medical Record Technician | | | | 4 | 1 | 3 | | | | | | | | | | 4 | 1 | 3 |
| 61 | Asst.Statistical Officer | | | | 1 | 1 | 0 | | | | | | | 1 | 0 | 1 | 2 | 1 | 1 |
| 62 | Electrician | | | | 2 | 1 | 1 | 2 | 0 | 2 | 1 | 1 | 0 | | | | 5 | 2 | 3 |
| 63 | Bio-Medical Engineer | | | | 1 | 1 | 0 | | | | | | | | | | 1 | 1 | 0 |
| 64 | Social Worker | | | | 1 | 0 | 1 | | | | | | | | | | 1 | 0 | 1 |
| 65 | Psychiatry Social Worker | | | | 2 | 2 | 0 | | | | | | | | | | 2 | 2 | 0 |
| 66 | Sr. Refractionist | | | | 1 | 1 | 0 | | | | | | | | | | 1 | 1 | 0 |
| 67 | Refractionist | | | | 1 | 1 | 0 | 1 | 1 | 0 | | | | | | | 2 | 2 | 0 |
| 68 | Staff Nurse | | | | 3 | 3 | 0 | 211 | 173 | 45 | 39 | 31 | 8 | 32 | 30 | 2 | 285 | 237 | 48 |
| 69 | Jr. Health Asst. Female | | | | | | | | | | 17 | 17 | 0 | | | | 17 | 17 | 0 |
| 70 | Sr. Health Asst. Female | | | | 2 | 2 | 0 | | | | | | | | | | 2 | 2 | 0 |
| 71 | Staff Nurse(Contract) | | | | 30 | 30 | 0 | | | | | | | | | | 30 | 30 | 0 |
| 72 | Vculo Room Technician | | | | 1 | 0 | 1 | | | | | | | | | | 1 | 0 | 1 |
| 73 | Driver | | | | 5 | 1 | 4 | 7 | 1 | 6 | 2 | 1 | 1 | | | | 14 | 3 | 11 |
| 74 | Electronic Technician | | | | 1 | 0 | 1 | | | | | | | | | | 1 | 0 | 1 |
| 75 | Speech Therapist | | | | 1 | 0 | 1 | | | | | | | | | | 1 | 0 | 1 |
| 76 | Sr. Statistician | | | | 1 | 0 | 1 | | | | | | | | | | 1 | 0 | 1 |
| 77 | Artist | | | | 1 | 0 | 1 | | | | | | | | | | 1 | 0 | 1 |
| 78 | Radiographer | | | | 1 | 0 | 1 | 2 | 1 | 1 | | | | 1 | 1 | 0 | 4 | 2 | 2 |
| 79 | Health Instructor | | | | 2 | 0 | 2 | | | | | | | | | | 2 | 0 | 2 |
| 80 | Mechanic | | | | 1 | 0 | 1 | | | | | | | | | | 1 | 0 | 1 |
| 81 | Occu. Therapist | | | | 1 | 1 | 0 | | | | | | | | | | 1 | 1 | 0 |
| 82 | Moder | | | | 1 | 1 | 0 | | | | | | | | | | 1 | 1 | 0 |
| 83 | Physical Instructor | | | | 1 | 0 | 1 | | | | | | | | | | 1 | 0 | 1 |
| 84 | Statistical Officer | | | | 1 | 0 | 1 | | | | | | | | | | 1 | 0 | 1 |
| 85 | Pharmaceutical Chemist | | | | 1 | 0 | 1 | | | | | | | | | | 1 | 0 | 1 |
| 86 | Medico Social Worker | | | | 2 | 1 | 1 | | | | | | | | | | 2 | 1 | 1 |
| | ROME PROGRAMME | | | | | | | | | | | | | | | | 0 | 0 | 0 |
| 87 | Clerk Cum Typist | | | | 1 | 1 | 0 | | | | | | | | | | 1 | 1 | 0 |
| 88 | Driver | | | | 4 | 3 | 1 | | | | | | | | | | 4 | 3 | 1 |
| | N.P.C.B. PLAN | | | | | | | | | | | | | | | | 0 | 0 | 0 |
| 89 | Opthalmic Assistant | | | | 1 | 1 | 0 | | | | | | | | | | 1 | 1 | 0 |
| | TOTAL | | | | 200 | 153 | 46 | 343 | 281 | 89 | 93 | 74 | 19 | 60 | 53 | 7 | 696 | 542 | 154 |
| | GROUP-D | | | | | | | | | | | | | | | | | | |

| | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|
| [illegible] | | | | 165 | 58 | 107 | 266 | 104 | 162 | 112 | 34 | 78 | 114 | 32 | 82 | [illegible] | [illegible] | [illegible] |
| [illegible] | | | | 3 | 3 | 0 | | | | | | | | | | [illegible] | [illegible] | 0 |
| [illegible] | | | | 2 | 1 | 1 | | | | | | | | | | 2 | [illegible] | [illegible] |
| [illegible] | | | | 3 | 2 | 1 | | | | | | | | | | [illegible] | [illegible] | [illegible] |
| [illegible] | | | | 9 | 7 | 2 | 25 | 22 | 4 | | | | | | | [illegible] | [illegible] | [illegible] |
| [illegible] | | | | | | | 1 | 0 | 1 | | | | | | | [illegible] | [illegible] | [illegible] |
| [illegible] | | | | | | | 1 | 0 | 1 | | | | | | | [illegible] | 0 | [illegible] |
| [illegible] | | | | | | | 1 | 0 | 1 | | | | | | | 1 | 0 | [illegible] |
| [illegible] Watchman/Sanitary worker | | | | 2 | 2 | 0 | | | | | | | | | | 2 | 2 | [illegible] |
| 98 Watchman/Sanitary worker | | | | 7 | 7 | 1 | | | | | | | | | | 7 | 7 | 0 |
| [illegible] PROGRAMME | | | | | | | | | | | | | | | | 0 | 0 | 0 |
| 100 D Group Employees | | | | 7 | 6 | 1 | | | | | | | | | | 7 | [illegible] | 1 |
| TOTAL | | | | 198 | 88 | 112 | 295 | 126 | 169 | 112 | 34 | 78 | 114 | 32 | 82 | 718 | 278 | [illegible] |
| GRAND TOTAL(GROUP-A,B,C,D) | 2 | 1 | 1 | 411 | 245 | 165 | 676 | 406 | 277 | 216 | 113 | 103 | 184 | 88 | 96 | 1485 | [illegible] 823 | [illegible] |

ಷರಾ

| | |
|---|---|
| ಗ್ರೂಪ್ 'ಬಿ' | |
| 1 ಸಹಾಯಕ ಆಡಳಿತಾಧಿಕಾರಿ | ಜೆ. ಪಾಲ್ಸ್ವಾಮಿ ಅವರು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| ಗ್ರೂಪ್ 'ಸಿ' | |
| 1 ಸಹಾಯಕ ವೈದ್ಯಕೀಯ ದಾಖಲಾತಾಧಿಕಾರಿ | ಎಸ್.ಶ್ಯಾಂ ಸುಂದರ್ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| 2 ನೇತ್ರ ಸಹಾಯಕರು | ಸವಿತಾ ಕುಲಕರ್ಣಿ ಅವರು ವೈದ್ಯಕೀಯ ದಾಖಲಾತಿ ತಂತ್ರಜ್ಞರ ಎಂಬ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| 3 ಹಿರಿಯ ನೇತ್ರ ಸಹಾಯಕರು | ಎಂ.ಶಂಕರೇಗೌಡ ಅವರು ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಎಂಬ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| 4 ಹಿರಿಯ ನೇತ್ರ ಸಹಾಯಕರು | ಎ ಬಾಲಸುಬ್ರಮಣ್ಯಂ ಅವರು ಅಕ್ಯೂಪೇಷನ್ ಥೆರಪಿಸ್ಟ್ ಎಂಬ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| 5 ವಿದ್ಯುತ್ ತಂತ್ರಜ್ಞರು | ಎಂ.ಶಿವಣ್ಣ ಅವರು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ |

(ವಿ. ಸಾಯಿಬಾಬಾ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:551 ಕ್ಕೆ**

**ಅನುಬಂಧ–4**

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ–571 401

MANDYA INSTITUTE OF MEDICAL SCIENCES

MANDYA-571 401

(Autonomous Medical institution, Government Of Karnataka)

ಬೋಧಕೇತರ ಸಿಬ್ಬಂದಿ ವಿವರಗಳು

| ಕ್ರ ಸಂ. | ಮಂಜೂರಾದ ಪದನಾಮ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ |
|---|---|---|---|
| 01 | ಮುಖ್ಯ ಆಡಳಿತಾಧಿಕಾರಿಗಳು | 01 | 00 |
| 02 | ಆರ್ಥಿಕ ಸಲಹೆಗಾರರು | 01 | 00 |
| 03 | ಲೇಡಿ ಮೆಡಿಕಲ್ ಆಫೀಸರ್ | 03 | 00 |
| 04 | ಸೈಕಿಯಾಟ್ರಿಸ್ಟ್ (ಚೈಲ್ಡ್) | 01 | 00 |
| 05 | ಟೆಕ್ನಿಕಲ್ ಅಸಿಸ್ಟೆಂಟ್/ಟೆಕ್ನಿಷಿಯನ್ | 58 | 04 |
| 06 | ರೇಡಿಯೋಗ್ರಾಫರ್ | 08 | 00 |
| 07 | ರೇಡಿಯೋಥೆರಪಿಸ್ಟ್ | 03 | 00 |
| 08 | ಫಿಜಿಯೋಥೆರಪಿಸ್ಟ್ | 02 | 00 |
| 09 | ಆಕ್ಯುಪೇಷನ್‌ಥೆರಪಿಸ್ಟ್ | 02 | 00 |
| 10 | ಸ್ಪೀಪ್ ಥೆರೆಪಿಸ್ಟ್ | 03 | 00 |

| | | | |
|---|---|---|---|
| 11 | ಆರ್ಥೋರ್ ಥೇರಪಿಸ್ಟ್ | 02 | 00 |
| 12 | ಆಡಿಯೋಮಿಟರ್ ಟೆಕ್ನಿಷಿಯನ್ | 01 | 00 |
| 13 | ರಿಪ್ರಾಸ್ವನಿಸ್ಟ್ | 01 | 00 |
| 14 | ಎಲೆಕ್ಟ್ರೋ ಕಾರ್ಡಿಯೋಗ್ರಾಫರ್ | 01 | 00 |
| 15 | ಡೆಂಟಲ್ ಟೆಕ್ನಿಷಿಯನ್ | 04 | 00 |
| 16 | ಕೌನ್ಸಿಲರ್ | 01 | 00 |
| 17 | ಫಾರ್ಮಕೇಮಿಸ್ಟ್ | 01 | 00 |
| 18 | ಎಂ.ಎಸ್.ಡಬ್ಲೂ | 11 | 03 |
| 19 | ಎಂ.ಆರ್.ಡಬ್ಲೂ | 04 | 00 |
| 20 | ಹೆಲ್ತ್ ಎಜುಕೇಟರ್ | 04 | 00 |
| 21 | ಹೆಲ್ತ್ ಇನ್ಸ್‌ಪೆಕ್ಟರ್ | 04 | 00 |
| 22 | ಲೇಡಿ ಹೆಲ್ತ್ ವಿಸಿಡರ್ಸ್ | 01 | 00 |
| 23 | ಪಬ್ಲಿಕ್ ಹೆಲ್ತ್ ನರ್ಸ್ | 03 | 00 |
| 24 | ಬೀಫ್ ಲೈಬ್ರರಿಯನ್ | 01 | 00 |
| 25 | ಡೆಪ್ಯುಟಿ ಬೀಫ್ ಲೈಬ್ರರಿಯನ್ | 01 | 00 |
| 26 | ಅಸಿಸ್ಟೆಂಟ್ ಲೈಬ್ರರಿಯನ್ | 02 | 00 |
| 27 | ಫಿಸಿಸಿಸ್ಟ್ | 01 | 01 |
| 28 | ಸೀನಿಯರ್ ಟೈಪಿಸ್ಟ್ | 01 | 00 |

| | | | |
|---|---|---|---|
| 29 | ಸ್ಟೆನೋಗ್ರಾಫರ್ | 18 | 00 |
| 30 | ಸ್ಟೋರ್ ಕೀಪರ್ ಕಂ ಕ್ಲರ್ಕ್ | 22 | 4 |
| 31 | ಕ್ಲರ್ಕ್ | – | – |
| 32 | ರೆಕಾರ್ಡ್ ಕೀಪರ್ ಕಂ ಕ್ಲರ್ಕ್ | 18 | 6 |
| 33 | ಆರ್ಟಿಸ್ಟ್ | 01 | 00 |
| 34 | ಮಾಡೆಲರ್ | 01 | 00 |
| 35 | ಡಿಸೆಕ್ಷನ್ ಹಾಲ್ ಆರ್ಟಿಸ್ಟ್ | 06 | 00 |
| 36 | ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್ | 31 | 24 |
| 37 | ಡಾರ್ಕ್ ರೂಂ ಅಸಿಸ್ಟೆಂಟ್ | 04 | 00 |
| 38 | ವರ್ಕ್‌ಷಾಪ್ ವರ್ಕರ್ | 06 | 00 |
| 39 | ವ್ಯಾನ್ ಡ್ರೈವರ್ | 02 | 00 |
| 40 | ಪೀವನ್ಸ್/ಗ್ರೂಪ್–ಡಿ | 08 | 00 |
| 41 | ಸ್ವೀಪರ್ಸ್ | 26 | 03 |
| 42 | ಸ್ಟಾಫ್ ನರ್ಸ್‌ಸ್ | 255 | 91 |
| | **ಒಟ್ಟು** | **524** | **136** |

(ವಿ. ಸಾಯಿಬಾಬಾ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ಮೈಸೂರು ಮತ್ತು ಮಂಡ್ಯ ವೈದ್ಯಕೀಯ ಕಾಲೇಜುಗಳಲ್ಲಿ ಬೋಧಕ ವರ್ಗದ ಹುದ್ದೆಗಳಾದ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ಹುದ್ದೆಗಳು ಎಷ್ಟು ಎನ್ನುವ ಪ್ರಶ್ನೆಗೆ, ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ 235 ಹುದ್ದೆಗಳಿಗೆ ಸುಮಾರು 130 ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇವೆ.

ಸನ್ಮಾನ್ಯ ಸಭಾಪತಿಯವರೆ, 'ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ 220, ಅದರಲ್ಲಿ 134 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಉಳಿದಂತೆ 74 ಹುದ್ದೆಗಳು ಖಾಲಿ ಇವೆ' ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇನ್ನು ಬೋಧಕೇತರ ಹುದ್ದೆಗಳ ಅಡಿಯಲ್ಲಿ ಲ್ಯಾಬ್ ಅಸಿಸ್ಟೆಂಟ್ಸ್, ಸ್ಟಾಫ್ ನರ್ಸ್ ಮತ್ತು ಟೆಕ್ನಿಷಿಯನ್ಸ್‌ಗಳು ಬರುತ್ತಾರೆ. ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಒಟ್ಟು 524 ಬೋಧಕೇತರ ಹುದ್ದೆಗಳು ಮಂಜೂರಾಗಿವೆ. ಅದರಲ್ಲಿ 136 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದಿರುವ 388 ಹುದ್ದೆಗಳು ಖಾಲಿ ಇವೆ, ಅವುಗಳನ್ನು ಭರ್ತಿ ಮಾಡಿಲ್ಲ. ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ 1489 ಬೋಧಕೇತರ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 853 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳಲಾಗಿದೆ. ಉಳಿದ 636 ಹುದ್ದೆಗಳು ಖಾಲಿ ಇವೆ. ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ 255 ಸ್ಟಾಫ್ ನರ್ಸ್ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 91 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳಲಾಗಿದೆ. ಸ್ಟಾಫ್ ನರ್ಸ್‌ಗಳು ಇಲ್ಲವೆಂದರೆ ರೋಗಿಗಳ ಗತಿ ಏನು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಉಳಿದಂತೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ 235 ಬೋಧಕ ಹುದ್ದೆಗಳು ಭರ್ತಿಯಾಗಿವೆ. ಆದರೆ, 130 ಹುದ್ದೆಗಳು ಖಾಲಿ ಇವೆ. ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ 74 ಬೋಧಕ ಹುದ್ದೆಗಳು ಖಾಲಿ ಇವೆ. ಯಾವ ರೀತಿಯಲ್ಲಿ ಮೆಡಿಕಲ್ ಕಾಲೇಜುಗಳು ನಡೆಯುತ್ತಿವೆ ಎನ್ನುವುದು ತಮ್ಮ ಗಮನಕ್ಕೆ ಬಂದಿರಬಹುದು. M.C.I., (Medical Council of India)

ಪ್ರತಿವರ್ಷ ಯಾವ ರೀತಿಯಲ್ಲಿ ಅನುಮತಿಯನ್ನು ಕೊಡುತ್ತಿದೆ ಎನ್ನುವುದು ಪ್ರಶ್ನೆಯಾಗಿದೆ. ಈ ಕಾಲೇಜುಗಳಿಂದ ಹೊರಬಂದಿರುವ ವೈದ್ಯರು ಯಾವ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಂದ ಸೇವೆ ಪಡೆದುಕೊಂಡ ರೋಗಿಗಳ ಕಥೆಯೇನು ಎನ್ನುವುದನ್ನು ತಾವು ಊಹಿಸಿಕೊಳ್ಳಬೇಕಾಗಿದೆ. ಈ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ತೊಂದರೆ ಏನು, ಕಾರಣ ಏನು, ಸರ್ಕಾರದ ಬಳಿ ಹಣ ಇಲ್ಲವೇ, ಇವರು ಸಂದರ್ಶನ ಕರೆದರೂ ಡಾಕ್ಟರ್‌ಗಳು ಬರುತ್ತಿಲ್ಲವೇ ಈ ಎಲ್ಲ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಎ. ರಾಮದಾಸ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಗಳನ್ನು ಕೇಳಿದ್ದಾರೆ, ಈ ಇಲಾಖೆಯಲ್ಲಿ ಸಮಸ್ಯೆಗಳು ಇದೆ. M.C.I., ನ ನಿಯಮಾವಳಿಗಳ ಪ್ರಕಾರ 100 ಸೀಟ್‌ಗೆ ಎಷ್ಟು ಬೆಡ್ ಇರಬೇಕು, ಎಷ್ಟು ತಂತ್ರಜ್ಞರು ಇರಬೇಕು ಮತ್ತು ಎಷ್ಟು ಬೋಧಕ ವರ್ಗದವರು ಬೇಕು ಅಷ್ಟು ಸಂಖ್ಯೆಯನ್ನು ನಾವು ತುಂಬಿದ್ದೇವೆ. ಆದರೂ ಈ ಹುದ್ದೆಗಳು ಏತಕ್ಕಾಗಿ ಖಾಲಿ ಇವೆ ಎಂದರೆ, ಜಿಲ್ಲಾ ಆಸ್ಪತ್ರೆಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಪರಿವರ್ತನೆ ಮಾಡಿದ ಮೇಲೆ ಅಂದು ಹಣಕಾಸು ಇಲಾಖೆಗೆ ಕೊಟ್ಟಂಥ ಹುದ್ದೆಗಳನ್ನು ಇಲ್ಲಿಯವರೆಗೂ ಖಾಲಿ ಎಂದು ತೋರಿಸಿಕೊಂಡು ಬಂದಿದ್ದೇವೆ. ಯಾವ ಯಾವ ಹುದ್ದೆಗಳಿಗೆ ನೇಮಕಾತಿ ಆಗಬೇಕಾಗಿತ್ತೋ ಆ ನೇಮಕಾತಿಗಳನ್ನು ಬಿಟ್ಟು ಬೇರೆ ನೇಮಕಾತಿಗಳನ್ನು ಅಲ್ಲಿ ಮಾಡಿರುವಂತಹ ಪ್ರಕರಣಗಳು ಇವೆ. ಮೊದಲು C&R Rules ಇಲ್ಲದೆ ನೇಮಕಾತಿ ಆದಂತಹ ಪ್ರಕರಣಗಳು ಇತ್ತು. ಆ ಹಿನ್ನೆಯಲ್ಲಿ ಇವತ್ತು ಎಲ್ಲ ಹುದ್ದೆಗಳನ್ನು reappropriation ಮಾಡಿ, ಅವಶ್ಯಕತೆ ಇರುವಂತಹ ಹುದ್ದೆಗಳನ್ನು convert ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಇಡೀ ರಾಜ್ಯಕ್ಕೆ ಬೇಕಾಗಿರುವಂತಹ common C & R Rules ಮಾಡಿ ಈಗಾಗಲೇ ಕಾನೂನು ಇಲಾಖೆಯ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಅದನ್ನು ಈಗ ಜಾರಿಗೆ ಕೊಡುತ್ತಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಸ್ವಾಯುತ್ತ ಶಿಕ್ಷಣ ಸಂಸ್ಥೆಗಳು ಒಂದೊಂದು ಒಂದೊಂದು ರೀತಿಯ ಬೈಲಾಗಳನ್ನು ಇಟ್ಟುಕೊಂಡಿರುತ್ತವೆ. ಮಂಡ್ಯದಲ್ಲಿ ಒಂದು ರೀತಿಯಾಗಿರುವಂತಹ ಬೈಲಾ, ಮೈಸೂರಿಗೆ ಒಂದು ರೀತಿಯ ಬೈಲಾ ಮತ್ತು ಶಿವಮೊಗ್ಗಕ್ಕೆ ಒಂದು ರೀತಿಯ ಬೈಲಾ ಇರುತ್ತದೆ.ಶಿವಮೊಗ್ಗದಲ್ಲಿ 8 ಹುದ್ದೆಗಳು ಬೇಕಾಗಿದ್ದರೆ 11 ಹುದ್ದೆಗಳನ್ನು ಭರ್ತಿ ಮಾಡಿಕೊಂಡಿದ್ದಾರೆ. ಹುದ್ದೆಗಳನ್ನು ತುಂಬಬೇಕಾಗಿರುವಂತಹ ಜಾಗಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಇದುವರೆವಿಗೂ ಈ ರೀತಿ ಕಾಮನ್ ಬೈಲಾವನ್ನು ಇಡೀ ರಾಜ್ಯಕ್ಕೆ ಮಾಡಿ ಈಗಾಗಲೇ ಕಳುಹಿಸಿಕೊಡಲಾಗಿದೆ. M.C.I., ನ Norms ಪ್ರಕಾರ ಇಡೀ ರಾಜ್ಯಕ್ಕೆ ಎಷ್ಟು ಹುದ್ದೆಗಳು ಬೇಕಾಗಿದೆ ಅದನ್ನು ತುಂಬುವಂತಹ ಕೆಲಸವನ್ನು ಮಾಡಿದ್ದೇವೆ. ಮಂಡ್ಯ ಮೆಡಿಕಲ್ ಕಾಲೇಜಿಗೆ ಬೇಕಾಗಿರುವಂತಹ 100 ಸೀಟುಗಳು ಇವೆ. ಆ ನೂರು ಸೀಟಿಗೆ ಬೇಕಾಗಿರುವಂತಹ ಹುದ್ದೆಗಳನ್ನು ತೆಗೆದುಕೊಂಡಿದ್ದೇವೆ. ಯಾಕೆ ಇದನ್ನು ಹೀಗೆ ಬಿಟ್ಟುಕೊಂಡಿದ್ದೇವೆ ಎಂದರೆ, 150 ಸೀಟ್ Enhancement ಕೊಡುತ್ತಿದ್ದಾರೆ.ಈಗ ಇರುವಂತಹ ಪೋಸ್ಟ್‌ಗಳನ್ನು reappropriation ಮಾಡಿಕೊಂಡು ಆ ಹುದ್ದೆಗಳನ್ನು ತುಂಬುವುದಕ್ಕೆ ಬೇಕಾಗಿರುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನರ್ಸಿಂಗ್ ಪೋಸ್ಟ್‌ಗಳ ಬಗ್ಗೆ ಹೇಳಿದ್ದಾರೆ. ಸ್ಟಾಫ್ ನರ್ಸ್‌ಗಳ ಹುದ್ದೆ 255 ಎಂದು ಇದೆ. ಜಿಲ್ಲಾ ಆಸ್ಪತ್ರೆಗಳು ನಮ್ಮ ವ್ಯಾಪ್ತಿಗೆ ಬಂದ ನಂತರ ಅಲ್ಲಿರುವ ಬೆಡ್‌ಗಳ ಲೆಕ್ಕದಲ್ಲಿ ನಮಗೆ ಕೇವಲ 150 ನರ್ಸ್‌ಗಳು ಇದ್ದರೆ ಸಾಕು. ಆದರೆ, ಅಲ್ಲಿ ನಮಗೆ ಹೆಚ್ಚುವರಿ 150 ಪೋಸ್ಟ್‌ಗಳು ಇವೆ. ಅದನ್ನು ನಾವು ಬಿಟ್ಟು ಕೊಟ್ಟಿಲ್ಲ. ಅದರಲ್ಲಿಯೂ 120 ಪೋಸ್ಟ್‌ಗಳನ್ನು ಭರ್ತಿ ಮಾಡಿದ್ದೇವೆ. ಮಂಡ್ಯ ಮೆಡಿಕಲ್ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್‌ಗಳ ಸಂಖ್ಯೆ 91 ಎಂದು ಹೇಳಿದ್ದಾರೆ. ಇದರ ಜೊತೆಗೆ 28 ಜನ Health and Medical Education Department ನಲ್ಲಿ ಕೆಲಸ ಮಾಡುತ್ತಿರುವವರು ಇದ್ದಾರೆ. ನಾವು ಇಲ್ಲಿ ಹುದ್ದೆಗಳನ್ನು ತೋರಿಸಿದ್ದೇವೆ. ಆದರೆ, ಇಲ್ಲಿರುವ ಸಮಸ್ಯೆ ಏನೆಂದರೆ, ಆರೋಗ್ಯ ಇಲಾಖೆಯಲ್ಲಿ ಕೆಲಸ

ಮಾಡುತ್ತಿರುವವರು ವೈದ್ಯಕೀಯ ಶಿಕ್ಷಣ ಮತ್ತು ಬೇರೆ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದರು. ಅವರನ್ನು ಮತ್ತೇ ಆರೋಗ್ಯ ಇಲಾಖೆಗೆ ವಾಪಸ್ಸು ಕಳುಹಿಸಿರುವಂತಹ ಪ್ರಕ್ರಿಯೆಯನ್ನು ಕಳೆದ ವರ್ಷ ಮಾಡಲಾಯಿತು. ಅವರುಗಳು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಆರೋಗ್ಯ ಇಲಾಖೆಯವರು ಸಂಬಳ ಕೊಡುತ್ತಿದ್ದಾರೆ, ಅವರು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂತಹ ನೂರಾರು ಸಮಸ್ಯೆಗಳನ್ನು ನಾವು ಎದುರಿಸುತ್ತಿದ್ದೇವೆ. ಅದಕ್ಕಾಗಿಯೇ reappropriationನ್ನು ಮಾಡಿದ್ದೇವೆ. ಅದರ ಜೊತೆಗೆ M.C.I., norms ಗಳು ಏನಿವೆ ಅವುಗಳನ್ನು fulfil ಮಾಡುವಂತಹ ಕ್ರಮಗಳನ್ನು ನಾವು ಕೈಗೊಂಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, Common C & R Rules ನ್ನು ಈಗಾಗಲೇ ಕೊಟ್ಟಿದ್ದೇವೆ. ಆ ಪ್ರಕಾರ ನೇಮಕಾತಿಗಳನ್ನು ಮಾಡಲಾಗಿದೆ. ಕಾಮನ್ ಬೈಲಾ ಏನು ಕೊಟ್ಟಿದ್ದೇವೆ, ಅದನ್ನು ನಿಯಮದ ಆಧಾರದ ಮೇಲೆ ಮಾಡಿದ್ದೇವೆ. ಮೊದಲು ಇಡೀ ರಾಜ್ಯದಲ್ಲಿ ಒಟ್ಟಿಗೆ ನೇಮಕಾತಿ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೆವು. ಆದರೆ, ಈಗ ಆಯಾಯ ಕಾಲೇಜುಗಳಲ್ಲಿ ಇರುವಂತಹ Director ಅಥವಾ Dean ಅವರಿಗೆ Walk-in-interview ಮೂಲಕ ನೇಮಕಾತಿಗಳನ್ನು ಮಾಡಿಕೊಳ್ಳುವಂತಹ ಮಾರ್ಗಸೂಚಿಯನ್ನು ಹೊರಡಿಸಿದ್ದೇವೆ. ಅದರ ಪ್ರಕಾರವಾಗಿ ಯಾವ ದಿನ ಸಂದರ್ಶನವಾಗುತ್ತದೆ ಆ ದಿನ ಸಂಜೆಯೇ ಆಯ್ಕೆಗೊಂಡಿರುವವರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ, Gold Medal ಪಡೆದುಕೊಂಡಿರುವವರಿಗೆ 2 ಅಂಕಗಳು, Paper presentation ಗೆ ರಾಷ್ಟ್ರೀಯಮಟ್ಟದಾದರೆ ಅರ್ಧ ಅಂಕಗಳು, ಅಂತರರಾಷ್ಟ್ರೀಯ ಮಟ್ಟದಾದರೆ ಒಂದು ಅಂಕಗಳು, ಒಟ್ಟು ಎರಡು ಅಂಕಗಳು, ಅನುಭವಕ್ಕೆ ಪ್ರತಿ ವರ್ಷಕ್ಕೂ ಅರ್ಧ ಅಂಕಗಳಂತೆ ಗರಿಷ್ಠ 2 ಅಂಕಗಳನ್ನು ನೀಡಲಾಗುತ್ತದೆ. ಈ ಎಲ್ಲ ಮಾಹಿತಿಗಳನ್ನು Website ಗೆ ಹಾಕಿ Walk-in-interview ಆದ ದಿನ ಸಂಜೆಯೊಳಗೆ ಫಲಿತಾಂಶವನ್ನು ಪ್ರಕಟ ಮಾಡುವಂತಹ ಪ್ರಕ್ರಿಯೆಯನ್ನು ಸಹ ಪ್ರಾರಂಭ ಮಾಡಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮೈಸೂರು ಮೆಡಿಕಲ್ ಕಾಲೇಜಿನಲ್ಲಿ 130 ಹುದ್ದೆಗಳು ಖಾಲಿ ಇಲ್ಲ, ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ 74 ಹುದ್ದೆಗಳು ಭರ್ತಿ ಆಗಿವೆ ಎನ್ನುವುದಾದರೇ ಯಾವುದೂ ಖಾಲಿ ಇಲ್ಲ ಎಲ್ಲವೂ ಭರ್ತಿಯಾಗಿದೆ ಎನ್ನುವುದು ಅರ್ಥವಾಗುತ್ತದೆ. ಮಾನ್ಯ ಸಚಿವರು ಸರ್ಕಾರಿ ಮೆಡಿಕಲ್ ಕಾಳೇಜುಗಳ ಬಗ್ಗೆ Medical Council of India ಗೆ ಕೊಡುವಂತಹ ಸುಳ್ಳು ಮಾಹಿತಿಯ ಬಗ್ಗೆ ಸದನದಲ್ಲಿ ಸತ್ಯವನ್ನು ಹೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೇ ಏನೆಂದರೆ, ಮೈಸೂರು ಮತ್ತು ಮಂಡ್ಯ ಮೆಡಿಕಲ್ ಕಾಲೇಜುಗಳಲ್ಲಿ ಹುದ್ದೆಗಳು ಭರ್ತಿ ಆಗಿವೆಯೇ? ಭರ್ತಿ ಆಗದೇ ಇದ್ದರೆ ಎಷ್ಟು ಹುದ್ದೆಗಳು ಭರ್ತಿ ಆಗಬೇಕು, ಅವುಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುತ್ತದೆ ಎನ್ನುವುದರ ಬಗ್ಗೆ ಉತ್ತರವನ್ನು ಬಯಸುತ್ತಿದ್ದೇನೆ. ಅವರು ಮೆಡಿಕಲ್ ಕಾಲೇಜುಗಳಲ್ಲಿ ಖಾಲಿ ಇದಂತಹ ಬೋಧಕ ಹುದ್ದೆಗಳು ಭರ್ತಿಯಾಗಿರುವ ಬಗ್ಗೆ Medical Council of India ಕೊಡುವಂತಹ ಲೆಕ್ಕವನ್ನು ಇಲ್ಲಿ ಹೇಳುವುದು ಬೇಡ. Medical Council of India ಗೆ ಯಾವ ರೀತಿ ಲೆಕ್ಕ ನೀಡಲಾಗುತ್ತದೆ ಎನ್ನುವುದನ್ನು ನನಗೆ ಗೊತ್ತಿದೆ.ಆದ್ದರಿಂದ ಅವರು ನನ್ನ ಪ್ರಶ್ನೆಗಳಿಗೆ ನೇರವಾದ ಉತ್ತರಗಳನ್ನು ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಎ. ರಾಮದಾಸ್:-** ಸನ್ಮಾನ್ಯ ಸಭಾಪತಿಯವರೇ, ಬೋಧಕ ಹುದ್ದೆಗಳ ಬಗ್ಗೆ ಹೇಳಬೇಕಾದರೆ, ಮಂಡ್ಯ ಮೆಡಿಕಲ್ ಕಾಲೇಜನ್ನು 100 ರಿಂದ 150 ಬೆಡ್‌ಗಳಿಗೆ, ಮೈಸೂರು ಮೆಡಿಕಲ್ ಕಾಲೇಜನ್ನು 150 ರಿಂದ 250 ಬೆಡ್‌ಗಳಿಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಅದಕ್ಕೆ ಬೇಕಾಗಿರುವಂತಹ ಎಲ್ಲ ಹುದ್ದೆಗಳ ಮಂಜೂರಾತಿಯನ್ನು ಕೋರಿದ್ದೇವೆ. ಆ ಹುದ್ದೆಗಳು ಮಂಜೂರಾಗಿ ಬಂದ ಕೂಡಲೇ ಬಹುತೇಕ ಇನ್ನು ಮೂರು ತಿಂಗಳೊಳಗಾಗಿ Notification ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಮೊದಲು ನಾವು AICTE pay scale ಕೊಟ್ಟಿರಲಿಲ್ಲ. ನಾವು Notification ಮಾಡಿದಾಗ ಡಾಕ್ಟರ್‌ಗಳು ಬರುತ್ತಿರಲಿಲ್ಲ.

ಈಗ AICTE pay scale ಕೊಡುತ್ತಿರುವುದರಿಂದ ಬಹುತೇಕ ಎಲ್ಲ ಕಡೆಗಳಲ್ಲಿ ಬೋಧಕ ಸಿಬ್ಬಂದಿಗಳು ಬರುತ್ತಿದ್ದಾರೆ. 'ಡಿ' ಗ್ರೂಪ್ ಹುದ್ದೆಗಳ ಬಗ್ಗೆ ಹೇಳಬೇಕಾದರೆ, ಸರ್ಕಾರ ಒಂದು ಆಜ್ಞೆ ಹೊರಡಿಸಿ, 'ಡಿ' ಗ್ರೂಪ್ ಸಿಬ್ಬಂದಿಗಳ ಹುದ್ದೆ ಎಷ್ಟಿವೆ ಅವುಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಬಾರದು ಟೆಂಡರ್ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿ ಎನ್ನುವಂತಹ ಆದೇಶವನ್ನು ನೀಡಿದೆ. ಅದರ ಹಿನ್ನೆಲೆಯಲ್ಲಿ ಎಲ್ಲ ಸ್ವಾಯುತ್ತ ಸಂಸ್ಥೆಗಳು ಟೆಂಡರ್‌ನ ಆಧಾರದ 'ಡಿ' ಗ್ರೂಪ್ ಹುದ್ದೆಗಳನ್ನು ಭರ್ತಿ ಮಾಡುತ್ತಿವೆ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ನಾನು ಕೇಳಿದರೆ, ಮಾನ್ಯ ಸಚಿವರು AICTE pay scale ಬಗ್ಗೆ ಮಾತನಾಡುತ್ತಿದ್ದಾರೆ. ನಾನುAICTE pay scale ಬಗ್ಗೆ ಮಾತನಾಡಿಲ್ಲ. ಮಾನ್ಯ ಸಚಿವರು ಈ ಎರಡು ಮೆಡಿಕಲ್ ಕಾಲೇಜುಗಳಲ್ಲಿ ಇತ್ತೀಚೆಗೆ ಎಷ್ಟು ಸಾರಿ ಬೋಧಕ ಹುದ್ದೆಗಳಿಗಾಗಿ ಸಂದರ್ಶನವನ್ನು ಕರೆಯಲಾಗಿದೆ, ಸಂದರ್ಶನವನ್ನು ಕರೆದಾಗಲೂ ಸಹ ಎಷ್ಟು ಹುದ್ದೆಗಳಿಗೆ ಅಭ್ಯರ್ಥಿಗಳು ಬಂದಿಲ್ಲ ಎನ್ನುವಂತಹ ಮಾಹಿತಿಯನ್ನು ನೀಡಬೇಕು. ವಾಸ್ತವವಾಗಿ ಇವರು ಸಂದರ್ಶನವನ್ನೇ ಕರೆದಿಲ್ಲ. AICTE pay scale ಕೊಡುತ್ತಿದ್ದೇವೆ ಈಗ ಡಾಕ್ಟರ್‌ಗಳು ಬರುತ್ತಿದ್ದಾರೆ ಎನ್ನುವಂತಹ ಮಾತುಗಳನ್ನು ಹೇಳುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು 255 ಸ್ಟಾಫ್ ನರ್ಸ್‌ಗಳಲ್ಲಿ 91 ಸ್ಟಾಫ್ ನರ್ಸ್‌ಗಳನ್ನು ಮಾತ್ರ ನೇಮಕಾತಿ ಮಾಡಲಾಗಿದೆ. ಉಳಿದಂತೆ 164 ಸ್ಟಾಫ್ ನರ್ಸ್‌ಗಳ ಹುದ್ದೆ ಖಾಲಿ ಇವೆ. ನಾವೇ ರೋಗಿಗಳಾಗಿ ಅಲ್ಲಿಗೆ ಹೋದರೆ ಶುಶ್ರೂಷೆ ಮಾಡುವುದಕ್ಕೆ ನಮಗೂ ಸ್ಟಾಫ್ ನರ್ಸ್‌ಗಳ ಅವಶ್ಯಕತೆ ಇದೆ. ಸುಮಾರು 255 ಸ್ಟಾಫ್ ನರ್ಸ್‌ಗಳಲ್ಲಿ 91 ಸ್ಟಾಫ್ ನರ್ಸ್‌ಗಳನ್ನು ಮಾತ್ರ ನೇಮಕಾತಿ ಮಾಡಿಕೊಂಡು ಇವರು ಮೆಡಿಕಲ್ ಕಾಲೇಜನ್ನು ನಡೆಸುತ್ತಿದ್ದಾರೆ. ಖಾಸಗಿ ಕಾಲೇಜುಗಳಲ್ಲಿ 'ಅದಿಲ್ಲ ಇದಿಲ್ಲ' ಅಂತ ಪಟ್ಟಿ ಇಟ್ಟುಕೊಂಡು ಕೇಳುತ್ತಾರೆ.ಆದರೆ, ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಈ ರೀತಿ

ನಡೆಸುವುದಾದರೆ, ಅವುಗಳನ್ನು ಮುಚ್ಚುವುದೇ ಒಳ್ಳೆಯದು ಎನ್ನುವುದು ನನ್ನ ಭಾವನೆಯಾಗಿದೆ.

**ಸಭಾಪತಿಯವರು:–** ಮೆಡಿಕಲ್ ಕಾಲೇಜುಗಳನ್ನು ಮುಚ್ಚುವುದು ಬೇಡ. ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ನೀಡುತ್ತಾರೆ.

**ಶ್ರೀ ಆರ್.ವಿ. ವೆಂಕಟೇಶ್:–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಬಹಳಷ್ಟು ಆಸ್ಪತ್ರೆಗಳಲ್ಲಿ Resident Doctors ಇರುವುದಿಲ್ಲ ಎನ್ನುವಂತಹ ದೂರುಗಳು ಇವೆ. Resident Doctors ಗಳು ಕಡ್ಡಾಯವಾಗಿ ಇರಬೇಕು ಎನ್ನುವುದನ್ನು ಸಹ ಮಾನ್ಯ ಸಚಿವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎ. ರಾಮದಾಸ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಸ್ಟಾಫ್ ನರ್ಸ್‌ಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಸುಮಾರು 255 ಸ್ಟಾಫ್ ನರ್ಸ್‌ಗಳಲ್ಲಿ ಕೇವಲ 91 ಸ್ಟಾಫ್ ನರ್ಸ್‌ಗಳನ್ನು ಮಾತ್ರ ನೇಮಕಾತಿ ಮಾಡಿಕೊಳ್ಳಲಾಗಿದೆ ಎನ್ನುವುದನ್ನು ಉತ್ತರದಲ್ಲಿ ತೋರಿಸಿದ್ದೇವೆ. ಜಿಲ್ಲಾ ಆಸ್ಪತ್ರೆಗಳು ನಮಗೆ ಹಸ್ತಾಂತರಗೊಂಡಂತಹ ಸಂದರ್ಭದಲ್ಲಿ ಯಾವ ಯಾವ ಹುದ್ದೆಗಳು ಇದ್ದವು ಅವುಗಳನ್ನು ಖಾಲಿ ಎಂದು ತೋರಿಸುವಂತಹ ವ್ಯವಸ್ಥೆ ಆಗಿದೆ. ಆದರೆ, M.C.I., ನ ಪ್ರಕಾರ ಒಂದು ಬೆಡ್‌ಗೆ ಒಬ್ಬ ನರ್ಸ್‌ನ ಅವಶ್ಯಕತೆ ಇದೆ. ಅದರ ಆಧಾರದ ಮೇಲೆ ನಾವು ತೆಗೆದುಕೊಂಡಿದ್ದೇವೆ. ಇಲ್ಲಿಯವರೆಗೆ ಆ ಹುದ್ದೆಗಳನ್ನು ಏತಕ್ಕೋಸ್ಕರ ಖಾಲಿ ಬಿಟ್ಟುಕೊಂಡಿದ್ದೇವೆ ಎಂದರೆ, ಹೆಚ್ಚುವರಿ ಹುದ್ದೆಗಳು ಯಾವುದಾದರು ಬೇಕಾದರೆ, ಹಣಕಾಸು ಇಲಾಖೆಯಿಂದ ಅದನ್ನು ವಿನಿಯೋಗಿಸಿಕೊಳ್ಳುವುದಕ್ಕೆ ಅವಕಾಶ ಇತ್ತು ಎನ್ನುವ ದೃಷ್ಟಿಯಿಂದ ಅದನ್ನು ಖಾಲಿ ಎಂದು ತೋರಿಸಿದ್ದೇವೆ. ಈಗಾಗಲೇ ಎರಡು ಬಾರಿ Notification ಕೊಟ್ಟು walk-in-interview ಕರೆದು, ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ reappropriation ಆಗಿರಲಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಅಲ್ಲಿ Rediology Department ನ್ನು ತೆರೆಯಬೇಕು. ಆದರೆ, ಆ ಹುದ್ದೆಗೆ 4 ಜನ General Medicine ಅವರನ್ನು ತೆಗೆದುಕೊಂಡಿದ್ದಾರೆ. ಈ

ರೀತಿ reappropriation ಮಾಡದೇ ಹಣಕಾಸು ಇಲಾಖೆಯವರು Approval ಕೊಡುತ್ತಿರಲಿಲ್ಲ. ಆ ಕೆಲಸವನ್ನು ಇವತ್ತು ನಾವು ಮಾಡಿದ್ದೇವೆ. ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಖಾಲಿ ಇರುವಂತಹ ಹುದ್ದೆಗಳಿಗೆ Notification ಮಾಡುವುದಕ್ಕಾಗಿ ಒಂದು ವಾರದೊಳಗಾಗಿ ಸೂಚನೆಯನ್ನು ಕೊಡುತ್ತಿದ್ದೇವೆ. ಯಾವ ಯಾವ ಹುದ್ದೆಗಳು ಖಾಲಿ ಇವೆ ಅವುಗಳನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ನರ್ಸಿಂಗ್ ಬಗ್ಗೆ ಹೇಳಬೇಕಾದರೆ, ಅವಶ್ಯಕತೆ ಇರುವುದನ್ನು ಭರ್ತಿ ಮಾಡುವುದಕ್ಕೆ ಅಲ್ಲಿಯೇ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅದರ ಪ್ರಕಾರ Notification ಆಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ವಿ.ವೆಂಟೇಶ್‌ರವರು ಒಂದು ಪ್ರಶ್ನೆಯನ್ನು ಕೇಳಿದರು ಅದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಹೇಳಬೇಕಾದರೆ, ಟ್ಯೂಟರ್ ಮತ್ತು ಜೂನಿಯರ್ ಅಸಿಸ್ಟೆಂಟ್ ಅವರಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ 2009ರಲ್ಲಿ ಒಂದು ನೋಟಿಫಿಕೇಶನ್‌ನ್ನು ಹೊರಡಿಸಿದೆ ಅದರ ಪ್ರಕಾರ ಪಿ.ಜಿ. ಸ್ಟೂಡೆಂಟ್ ಯಾರಿದ್ದಾರೆ ಅವರನ್ನು ಜೂನಿಯರ್ ಅಸಿಸ್ಟೆಂಟ್ ಆಗಿ ಪರಿಗಣಿಸಬೇಕೆಂದು ಆರ್ಡರ್ ಇರುವುದರಿಂದ ಯಾರು ಪಿ.ಜಿ. ಸ್ಟೂಡೆಂಟ್ ಇದ್ದಾರೆ ಅವರನ್ನು ಪರಿಗಣಿಸುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಆರ್.ವಿ.ವೆಂಟೇಶ್‌ರವರು Resident Doctors ಗಳ ಬಗ್ಗೆ ಪ್ರಸ್ತಾಪ ಮಾಡಿದರು.

**ಶ್ರೀ ಎಸ್.ಎ.ರಾಮದಾಸ್:-** ಸನ್ಮಾನ್ಯ ಸಭಾಪತಿಯವರೇ, ನಾನು ಈಗ ತಾನೇ ಅವರ ಪ್ರಶ್ನೆಗೆ ಉತ್ತರವನ್ನು ನೀಡಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಬೋಧಕ ಹುದ್ದೆಗಳನ್ನು walk-in-interview ಕರೆದು ಭರ್ತಿ ಮಾಡಿಕೊಳ್ಳಲಾಗುತ್ತಿದೆ ಎನ್ನುವಂತಹ ಉತ್ತರವನ್ನು ನೀಡಿದರು. ಈ ರೀತಿ walk-in-interview ಮಾಡುವುದರಿಂದ ಸಾಮಾಜಿಕ ನ್ಯಾಯಕ್ಕೆ ಬಹಳ ದೊಡ್ಡ ಧಕ್ಕೆಯುಂಟಾಗುತ್ತಿದೆ ಎನ್ನುವುದು ನನ್ನ

ಅಭಿಪ್ರಾಯವಾಗಿದೆ. ಖಾಲಿ ಇರುವ ಹುದ್ದೆಗಳಿಗೆ ಜಾಹೀರಾತು ನೀಡಿ ಆ ಮೂಲಕ ಭರ್ತಿ ಮಾಡಿಕೊಳ್ಳಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಎಸ್.ಎ. ರಾಮದಾಸ್:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸ್ವಾಯತ್ತ ಶಿಕ್ಷಣ ಸಂಸ್ಥೆಗಳಲ್ಲಿ walk-in-interview ಮಾಡುವಂತಹ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ನೀಡುವಲ್ಲಿ ಇವತ್ತಿನವರೆಗೆ ಒಂದು ಸಣ್ಣ Deviation ಮಾಡಿಲ್ಲ. walk-in-interview ಮಾಡುವಂತಹ ಸಂದರ್ಭದಲ್ಲಿ ಎಸ್.ಸಿ., ಎಸ್.ಟಿ., ಹಿಂದುಳಿದ ವರ್ಗ ಎಲ್ಲರನ್ನೂ ಗಮನದಲ್ಲಿ ಇಟ್ಟುಕೊಂಡು ರೋಸ್ಟರ್‌ನ್ನು ಫಾಲೋ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಏತಕ್ಕೋಸ್ಕರ ನಾವು walk-in-interview ಮಾಡುತ್ತಿದ್ದೇವೆ ಎಂದರೆ, ನೇರವಾಗಿ ಡಾಕ್ಟರ್‌ಗಳು ಒಂದು ನಿಗದಿತ ದಿನಾಂಕದಂದು ಇದಕ್ಕಾಗಿಯೇ ರಚನೆಗೊಂಡಿರುವಂತಹ ಸಮಿತಿಯ ಮುಂದೆ ಹಾಜರಾಗಿ ದಾಖಲಾತಿಗಳನ್ನು ಪರಿಶೀಲನೆ ಮಾಡಿಸಿಕೊಳ್ಳುತ್ತಾರೆ. ಎಲ್ಲ ದಾಖಲೆಗಳು ಸರಿ ಇದ್ದರೆ ಸಂಜೆ ವೇಳೆಗೆ ಆಯ್ಕೆಗೊಂಡ ಬಗ್ಗೆ ಫಲಕದಲ್ಲಿ ಘೋಷಣೆ ಮಾಡುತ್ತಾರೆ. ನಾವು ಸಾಮಾಜಿಕ ನ್ಯಾಯವನ್ನು ಎಲ್ಲ ಕಡೆಗಳಲ್ಲಿ ಉಳಿಸಿಕೊಂಡು ಬಂದಿದ್ದೇವೆ. ಎಲ್ಲಾದರೂ ಆ ರೀತಿಯ ಸಮಸ್ಯೆ ಕಂಡು ಬಂದರೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ.

## ದಾಂಡೇಲಿ ಅರಣ್ಯ ಸಂರಕ್ಷಣಾಧಿಕಾರಿ ಹತ್ಯೆ ಬಗ್ಗೆ

**30–07–2012**

**360; ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**1.** ಕಾರವಾರ ಜಿಲ್ಲಾ ಹಳಿಯಾಳ ವಿಭಾಗದ ದಾಂಡೇಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಮದನ ನಾಯಕರವರ ಹತ್ಯೆಗೆ ಕಾರಣವಾದ ಎಲ್ಲಾ ಆರೋಪಿತರನ್ನು ಬಂಧಿಸಲಾಗಿದೆಯೇ ಹಾಗೂ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಬಂಧಿಸಿರುವ ಆರೋಪಿತರ ವಿವರ ಹಾಗೂ ಇನ್ನೂ ಬಂಧಿಸಬೇಕಾದ ಆರೋಪಿತರ ವಿವರ ನೀಡುವುದು)

**2.** ಸದರಿ ಹತ್ಯೆ ವಿಷಯದಲ್ಲಿ ಹತ್ಯೆ ಮಾಡಿದ ಆರೋಪಿಗಳ ಬಂಧನದ ಕುರಿತು ಒತ್ತಾಯ ಮಾಡಿದ 36 ಮಂದಿಗಳ ಮೇಲೆ ಅನಾವಶ್ಯಕವಾಗಿ ಪೊಲೀಸ್ ಇಲಾಖೆ ಕೇಸು ದಾಖಲು ಮಾಡಿದ್ದನ್ನು ಹಿಂತೆಗೆದುಕೊಳ್ಳಲಾಗಿದೆಯೇ?

**ಶ್ರೀ ಆರ್. ಅಶೋಕ (ಉಪ ಮುಖ್ಯಮಂತ್ರಿಗಳು)**

**1.** ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಗ್ರಾಮೀಣ ಪೊಲೀಸ್ ಠಾಣೆ ಮೊ.ಸಂ.23/2012, ಕಲಂ.323, 324, 353, 354, 427, 504, 506, 143, 147, 307, 302 ಸಹಕಲಂ.149 ಐಪಿಸಿ ಪ್ರಕರಣದಲ್ಲಿನ ಎಲ್ಲಾ ಆರೋಪಿತರನ್ನು ಬಂಧಿಸಿದ್ದು, ಅವರ ವಿವರ ಕೆಳಕಂಡಂತಿದೆ.

1) ಆನಂದ ರೂಪ್‌ಸಿಂಗ್ ನಾಯಕ್, 42, ವರ್ಷ, ವೃತ್ತಿ ಎಕ್ಸಿಕ್ಯೂಟಿವ್ ಇಂಜಿನಿಯರ್, ಹೆಸ್ಕಾಂ, ಕಾರ್ಪೋರೇಟ್ ಕಛೇರಿ, ಬೈಲಹೊಂಗಲ, ರಾಮದುರ್ಗ ಶಾಖೆ.
2) ಸುರೇಶ ಶಂಕರಪ್ಪ ನಾಯಕ್.
3) ಪ್ರಶಾಂತ್ ರಾಮಾಲಮಾಣಿ.
4) ಶೈಲಜಾ ಅರವಿಂದ್ ಬಾಬು ಚವ್ಹಾಣ್, 38 ವರ್ಷ, ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಭಾಗ್ವತಿ, ಹಳಿಯಾಳ ತಾಲ್ಲೂಕು.
5) ಅರವಿಂದ ಬಾಬು ಕೃಷ್ಣಪ್ಪ ಚವ್ಹಾಣ್, 51 ವರ್ಷ, ಸಿಎಒ, ದಾಂಡೇಲಿ ನಗರ ಸಭೆ, ದಾಂಡೇಲಿ.
6) ದಾನಾ ಬಾಯಿ ರೂಪ್‌ಸಿಂಗ್ ನಾಯಕ್.
7) ಶಿವರಾಮ ಅಪ್ಪಾಜಿ ಪಾಟೀಲ.
8) ಕು: ಮಾಧುರಿ ಬಿನ್ ಲೇಟ್ ಜಯಸಿಂಗ್, ಎಲ್.ಠಾಟೋಡ್, 21 ವರ್ಷ, ಹೆಲ್ಪರ್ ಕೆಲಸ, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್, ಡಿವಿಷನಲ್ ಎಲೆಕ್ಟ್ರಿಕಲ್ ಇಂಜಿನಿಯರ್‌ರವರ ಕಛೇರಿ, ಸೌತ್‌ವೆಸ್ಟ್ರನ್ ರೈಲ್ವೇಸ್, ಗದಗ ರಸ್ತೆ, ಹುಬ್ಬಳ್ಳಿ.
9) ಶಂಕಪ್ಪ ನಾಯಕ.
10) ರಾಧ ಕೋಂ ಸುರೇಶ ನಾಯಕ್.

11) ಮಲ್ಲಿಕಾರ್ಜುನ ಚವ್ಹಾಣ್ ಬಿನ್ ಕೇಮಪ್ಪ ಚವ್ಹಾಣ್, 39 ವರ್ಷ, ವೆಟರ್‌ನರಿ ಇನ್ಸ್‌ಪೆಕ್ಟರ್, ಚಳಗೇರಿ ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ,

12) ಪ್ರೇಮ ಮಲ್ಲಿಕಾರ್ಜುನ್ ಚವ್ಹಾಣ್.

ಟಿಪ್ಪಣಿ ಕ್ರ. ಸಂ. 7) ಶಿವರಾಮ್ ಅಪ್ಪಾಜಿ ಪಾಟೀಲ, 60ವರ್ಷ, ಕೃತ್ಯ ನಡೆದ ಸ್ಥಳದ ಮಾಲೀಕರಾಗಿರುತ್ತಾರೆ. ಕ್ರ ಸಂ.13 ಅಮೀತ್, 16 ವರ್ಷ, ಇವರುಗಳು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

**2.** ಈ ವಿಷಯಕ್ಕೆ ಸಂಬಧಿಸಿದಂತೆ ಯಾವುದೇ ಪ್ರಕರಣ ಅನಾವಶ್ಯಕವಾಗಿ ದಾಖಲು ಮಾಡಿರುವುದಿಲ್ಲ. ಆದ್ದರಿಂದ ಯಾವುದೇ ಪ್ರಕರಣವನ್ನು ಹಿಂಪಡೆದಿರುವುದಿಲ್ಲ.

**ಶ್ರೀ ಘೋಟ್ನೆಕರ್ ಶ್ರೀಕಾಂತ್ ಲಕ್ಷಣ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪಾಟೀಲ್ ಎನ್ನುವವರು ಕಾನೂನು ಬಾಹಿರ 'Home stay' ನಡೆಸುತ್ತಾನೆ ಎಂದು ನಾನು ಹಿಂದಿನ ಸದನದಲ್ಲಿ ಮೊಸಳೆ ಪ್ರಕರಣದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದ ಸಂದರ್ಭದಲ್ಲಿ 'ಸರ್ಕಾರದವರು ಅದರ ಬಗ್ಗೆ ಸೂಕ್ತವಾಗಿರುವಂತಹ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ಪ್ರಾಣಹಾನಿ ಆಗುತ್ತದೆ' ಎಂದು ಹೇಳಿದ್ದೆ. ಈ ಒಂದು ಕಾನೂನುಬಾಹಿರ 'Home stay' ನಲ್ಲಿ ಪಾರ್ಟಿ ನಡೆಯುತ್ತಿತ್ತು. ಆ ಪಾರ್ಟಿಯಲ್ಲಿ ಉಳಿದಂತಹ ಮಾಂಸವನ್ನು ಮೊಸಳೆಗೆ ಹಾಕುವುದರಿಂದ ಮೊಸಳೆ ಜಿಗಿದಾಡಿ ಮೇಲಕ್ಕೆ ಬರುವಂತಹ ಪರಿಸ್ಥಿತಿ ಇತ್ತು. ಆದ್ದರಿಂದ ಅದನ್ನು ಕೂಡಲೇ ಸರ್ಕಾರದವರು ನಿಲ್ಲಿಸಬೇಕೆಂದು ಹಿಂದಿನ ಸದನದಲ್ಲಿ ಪ್ರಸ್ತಾಪ ಮಾಡಿದಾಗ, ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಹಾಗೂ ಅರಣ್ಯ ಸಚಿವರು 'ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ' ಎಂದು ಹೇಳಿದ್ದರು. ಆದರೆ, ಇಲ್ಲಿಯವರೆಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ. ಏಕೆಂದರೆ, ಆ ಪ್ರದೇಶದ ನಿವಾಸಿಗಳು ಪೊಲೀಸ್ ಠಾಣೆಗೆ ದೂರನ್ನು ನೀಡಲು ಹೋದರೆ, ಅರಣ್ಯ

ಇಲಾಖೆಗೆ ದೂರು ಕೊಡಿ ಎಂದು ಹೇಳುತ್ತಾರೆ. ಅರಣ್ಯ ಇಲಾಖೆಗೆ ದೂರು ಕೊಡಲು ಹೋದರೆ, ವನ್ಯಜೀವಿ ಇಲಾಖೆಗೆ ದೂರು ಕೊಡಿ ಎಂದು ಹೇಳುತ್ತಾರೆ. ವನ್ಯಜೀವಿ ಇಲಾಖೆಗೆ ದೂರು ಕೊಡಲು ಹೋದರೆ ಆ ಜಾಗವನ್ನು ವನ್ಯಜೀವಿ ಇಲಾಖೆಗೆ ವರ್ಗಾಯಿಸಿಲ್ಲ. ಆದ್ದರಿಂದ ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎನ್ನುವಂತಹ ಉತ್ತರವನ್ನು ನೀಡುತ್ತಾರೆ. ಈ ರೀತಿ ಯಾವ ಇಲಾಖೆಯವರೂ ದೂರನ್ನು ಸ್ವೀಕರಿಸಿಲ್ಲ. ಯಾವ ಇಲಾಖೆಯವರೂ ದೂರನ್ನು ಸ್ವೀಕರಿಸದೇ ಇರುವುದಕ್ಕೆ ಮತ್ತು ಮದನ ನಾಯಕನ ಸಾವಿಗೆ ನೇರ ಹೊಣೆ ಸರ್ಕಾರದವರೇ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಸರ್ಕಾರ ಮೊದಲೇ ಈ ನಿಟ್ಟಿನಲ್ಲಿ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದರೆ ಮದನ ನಾಯಕ ಸಾಯುತ್ತಿರಲಿಲ್ಲ. ಮದನ ನಾಯಕ ತನ್ನ ಕುಟುಂಬದೊಡನೆ ದೇವಸ್ಥಾನಕ್ಕೆ ತೆರಳಿದ್ದಾಗ, ಅಲ್ಲಿ ಗುಂಡು ಪಾರ್ಟಿ ನಡೆಯುತ್ತಿತ್ತು. ಕುರಿ ಹೊಡೆದಾಗ, ಪಾಟೀಲ್ ಎನ್ನುವವನಿಗೆ ಕ್ರಮವನ್ನು ತೆಗೆದುಕೊಳ್ಳಿ ಎಂದರೆ, ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಅಲ್ಲಿ ಕಾನೂನು ಬಾಹಿರವಾಗಿ ಈ ಚಟುವಟಿಕೆಗಳು ನಡೆಯುತ್ತಿದ್ದವು. ಆ ಪಾರ್ಟಿಯಲ್ಲಿ ESCOM ನ ಅಧಿಕಾರಿಗಳು, T.B., ಯಲ್ಲಿ ಇದ್ದಂತಹ ಅಧಿಕಾರಿಗಳು, ಅರಣ್ಯ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಸಹ ಭಾಗವಹಿಸಿದ್ದರು. ನಗರಸಭೆಯ ನೌಕರರು, ಶಿಕ್ಷಕರು ಮತ್ತು ಶಿಕ್ಷಕಿಯರಂತಹ ಸುಶಿಕ್ಷಿತ ಜನರು ಆ ಪಾರ್ಟಿಯಲ್ಲಿ ಇದ್ದರು.ಇಂತಹ ಸಂದರ್ಭದಲ್ಲಿ ದೇವಸ್ಥಾನಕ್ಕೆ ಬಂದಂತಹ ಮದನ ನಾಯಕ, 'ಮಾಂಸವನ್ನು ಅಲ್ಲಿಗೆ ಎಸೆಯಬೇಡಿ ಮೊಸಳೆಗಳು ಮೇಲೆ ಬರುತ್ತವೆ' ಎಂದು ಹೇಳಿದರೆ, 'ಅದನ್ನು ಹೇಳುವುದಕ್ಕೆ ನೀ ಯಾರು' ಎಂದು ಆತನನ್ನು ಹೊಡೆದಿದ್ದಾರೆ. ಒಬ್ಬ ಟವಲ್ ಒಳಗೆ ಕಲ್ಲು ಹಾಕಿ ತಲೆಗೆ ಚಚ್ಚಿದ್ದಾನೆ. ಇದರಿಂದಾಗಿ ಮದನ ನಾಯಕ ಗಾಯಗೊಂಡಿದ್ದಾನೆ. ಆದರೆ, ರಕ್ತ ಹೊರಕ್ಕೆ ಬಂದಿಲ್ಲ. ಅವನು ಕೆಳಗೆ ಬಿದ್ದಾಗ ಅವನ ಮಡದಿ ಮತ್ತು ಮಕ್ಕಳು ಅವನನ್ನು ಹೊಡೆಯಬೇಡಿ ಎಂದು ಕೇಳಿಕೊಂಡಾಗಲೂ ಸಹ ಆ ಮಾತುಗಳನ್ನು ಕೇಳದೇ ಎಳೆದಾಡಿ ಆ ಮಹಿಳೆಯ ಬ್ಲೌಸ್‌ನ್ನು ಹರಿದಿದ್ದಾರೆ. ಇಷ್ಟೊಂದು ದುರ್ನಡತೆಯಿಂದ ಅವರು ನಡೆದುಕೊಂಡಿದ್ದಾರೆ. ಇಷ್ಟೆಲ್ಲಾ ಆದ

ಮೇಲೆ ದೌರ್ಜನ್ಯ ಎಸಗಿದವರೇ ಮೊದಲು ಠಾಣೆಗೆ ಹೋಗಿ ಅವನ ಮೇಲೆ Atrocity case ಹಾಕುತ್ತೇವೆಂದು ಮದನ ನಾಯಕನಿಗೆ ಹೆದರಿಸಿ ಅವರೇ ಮೊದಲು ದೂರನ್ನು ಕೊಡುವುದಕ್ಕೆ ಹೋಗಿದ್ದಾರೆ. ಮದನ ನಾಯಕ ಸುಮಾರು 5 ಗಂಟೆಗಳ ಕಾಲ ಕಾದರೂ ಸಹ ಅವನ ದೂರನ್ನು ತೆಗೆದುಕೊಂಡಿಲ್ಲ. ಅವನಿಗೆ ಒಳಗಿಂದ ಒಳಗೆ ರಕ್ತಸ್ರಾವ ಆಗಿ..

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಪ್ರಶ್ನೆ ಕೇಳಿದರೆ, ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ವರ್ಣನೆ ಮಾಡುವುದು ಬೇಡ.ತಾವು ಪ್ರಶ್ನೆ ಕೇಳಿದ್ದೀರಿ ಅವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷಣ್:–** ಸನ್ಮಾನ್ಯ ಸಭಾಪತಿಯವರೇ, ಇರುವಂತಹ ವಿಚಾರವನ್ನು ನಾನು ಹೇಳಬೇಕಾಗುತ್ತದೆ. ಮದನ ನಾಯಕ ಯಾಕೆ ಸತ್ತ ಎನ್ನುವುದನ್ನು ನಾನು ಹೇಳಬೇಕಾಗುತ್ತದೆ.

**ಶ್ರೀ ಆರ್. ಅಶೋಕ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮದನ ನಾಯಕನ ಹತ್ಯೆಗೆ ಕಾರಣವಾದ ಎಲ್ಲಾ ಆರೋಪಿಗಳನ್ನು ಬಂಧಿಸಲಾಗಿದೆಯೇ? ಬಂಧಿಸಿರುವ ಆರೋಪಿಗಳ ವಿವರಗಳನ್ನು ನೀಡಿ ಎಂದು ಕೇಳಿದ್ದಾರೆ. ಊಟ ಮಾಡಿರುವುದು, ಮರಿ ಕಡಿದಿರುವುದು ಆ ಯಾವ ವಿಚಾರವೂ ಇದರಲ್ಲಿ ಇಲ್ಲ. ನಾನು ಅವರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಡುತ್ತಿದ್ದೇನೆ. ಎಲ್ಲ ಆರೋಪಿಗಳನ್ನು ಬಂಧಿಸಲಾಗಿದೆ. ಕೋರ್ಟಿಗೆ ಹಾಜರುಪಡಿಸಲಾಗಿದೆ. ಅದರಲ್ಲಿ 7ನೇ ಅಪರಾಧಿಯಾಗಿರುವಂತಹ ಶಿವರಾಮ್ ಅಪ್ಪಾಜಿ ಪಾಟೀಲ 60 ವರ್ಷ ಮತ್ತು ಅಮೀತ 16 ವರ್ಷ ಈ ಇಬ್ಬರಿಗೆ ಮಾತ್ರ ಕೋರ್ಟ್ ಜಾಮೀನನ್ನು ನೀಡಿದೆ. ಉಳಿದವರನ್ನು ಅರೆಸ್ಟ್ ಮಾಡಲಾಗಿದೆ.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಅವರ ಮೇಲೆ ಯಾವ ಸೆಕ್ಷನ್ ಅಡಿಯಲ್ಲಿ ಮೊಕದ್ದಮೆ ದಾಖಲು ಮಾಡಲಾಗಿದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಆರ್. ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ದಾಡೇಲಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ಮೇಲೆ ಕಲಂ 323, 324, 353, 354, 427, 504, 506, 143, 147, 307, 302 ಸಹ ಕಲಂ 149 ಐ.ಪಿ.ಸಿ., ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಲಾಗಿದೆ.

**ಶ್ರೀ ಘೋಟ್ನೆಕರ್ ಶ್ರೀಕಾಂತ್ ಲಕ್ಷ್ಮಣ್:-** ಸನ್ಮಾನ್ಯ ಸಭಾಪತಿಯವರೇ, ಆರೋಪಿಗಳನ್ನು ಬಂಧಿಸಿರುವ ಬಗ್ಗೆ ನನ್ನ ತಕರಾರು ಇಲ್ಲ. ಯಾರು ಆರೋಪಿಗಳು ಇದ್ದಾರೆ ಅವರನ್ನು ಬಿಟ್ಟಿದ್ದಾರೆ. ಅಲ್ಲಿ 1500–2000 ಜನರು ಪ್ರತಿಭಟನೆ ಮಾಡಿದ್ದರು. ಆಗ ನಾನು ಅಲ್ಲಿಯೇ ಇದ್ದೆ. 36 ಜನರ ಮೇಲೆ ಲಾಠಿಚಾರ್ಜ್ ಆಗಿಲ್ಲ ಏನೂ ಆಗಿಲ್ಲ. A.C.F., ಗೆ ಅನ್ಯಾಯವಾಗಿದೆ. P.S.I., ಅವರನ್ನು ಕರೆಯಿಸಿ ಎಂದು ಹೇಳಿದರೆ ಅವರನ್ನು ಕರೆಯಿಸಲಿಲ್ಲ.

**ಸಭಾಪತಿಯವರು:-** ನೀವು ಬಹಳ ವಿವರವಾಗಿ ವಿಚಾರವನ್ನು ಹೇಳುವುದು ಬೇಡ. ನೇರವಾಗಿ ಪ್ರಶ್ನೆಯನ್ನು ಕೇಳಿ. ಯಾರನ್ನೋ ಬಂಧಿಸಬೇಕಾಗಿತ್ತು ಅವರನ್ನು ಬಂದಿಸಿಲ್ಲ. ಅವರನ್ನೂ ಬಂಧಿಸಿ ಎನ್ನುವುದು ಅವರ ಪ್ರಶ್ನೆಯಾಗಿದೆ.

**ಶ್ರೀ ಘೋಟ್ನೆಕರ್ ಶ್ರೀಕಾಂತ್ ಲಕ್ಷ್ಮಣ್:-** ಸನ್ಮಾನ್ಯ ಸಭಾಪತಿಯವರೇ, ಗಲಭೆ ಆಗುತ್ತದೆ ಎಂದು P.S.I., ಯನ್ನು ಅಲ್ಲಿಂದ ಕಾರಾವಾರಕ್ಕೆ ವರ್ಗಾವಣೆ ಮಾಡಿದ್ದಾರೆ.

**ಸಭಾಪತಿಯವರು:-** ತಾವು ಈಗ ಬಂಧಿಸಿರುವ ಆರೋಪಿಗಳ ಜೊತೆಗೆ ಇನ್ನೂ ಒಂದಿಬ್ಬರನ್ನು ಬಂಧಿಸಬೇಕಾಗಿತ್ತು ಅವರನ್ನು ಬಂಧಿಸಿಲ್ಲ ಎನ್ನುವುದು ಮಾನ್ಯ ಸದಸ್ಯರ ಕಳಕಳಿಯಾಗಿದೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ಸಿ.ಐ.ಡಿ. ತನಿಖೆಗೆ ಕೊಟ್ಟಿದ್ದೇವೆ.

**ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ್:–** ಸನ್ಮಾನ್ಯ ಸಭಾಪತಿಯವರೇ, ಆ 36 ಜನರ ಮೇಲೆ ಅಮಾನುಷವಾಗಿ ಯಾವುದೇ ರೀತಿಯ ಲಾಠಿಚಾರ್ಜ್ ಆಗಿಲ್ಲ. ನಾನು ಅಲ್ಲಿಯೇ ಇದ್ದೆ.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಮಾನ್ಯ ಸಚಿವರು ಎಲ್ಲ ಆರೋಪಿಗಳನ್ನು ಬಂಧಿಸಲಾಗಿದೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಯಾವ ಸೆಕ್ಷನ್ ಅಡಿಯಲ್ಲಿ ಅವರ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ ಎಂದು ಮಾನ್ಯ ಸಚಿವರನ್ನು ಕೇಳಿದೆ. ಅವರು ಕಲಂ 323, 324, 353, 354, 427, 504, 506, 143, 147, 307, ಎಂದು ಹೇಳಿ ಕೊನೆಗೆ ಕಲಂ 149 ಐ.ಪಿ.ಸಿ. ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಲಾಗಿದೆ ಎಂದು ಹೇಳಿದರು.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, 302 ಕಲಂ ಅನ್ನು ಕೂಡ ಅವರು ಉಲ್ಲೇಖಿಸಿದ್ದಾರೆ.

3 ಗಂಟೆ

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸದಸ್ಯರು, ಒಬ್ಬ ಮುಖ್ಯ ದೋಷಿಯನ್ನು ಬಿಟ್ಟು ಬಿಟ್ಟಿದ್ದೀರಿ, ಆತ ಪೋಲಿಸ್ ಅಧಿಕಾರಿ ಎನ್ನುವ ಅಂಶವನ್ನು ಹೇಳುತ್ತಿದ್ದಾರೆ.

**ಶ್ರೀ ಆರ್. ಅಶೋಕ:–** ಸದರಿ ಪ್ರಕರಣವನ್ನು ಸಿ.ಐ.ಡಿ.ಗೆ refer ಮಾಡಿದ್ದೇವೆ. ಆ ಸಂದರ್ಭದಲ್ಲಿ ಈ ಅಂಶಗಳನ್ನು ಗಮನಿಸುತ್ತೇವೆ.

**ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ್:–** ಆ 36 ಜನರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಈ ಜನ ಏನೂ ಮಾಡಿಲ್ಲ

**ಶ್ರೀ ಆರ್. ಅಶೋಕ್:–** ಆ ಕುರಿತು ಪ್ರತ್ಯೇಕವಾಗಿ ಪ್ರಶ್ನೆ ಹಾಕಲಿ ಉತ್ತರ ಕೊಡುತ್ತೇನೆ.

**ಸಭಾಪತಿಯವರು:–** 36 ಜನ ಅಮಾಯಕರ ಮೇಲೂ ಕೇಸ್ ಹಾಕಿದ್ದಾರೆ. ಅವರನ್ನು ಬಿಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು, ಆ ದಿನ ಏನು ಘಟನೆ ನಡೆಯಿತೋ ಆ ಘಟನೆಯಿಂದ ಬೇಸತ್ತ ಜನ ಪ್ರತಿಭಟನೆ ಮಾಡಿದರು. ಆಗ ಅವರೂ ಇದ್ದರು. ಅಲ್ಲಿ ಸೇರಿದ್ದ 2000 ಜನರ ಪೈಕಿ 36 ಜನರ ಮೇಲೆ ಅನ್ಯಾಯವಾಗಿ ಕೇಸ್ ಹಾಕಿದ್ದಾರೆ, ಅದನ್ನು ಹಿಂಪಡೆಯಿರಿ, ನ್ಯಾಯವಾಗಿ ಕ್ರಮ ಕೈಗೊಳ್ಳುವುದನ್ನು ಬಿಟ್ಟದ್ದಕ್ಕಾಗಿ ಅವರು ಪೋಲಿಸ್ ಸ್ಟೇಷನ್ ಎದುರುಗಡೆ ಪ್ರತಿಭಟನೆ ಮಾಡಿದ್ದರು ಎಂದು ಹೇಳುತ್ತಿದ್ದಾರೆ. ಇದು ಅವರ ಎರಡನೆಯ ಉಪ ಪ್ರಶ್ನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಗಳೆ, ಈ ಜನ ಶಾಂತಿಯುತವಾಗಿ ಪ್ರತಿಭಟನೆ ಮಾಡಿದ್ದರೆ ಸರ್ಕಾರದ ಅಭ್ಯಂತರ ಇರುತ್ತಿರಲಿಲ್ಲ. ಆದರೆ, ರಸ್ತೆ ತಡೆ ಮಾಡಿ, ಅಧಿಕಾರಿಗಳನ್ನು ಕೆಟ್ಟ ಶಬ್ದಗಳಲ್ಲಿ ನಿಂದಿಸಿ, ನೀವೇನಾದರೂ ಕ್ರಮ ತೆಗೆದುಕೊಳ್ಳದೇ ಇದ್ದರೆ ಪೋಲಿಸರ ಮನೆಗಳನ್ನೇ ಸುಟ್ಟು ಹಾಕುತ್ತೇವೆ ಎಂದು ಬೈದಿರುವ ದಾಖಲೆಗಳು ನಮ್ಮ ಹತ್ತಿರ ಇದೆ. ಆ ದೃಷ್ಟಿಯಿಂದ ನಾವು ಕ್ರಮ ಕೈಗೊಂಡಿದ್ದೇವೆ. ಮಾನ್ಯ ಸದಸ್ಯರು, ಈ ಜನರಲ್ಲಿ ನಿರಪರಾಧಿಗಳೂ ಇದ್ದಾರೆ ಎಂಬ ಮಾತನ್ನು ಹೇಳಿದರು. ಈ ಕುರಿತು ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಮುಂದಿನ ಕ್ರಮ ತಗೆದುಕೊಳ್ಳುತ್ತೇನೆ. ಈಗಾಗಲೇ ದೂರು ಕೊಟ್ಟಾಗಿದೆ, F.I.R (First Information Report) ಆಗಿದೆ. Charge sheet ಹಾಕುವಂತಹ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳಿಗೆ, ನಿಷ್ಪಕ್ಷಪಾತವಾಗಿ, ಯಾರು ಅಪರಾಧಿಗಳಲ್ಲ, ಯಾರು ಒಳ್ಳೆಯ ಜನ ಇದ್ದಾರೋ ಅವರನ್ನು ದೋಷಮುಕ್ತಗೊಳಿಸುವುದಕ್ಕೆ ಕ್ರಮ ಕೈಗೊಳ್ಳಲು ಸೂಚಿಸುತ್ತೇನೆ. ಆದರೆ, ಈ ಘಟನೆಯಲ್ಲಿ ಭಾಗವಹಿಸಿದ್ದವರು ಹಿಂದೆ ಗುಂಡಾ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೆ, ನಿರಂತರವಾಗಿ ಇಂತಹ crime ಗಳನ್ನು ಮಾಡುತ್ತಿದ್ದರೆ ಅವರ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳಲು ಹಿಂದೇಟು ಹಾಕುವುದಿಲ್ಲ. ಯಾರು ನಿರಪರಾಧಿಗಳಾಗಿದ್ದಾರೋ ಅವರ ಬಗ್ಗೆ

ಖಂಡಿತವಾಗಿಯೂ Charge sheet ಹಾಕುವ ಸಮಯದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

**ಹೊರ ರಾಜ್ಯದ ಪ್ರವಾಸಿ ವಾಹನ ಪ್ರವೇಶ ತೆರಿಗೆ ಬಗ್ಗೆ**

**514; ಶ್ರೀ ಸಿದ್ಧರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ರಾಜ್ಯದಲ್ಲಿ ವಿಧಿಸುವ ಪ್ರವೇಶ ತೆರಿಗೆ ಎಷ್ಟು: (ವಾಹನವಾರು ವಿವರ ನೀಡುವುದು).

**ಆ)** ನೆರೆ ರಾಜ್ಯಗಳಲ್ಲಿ ವಸೂಲಿ ಮಾಡುವ ಪ್ರವೇಶ ತೆರಿಗೆಗೆ ಹೋಲಿಸಿದಲ್ಲಿ ಹಾಗೂ ನಮ್ಮ ರಾಜ್ಯದ ಪ್ರವೇಶ ತೆರಿಗೆಯು ಅತಿ ಹೆಚ್ಚಾಗಿರುವುದನ್ನು ಸರ್ಕಾರ ಗಮನಿಸಿದೆಯೇ:

**ಇ)** ಇದರಿಂದಾಗಿ ರಾಜ್ಯದ ಪ್ರವಾಸೋಧ್ಯಮದ ಮೇಲೆ ಪರಿಣಾಮ ಬೀರುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ:

ಉಚಿತ ವಾಹನ ಪ್ರವೇಶ ನೀಡುವ ಬಗ್ಗೆ ಸರ್ಕಾರವು ನಿಲುವು ತೆಗೆದುಕೊಳ್ಳುವುದೇ?

**ಶ್ರೀ ಆರ್. ಅಶೋಕ (ಉಪ ಮುಖ್ಯಮಂತ್ರಿ, ಗೃಹ ಮತ್ತು ಸಾರಿಗೆ)**

**ಅ)**

| | 7 ದಿವಸಗಳಿಗೆ (ಆಸನ ಒಂದಕ್ಕೆ) | 30 ದಿವಸಗಳಿಗೆ (ಆಸನ ಒಂದಕ್ಕೆ) |
|---|---|---|
| 1) ಅ.ಭಾ.ಪ್ರ, ವಾಹನ | ₹. 600 | ₹. 1500 |
| 2) ಒಪ್ಪಂದ ವಾಹನ | ₹. 300 | ₹. 450 |
| 3) ಸಾಮಾನ್ಯ ಬಸ್ಸುಗಳು | ₹. 100 | ₹. 200 |

**ಆ)** ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿನ ಪ್ರವೇಶ ತೆರಿಗೆಯನ್ನು ಕರ್ನಾಟಕ ರಾಜ್ಯಕ್ಕೆ ಹೋಲಿಸಿದಲ್ಲಿ ಹೆಚ್ಚು ವ್ಯತ್ಯಾಸ ಕಂಡು ಬರುವುದಿಲ್ಲ. ಆದರೆ ಮಹಾರಾಷ್ಟ್ರ ಹಾಗೂ ಕೇರಳ

ರಾಜ್ಯಗಳಲ್ಲಿನ ಪ್ರವೇಶ ತೆರಿಗೆಯು ಕರ್ನಾಟಕ ರಾಜ್ಯಕ್ಕೆ ಹೋಲಿಸಿದಲ್ಲಿ, ಕಡಿಮೆಯಿರುತ್ತದೆ.

ಇ) ಗಮನಕ್ಕೆ ಬಂದಿರುವುದಿಲ್ಲ.

ಅಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

**ಶ್ರೀ ಸಿದ್ಧರಾಜು:–** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ, ಇಡೀ ದಕ್ಷಿಣ ಭಾರತಕ್ಕೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ ಪ್ರವಾಸಿ ವಾಹನಗಳ ಮೇಲೆ ಅತ್ಯಂತ ಹೆಚ್ಚು ತೆರಿಗೆಯನ್ನು ಹಾಕುತ್ತಿರುವುದು ಕಂಡುಬರುತ್ತಿದೆ. ಇದರಿಂದ ಪ್ರವಾಸೋದ್ಯಮದ ಮೇಲೆ ಪರಿಣಾಮ ಬೀರುತ್ತದೆಯೇ, ಸರ್ಕಾರ ಇದನ್ನು ಗಮನಿಸಿದೆಯೇ ಎಂದು ಕೇಳಿರುವ ಪ್ರಶ್ನೆಗೆ, ಸರ್ಕಾರದ ಗಮನಕ್ಕೆ ಬಂದಿಲ್ಲ ಎಂಬ ಉತ್ತರವನ್ನು ಅಧಿಕಾರಿಗಳು ಮಾನ್ಯ ಸಚಿವರ ಮೂಲಕ ಹೇಳಿಸಿರುವುದಕ್ಕೆ ಹೊರಟಿರುವುದು ಶೋಚನೀಯ ಸಂಗತಿಯಾಗಿದೆ ಎಂದು ನಾನು ಭಾವಿಸುತ್ತೇನೆ. ಪ್ರವಾಸೋದ್ಯಮ ಎನ್ನುವುದು ನೇರವಾಗಿ ಸಾರಿಗೆ ಇಲಾಖೆ ಮೇಲೆ ಅವಲಂಬಿತವಾಗಿರುತ್ತದೆ. ರೈಲು ಮತ್ತು ವಿಮಾನ ಇವುಗಳನ್ನು ಬಿಟ್ಟರೆ ಮಿಕ್ಕೆಲ್ಲವೂ ಸಾರಿಗೆ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ಗೋವಾ ಈ ನಾಲ್ಕು ಭಾಗಗಳಲ್ಲಿ ಪ್ರವಾಸೋದ್ಯಮ ಹೆಚ್ಚು corridor ಹೊಂದಿರುತ್ತದೆ. ತೆರಿಗೆಯ ಹೆಚ್ಚಳದಿಂದ ಪ್ರವಾಸಿಗರು ನಮ್ಮ ರಾಜ್ಯವನ್ನು skip ಮಾಡಿ ಪಕ್ಕದ ರಾಜ್ಯಕ್ಕೆ ಹೋಗುವ ಪದ್ಧತಿ ಕಂಡುಬರುತ್ತದೆ. ಆ ಹಿನ್ನೆಲೆಯಲ್ಲಿ ತೆರಿಗೆ ಕಡಿಮೆ ಮಾಡುವ ಚಿಂತನೆ ಮಾಡಬೇಕು. ಮತ್ತೆ, ನಮಗೆ ತೆರಿಗೆಯೊಂದೇ ಮುಖ್ಯವಲ್ಲ, ಅದಕ್ಕೆ ಪೂರಕವಾಗಿರುವಂಥ ಉದ್ಯಮಗಳಾದ ಹೋಟೆಲ್ ಉದ್ಯಮ ಹಾಗೂ ಇತರ ವ್ಯಾಪಾರ-ವಹಿವಾಟುಗಳ ಮೇಲೆ ಇದು ಪರಿಣಾಮ ಬೀರುತ್ತದೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ, ದಸರಾ ಹಬ್ಬದ ಸಂದರ್ಭದಲ್ಲಿ ತೆರಿಗೆ ವಿನಾಯಿತಿ ಕೊಡುವಂಥದ್ದನ್ನು ಮಾಡಿದಾಗ ಸರಿಸುಮಾರು 1 ಲಕ್ಷಕ್ಕೂ ಹೆಚ್ಚು ಜನ ಭೇಟಿ

ಮಾಡಿದ್ದರು ಎನ್ನುವುದು ದಾಖಲೆಯಿಂದ ಗೊತ್ತಾಗುತ್ತದೆ. 1995–94ರಲ್ಲಿ, ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶದ ಸರ್ಕಾರಗಳು ಸೇರಿ South Zone ಎಂದು ಒಂದೇ ಪರ್ಮಿಟ್ ಕೊಡುವ ವ್ಯವಸ್ಥೆ ಇತ್ತು.ಮತ್ತೆ, ತೆರಿಗೆಯನ್ನು ಹೊಂದಾಣಿಕೆ ಮಾಡಿಕೊಳ್ಳುವ ವ್ಯವಸ್ಥೆ ಕೂಡ ಹಿಂದೆ ಇತ್ತು.ಈ ಕುರಿತು ಚಿಂತನೆ ಮಾಡಿ ಸಕಾರಾತ್ಮಕವಾಗಿ ಸ್ಪಂದಿಸಿದರೆ ಇದರಿಂದ ಪ್ರವಾಸೋದ್ಯಮಕ್ಕೆ ಉತ್ತೇಜನ ಕೊಟ್ಟಂತೆ ಆಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಗಳೆ, ವಾಹನಗಳಿಗೆ ರಾಜ್ಯದಲ್ಲಿ ವಿಧಿಸುವ ಪ್ರವೇಶ ತೆರಿಗೆಯಿಂದ ಪ್ರತಿವರ್ಷ 70 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಮಾನ್ಯ ಸದಸ್ಯರು, ನಮ್ಮ ರಾಜ್ಯದಲ್ಲಿ ಹೆಚ್ಚು ತೆರಿಗೆ ವಿಧಿಸುತ್ತಿದ್ದಾರೆ ಎಂಬ ಮಾತನ್ನು ಹೇಳಿದರು. ಆಂಧ್ರಪ್ರದೇಶ ಮತ್ತು ತಮಿಳುನಾಡಿಗೆ ಹೋಲಿಸಿದರೆ ಆ ತೆರಿಗೆ ಮೊತ್ತ ಜಾಸ್ತಿ ಇಲ್ಲ. ನಮ್ಮದು Common ಆಗಿದೆ. ಕೇರಳ ರಾಜ್ಯಕ್ಕೆ ಹೋಲಿಸಿದರೆ ನಮ್ಮದು ಜಾಸ್ತಿ ಇದೆ. ಅಂತರರಾಜ್ಯಗಳ ನಡುವಿನ ಒಪ್ಪಂದದ ಸಮಯದಲ್ಲಿ ತೆರಿಗೆ ಪ್ರಮಾಣಕ್ಕೆ ಸಂಬಂಧಪಟ್ಟ ಹಾಗೆ ತೀರ್ಮಾನವಾಗುತ್ತದೆ. ಆ ಒಪ್ಪಂದ ಮಾಡಿಕೊಳ್ಳುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತೆರಿಗೆ ಕಡಿಮೆ ಮಾಡುವ ನಿಟ್ಟಿನಲ್ಲಿ ಪರಿಶೀಲನೆ ಮಾಡುತ್ತೇವೆ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಗಳೆ, ಮೈಸೂರು ಒಂದು ಪ್ರವಾಸ ತಾಣ ಎನ್ನುವುದು ಎಲ್ಲರಿಗೂ ಗೊತ್ತು. ಮಾನ್ಯ ಸಿದ್ಧರಾಜುರವರು ಹೇಳಿದ ಹಾಗೆ, ತೆರಿಗೆಯ ಕಾರಣಕ್ಕಾಗಿ ವರ್ಷದ 11 ತಿಂಗಳು ಪ್ರವಾಸಿಗಳೇ ಇಲ್ಲದ ಸ್ಥಿತಿ ಇದೆ. ದಸರಾ ಹಬ್ಬದ ಒಂದು ತಿಂಗಳು ಮಾತ್ರ ತೆರಿಗೆಯನ್ನು ಕಡಿಮೆ ಮಾಡುತ್ತಾರೆ. ಆ ಒಂದು ತಿಂಗಳು ಮೈಸೂರಿಗೆ ಎಷ್ಟು ಜನ tourist ಗಳು ಬಂದಿದ್ದಾರೋ ಅದನ್ನು ಹೋಲಿಸಿದರೆ ಶೇಕಡ 20ರಷ್ಟು ಮಾತ್ರ ಬರುತ್ತದೆ. ಇನ್ನು ಶೇಕಡ 80ರಷ್ಟು tourist ಗಳು ಬರುವುದಿಲ್ಲ. ಸರ್ಕಾರ ಕೇವಲ K.S.R.T.C ಯ

ಸಂಪಾದನೆಯನ್ನು ನೋಡುತ್ತಾರೋ ಅಥವಾ tourism ಸಂಪಾದನೆ ನೋಡುತ್ತಾರೋ ಗೊತ್ತಿಲ್ಲ. ಕೇವಲ tourismನಿಂದ ಬರುವ ಆದಾಯದಲ್ಲೇ ರಾಜ್ಯ, ರಾಷ್ಟ್ರಗಳು ಆಳ್ವಿಕೆ ಮಾಡುತ್ತಿರುವಂಥದ್ದನ್ನು ನಾನು ನೋಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ಕೊಡುತ್ತಿಲ್ಲ. ಕೇವಲ K.S.R.T.C ಗೆ ಸಂಪಾದನೆ ಆಗುತ್ತಿದೆಯೇ ವಿನಃ ಪ್ರವಾಸೋದ್ಯದ ಹಿನ್ನೆಲೆಯಲ್ಲಿ ಬರುವ ಎಷ್ಟೋ ಹಣ ಪೋಲಾಗುತ್ತಿದೆ. ಈಗ Inter-State Permit ಕೊಡುತ್ತಿದ್ದಾರೆ. ಆದರೆ National Permit ಕೊಟ್ಟು, ಏನು South Zone ಇದೆಯೋ, ಅದು ಕರ್ನಾಟಕ ಇರಬಹುದು, ಆಂಧ್ರಪ್ರದೇಶ ಇರಬಹುದು, ತಮಿಳುನಾಡು ಇರಬಹುದು ಅಥವಾ ಗೋವಾ ಇರಬಹುದು ಇವುಗಳನ್ನೊಳಗೊಂಡಂತೆ National Permit ಎಂದೇನಾದರೂ ಕೊಟ್ಟರೆ ಆಗ ಈ ತೆರಿಗೆಯ ಸಮಸ್ಯೆ ಕಡಿಮೆಯಾಗುತ್ತದೆ. ಮಾನ್ಯ ಸಚಿವರನ್ನು ವಿನಂತಿಸಿಕೊಳ್ಳುವುದೇನೆಂದರೆ, ಕೇವಲ K.S.R.T.C ಯ ಸಂಪಾದನೆಯ ಬಗ್ಗೆ ಒಂದೇ ಅಲ್ಲ, ಪ್ರವಾಸೋದ್ಯಮದ ಬಗ್ಗೆಯೂ ಯೋಚನೆ ಮಾಡಬೇಕು, ತೆರಿಗೆಯನ್ನು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸದಸ್ಯರದು ಮೈಸೂರಿನಲ್ಲಿ ಅನೇಕ ಹೋಟೆಲ್ ಗಳಿವೆ...

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮೈಸೂರಿನಲ್ಲಿ ನನ್ನದೊಂದೇ ಹೋಟೆಲಲ್ಲ, ಆದರೆ ಇವತ್ತು ಪುಗ್ಸಟ್ಟೆ ಜಾಗ ತೆಗೆದುಕೊಂಡಿರುವ ಇನ್ಫೋಸಿಸ್ ಕಂಪನಿಯವರು 6 ಸಾವಿರ ರೂಮ್‌ಗಳನ್ನು ಕಟ್ಟಿಕೊಂಡು ಇಡೀ ಮೈಸೂರಿನ ಹೋಟೆಲ್‌ಗಳವರು ತಮ್ಮ ಹೋಟೆಲ್‌ಗಳನ್ನು ಮುಚ್ಚುವಂಥ ಪರಿಸ್ಥಿಯನ್ನು ತಂದೊಡ್ಡಿದ್ದಾರೆ...

**ಸಭಾಪತಿಯವರು:–** ಈಗಿಲ್ಲಿ ಅದರ ಬಗ್ಗೆ ಚರ್ಚೆ ಮಾಡುತ್ತಿಲ್ಲ. ವಾಹನ ತೆರಿಗೆಗೆ ಸಂಬಂಧಪಟ್ಟಂತೆ ಚರ್ಚೆ ಆಗುತ್ತಿದೆ, ಆ ವಿಷಯವನ್ನು ಮಾತನಾಡಬೇಡಿ..

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):-** ಇನ್ಫೋಸಿಸ್‌ನವರು ಇವತ್ತು ಹೋಟೆಲ್‌ಗಳನ್ನು ನಡೆಸುತ್ತಿದ್ದಾರೆ.. (ಗೊಂದಲ)

**ಶ್ರೀ ಆರ್. ಅಶೋಕ್:-** ಮೈಸೂರಿನ ಜನ ಒಳ್ಳೆಯ ಜನ. ಅಲ್ಲಿ ಪ್ರವಾಸೋಧ್ಯಮ ಚೆನ್ನಾಗಿದೆ. ಮಾನ್ಯ ಸಭಾಪತಿಗಳೆ, K.S.R.T.C ಗೂ ಈ tax ಗೂ ಏನೂ ಸಂಬಧ ಇಲ್ಲ. K.S.R.T.Cಕೂಡ ಸರ್ಕಾರಕ್ಕೆ ತೆರಿಗೆ ಕಟ್ಟುತ್ತದೆ.

ಹೊರ ರಾಜ್ಯಗಳಿಂದ ಬರುವಂತಹ ಎಲ್ಲಾ ವಾಹನಗಳು ತೆರಿಗೆಯನ್ನು ಕಟ್ಟಬೇಕು. ಇದು ಎಲ್ಲಾ ರಾಜ್ಯಗಳಲ್ಲೂ ಇದೆ, ನಮ್ಮ ರಾಜ್ಯಗಳಲ್ಲೂ ಇದೆ.ದಸರಾ ಇರಬಹುದು ಅಥವಾ ಉತ್ತರ ಕರ್ನಾಟಕದ ಕೆಲವು ಜಾತ್ರೆಗಳ ಸಂಧರ್ಭದಲ್ಲಿ ವಾಹನಗಳಿಗೆ ತೆರಿಗೆ ರಿಯಾಯಿತಿ ಕೊಟ್ಟಂಥ ಉದಾಹರಣೆಗಳೂ ಕೂಡ ಇವೆ. ತೆರಿಗೆ ವಿಚಾರ ರಾಜ್ಯಗಳ ಪಾಲಿಸಿಯಾಗಿದೆ. ನಾವೊಬ್ಬರೇ ತೆರಿಗೆ ಕಡಿಮೆ ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಎಲ್ಲಾ ರಾಜ್ಯಗಳೂ ಒಪ್ಪಬೇಕಾಗುತ್ತದೆ.ಮಾನ್ಯ ಸಭಾಪತಿಗಳೆ, ಸುತ್ತಮುತ್ತ ಇರುವ ರಾಜ್ಯಗಳ ಸಾರಿಗೆ ಮಂತ್ರಿಗಳ ಸಭೆ ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಆ ಸಂದರ್ಭದಲ್ಲಿ ಈ ವಿಚಾರವನ್ನು ನಾವು ಚರ್ಚೆಗೆ ತೆಗೆದುಕೊಳ್ಳುತ್ತೇವೆ.

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ವಿ. ಸೋಮಣ್ಣ (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ 30 ಜುಲೈ 2012ರ ಸಮೂಹ 1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 26 ಪ್ರಶ್ನೆಗಳ ಪೈಕಿ 22 ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುತ್ತಿದ್ದೇನೆ.

## ಉಪ ವಿದ್ಯುತ್ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ

**223; ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಮಲ್ಲನಾಯಕನಹಳ್ಳಿಗೆ K.E.B ಉಪ ಕೇಂದ್ರ ಯಾವ ವರ್ಷದಲ್ಲಿ ಮಂಜೂರಾಗಿದೆ;

ಆ) ಮಂಜೂರಾಗಿದ್ದಲ್ಲಿ ಇಲ್ಲಿಯವರೆವಿಗೂ ಕಾಮಗಾರಿ ಏಕೆ ಪ್ರಾರಂಭಗೊಂಡಿಲ್ಲ;

ಇ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು?

**ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು)**

ಅ) **ಆ) ಮತ್ತು ಇ)** ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಮಲ್ಲನಾಯಕನಹಳ್ಳಿಗೆ ಯಾವುದೇ ವಿದ್ಯುತ್ ಉಪ ಕೇಂದ್ರವು ಮಂಜೂರಾಗಿರುವುದಿಲ್ಲ.

**ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಶಾಲೆಗಳ ಶುಲ್ಕ ಮಂಜೂರಾತಿ ಬಗ್ಗೆ**

**224; ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭಾಕ್ಷೇತ್ರ)**

ಅ) ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ವಂತಿಕೆ ಮತ್ತು ಶುಲ್ಕವನ್ನು ಸರ್ಕಾರದಿಂದ ಮಂಜೂರಾತಿ ಮಾಡುವ ಸೌಲಭ್ಯ ಈ ಹಿಂದೆ ಇತ್ತೇ;

ಆ) ಹಾಗಿದ್ದಲ್ಲಿ ಈ ಪದ್ಧತಿ ಇನ್ನೂ ಜಾರಿಯಲ್ಲಿದೆಯೇ; ಈ ಪದ್ಧತಿಯನ್ನು ಹಿಂದಕ್ಕೆ ಪಡೆದಿದ್ದಲ್ಲಿ ಅಥವಾ ರದ್ದು ಪಡಿಸಿದ್ದಲ್ಲಿ ಯಾವ ಕಾರಣಕ್ಕೆ ರದ್ದು ಪಡಿಸಲಾಗಿದೆ? (ಮಾಹಿತಿ ಒದಗಿಸುವುದು)

**ಶ್ರೀ ಎ.ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)**

ಅ) ಹೌದು

ಆ) ಪ್ರತಿಷ್ಠಿತ ಶಾಲೆಯಲ್ಲಿ ಸಿಗುವ ಸೌಲಭ್ಯಗಳಂತೆ ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ (ಎಂಡಿಆರ್ಎಸ್). ಕಿತ್ತೂರು ರಾಣಿ ವಸತಿ ಶಾಲೆ, ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಇದ್ದು ಈ ವಸತಿ ಶಾಲೆಗಳು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದು. ಪರಿಷ್ಠಿತ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಉಚಿತವಾಗಿ

ಶಿಕ್ಷಣ ಮತ್ತು ವಸತಿ ಸೌಕರ್ಯವನ್ನು ನೀಡಲಾಗುತ್ತಿದೆ. ಕಳೆದ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 94 ರಷ್ಟು ಫಲಿತಾಂಶ ಪಡೆದಿರುತ್ತಾರೆ. ಖಾಸಗಿ ಪ್ರತಿಷ್ಠಿತ ಶಾಲೆಗಳಲ್ಲಿ ದೊರೆಯುತ್ತಿರುವ ಸೌಲಭ್ಯಗಳು ಈ ಶಾಲೆಗಳಲ್ಲಿಯೂ ದೊರೆಯುತ್ತಿರುವುದರಿಂದ 2012–13ನೇ ಸಾಲಿನಲ್ಲಿ ಖಾಸಗಿ ಪ್ರತಿಷ್ಠಿತ ಶಾಲೆಗಳಿಗೆ ಪರಿಶಿಷ್ಟಜಾತಿ/ಪಂಗಡದ ವಿದ್ಯಾರ್ಥಿಗಳನ್ನು ದಾಖಲಿಸುವುದನ್ನು ಸ್ಥಗಿತಗೊಳಿಸಲಾಗಿದೆ.

**ಬೆಳಗಾಂ ನಗರವನ್ನು ಗುಡಿಸಲು ಮುಕ್ತಗೊಳಿಸುವುದು**

**343; ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಬೆಳಗಾಂ ನಗರದಲ್ಲಿನ ಘೋಷಿತ ಕೊಳಚೆ ಪ್ರದೇಶಗಳು ಹಾಗೂ ಅಘೋಷಿತ ಕೊಳಚೆ ಪ್ರದೇಶಗಳೆಷ್ಟು; (ವಿವರ ನೀಡುವುದು)

ಆ) ಬೆಳಗಾಂ ನಗರದಲ್ಲಿ ಯಾವ ಯಾವ ಬಡಾವಣೆ ಸ್ಥಳ, ಕೊಳಚೆ ಪ್ರದೇಶದಲ್ಲಿ ಎಷ್ಟೆಷ್ಟು ಗುಡಿಸಲುಗಳಿವೆ: (ವಿವರ ನೀಡುವುದು)

ಇ) ಗುಡಿಸಲು ವಾಸಿಗಳ ವಿವರ ಸಂಗ್ರಹಿಸಲಾಗಿದೆಯೇ: ಹಾಗಿದ್ದಲ್ಲಿ ಅವರಿಗೆ ಸೂರು ಕಲ್ಪಿಸಿ ಬೆಳಗಾಂ ನಗರವನ್ನು ಗುಡಿಸಲು ಮುಕ್ತವಾಗಿಸುವ ಬಗ್ಗೆ ಸರ್ಕಾರ ಇದುವರೆಗೆ ಹಾಗೂ ಮುಂದೆ ಕೈಗೊಳ್ಳಲಿರುವ ಕ್ರಮವೇನು?

**ಶ್ರೀ ವಿ. ಸೋಮಣ್ಣ (ವಸತಿ ಸಚಿವರು)**

ಅ) ಬೆಳಗಾಂ ನಗರದಲ್ಲಿ 39 ಘೋಷಿತ ಕೊಳಚೆ ಪ್ರದೇಶಗಳು ಹಾಗೂ 12 ಅಘೋಷಿತ ಕೊಳಚೆ ಪ್ರದೇಶಗಳಿವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಬೆಳಗಾಂ ನಗರದಲ್ಲಿ ಒಟ್ಟು 51 ಕೊಳಚೆ ಪ್ರದೇಶಗಳಲ್ಲಿ 6857 ಸಂಖ್ಯೆ ಗುಡಿಸಲುಗಳಿದ್ದು, ಕೊಳಚೆ ಪ್ರದೇಶವಾರು ಗುಡಿಸಲುಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ಬೆಳಗಾಂ ನಗರದಲ್ಲಿನ ಕೊಳಚೆ ಪ್ರದೇಶದ ಗುಡಿಸಲು ನಿವಾಸಿಗಳ ವಿವರಗಳನ್ನು ಸಂಗ್ರಹಿಸಲಾಗಿರುತ್ತದೆ. ಕೇಂದ್ರ ಸರ್ಕಾರವು ರಾಜ್ಯದಲ್ಲಿನ ನಗರ/ಪಟ್ಟಣಗಳನ್ನು ಕೊಳಚೆ ಪ್ರದೇಶ ಮುಕ್ತ ನಗರವನ್ನಾಗಿ ಮಾಡಲು ರಾಜೀವ್ ಅವಾಸ್ ಯೋಜನೆಗೆ ಚಾಲನೆ ನೀಡಲಾಗಿರುತ್ತದೆ. ಮೊದಲ ಹಂತದಲ್ಲಿ ಮೂರು ಲಕ್ಷಗಳಿಗಿಂತ ಅಧಿಕ ಜನಸಂಖ್ಯೆ ಇರುವ ನಗರಗಳನ್ನು ಆಯ್ಕೆ ಮಾಡಲಾಗಿದ್ದು, ಮೊದಲ ಹಂತದಲ್ಲಿ ರಾಜ್ಯದಲ್ಲಿ 10 ಮಹಾನಗರಪಾಲಿಕೆ ನಗರಗಳನ್ನು ಆಯ್ಕೆಮಾಡಲಾಗಿರುತ್ತದೆ. ಇದರಲ್ಲಿ ಬೆಳಗಾಂ ನಗರವು ಸೇರಿರುತ್ತದೆ. ಈ ಯೋಜನೆಯ ಅವಧಿಯು 2012–2017 ರವರೆಗೆ ಇದ್ದು, ಈ 5 ವರ್ಷದ ಅವಧಿಯಲ್ಲಿ ಬೆಳಗಾವಿ ನಗರದಲ್ಲಿನ ಗುಡಿಸಲು ವಾಸಿಗಳಿಗೆ ವಸತಿಯನ್ನು ಮೂಲಭೂತ ಸೌಲಭ್ಯಗಳೊಂದಿಗೆ ಒದಗಿಸಿ ಗುಡಿಸಲು ಮುಕ್ತ ನಗರವನ್ನಾಗಿ ಮಾಡಲು ಗುರಿ ಹೊಂದಲಾಗಿದೆ.

**ಅನುಬಂಧ**

| ಕ್ರ. ಸಂ. | ಕೊಳಗೇರಿ ಪ್ರದೇಶ ಹೆಸರು | ಒಟ್ಟು ಮನೆಗಳ ಸಂಖ್ಯೆ | ಗುಡಿಸಲುಗಳ ಸಂಖ್ಯೆ |
|---|---|---|---|
| | **ಘೋಷಿತ ಕೊಳಗೇರಿ ಪ್ರದೇಶಗಳು** | | |
| 1 | ಕಸಾಯಿಗಲ್ಲಿ | 490 | 490 |
| 2 | ಬುರುಡಗಲ್ಲಿ | 39 | 05 |
| 3 | ರಾಮನಗರ ವಡ್ಡರವಾಡಿ | 460 | 460 |
| 4 | ಗ್ಯಾಂಗವಾಡಿ | 287 | 287 |
| 5 | ನ್ಯಾಜರಕ್ಯಾಂಪ ವಡಗಾಂವ | 111 | 61 |
| 6 | ಜಟಪಟನಗರ ಅನಗೋಳ | 392 | 167 |
| 7 | ನಾಥಪೈನಗರ ಅನಗೋಳ | 311 | 140 |
| 8 | ಲಕ್ಷ್ಮೀನಗರ ಮಾದರಪೂರ | 947 | 416 |
| 9 | ಹಿಂದವಾಡಿ ವಡ್ಡರಭಾವಣಿ | 109 | 23 |

| | | | |
|---|---|---|---|
| 10 | ಗಾಂಧೀನಗರ ಸರ್ವೆ ನಂ. 1396 | 145 | 03 |
| 11 | ಕಲ್ಯಾಣನಗರ ವಡಗಾಂವ | 187 | 14 |
| 12 | ಮಲಪ್ರಭಾನಗರ 2ನೇ ಹಂತ | 242 | 55 |
| 13 | ತೆಂಗಿನಗಲ್ಲಿ ವಡ್ಡರಭಾವಣಿ ವಡಂಗಾವ | 78 | 27 |
| 14 | ಬುರುಡಗಲ್ಲಿ ಸರ್ವೆ ನಂ. 1358 (ನೆಹರು ನಗರ) | 82 | 19 |
| 15 | ಕಸಾಯಿಗಲ್ಲಿ (ರುಕ್ಮೀಣಿನಗರ) | 136 | 136 |
| 16 | ಬೆಲ್ದಾರಭಾವಣಿ | 70 | 32 |
| 17 | ಇಂದಿರಾನಗರ | 182 | 88 |
| 18 | ಹರಿಜನಕೇರಿ ಅನಗೋಳ | 94 | 55 |
| 19 | ಭಜಂತ್ರಿಗಲ್ಲಿ | 106 | 62 |
| 20 | ಕುರಬರಗಲ್ಲಿ ಅನಗೋಳ | 406 | 260 |
| 21 | ಹೊಸ ಗಾಂಧಿನಗರ ಎನ್.ಎಚ್–4 ಹತ್ತಿರ | 1468 | 772 |
| 22 | ವಡ್ಡರಗಲ್ಲಿ ಅನಗೋಳ | 95 | 68 |
| 23 | ರೋಹಿದಾಸನಗರ 4ನೇ ರೇಲ್ವೆ ಗೇಟ್ ಹತ್ತಿರ | 137 | 01 |
| 24 | ಚವಾಟಗಲ್ಲಿ (ಡೋರವಾಡ) | 190 | 139 |
| 25 | ಮೂತಂಗಿ ಕಾಲನಿ (ಕಾಳಿಅಂಬರಾಯಿ) | 201 | 39 |
| 26 | ಕೊಂಚಿಕೊರವರ ಓಣಿ | 200 | 200 |
| 27 | ರಾಜಾರಾಮನಗರ ಉದ್ಯಮಭಾಗ | 132 | 132 |
| 28 | ಡೋರಗಲ್ಲಿ ವಡಗಾಂವ | 74 | 74 |
| 29 | ಮಲಪ್ರಭಾನಗರ | 94 | 57 |
| 30 | ಪಾಟೀಲಗಲ್ಲಿ ವಡ್ಡರಭಾವಣಿ | 146 | 59 |
| 31 | ಅಂಬೇಡ್ಕರನಗರ ಅನಗೋಳ | 325 | 127 |
| 32 | ವಡ್ಡರಗಲ್ಲಿ ಖಾಸಭಾಗ | 410 | 196 |
| 33 | ಅಂಬೇಡ್ಕರನಗರ ಮಜಗಾಂವ | 118 | 118 |

| | | | |
|---|---|---|---|
| 34 | ಮಂಗಾಯಿನಗರ ವಡಗಾಂವ | 176 | 86 |
| 35 | ಕನಕದಾಸನಗರ ವಡಗಾಂವ | 28 | 28 |
| 36 | ಗಣೇಶ ನಗರ ವಡಗಾಂವ | 41 | 03 |
| 37 | ಬ್ರಹ್ಮದೇವನಗರ ಮಜಗಾಂವ | 249 | 70 |
| 38 | ಕಲ್ಮೇಶ್ವನಗರ ವಡಗಾಂವ | 43 | 03 |
| 39 | ಕುಂತಿನಗರ (ಖಾಸಭಾಗ ಹಳೇ ಪಿ.ಬಿ. ರಸ್ತೆ ಟಿಚರ್ಸ್ ಕಾಲನಿ ಹತ್ತಿರ) | 131 | 44 |
| | **ಒಟ್ಟು** | **9132** | **5016** |
| | **ಗುರುತಿಸಿದ ಕೊಳಗೇರಿ ಪ್ರದೇಶಗಳು** | | |
| 1 | ಪಾಟೀಲಗಳಲ್ಲಿ ಖಾಸಭಾಗ (ಜೋಶಿಮಾಳ ಹತ್ತಿರ) | 178 | 52 |
| 2 | ರಣಜುಂಜಾರ ಕಾಲನಿ | 122 | 05 |
| 3 | ಹರಿಜನವಾಡಾ ಖಾಸಭಾಗ | 79 | 46 |
| 4 | ದೇವಾಂಗನಗರ | 274 | 74 |
| 5 | ಶಿವಾಜಿನಗರ (ಪಂಜಿಬಾಬಾನಗರ) | 239 | 144 |
| 6 | ಹಳೇ ಗಾಂಧೀನಗರ (ದೀಪಕಗಲ್ಲಿ) | 222 | 119 |
| 7 | ವಂಟಮುರಿ (ಆಶ್ರಯ ಕಾಲನಿ) | 363 | 363 |
| 8 | ಶ್ರೀನಗರ (ಜೋಪಡ ಪಟ್ಟಿ) | 75 | 75 |
| 9 | ಮಾರುತಿನಗರ (ಬಿಜಾಪುರ ರೋಡ) | 261 | 63 |
| 10 | ಕಣಬರ್ಗಿ ಎಕ್ಸ್‌ಟೇನಶನ್ (ಸಾಗರ ಕಾಲನಿ) | 392 | 392 |
| 11 | ರುಕ್ಮೀಣಿನಗರ (ಆಶ್ರಯ ಕಾಲನಿ) | 614 | 377 |
| 12 | ಆಲಾರವಾಡ (ಆಶ್ರಯ ಕಾಲನಿ) | 131 | 131 |
| | **ಒಟ್ಟು** | 2950 | 1840 |
| | **ಒಟ್ಟು ನಿವ್ವಳ** | 12082 | 6857 |

## ಬಿ.ಸಿ.ಎಂ. ವಸತಿ ನಿಲಯಗಳ ಬಗ್ಗೆ

**342; ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಬೆಳಗಾಂ ಜಿಲ್ಲೆಯಲ್ಲಿರುವ ಬಿ.ಸಿ.ಎಂ. ವಸತಿ ನಿಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

**ಆ)** ಸದರಿ ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳಿವೆಯೆ; ಬಾಡಿಗೆ ಕಟ್ಟಡದಲ್ಲಿರುವ ವಸತಿ ನಿಲಯಗಳೆಷ್ಟು; ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಸತಿ ನಿಲಯಗಳಿಗೆ ನೀಡಿದ ಮೊತ್ತವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

**ಇ)** ಬಿ.ಸಿ.ಎಂ. ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಪ್ರಸ್ತಾವನೆ, ಬಂದಿದೆಯೆ; ಬಂದಿದ್ದಲ್ಲಿ, ನಿಗದಿಪಡಿಸಿದ ಅನುದಾನವೆಷ್ಟು;

**ಈ)** ಹಾಗಿದ್ದಲ್ಲಿ, ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)**

**ಅ)** ಬೆಳಗಾಂ ಜಿಲ್ಲೆಯಲ್ಲಿ 101 ಮೆಟ್ರಿಕ್ ಪೂರ್ವ ಮತ್ತು 28 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಇರುತ್ತವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

ಈ) ಪ್ರಸ್ತತ, ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆಗೊಳಿಸಿ, ಸಮರ್ಪಕ ರೀತಿಯಲ್ಲಿ ವಿದ್ಯುತ್ ಪೂರೈಸುವ ಸಲುವಾಗಿ 2012–13ನೇ ಸಾಲಿನಲ್ಲಿ 1.280 ಮೆ.ವ್ಯಾ. ಗಳಷ್ಟು ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ರಾಜ್ಯವು ಪ್ರತಿ ದಿನ ವಿವಿಧ ಮೂಲಗಳಿಂದ ವಿದ್ಯುತ್ ಖರೀದಿ ಮಾಡುತ್ತಿದ್ದು, ಹೊರ ರಾಜ್ಯವು ಪ್ರತಿ ದಿನ ವಿವಿಧ ಮೂಲಗಳಿಂದ ವಿದ್ಯುತ್ ಖರೀದಿ ಮಾಡುತ್ತಿದ್ದು, ಹೊರ ರಾಜ್ಯಗಳಿಂದ 750 ಮೆಗಾವ್ಯಾಟ್ ಮತ್ತು ರಾಜ್ಯದ ಖಾಸಗಿ ಉತ್ಪಾದನಾ ಘಟಕಗಳಿಂದ 530 ಮೆಗಾವ್ಯಾಟ್ ವಿದ್ಯುತ್‌ನ್ನು ಖರೀದಿ ಮಾಡಲಾಗುತ್ತಿದೆ.

ಉ) ಕರ್ನಾಟಕ ವಿದ್ಯುತ್‌ಪ್ರಸರಣ ನಿಗಮ ನಿಯಮಿತ :– ರಾಜ್ಯ ಸರ್ಕಾರವು ವಿದ್ಯುತ್ ಸ್ವಾವಲಂಬನೆ ಸಾಧಿಸಲು ಹಾಗೂ ನಿರಂತರವಾಗಿ ಎದುರಾಗುತ್ತಿರುವ ವಿದ್ಯುತ್ ಬಗೆಹರಿಸುವ ನಿಟ್ಟಿನಲ್ಲಿ, ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ 17,164 ಮೆ.ವ್ಯಾನಷ್ಟು ವಿದ್ಯುತ್‌ನ್ನು ಹೆಚ್ಚುವರಿಯಾಗಿ ಉತ್ಪಾದಿಸಲು ವಿದ್ಯುತ್ ಉತ್ಪಾದನಾ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿದೆ.

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತ:–** ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಜ್ಯವನ್ನು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದೆ.

**I) ಕಾಮಗಾರಿಗಳು ಚಾಲನೆಯಲ್ಲಿರುವ ಯೋಜನೆಗಳು:**

ಅ) **ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕ–2 (500 ಮೆ.ವ್ಯಾ):–** ಯೋಜನೆಯ ಎಲ್ಲಾ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು, ಕಲ್ಲಿದ್ದಲನ್ನುಪಯೋಗಿಸಿ ಘಟಕವನ್ನು ದಿನಾಂಕ 22.03.2012 ರಂದು

ಚಾಲನೆಗೊಳಿಸಲಾಯಿತು. ಘಟಕವನ್ನು ಜುಲೈ 2012 ರ ವೇಳೆಗೆ ರಾಜ್ಯದ ವಿದ್ಯುತ್ ಜಾಲಕ್ಕೆ ಸೇರಿಸುವ ನಿರೀಕ್ಷೆಯಿದೆ.

ಆ) **ಯರಮರಸ್ ಶಾ.ವಿ.ಕೇಂದ್ರ (2 X 800 ಮೆ ವ್ಯಾ):–** ದಿನಾಂಕ: 09.04.2010ರಂದು ಬಿ.ಟಿ.ಜಿ ಹಾಗೂ ಇತರೆ ಪ್ರಮುಖ ಪ್ಯಾಕೇಜ್ ಗಳಿಗಾಗಿ ಮೆ: ಬಿ ಹೆಚ್ ಇ ಎಲ್ ರವರಿಗೆ ಆದೇಶ ಪತ್ರ (LOA) ನೀಡಲಾಗಿದೆ. ಆರ್. ಸಿ. ಚಿಂಮಣಿ. ಕೋಲ್ ಹ್ಯಾಂಡ್ಲಿಂಗ್ ಹಾಗೂ ಆ್ಯಶ್ ಹ್ಯಾಂಡ್ಲಿಂಗ್ ಗಳ ಕಾಮಗಾರಿಗಳಿಗಾಗಿ ಆದೇಶ ಪತ್ರ (LOA) ನೀಡಲಾಗಿದ್ದು, ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ. ದಿನಾಂಕ: 09.11.2011 ರಂದು ಈ ಯೋಜನೆಯ ಆರ್ಥಿಕ ವಹಿವಾಟಿನ (Financial closure) ಮುಕ್ತಾಯ ಸಮಾರಂಭವನ್ನು ನೆರವೇರಿಸಲಾಯಿತು.

ಇ) **ಯದ್ಲಾಪುರ ಶಾ.ವಿ.ಕೇಂದ್ರ (1X800 ಮೆ.ವ್ಯಾ):–** ದಿನಾಂಕ: 25.09.2010 ರಂದು ಮೆ: ಬಿ.ಹೆಚ್.ಇಎಲ್ ರವರಿಗೆ ಅನುಮತಿ ಪತ್ರ (LOI) ನೀಡಲಾಗಿದೆ. ಯೋಜನೆಗಾಗಿ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಅನುಮತಿಯನ್ನು ನಿರೀಕ್ಷಿಸಲಾಗಿದ್ದು, ಅನುಮತಿ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಈ) **ಬಳ್ಳಾರಿ ಶಾ.ವಿ.ಕೇಂದ್ರ 3ನೇ ಘಟಕ (700 ಮೆ.ವ್ಯಾ):–** ಸಂಧಾನದ ನಂತರ ಒಪ್ಪಿದ ಮೊತ್ತವಾದ 3700 ಕೋಟಿ. ರೂ ಗಳ ಕಾಮಗಾರಿಗಳಿಗಾಗಿ ಇ.ಪಿ.ಸಿ ಆಧಾರದ ಮೇಲೆ ದಿನಾಂಕ: 28.09.2010 ರಂದು ಮೆ: ಬಿ.ಹೆಚ್.ಇ.ಎಲ್ ರವರಿಗೆ ಆದೇಶ ಪತ್ರ (LOA) ನೀಡಲಾಗಿದೆ. ಆರ್.ಸಿ.ಚಿಮಣಿ, ಕೋಲ್ ಹ್ಯಾಂಡ್ಲಿಂಗ್ ಹಾಗೂ ಆ್ಯಶ್ ಹ್ಯಾಂಡ್ಲಿಂಗ್ ಸಿಸ್ಟಂ ಗಳ ಕಾಮಗಾರಿಗಳಿಗಾಗಿ ಆದೇಶ ಪತ್ರ (LOA) ನೀಡಲಾಗಿದ್ದು, ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ.

**ಉ) ಶಿವಸಮುದ್ರಂ ಸೋಲಾರ್ ವಿದ್ಯುತ್ ಯೋಜನೆ (5 ಮೆ.ವ್ಯಾ):–** ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಷ್ಟ್ರೀಯ ವಿದ್ಯುತ್ ವ್ಯಾಪಾರ ನಿಗಮ ನಿಯಮಿತದ (NVVNL) ಸ್ಪರ್ಧಾತ್ಮಕ ಸವಾಲಿನಲ್ಲಿ ಶಿವನಸಮುದ್ರದ 5 ಮೆ. ವ್ಯಾ. ಸಾಮರ್ಥ್ಯದ ಸೋಲಾರ್ ವಿದ್ಯುತ್ ಯೋಜನೆಯನ್ನು ತಡೆದುಕೊಂಡಿತ್ತು ದಿನಾಂಕ: 25.06.2012 ರಂದು ಸ್ಥಾವರವನ್ನು ಕಾರ್ಯಾರಂಭಗೊಳಿಸಿ ರಾಜ್ಯದ ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳಿಸಲಾಗಿದೆ.

**2.** ಇಷ್ಟಲ್ಲದೆ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲುಯೋಜಿಸಿದೆ.

**ಅ)** ಛತ್ತೀಸ್‌ಗಡ್ ಶಾಖೋತ್ಪನ್ನ ವಿದ್ಯುತ್ ಯೋಜನೆ (1600 ಮೆ ವ್ಯಾ)

**ಆ)** ತದಡಿ ಸಂಯುಕ್ತ ಆವರ್ತಕ ವಿದ್ಯುತ್ ಯೋಜನೆ (2100 ಮೆ ವ್ಯಾ)

**ಇ)** ಬಿಡದಿ ಸಂಯುಕ್ತ ಆವರ್ತಕ ವಿದ್ಯುತ್ ಯೋಜನೆ (700 ಮೆ ವ್ಯಾ ± 20%)

**ಈ)** ಗುಂಡ್ಯಾ ಜಲವಿದ್ಯುತ್ ಯೋಜನೆ (2 X 200 ಮೆ.ವ್ಯಾ)

**ಉ)** ಶಿವಸಮುದ್ರಂ ಜಲವಿದ್ಯುತ್ ಯೋಜನೆ (345 ಮೆ.ವ್ಯಾ)

**ಊ)** ಮುನಿರಾಬಾದ್ ಜಲ ವಿದ್ಯುತ್ ಕೇಂದ್ರ ಹೆಚ್ಚುವರಿ ಘಟಕ (1 X10 ಮೆ.ವ್ಯಾ)

**ಋ)** ಘಟಪ್ರಭ (20 ಮೆ.ವ್ಯಾ)

***ಮೆ: ಬಿ.ಹೆಚ್.ಇ.ಎಲ್ ರವರ ಸಹಭಾಗಿತ್ವದೊಂದಿಗೆ**

ಊ) **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ:–** 2008–09ನೇ ಸಾಲಿನಿಮದ 2012–13 ರವರೆಗೆ (ಜೂನ್–2012 ರ ಅಂತ್ಯದವರೆಗೆ) ಖಾಸಗಿ ಸಂಸ್ಥೆಗಳಿಂದ ಖರೀದಿಸಿದ ವಿದ್ಯುತ್ತಿನ ಖರೀದಿ ವೆಚ್ಚದ ವರ್ಷವಾರು ವಿವರಗಳು ಕೆಳಕಂಡಂತಿವೆ:

| ಕ್ರ ಸಂ | ವರ್ಷ | ವಿದ್ಯುತ್ ಖರೀದಿ ಪ್ರಮಾಣ ಮಿ.ಯೂ. ಗಳಲ್ಲಿ | ವಿದ್ಯುತ್ತಿನ ಖರೀದಿ ವೆಚ್ಚ (₹. ಕೋಟಿಗಳಲ್ಲಿ) |
|---|---|---|---|
| 1 | 2008–09 | 1963.5 | 1327.43 |
| 2 | 2009–10 | 1798.65 | 1041.06 |
| 3 | 2010–11 | 7815.36 | 3895.30 |
| 4 | 2011–12 | 3298.42 | 3023.95 |
| | 2012–13 (ಜೂನ್–2012ರ ಅಂತ್ಯದವರೆಗೆ) | 2900.86 | 1351.67 |

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತ:–** ಕರ್ನಾಟಕ ಸರ್ಕಾರವು ಕಳೆದ 4 ವರ್ಷಗಳ ಅವಧಿಯಲ್ಲಿ ಈಕ್ವಿಟಿ ರೂಪದಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಚಾಲನೆಯಲ್ಲಿರುವ ಹಾಗೂ ಹೊಸ ವಿದ್ಯುತ್ ಯೋಜನೆಗಳಿಗಾಗಿ ನೀಡಲಾದ ಹಣದ ವಿವರ ಈ ಕೆಳಕಂಡಂತಿದೆ.

| **ಅವಧಿ** | **ವಿನಿಯೋಗಿಸಲಾದ ಮೊತ್ತ (ಕೋಟಿ ರೂ.ಗಳಲ್ಲಿ)** |
|---|---|
| 2008–09 | 500 |
| 2009–10 | 500 |
| 2010–11 | 500 |
| 2011–12 | 625 |

**ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡುವ ಬಗ್ಗೆ**
**714; ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಬೀದರ್ ಜಿಲ್ಲೆಯಲ್ಲಿ ಕಳೆದ 4 ವರ್ಷಗಳ ಅವಧಿಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕಗಳನ್ನು ನೀಡಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಆ) ಇದೇ ಅವಧಿಯಲ್ಲಿ ಈ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕಗಳನ್ನು ಕೋರಿ ಜಿಲ್ಲೆಯಾದ್ಯಂತ ಜೆಸ್ಕಾಂಗೆ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು; ಪ್ರತಿ ವಿಧಾನ ಸಭಾ ಕ್ಷೇತ್ರಗಳಿಂದ ಬಂದಿದ್ದ ಮಾಹಿತಿಯನ್ನು ಒದಗಿಸುವುದು)

ಇ) ಈ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಕರ್ಪಗಳನ್ನು ನೀಡುವಲ್ಲಿ ವಿಳಂಬ ಮಾಡುತ್ತಿರುವುದು ನಿಜವೇ?

**ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು)**

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ನೀಡಲಾದ ಕೊಳವೆ ಬಾವಿಗಳ ವಿಧಾನಸಭಾ ಕ್ಷೇತ್ರವಾರು ವಿವರಗಳು ಕೆಳಕಂಡಂತಿವೆ:

| ಕ್ರ ಸಂ | ವಿಧಾನಸಭಾಕ್ಷೇತ್ರದ ಹೆಸರು | ವಿದ್ಯುತ್ ಸಂಪರ್ಕ ನೀಡಲಾದ ಕೊಳವೆ ಬಾವಿಗಳ ಸಂಖ್ಯೆ | | | | |
|---|---|---|---|---|---|---|
| | | 2008-09 | 2009-10 | 2010-11 | 2011-12 | ಒಟ್ಟು |
| 1 | ಔರಾದ | 53 | 68 | 94 | 181 | **396** |
| 2 | ಭಾಲ್ಕಿ | 93 | 73 | 134 | 277 | **577** |
| 3 | ಬೀದರ | 75 | 65 | 107 | 96 | **343** |
| 4 | ಬೀದರ ದಕ್ಷಿಣ | 75 | 66 | 116 | 131 | **388** |
| 5 | ಹುಮನಾಬಾದ | 147 | 90 | 174 | 204 | **615** |
| 6 | ಬಸವಕಲ್ಯಾಣ | 90 | 79 | 149 | 140 | **458** |
| | **ಒಟ್ಟು** | **533** | **441** | **774** | **1029** | **2777** |

ಆ) ಬೀದರ್ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಿದ ಅರ್ಜಿಗಳ ವಿಧಾನಸಭಾ ಕ್ಷೇತ್ರವಾರು ವಿವರಗಳು ಕೆಳಕಂಡಂತಿವೆ.

| ಕ್ರ ಸಂ | ವಿಧಾನಸಭಾ ಕ್ಷೇತ್ರ ಹೆಸರು | ವಿದ್ಯುತ್ ಸಂಪರ್ಕ ಕೋರಿ ಅರ್ಜಿಗಳ ಸಂಖ್ಯೆ | | | | |
|---|---|---|---|---|---|---|
| | | **2008–09** | **2009–10** | **2010–11** | **2011–12** | **ಒಟ್ಟು** |
| 1 | ಔರಾದ | 83 | 90 | 110 | 168 | **451** |
| 2 | ಭಾಲ್ಕಿ | 68 | 168 | 220 | 181 | **737** |
| 3 | ಬೀದರ | 85 | 70 | 45 | 121 | **321** |
| 4 | ಬೀದರ ದಕ್ಷಿಣ | 114 | 133 | 108 | 134 | **489** |
| 5 | ಹುಮನಾಬಾದ | 150 | 92 | 96 | 89 | **427** |
| 6 | ಬಸವಕಲ್ಯಾಣ | 111 | 121 | 108 | 112 | **452** |
| | **ಒಟ್ಟು** | **711** | **674** | **687** | **805** | **2877** |

ಇ) ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಕೊರೆದ ಕೊಳವೆ ಬಾವಿಗಳಿಗೆ ಆದ್ಯತೆಯ ಮೇರೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

## ತುಮಕೂರು ಜಿಲ್ಲೆಯಲ್ಲಿ ವಸತಿ ಇಲಾಖೆಯಿಂದ ನಿರ್ಮಾಣವಾದ ವಸತಿಗಳ ಬಗ್ಗೆ

## 721; ಶ್ರೀ ಡಾ॥ ಎಂ.ಆರ್.ಹುಲಿನಾಯ್ಕರ್

ಅ) ತುಮಕೂರು ಜಿಲ್ಲೆಗೆ ಕಳೆದ 4 ವರ್ಷಗಳಿಂದ ಎಷ್ಟು ವಸತಿಗಳನ್ನು ಯಾವ ಯೋಜನೆಯಡಿ ಕಲ್ಪಿಸಲಾಗಿದೆ?

ಆ) ತುಮಕೂರು ಜಿಲ್ಲೆಯಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು? ವಸತಿ ಇಲಾಖೆಯಿಂದ ಎಷ್ಟು ವಸತಿಗಳನ್ನು ನಿರ್ಮಾಣ ಮಾಡಿದ್ದಾರೆ? (ವಿವರ ನೀಡುವುದ)?

**ಶ್ರೀ ವಿ. ಸೋಮಣ್ಣ (ವಸತಿ ಸಚಿವರು)**

ಅ)

**1. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:**

ತುಮಕೂರು ಜಿಲ್ಲೆಗೆ 2008-2009 ರಿಂದ 2012-2013 ರ ವರೆಗಿನ ವಿವಿಧ ವಸತಿ ಯೋಜನೆಗಳಡಿ 1,26,866 ಮನೆಗಳು ಮಂಜೂರು ಮಾಡಲಾಗಿರುತ್ತದೆ. ವಿವರಗಳು ಕೆಳಗಿನಂತಿವೆ.

| ಕ್ರ ಸಂ | ಯೋಜನೆ | ಮಂಜೂರು (ಗುರಿ) ಮಾಡಲಾದ ಮನೆಗಳ ಸಂಖ್ಯೆ | | | | | |
|---|---|---|---|---|---|---|---|
| | | 2008-09 | 2009-10 | 2010-11 | 2011-12 | 2012-13 | ಒಟ್ಟು |
| 1 | ಗ್ರಾಮೀಣ ಆಶ್ರಯ | 10645 | 0 | 0 | 0 | 0 | 10645 |
| 2 | ಬಸವ ವಸತಿ ಯೋಜನೆ | 0 | 0 | 70170 | 0 | 0 | 70170 |
| 3 | ಇಂದಿರಾ ಆವಾಸ್ ಯೋಜನೆ | 8488 | 10593 | 0 | 12519 | 8346 | 39946 |
| 4 | ಗ್ರಾಮೀಣ ಅಂಬೇಡ್ಕರ್ ಯೋಜನೆ | 923 | 766 | 785 | 616 | 0 | 3090 |

| | | | | | | | |
|---|---|---|---|---|---|---|---|
| 5 | ವಿಶೇಷ ಅಭಿವೃದ್ಧಿ ಯೋಜನೆ | 0 | 0 | 1285 | 0 | 0 | 1295 |
| 6 | ವಾಜಪೇಯಿ ನಗರ ವಸತಿ ಯೋಜನೆ | 0 | 0 | 1625 | 0 | 0 | 1625 |
| 7 | ಗ್ರಾಮೀಣ ಆಶ್ರಯ ವಿಶೇಷ ವರ್ಗದ ಯೋಜನೆ | 0 | 0 | 105 | 0 | 0 | 105 |
| | **ಒಟ್ಟು** | **20056** | **11359** | **73970** | **13135** | **8346** | **126866** |

**2. ಕರ್ನಾಟಕ ಗೃಹ ಮಂಡಳಿ:**

ತುಮಕೂರು ಜಿಲ್ಲೆಯಲ್ಲಿ ಕಳೆದ 4 ವರ್ಷಗಳಲ್ಲಿ ಕೆಳಕಂಡಂತೆ ಎರಡು ವಸತಿ ಯೋಜನೆಗಳನ್ನು ಕೈಗೊಳ್ಳಲಾಗಿದೆ.

1. ನೂರು ವಸತಿ ಯೋಜನೆಯಡಿ 2010–11ನೇ ಸಾಲಿನಲ್ಲಿ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಹಿಡೇನಹಳ್ಳಿ ಗ್ರಾಮದಲ್ಲಿ ನಿವೇಶನ ಮತ್ತು ಸೇವೆಯ ಯೋಜನೆಯನ್ನು 29 ಎಕರೆ 3 ಗುಂಟೆ ಜಮೀನಿನಲ್ಲಿ ಕೈಗೊಳ್ಳಲಾಗಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳು ಮುಕ್ತಾಯಗೊಂಡಿದ್ದು. ಸದರಿ ಬಡಾವಣೆಯಲ್ಲಿ ಒಟ್ಟು 392 ವಿವಿಧ ವರ್ಗಗಳ ನಿವೇಶನಗಳನ್ನು ಅಭಿವೃದ್ಧಿ ಪಡಿಸಲಾಗಿದೆ.
2. ಸದರಿ ಬಡಾವಣೆಯಲ್ಲಿ 2011–12 ನೇ ಸಾಲಿನಲ್ಲಿ 225 ವಸತಿ ಯೋಜನೆಯಡಿ 10 ಎಂ.ಐ.ಜಿ. 10 ಎಲ್.ಐಜಿ. ಮನೆಗಳ ನಿರ್ಮಾಣ ಕೈಗೊಳ್ಳಲಾಗಿದ್ದು, ಸದರಿ ಮನೆಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

**3. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:**

ತುಮಕೂರು ಜಿಲ್ಲೆಯಲ್ಲಿ ಕಳೆದ 4 ವರ್ಷಗಳಿಂದ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವಸತಿಯಿಂದ ಕೇಂದ್ರ ಸರ್ಕಾರದ ನರ್ಮ್ನ IHSDP ಯೋಜನೆಯಡಿ ಕೊಳಚೆ ಪ್ರದೇಶದ ನಿವಾಸಿಗಳಿಗೆ 1190 ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಕಲ್ಪಿಸಲಾಗುತ್ತಿದ್ದು ವಿವರಗಳು ಕೆಳಕಂಡಂತಿವೆ.

| ವರ್ಷ | ನಗರ/ಪಟ್ಟಣ | ಮನೆಗಳ ಸಂಖ್ಯೆ |
|---|---|---|
| 2009–10 | ಪಾವಗಡ | 508 |
| | ಶಿರಾ | 682 |
| **ಒಟ್ಟು** | | **1190** |

**ಆ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ**

ತುಮಕೂರು ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಒಟ್ಟು 96 ಘೋಷಿತ ಕೊಳಚೆ ಪ್ರದೇಶಗಳಿದ್ದು, ಇವುಗಳಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ವಿವಿಧ ಯೋಜನೆಯಡಿಯಲ್ಲಿ 1976 ರಿಂದ 2009ನೇ ಸಾಲಿನವರೆಗೆ 1116 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

| **ನಗರ/ಪಟ್ಟಣ** | **ಕೊ. ಪ್ರ ಸಂಖ್ಯೆ** | **ಹುಡ್ಕೋ** | **ವಾಂಬೆ** | **SCP** |
|---|---|---|---|---|
| ತುಮಕೂರು | 23 | 327 | 152 | 32 |
| ಶಿರಾ | 11 | 0 | 90 | 23 |
| ಮಧುಗಿರಿ | 14 | 200 | 111 | 0 |
| ಚಿಕ್ಕನಾಯಕನಹಳ್ಳಿ | 10 | 50 | 0 | 0 |
| ಕುಣಿಗಲ್ | 06 | 0 | 0 | 0 |
| ತಿಪಟೂರು | 16 | 0 | 0 | 0 |
| ಗುಬ್ಬಿ | 04 | 0 | 0 | 0 |
| ಕೊರಟಗೆರೆ | 05 | 50 | 0 | 0 |

| | | | | |
|---|---|---|---|---|
| ಪಾವಗಡ | 04 | 0 | 0 | 0 |
| ತುರುವೇಕೆರೆ | 03 | 0 | 36 | 0 |
| **ಒಟ್ಟು** | **96** | **672** | **389** | **55** |

ಇದನ್ನು ಹೊರತುಪಡಿಸಿ ಕೇಂದ್ರ ಪುರಸ್ಕೃತ ನರ್ಮ್‌ನ ಐ.ಹೆಚ್.ಎಸ್.ಡಿ.ಪಿ ಯೋಜನೆಯಡಿಯಲ್ಲಿ 2009–10 ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ ಶಿರಾ ಪಟ್ಟಣದಲ್ಲಿ 682 ಮನೆಗಳು ಹಾಗೂ ಪಾವಗಡ ಪಟ್ಟಣದಲ್ಲಿ 508 ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಕೈಗೊಳ್ಳಲಾಗಿದ್ದು, ಮನೆಗಳು ನಿರ್ಮಾಣದ ಹಂತದಲ್ಲಿರುತ್ತದೆ.

**ರಾಜ್ಯದಲ್ಲಿ ಬಿ.ಸಿಂ.ಎಂ. ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ವಿವರ ಒದಗಿಸುವ ಬಗ್ಗೆ.**
**716, 715; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

**ಅ)** ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾಂತರ ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ನಂತರದ ವಸತಿ ನಿಲಯಗಳು ಎಷ್ಟು ಇರುತ್ತವೆ; ಹಾಗೂ ಈ ವಸತಿ ನಿಲಯದಲ್ಲಿ ಎಷ್ಟು ವಿದ್ಯಾರ್ಥಿಗಳು ಇರುವರು;

**ಆ)** ಸರ್ಕಾರ ಈ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಎಷ್ಟು ವೆಚ್ಚ ಮಾಡುತ್ತಿದೆ;

**ಇ)** ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ತಿಂಗಳಿಗೆ ಎಷ್ಟು ಹಣ ಖರ್ಚು ಮಾಡಲಾಗುತ್ತದೆ;

**ಈ)** ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಎಷ್ಟು ವಸತಿ ನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಇರುವರು; (ತಾಲ್ಲೂಕುವಾರು ವಿವರ ನೀಡುವುದು)

**ಉ)** ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯುವವರ ಸಂಖ್ಯೆ ಕಡಿಮೆ ಆಗಿರುತ್ತಿರುವ ಸಂಗತಿ ನಿಜವೇ;

ಊ) ವಸತಿ ನಿಲಯಗಳಲ್ಲಿ ಮೇಲ್ವಿಚಾರಕರು ವಾಸಿಸದೇ ಇರುವುದು, ಹಾಗೂ ರಾತ್ರಿ ವೇಳೆ ವಿದ್ಯಾಭ್ಯಾಸ ಮಾಡಿಸಲು ಟ್ಯೂಟರ್ ಇಲ್ಲದೆ ಇರುವುದು, ಇದ್ದರೂ ಸರಿಯಾಗಿ ಕಲಿಸದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ. ವಿ. ನಾರಾಯಣಸ್ವಾಮಿ ( ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)**

ಅ) ಹಿಂದುಳಿದ ವರ್ಗಗಳ 1348 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಹಾಗೂ 533 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಇರುತ್ತದೆ. ಈ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 69237 ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ 68,819 ವಿದ್ಯಾರ್ಥಿಗಳು ಇರುತ್ತಾರೆ.

ಅಲ್ಪಸಂಖ್ಯಾತರ ಇಲಾಖೆಯಿಂದ 52 ಮೆಟ್ರಿಕ್ ಪೂರ್ವ ಬಾಲಕ/ ಬಾಲಕಿಯರ ವಿದ್ಯಾರ್ಥಿನಿಲಯಗಳು ಹಾಗೂ 72 ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ನಿಲಯಗಳಲ್ಲಿ ಒಟ್ಟು 7080 ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇರುವರು.

ಆ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಈ ವಿದ್ಯಾರ್ಥಿಗಳಿಗೆ ವರ್ಷಕ್ಕೆ ₹. 15405.43 ಲಕ್ಷ ವೆಚ್ಚ ಮಾಡಲಾಗುತ್ತಿದೆ.

ಅಲ್ಪಸಂಖ್ಯಾತರ ಇಲಾಖೆಯಿಂದ 2011–12 ನೇ ಸಾಲಿನಲ್ಲಿ ಈ ವಿದ್ಯಾರ್ಥಿನಿಲಯಗಳಿಗೆ ₹. 1230 ಲಕ್ಷ ವೆಚ್ಚ ಮಾಡಲಾಗಿದೆ.

ಇ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳಿಗೆ ಸರಾಸರಿ ₹. 1,115/– ಗಳನ್ನು ಖರ್ಚು ಮಾಡಲಾಗುತ್ತದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪ್ರತಿ ಮೆಟ್ರಿಕ್ ನಂತರದ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ₹. 850/– ದರದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ.ಉಚಿತ ವಸತಿ ಹಾಗೂ ಗ್ರಂಥಾಲಯ ಸೌಕರ್ಯ ಕಲ್ಪಿಸಲಾಗಿದೆ. ಮೆಟ್ರಿಕ್ ಪೂರ್ವ ಪ್ರತಿ ವಿದ್ಯಾಥಿಗೆ ತಿಂಗಳಿಗೆ ₹. 750/– ದರದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ. ಇದರ ಜೊತೆ ಉಚಿತ ವಸತಿ ಸೌಕರ್ಯ, ಪಠ್ಯ ಪುಸ್ತಕ, ಲೇಖನ ಸಾಮಗ್ರಿ, ದಿನಪತ್ರಿಕೆ ಎಣ್ಣೆ, ಸೋಪು, ಪೇಸ್ಟ್ ಹಾಗೂ ಹಾಸಿಗೆ ಹೊದಿಕೆಯ ಸೌಲಭ್ಯವನ್ನು ನೀಡಲಾಗುತ್ತಿದೆ. ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ವಿಶೇಷ ಬೋಧಕರಿಂದ ಪಾಠ ಪ್ರವಚನ ನೀಡಲಾಗುತ್ತಿದೆ.

**ಈ)** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳ ವಸತಿ ನಿಲಯಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಕ್ರಮವಾಗಿ ಅನುಬಂಧ 1 ಮತ್ತು 2 ರಲ್ಲಿ ನೀಡಲಾಗಿದೆ.

**ಉ)** ಹೌದು, ಆದರೆ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಕೇಂದ್ರಗಳಲ್ಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದ ಬೇಡಿಕೆ ಮಂಜೂರಾತಿ ಸಂಖ್ಯೆಗಿಂತ ಹೆಚ್ಚಾಗಿರುತ್ತದೆ.

**ಊ)** ಹಿಂದುಳಿದ ವರ್ಗಗಳ ವಸತಿ ನಿಲಯಕ್ಕೆ ಸಂಬಂಧಿಸಿದಂತೆ ಕೆಲವು ಮೇಲ್ವಿಚಾರಕರು ವಿದ್ಯಾರ್ಥಿನಿಲಯಗಳಲ್ಲಿರುವ ಸ್ಥಳಗಳಲ್ಲಿ ವಾಸಿಸದೇ ಇರುವುದು ಗಮನಕ್ಕೆ ಬಂದಿದೆ. ಈಗ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದ್ದು, ಇದರಿಂದ ಸುಧಾರಣೆ ಆಗಲಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿಯ ವಿದ್ಯಾರ್ಥಿಗಳಿಗೆ ಗಣಿತ, ಇಂಗ್ಲೀಷ್, ವಿಜ್ಞಾನ ಬೋಧಿಸಲು ಪ್ರತಿ ವಿದ್ಯಾರ್ಥಿನಿಲಯಕ್ಕೆ 3 ಅಲ್ಪಕಾಲಿಕ ಬೋಧಕರನ್ನು 6 ತಿಂಗಳ ಅವಧಿಗೆ ಮಾತ್ರ ನೇಮಕ ಮಾಡಿಕೊಂಡು ಪ್ರತಿ ಬೋಧಕರಿಗೆ ಮಾಹೆಯಾನ ₹. 1,000/–

ಗೌರವಧನ ನೀಡಲಾಗುತ್ತಿದೆ. ಈ ಅಲ್ಪಕಾಲಿಕ ಬೋಧಕರನ್ನು ಇನ್ನೂ ನೇಮಕ ಮಾಡಿಕೊಂಡಿರುವುದಿಲ್ಲ. ಇವರುಗಳನ್ನು ಅಕ್ಟೋಬರ್ ಮಾಹೆಯಲ್ಲಿ ನೇಮಕ ಮಾಡಿಕೊಳ್ಳಲಾಗುವುದು.

ಅಲ್ಪಸಂಖ್ಯಾತರ ಇಲಾಖೆಯ ವಸತಿ ನಿಲಯಗಳಿಗೆ ಸಂಬಧಿಸಿದಂತೆ ವಸತಿ ನಿಲಯಗಳಲ್ಲಿ ರಾತ್ರಿವೇಳೆ ಮೇಲ್ವಿಚಾರಕರು ತಂಗುವುದಿಲ್ಲ. ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ರಾತ್ರಿ ಕಾವಲುಗಾರರನ್ನು ನೇಮಿಸಲಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ 3–ಅರೆಕಾಲಿಕ ಬೋಧಕರನ್ನು ನೇಮಿಸಿ ಪಾಠ ಪ್ರವಚನ ನೀಡಲಾಗುತ್ತಿದೆ.

## ಅನುಬಂಧ–1
## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

| ಜಿಲ್ಲೆ | ಕ್ರ ಸಂ | ತಾಲ್ಲೂಕು | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು | | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಗಳು | |
|---|---|---|---|---|---|---|
| | | | ನಿಲಯಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | ನಿಲಯಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ |
| ಬೆಳಗಾವಿ | 1 | ಬೆಳಗಾವಿ | 3 | 90 | 8 | 1075 |
| | 2 | ಚಿಕ್ಕೋಡಿ | 11 | 560 | 4 | 365 |
| | 3 | ಖಾನಾಪುರ | 5 | 245 | 1 | 100 |
| | 4 | ರಾಯಭಾಗ | 4 | 200 | 1 | 70 |
| | 5 | ಬೈಲಹೊಂಗಲ | 12 | 623 | 2 | 200 |
| | 6 | ರಾಮದುರ್ಗ | 8 | 450 | 2 | 275 |

| | | | | | | |
|---|---|---|---|---|---|---|
| | 7 | ಹುಕ್ಕೇರಿ | 11 | 543 | 2 | 190 |
| | 8 | ಅಥಣಿ | 15 | 725 | 1 | 100 |
| | 9 | ಸವದತ್ತಿ | 16 | 820 | 3 | 200 |
| | 10 | ಗೋಕಾಕ್ | 16 | 900 | 4 | 535 |
| | | **ಒಟ್ಟು** | **101** | **5156** | **28** | **3110** |
| ಬಾಗಲಕೋಟೆ | 1 | ಬಾಗಲಕೋಟೆ | 6 | 395 | 5 | 850 |
| | 2 | ಜಮಖಂಡಿ | 5 | 375 | 4 | 690 |
| | 3 | ಮುಧೋಳ | 11 | 720 | 3 | 375 |
| | 4 | ಹುನಗುಂದ | 8 | 350 | 1 | 100 |
| | 5 | ಬಾದಾಮಿ | 9 | 425 | 4 | 595 |
| | 6 | ಬೀಳಗಿ | 4 | 250 | 2 | 250 |
| | | **ಒಟ್ಟು** | **43** | **2515** | **19** | **2860** |

| | | | | | | |
|---|---|---|---|---|---|---|
| ಬಿಜಾಪುರ | 1 | ಬಿಜಾಪುರ | 17 | 944 | 7 | 960 |
| | 2 | ಮುದ್ದೇಬಿಹಾಳ | 6 | 340 | 1 | 75 |
| | 3 | ಬಸವನ ಬಾಗೇವಾಡಿ | 13 | 740 | 3 | 240 |
| | 4 | ಇಂಡಿ | 11 | 570 | 2 | 350 |
| | 5 | ಸಿಂದಗಿ | 16 | 925 | 1 | 100 |
| | | **ಒಟ್ಟು** | **63** | **3519** | **14** | **1725** |

**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**

| ಕ್ರಸಂ | ಜಿಲ್ಲೆ | | ವಸತಿ ನಿಲಯಗಳ ಹೆಸರು ಮತ್ತು ಸ್ಥಳ | ಬಾಲಕ/ಬಾಲಕಿ | ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಬಾಗಲಕೋಟೆ | 1 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬಾಗಲಕೋಟೆ ಟೌನ್ | ಬಾಲಕಿಯರ | 75 |
| | | 2 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬಾಗಲಕೋಟೆ ಟೌನ್ | ಬಾಲಕರು | 50 |
| | | 3 | ಬಾಗಲಕೋಟೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ, ಜಮಖಂಡಿ | ಬಾಲಕಿಯರು | 50 |
| | | 4 | ಬಾಗಲಕೋಟೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ, ಬಾದಾಮಿ | ಬಾಲಕಿಯರು | 50 |

| | | | | | |
|---|---|---|---|---|---|
| | | 5 | ಬಾಗಲಕೋಟೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಾಗಲಕೋಟೆ ಟೌನ್ | ಬಾಲಕರು | 50 |
| | | 6 | ಬಾಗಲಕೋಟೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಇಳಕಲ್ | ಬಾಲಕಿಯರು | 50 |
| 2 | ಬೆಳಗಾಂ | 7 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬೆಳಗಾಂ ಟೌನ್ | ಬಾಲಕಿಯರು | 75 |
| | | 8 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬೈಲಹೊಂಗಲ | ಬಾಲಕರು | 50 |
| | | 9 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬೆಳಗಾಂ ಟೌನ್ | ಬಾಲಕರು | 50 |

| | | | | | |
|---|---|---|---|---|---|
| | | 10 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬೆಳಗಾಂ ಟೌನ್ | ಬಾಲಕಿಯರು | 50 |
| | | 11 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಮೂಡ್ಲಗಿ, ಗೋಕಾಕ್ ತಾಲ್ಲೂಕು | ಬಾಲಕರು | 50 |
| 3 | ಬಿಜಾಪುರ | 12 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬಿಜಾಪುರ ಟೌನ್ | ಬಾಲಕಿಯರು | 75 |
| | | 13 | ಮಹಿಳಾ ವಿಶ್ವವಿದ್ಯಾನಿಲಯ, ವಿಜಾಪುರ ಟೌನ್ | ಬಾಲಕಿಯರು | 75 |
| | | 14 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಳ್ಳೊಳ್ಳಿ | ಬಾಲಕಿಯರು | 50 |
| | | 15 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಿಜಾಪುರ ಟೌನ್ | ಬಾಲಕರು | 50 |

| | | | | | |
|---|---|---|---|---|---|
| | | 16 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಮುದ್ದೇಬಿಹಾಳ | ಬಾಲಕರು | 50 |
| | | 17 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಸವನ ಬಾಗೇವಾಡಿ | ಬಾಲಕರು | 50 |
| | | 18 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಿಜಾಪುರ ಟೌನ್ | ಬಾಲಕರು | 50 |

**ರಾಜ್ಯದಲ್ಲಿ ಬಿ.ಸಿಂ.ಎಂ. ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ವಿವರ ಒದಗಿಸುವ ಬಗ್ಗೆ.**

**716, 715; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

**ಅ)** ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾಂತರ ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳು ಎಷ್ಟು ಇರುತ್ತವೆ; ಹಾಗೂ ಈ ವಸತಿ ನಿಲಯದಲ್ಲಿ ಎಷ್ಟು ವಿದ್ಯಾರ್ಥಿಗಳು ಇರುವರು;

**ಆ)** ಸರ್ಕಾರ ಈ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಎಷ್ಟು ವೆಚ್ಚ ಮಾಡುತ್ತಿದೆ;

**ಇ)** ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ತಿಂಗಳಿಗೆ ಎಷ್ಟು ಹಣ ಖರ್ಚು ಮಾಡಲಾಗುತ್ತದೆ;

**ಈ)** ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಇರುವರು; (ತಾಲ್ಲೂಕುವಾರು ವಿವರ ನೀಡುವುದು)

**ಉ)** ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯುವವರ ಸಂಖ್ಯೆ ಕಡಿಮೆ ಆಗಿರುತ್ತಿರುವ ಸಂಗತಿ ನಿಜವೇ;

**ಊ)** ವಸತಿ ನಿಲಯಗಳಲ್ಲಿ ಮೇಲ್ವಿಚಾರಕರು ವಾಸಿಸದೇ ಇರುವುದು, ಹಾಗೂ ರಾತ್ರಿ ವೇಳೆ ವಿದ್ಯಾಭ್ಯಾಸ ಮಾಡಿಸಲು ಟ್ಯೂಟರ್ ಇಲ್ಲದೆ ಇರುವುದು, ಇದ್ದರೂ ಸರಿಯಾಗಿ ಕಲಿಸದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ. ವಿ. ನಾರಾಯಣಸ್ವಾಮಿ ( ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)**

**ಅ)** ಹಿಂದುಳಿದ ವರ್ಗಗಳ 1348 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಹಾಗೂ 533 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಇರುತ್ತವೆ. ಈ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 69237 ಮತ್ತು

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ 68,819 ವಿದ್ಯಾರ್ಥಿಗಳು ಇರುತ್ತಾರೆ.

ಅಲ್ಪಸಂಖ್ಯಾತರ ಇಲಾಖೆಯಿಂದ 52 ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು ಹಾಗೂ 72 ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ನಿಲಯಗಳಲ್ಲಿ ಒಟ್ಟು 7080 ವಿದ್ಯಾಥಿ/ವಿದ್ಯಾರ್ಥಿನಿಯರು ಇರುವರು.

ಆ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಈ ವಿದ್ಯಾರ್ಥಿಗಳಿಗೆ ವರ್ಷಕ್ಕೆ ₹. 15405.43 ಲಕ್ಷ ವೆಚ್ಚ ಮಾಡಲಾಗುತ್ತಿದೆ.

ಅಲ್ಪಸಂಖ್ಯಾತರ ಇಲಾಖೆಯಿಂದ 2011–12 ನೇ ಸಾಲಿನಲ್ಲಿ ಈ ವಿದ್ಯಾರ್ಥಿನಿಲಯಗಳಿಗೆ ₹. 1230 ಲಕ್ಷ ವೆಚ್ಚ ಮಾಡಲಾಗಿದೆ.

ಇ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳಿಗೆ ಸರಾಸರಿ ₹. 1,115/– ಗಳನ್ನು ಖರ್ಚು ಮಾಡಲಾಗುತ್ತದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪ್ರತಿ ಮೆಟ್ರಿಕ್ ನಂತರದ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ₹. 850/– ದರದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ. ಉಚಿತ ವಸತಿ ಹಾಗೂ ಗ್ರಂಥಾಲಯ ಸೌಕರ್ಯ ಕಲ್ಪಿಸಲಾಗಿದೆ. ಮೆಟ್ರಿಕ್ ಪೂರ್ವ ಪ್ರತಿ ವಿದ್ಯಾಥಿಗೆ ತಿಂಗಳಿಗೆ ₹. 750/– ದರದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ. ಇದರ ಜೊತೆ ಉಚಿತ ವಸತಿ ಸೌಕರ್ಯ, ಪಠ್ಯ ಪುಸ್ತಕ, ಲೇಖನ ಸಾಮಗ್ರಿ, ದಿನಪತ್ರಿಕೆ ಎಣ್ಣೆ, ಸೋಪು, ಪೇಸ್ಟ್ ಹಾಗೂ ಹಾಸಿಗೆ ಹೊದಿಕೆಯ ಸೌಲಭ್ಯವನ್ನು ನೀಡಲಾಗುತ್ತಿದೆ. ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ವಿಶೇಷ ಬೋಧಕರಿಂದ ಪಾಠ ಪ್ರವಚನ ನೀಡಲಾಗುತ್ತಿದೆ.

ಈ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳ ವಸತಿ ನಿಲಯಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಕ್ರಮವಾಗಿ ಅನುಬಂಧ 1 ಮತ್ತು 2 ರಲ್ಲಿ ನೀಡಲಾಗಿದೆ.

ಉ) ಹೌದು, ಆದರೆ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಕೇಂದ್ರಗಳಲ್ಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದ ಬೇಡಿಕೆ ಮಂಜೂರಾತಿ ಸಂಖ್ಯೆಗಿಂತ ಹೆಚ್ಚಾಗಿರುತ್ತದೆ.

ಊ) ಹಿಂದುಳಿದ ವರ್ಗಗಳ ವಸತಿ ನಿಲಯಕ್ಕೆ ಸಂಬಂಧಿಸಿದಂತೆ ಕೆಲವು ಮೇಲ್ವಿಚಾರಕರು ವಿದ್ಯಾರ್ಥಿನಿಲಯಗಳಲ್ಲಿರುವ ಸ್ಥಳಗಳಲ್ಲಿ ವಾಸಿಸದೇ ಇರುವುದು ಗಮನಕ್ಕೆ ಬಂದಿದೆ. ಈಗ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದ್ದು, ಇದರಿಂದ ಸುಧಾರಣೆ ಆಗಲಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿಯ ವಿದ್ಯಾರ್ಥಿಗಳಿಗೆ ಗಣಿತ, ಇಂಗ್ಲೀಷ್, ವಿಜ್ಞಾನ ಬೋಧಿಸಲು ಪ್ರತಿ ವಿದ್ಯಾರ್ಥಿನಿಲಯಕ್ಕೆ 3 ಅಲ್ಪಕಾಲಿಕ ಬೋಧಕರನ್ನು 6 ತಿಂಗಳ ಅವಧಿಗೆ ಮಾತ್ರ ನೇಮಕ ಮಾಡಿಕೊಂಡು ಪ್ರತಿ ಬೋಧಕರಿಗೆ ಮಾಹೆಯಾನ ₹. 1,000/– ಗೌರವಧನ ನೀಡಲಾಗುತ್ತಿದೆ. ಈ ಅಲ್ಪಕಾಲಿಕ ಬೋಧಕರನ್ನು ಇನ್ನೂ ನೇಮಕ ಮಾಡಿಕೊಂಡಿರುವುದಿಲ್ಲ. ಇವರುಗಳನ್ನು ಅಕ್ಟೋಬರ್ ಮಾಹೆಯಲ್ಲಿ ನೇಮಕ ಮಾಡಿಕೊಳ್ಳಲಾಗುವುದು.

ಅಲ್ಪಸಂಖ್ಯಾತರ ಇಲಾಖೆಯ ವಸತಿ ನಿಲಯಗಳಿಗೆ ಸಂಬಧಿಸಿದಂತೆ ವಸತಿ ನಿಲಯಗಳಲ್ಲಿ ರಾತ್ರಿವೇಳೆ ಮೇಲ್ವಿಚಾರಕರು ತಂಗುವುದಿಲ್ಲ. ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ರಾತ್ರಿ ಕಾವಲುಗಾರರನ್ನು ನೇಮಿಸಲಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ 3–ಅರೆಕಾಲಿಕ ಬೋಧಕರನ್ನು ನೇಮಿಸಿ ಪಾಠ ಪ್ರವಚನ ನೀಡಲಾಗುತ್ತಿದೆ.

## ಅನುಬಂಧ–1
## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

| ಜಿಲ್ಲೆ | ಕ್ರ ಸಂ | ತಾಲ್ಲೂಕು | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು | | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಗಳು | |
|---|---|---|---|---|---|---|
| | | | ನಿಲಯಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | ನಿಲಯಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ |
| ಬೆಳಗಾವಿ | 1 | ಬೆಳಗಾವಿ | 3 | 90 | 8 | 1075 |
| | 2 | ಚಿಕ್ಕೋಡಿ | 11 | 560 | 4 | 365 |
| | 3 | ಖಾನಾಪುರ | 5 | 245 | 1 | 100 |
| | 4 | ರಾಯಭಾಗ | 4 | 200 | 1 | 70 |
| | 5 | ಬೈಲಹೊಂಗಲ | 12 | 623 | 2 | 200 |
| | 6 | ರಾಮದುರ್ಗ | 8 | 450 | 2 | 275 |

| | | | | | | |
|---|---|---|---|---|---|---|
| | 7 | ಹುಕ್ಕೇರಿ | 11 | 543 | 2 | 190 |
| | 8 | ಅಥಣಿ | 15 | 725 | 1 | 100 |
| | 9 | ಸವದತ್ತಿ | 16 | 820 | 3 | 200 |
| | 10 | ಗೋಕಾಕ್ | 16 | 900 | 4 | 535 |
| | | **ಒಟ್ಟು** | **101** | **5156** | **28** | **3110** |
| ಬಾಗಲಕೋಟೆ | 1 | ಬಾಗಲಕೋಟೆ | 6 | 395 | 5 | 850 |
| | 2 | ಜಮಖಂಡಿ | 5 | 375 | 4 | 690 |
| | 3 | ಮುಧೋಳ | 11 | 720 | 3 | 375 |
| | 4 | ಹುನಗುಂದ | 8 | 350 | 1 | 100 |
| | 5 | ಬಾದಾಮಿ | 9 | 425 | 4 | 595 |
| | 6 | ಬೀಳಗಿ | 4 | 250 | 2 | 250 |
| | | **ಒಟ್ಟು** | **43** | **2515** | **19** | **2860** |

| | | | | | | |
|---|---|---|---|---|---|---|
| ಬಿಜಾಪುರ | 1 | ಬಿಜಾಪುರ | 17 | 944 | 7 | 960 |
| | 2 | ಮುದ್ದೇಬಿಹಾಳ | 6 | 340 | 1 | 75 |
| | 3 | ಬಸವನ ಬಾಗೇವಾಡಿ | 13 | 740 | 3 | 240 |
| | 4 | ಇಂಡಿ | 11 | 570 | 2 | 350 |
| | 5 | ಸಿಂದಗಿ | 16 | 925 | 1 | 100 |
| | | **ಒಟ್ಟು** | **63** | **3519** | **14** | **1725** |

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

| ಕ್ರಸಂ | ಜಿಲ್ಲೆ | | ವಸತಿ ನಿಲಯಗಳ ಹೆಸರು ಮತ್ತು ಸ್ಥಳ | ಬಾಲಕ/ಬಾಲಕಿ | ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಬಾಗಲಕೋಟೆ | 1 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬಾಗಲಕೋಟೆ ಟೌನ್ | ಬಾಲಕಿಯರ | 75 |
| | | 2 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬಾಗಲಕೋಟೆ ಟೌನ್ | ಬಾಲಕರು | 50 |
| | | 3 | ಬಾಗಲಕೋಟೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ, ಜಮಖಂಡಿ | ಬಾಲಕಿಯರು | 50 |
| | | 4 | ಬಾಗಲಕೋಟೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ, ಬಾದಾಮಿ | ಬಾಲಕಿಯರು | 50 |

| | | | | | |
|---|---|---|---|---|---|
| | | 5 | ಬಾಗಲಕೋಟೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಾಗಲಕೋಟೆ ಟೌನ್ | ಬಾಲಕರು | 50 |
| | | 6 | ಬಾಗಲಕೋಟೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಇಳಕಲ್ | ಬಾಲಕಿಯರು | 50 |
| 2 | | 7 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬೆಳಗಾಂ ಟೌನ್ | ಬಾಲಕಿಯರು | 75 |
| | | 8 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬೈಲಹೊಂಗಲ | ಬಾಲಕರು | 50 |
| | ಬೆಳಗಾಂ | 9 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬೆಳಗಾಂ ಟೌನ್ | ಬಾಲಕರು | 50 |

| | | | | | |
|---|---|---|---|---|---|
| | | 10 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬೆಳಗಾಂ ಟೌನ್ | ಬಾಲಕಿಯರು | 50 |
| | | 11 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಮೂಡ್ಲಗಿ, ಗೋಕಾಕ್ ತಾಲ್ಲೂಕು | ಬಾಲಕರು | 50 |
| 3 | ಬಿಜಾಪುರ | 12 | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಬಿಜಾಪುರ ಟೌನ್ | ಬಾಲಕಿಯರು | 75 |
| | | 13 | ಮಹಿಳಾ ವಿಶ್ವವಿದ್ಯಾನಿಲಯ, ವಿಜಾಪುರ ಟೌನ್ | ಬಾಲಕಿಯರು | 75 |
| | | 14 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಳ್ಳೊಳ್ಳಿ | ಬಾಲಕಿಯರು | 50 |
| | | 15 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಿಜಾಪುರ ಟೌನ್ | ಬಾಲಕರು | 50 |

| | | | | | |
|---|---|---|---|---|---|
| | | 16 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಮುದ್ದೇಬಿಹಾಳ | ಬಾಲಕರು | 50 |
| | | 17 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಸವನ ಬಾಗೇವಾಡಿ | ಬಾಲಕರು | 50 |
| | | 18 | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಬಿಜಾಪುರ ಟೌನ್ | ಬಾಲಕರು | 50 |

**ಸಭಾಪತಿಯವರು:–** ಮಂಡಿಸಲಾಯಿತು.

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ ವಿಷಯಗಳು**

**ಅ)** ಬಿಜಾಪುರ ನಗರದಲ್ಲಿ ಅನಾಥಾಶ್ರಮದ ನಾಲ್ಕು ಬಾಲಕಿಯರ ಜೊತೆಗೆ ಅಸಭ್ಯವಾಗಿ ವರ್ತಿಸಿರುವ ಬಗ್ಗೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಬಿಜಾಪುರ ನಗರದಲ್ಲಿರುವ ಅನಾಥಾಶ್ರಮದ ನಾಲ್ವರು ಬಾಲಕಿಯರು ಜೊತೆಗೆ ಅಸಭ್ಯವಾಗಿ ವರ್ತಿಸಿರುವ ಘಟನೆ ನಡೆದಿದೆ. ಆರೋಪಿತರಾದ ಶ್ರೀ ತಳೇವಾಡದ ಗೌಡಪ್ಪ ಸಿದ್ದಪ್ಪ ಕಾರಜೋಳ ಹಾಗೂ ತಮದಡ್ಡಿಯ ಸೋಮಪ್ಪ ವೆಂಕಪ್ಪ ಕಾನವಟ್ಟಿ ಎಂಬುವವರು ದಿನಾಂಕ:27–07–2012 ರ ಶುಕ್ರವಾರ ರಾತ್ರಿ ಅನಾಥಾಶ್ರಮದ ಮಕ್ಕಳನ್ನು ದಿವಟಗೇರಿ ಗಲ್ಲಿಯಲ್ಲಿನ ರಮೇಶ ಮೂಧೋಳ ಎಂಬುವರ ನಿವಾಸದಲ್ಲಿ ಏರ್ಪಡಿಸಿದ್ದ ವರಮಹಾಲಕ್ಷ್ಮಿ ಪೂಜೆ ಕಾರ್ಯಕ್ರಮದ ಪ್ರಯುಕ್ತ ಊಟಕ್ಕೆ ವಾಹನದಲ್ಲಿ ಕರೆದುಕೊಂಡು ಹೋಗಿ ವಾಪಸ್ಸು ಮಕ್ಕಳನ್ನು ಆಶ್ರಮಕ್ಕೆ ತಂದು ಬಿಡುವ ಮಾರ್ಗದ ಮಧ್ಯದಲ್ಲಿ ವಾಹನದಲ್ಲಿದ್ದ ನಾಲ್ವರು ಬಾಲಕಿಯರ ಜೊತೆಗೆ ಅಸಭ್ಯವಾಗಿ ವರ್ತಿಸಿರುವುದು ಬೆಳಕಿಗೆ ಬಂದಿದೆ.

ರಾತ್ರಿ ಹೊತ್ತಿನಲ್ಲಿ ಅನಾಥಾಶ್ರಮದ ಮಕ್ಕಳನ್ನು ಬೇರೆಯವರ ಜೊತೆಯಲ್ಲಿ ಹೊರಗಡೆ ಕರೆದುಕೊಂಡು ಹೋಗುವುದು ತಪ್ಪು, ಹೀಗಿರುವಾಗ ಅನುಮತಿ ನೀಡಿದವರು ಯಾರು? ಸಾಮಾನ್ಯವಾಗಿ ಸಾರ್ವಜನಿಕರು ಅನಾಥಾಶ್ರಮದಲ್ಲಿಯೇ ಮಕ್ಕಳಿಗೆ ಊಟ ಬಡಿಸುವ ಪದ್ಧತಿ ಇದೆ. ಆದರೆ, ಹೆಣ್ಣುಮಕ್ಕಳನ್ನು ಹೊರಗಡೆ ಮನೆಯೊಂದಕ್ಕೆ ಕರೆದುಕೊಂದು ಹೋಗಿರುವದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಆದಕಾರಣ ಇದಕ್ಕೆ ಕಾರಣ ಕರ್ತರಾದ ಆರೋಪಿಗಳ ಮೇಲೆ ಹಾಗೂ ಆಶ್ರಮದ ವ್ಯವಸ್ಥಾಪಕರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಪಡಿಸುತ್ತನೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾಳೆ ಅಥವಾ ನಾಳಿದ್ದು ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:–** ಮುಂದಿನ ವಿಷಯ ಆರ್.ಕೆ. ಸಿದ್ದರಾಮಣ್ಣ ಮತ್ತು ಅರುಣ ಶಹಾಪುರರವರದ್ದು. ಯಾರಾದರೂ ಒಬ್ಬರು ವಿಷಯವನ್ನು ಓದಿ.

**ಆ) ಖಾಸಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕ ಪಡೆಯುತ್ತಿರುವ ಬಗ್ಗೆ.**

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಿನಾಂಕ:30–07–2012 ರ "ಕನ್ನಡ ಪ್ರಭ" ದಿನಪತ್ರಿಕೆಯ ಪುಟ–5 ರಲ್ಲಿ "ಖಾಸಗಿ ಸುಲಿಗೆ ದಾಖಲೆ ನೀಡಿದರೂ ಉದಾಸೀನ" ಎಂಬ ತಲೆಬರಹದ ಅಡಿಯಲ್ಲಿ ವರದಿಯೊಂದನ್ನು ಪ್ರಕಟಿಸಲಾಗಿದೆ. ಖಾಸಗಿ ಇಂಜಿನಿಯರಿಂಗ್ ಕಾಲೇಜ್ ಹಾಗೂ ಖಾಸಗಿ ವೈದ್ಯಕೀಯ, ದಂತ ವೈದ್ಯಕೀಯ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕ ಪಡೆದು ಅಧಿಕೃತ ರಸೀದಿಯನ್ನು ನೀಡುತ್ತಿರುವ ವಿಚಾರ ಪ್ರಕಟಿಸಲಾಗಿದೆ. ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ:02–11–2011 ರಲ್ಲಿ ವರದಿಯನ್ನು ಸಹ ಸಲ್ಲಿಸಿರುತ್ತದೆ. ಹೆಚ್ಚುವರಿ ಶುಲ್ಕ ₹. 2,000 ದಿಂದ 22,415 ರೂಪಾಯಿಗಳವರೆಗೆ ಸರ್ಕಾರಿ ಕೋಟಾದ ಅಡಿಯಲ್ಲಿ ಸೀಟ್ ಪಡೆದ ಎಲ್ಲಾ ವಿದ್ಯಾರ್ಥಿಗಳಿಂದ ಖಾಸಗಿ ಕಾಲೇಜುಗಳ ವಸೂಲಿ ಮಾಡುತ್ತಿರುವ ಅಂಶ ವರದಿಯಾಗಿರುತ್ತದೆ. ಹೆಚ್ಚುವರಿ ಶುಲ್ಕ ಇಂಜಿನಿಯರಿಂಗ್ ಸರ್ಕಾರಿ ಕೋಟಾದ ಅಡಿಯಲ್ಲಿ ಸೀಟ್ ಪಡೆದ ಎಲ್ಲಾ ವಿದ್ಯಾರ್ಥಿಗಳಿಂದ ಖಾಸಗಿ ಕಾಲೇಜುಗಳು ವಸೂಲಿ ಮಾಡುತ್ತಿರುವ ಅಂಶ ವರದಿಯಾಗಿರುತ್ತದೆ. ಹೆಚ್ಚುವರಿ ಶುಲ್ಕ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಐದು ಅಂಕಿಗಳಲ್ಲಿ ಇದ್ದರೆ ಇದು 2 ಲಕ್ಷದಿಂದ 18 ಲಕ್ಷ ರೂಪಾಯಿಗಳವರೆಗೆ ವೈದ್ಯಕೀಯ ಕಾಲೇಜುಗಳಲ್ಲಿ ವಸೂಲಿ ಮಾಡಲಾಗುತ್ತಿರುವ ಅಂಶ ಸಹ ಮೇಲ್ಕಂಡ ಪತ್ರಿಕಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ರೀತಿಯ ವಸೂಲಾತಿಯು ಕಾನೂನು ಬಾಹಿರವಲ್ಲದೆ, ನ್ಯಾಯಾಂಗ ನಿಂದನೆ ಸಹ ಆಗಿರುತ್ತದೆ. ಈ ಸಾರ್ವಜನಿಕ ಮಹತ್ವವುಳ್ಳ

ವಿಚಾರವನ್ನು ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಇ) ಉಡುಪಿ ಜಿಲ್ಲೆ ಭಟ್ಕಳ ತಾಲ್ಲೂಕು ತಹಶೀಲ್ದಾರ್, ಶ್ರೀ ಮಧುಕೇಶ್ವರರವರು ನಡೆಸಿರುವ ಅವ್ಯವಹಾರದ ಬಗ್ಗೆ**

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಪ್ರಜೆಗಳಿಗೆ ಸಾಮಾನ್ಯ ನ್ಯಾಯವನ್ನು ಮತ್ತು ಸರ್ಕಾರವು ಒದಗಿಸಿರುವ ಸವಲತ್ತುಗಳು ಹಾಗೂ ಇನ್ನಿತರೆ ಸೌಲಭ್ಯಗಳನ್ನು ನಾಗರೀಕರಿಗೆ ಒದಗಿಸುವ ಸಲುವಾಗಿ ಸರ್ಕಾರದಿಂದ ನೇಮಕವಾದಂತಹ ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳು, ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ನಾಗರೀಕರಿಗೆ ಸೇರಬೇಕಾದ ಲಕ್ಷಾಂತರ ರೂಪಾಯಿಗಳನ್ನು ಲಪಟಾಹಿಸಿಕೊಂಡಿರುವ ವಿಷಯವು ಆತಂಕಕಾರಿಯಾಗಿದೆ. ಈ ವಿಚಾರವು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಸದನದಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಉಡುಪಿ ಜಿಲ್ಲೆಯ ಭಟ್ಕಳ ತಾಲ್ಲೂಕಿನ ತಹಶೀಲ್ದಾರ್‌ರಾದ ಡಾ:ಎಸ್.ಎಸ್.ಮಧುಕೇಶ್ವರವರು ಅಧಿಕಾರ ಮತ್ತು ಹಣ ದುರುಪಯೋಗ, ಫೋರ್ಜರಿ ಸಹಿ ಮಾಡಿ ಸುಳ್ಳು ಜಾತಿ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದಾರೆ. ಗ್ರಾಮ ಸಹಾಯಕರಿಂದ ಹಣ ವಸೂಲಿ ಮಾಡಿಕೊಂಡಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅದು ಉಡುಪಿ ಜಿಲ್ಲೆಯಲ್ಲ, ಕಾರವಾರ ಜಿಲ್ಲೆ.

**ಸಭಾಪತಿಯವರು:–** ಅದನ್ನು ಬದಲಾವಣೆ ಮಾಡುತ್ತೇನೆ.

**ಶ್ರೀ ಡಿ.ಎಸ್. ವೀರಯ್ಯ:–** ಉತ್ತರ ಕನ್ನಡ ಜಿಲ್ಲೆ.

**ಶ್ರೀ ಬಸವರಾಜ ಹೊರಟ್ಟಿ:–** ಆ ರೀತಿ ಹೇಳಿ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಗುರುತಿನ ಚೀಟಿಯನ್ನು ವಿತರಿಸಲು ನಿಯೋಜನೆಯನ್ನು ಮಾಡಿದ್ದ ಬ್ಲಾಕ್ ಮಟ್ಟದ ಅಧಿಕಾರಿಗಳಿಗೆ ವಿತರಿಸಬೇಕಾಗಿದ್ದ ಸಂಬಳ ಗುಳುಂ ಸೇರಿದಂತೆ ಹಲವು ಆರೋಪದ ಹಾಗೂ ಈ ಹಿಂದೆ ರಾಯಚೂರಿನ ತಹಶೀಲ್ದಾರ್‌ರಾಗಿದ್ದ ಸಮಯದಲ್ಲಿ ನಡೆಸಿದ ಅವ್ಯವಹಾರಗಳ ವಿರುದ್ಧ ಹೆಚ್ಚುವರಿ ಪ್ರಾದೇಶಿಕ ಆಯುಕ್ತರು ಸರ್ಕಾರಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ನಕಲಿ ಜಾತಿ ಪತ್ರ, ನಕಲಿ ರಸೀದಿಗಳನ್ನು ಸೃಷ್ಟಿಸಿ ಸರ್ಕಾರದ ಹಣವನ್ನು ತನ್ನ ಸ್ವಂತಕ್ಕೆ ಬಳಕೆ ಮಾಡಿಕೊಂಡಿರುತ್ತಾರೆ. ತನ್ನ ಅಧಿಕಾರದ ವ್ಯಾಪ್ತಿಯನ್ನು ಮೀರಿ, ರಾಜ್ಯ ನಿರೀಕ್ಷಕರು ಮತ್ತು ಗ್ರಾಮಲೆಕ್ಕಿಗರು ಕಾನೂನು ಬಾಹಿರ ಎಂದು ಆಕ್ಷೇಪಿಸಿದ್ದರೂ ಸಹ, ತಾಲ್ಲೂಕಿನ ಯರಗೇರಾ ಹೋಬಳಿ ಗೊನವಾರ ಗ್ರಾಮದ ಸರ್ವೆ ನಂ.34.2 ರಲ್ಲಿ ಪೋಡಿ ಮಾಡಿ ಆದೇಶವನ್ನು ಹೊರಡಿಸಿರುತ್ತಾರೆ. ಹಾಗೂ ಇದರ ಸರ್ವೆ ನಂಬರನ್ನು ಸಹ ಅವರೇ ಬದಲಾವಣೆ ಮಾಡಿರುತ್ತಾರೆ. ಇವರ ವಿರುದ್ಧ ಜಿಲ್ಲಾಧಿಕಾರಿಗಳು ಸಹ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ, ಬೇರೆ ಬೇರೆ ಜಿಲ್ಲೆಗಳಿಗೂ ವರ್ಗಾವಣೆಗೊಂಡ ಬಳಿಕವೂ ಭೂವಿವಾದಕ್ಕೆ ಸಂಬಂಧಿಸಿದ ಕಡತ ತರಿಸಿಕೊಂಡು ಹಿಂದಿನ ದಿನಾಂಕ ನಮೂದಿಸಿ, ಕಾನೂನು ಬಾಹಿರ ಆದೇಶವನ್ನು ಹೊರಡಿಸಿರುವುದು ಕೂಡ ಇವರ ಅವಧಿಯಲ್ಲಿ ಪತ್ತೆಯಾಗಿದೆ. 2008 ರಿಂದ ವಿಚಾರಣೆ ಹಂತದಲ್ಲಿರುವ ಮಟಮಾರಿ ಗ್ರಾಮದ ಭೂವಿವಾದಕ್ಕೆ ಸಂಬಂಧಿಸಿದಂತೆ ಆದೇಶಿಸಲಾಗಿದೆ ಎಂದು ಕಡತದಲ್ಲಿ ನಮೂದಿಸಲಾಗಿದೆ ಎಂದು ಮಾಧ್ಯಮದ ಮೂಲಕ ತಿಳಿದುಬಂದಿರುತ್ತದೆ. ಈ ಮೇಲಿನ ಎಲ್ಲ ಅಂಶಗಳಿಂದ ಹಾಗೂ ಪ್ರಾದೇಶಿಕ ಆಯುಕ್ತರು ಸರ್ಕಾರಕ್ಕೆ ದೋಷಾರೋಪ ಪಟ್ಟಿಯನ್ನು ಸಲ್ಲಿಸಿರುವುದರಿಂದ ಈ ತಕ್ಷಣವೇ ಸದರಿ ಅಧಿಕಾರಿಯನ್ನು ಅಮಾನತ್ತು ಮಾಡಬೇಕು ಮತ್ತು ಕಠಿಣ ಕ್ರಮವನ್ನು ಜರುಗಿಸಬೇಕೆಂದು ಕೋರುತ್ತೇನೆ.

ಮಾನ್ಯ ಸಭಾಪತಿಯವರೇ, ಹೊಸ ತಹಶೀಲ್ದಾರ್‌ರವರುಗಳಿಗೆ ವರ್ಕ್ ಕಲ್ಚರ್ ಇಲ್ಲ. ಅವರು ಸಭ್ಯತೆಯಿಂದ ವರ್ತಿಸುವುದಿಲ್ಲ. ದುಡ್ಡು ಮಾಡುವ ದಂಧೆ ಹುಡುಕುತ್ತಾರೆ. ಆದ್ದರಿಂದ ಮಾನ್ಯ ಸಚಿವರು ಉದಾಹರಣೆಯಾಗಿಯಾದರೂ ಇವರನ್ನು ಅಮಾನತ್ತಿನಲ್ಲಿಡಬೇಕು. ಸುಳ್ಳು ಜಾತಿ ಸರ್ಟಿಫಿಕೇಟ್ ನೀಡಿರುವುದರಿಂದ ಇವರ ಮೇಲೆ ಎಫ್.ಐ.ಆರ್. ಹಾಕಿದ್ದಾರೆ ಮತ್ತು ಪಿ.ಸಿ.ಆರ್. ಕೇಸ್ ಸಹ ದಾಖಲಾಗಿದೆ.

**ಸಭಾಪತಿಯವರು:–** ಅದಕ್ಕಾಗಿಯೇ ನಿಮಗೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಡಿ.ಎಸ್. ವೀರಯ್ಯ :–** ಈ ಎಲ್ಲಾ ಅಕ್ರಮಗಳನ್ನು ಎಸಗಿದವರನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕು.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಬಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಈ) ಧೀರ್ಘಾವಧಿ ಸಾಲ ಮನ್ನಾ ಮಾಡುವ ಬಗ್ಗೆ**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಬಾಪತಿಯವರೇ, ಕೃಷಿ ಪತ್ತಿನ ಸಹಕಾರ ಸಂಘಗಳಿಂದ ದಿನಾಂಕ:01–08–2011 ರಿಂದ 25–07–2012 ರವರೆಗೆ ಪಡೆದಿರುವ ಕೃಷಿ ಬೆಳೆ ಸಾಲದಲ್ಲಿ ತಲಾ 25,000 ರೂ. ಮನ್ನಾ ಮಾಡುವುದಾಗಿ ರಾಜ್ಯ ಸರ್ಕಾರ ಘೋಷಣೆ ಮಾಡಿದೆ. ಈ ರೀತಿ ಸಾಲ ಮನ್ನಾ ಕಾರ್ಯಕ್ರಮದಿಂದ ಕೃಷಿ ಅಭಿವೃದ್ಧಿ ಹಾಗೂ ಕೃಷಿ ಪೂರಕ ಸಂಬಂಧ ಪೀಕಾರ್ಡ್ ಬ್ಯಾಂಕುಗಳಿಂದ ಧೀರ್ಘಾವಧಿ ಸಾಲ ಪಡೆದಿರುವ ರೈತರಿಗೆ ಅನ್ಯಾಯ ಉಂಟಾಗಿದೆ. ಪೀಕಾರ್ಡ್ ಬ್ಯಾಂಕುಗಳು ರೈತರಿಗೆ ಕೃಷಿಗೆ ಪೂರಕವಾದಂತಹ ಖಾಯಂ ಅಗತ್ಯತೆಗಳನ್ನು ಪೂರೈಸುವಂತಹ ಯೋಜನೆಗಳಿಗೆ ಸಾಲವನ್ನು ನೀಡುತ್ತಿವೆ. ಪೀಕಾರ್ಡ್ ಬ್ಯಾಂಕುಗಳು ನೀಡುವಂತಹ ಎಲ್ಲ ಸಾಲ ಸವಲತ್ತುಗಳು ರೈತರ ಕೃಷಿಗೆ ಆಧಾರವಾಗಿರುವಂತಹ ಯೋಜನೆಗಳಿಗೆ ಸಾಲ ನೀಡುತ್ತಿವೆ. ಸದರಿ ಸಾಲ ಮನ್ನಾ ಯೋಜನೆಯಲ್ಲಿ ರೈತರ ಕೃಷಿಗೆ ಅಡಿಪಾಯವಾಗಿ ಕಾರ್ಯ ನಿರ್ವಹಿಸುತ್ತಿರುವ ಪೀಕಾರ್ಡ್ ಬ್ಯಾಂಕುಗಳಿಂದ ಪಡೆದಿರುವ ದೀರ್ಘಾವಧಿ

ಸಾಲ ಮನ್ನಾ ಮಾಡದೆ ಇರುವುದರಿಂದ ಪೀಕಾರ್ಡ್ ಬ್ಯಾಂಕುಗಳಿಂದ ಸಾಲ ಪಡೆದಿರುವ ರೈತರಿಗೆ ತುಂಬಾ ಅನ್ಯಾಯ ಉಂಟಾಗಿದೆ. ಪೀಕಾರ್ಡ್ ಬ್ಯಾಂಕುಗಳಿಗೆ 2011–12ನೇ ಸಾಲಿನಲ್ಲಿ 2,65,324 ರೈತರಿಂದ ದೀರ್ಘಾವಧಿ ಕೃಷಿ ಸಾಲದ ಚಾಲ್ತಿ ಮೊಬಲಗು 326.21 ಕೋಟಿ ಕಂತುಗಳು ಬಾಕಿ ಇರುತ್ತದೆ. ಆದ್ದರಿಂದ 2011–12ನೇ ಸಾಲಿನ ಚಾಲ್ತಿ ಕಂತಿನ ಬಾಕಿ ಇರುವ ಮೊಬಲಗನ್ನಾದರೂ ಮನ್ನಾ ಮಾಡಬೇಕೆಂದು ಕೋರುತ್ತೇನೆ. 25,000 ರೂಪಾಯಿಗಳ ಕೃಷಿ ಬೆಳೆ ಸಾಲ ಮನ್ನಾ ಯೋಜನೆಯಡಿ ನಿಗದಿಗೊಳಿಸಿರುವ ಅವಧಿಯಿಂದ ಮಂಡ್ಯ ಜಿಲ್ಲಾ ಫಲಾನುಭವಿಗಳಿಗೆ ತುಂಬಾ ಅನ್ಯಾಯ ಉಂಟಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಮಾತ್ರ ಕೃಷಿ ಪತ್ತಿನ ಸಹಕಾರ ಸಂಘಗಳು ಕೃಷಿ ಬೆಳೆಗೆ 15 ತಿಂಗಳ ಅವಧಿಗೆ ಸಾಲ ನೀಡುವ ಪದ್ಧತಿ ಜಾರಿಯಲ್ಲಿದೆ. ಆದ್ದರಿಂದ 01–08–2001 ರ ಬದಲಾಗಿ 01–04–2011 ರಿಂದ ಜಾರಿಗೆ ಬರುವಂತೆ ಕೃಷಿ ಬೆಳೆ ಸಾಲ ಯೋಜನೆಯನ್ನು ಪ್ರಕಟಿಸಬೇಕಾಗಿ ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇನೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾಳೆ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:–** ಮತ್ತೋಂದು ವಿಷಯ ಪುಟ್ಟಣನವರಿಂದ ಬಂದಿರತಕ್ಕಂಥದ್ದು ನಿಲುವಳಿ ಸೂಚನೆಯಲ್ಲಿ ಅದೇ ಬಂದಿರುವುದರಿಂದ ಅದನ್ನು ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳುತ್ತಿಲ್ಲ. ಎಲ್ಲರೂ ಊಟಕ್ಕೆ ತಡವಾಯಿತು ಎಂದು ಹೇಳುತ್ತಿದ್ದಾರೆ. ಆದರೂ ಕೂಡ ನನ್ನ ಒಂದೆರೆಡು ಸಣ್ಣ ಕರ್ತವ್ಯಗಳಿವೆ. ಶ್ರಿಯುತ ಜೀವರಾಜ್‌ರವರು ದಿನಾಂಕ:27–07–2012 ರಲ್ಲಿ ಶ್ರೀ ಆರ್.ವಿ.ವೆಂಕಟೇಶ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವಂತಹ ವಿಷಯಕ್ಕೆ ಉತ್ತರ ತಯಾರಿದೆ ಎಂದು ಹೇಳಿದ್ದಾರೆ. ಅದನ್ನು ಮಾನ್ಯ ಸಚಿವರು ಓದುತ್ತಾರೆ. ಮಾನ್ಯ ಸದಸ್ಯರಿಗೆ ಉತ್ತರದ ಕಾಪಿಯನ್ನು ಕಳುಹಿಸಿಕೊಡಿ.

**ಡಾ:ಎಸ್.ಆರ್.ಲೀಲಾ:–** ಮಾನ್ಯ ಸಭಾಪತಿಯವರೇ, ಇದಾದ ಮೇಲೆ ನನ್ನದೊಂದು ವಿಷಯ ಇದೆ.

**ಸಭಾಪತಿಯವರು:–** ಸದನವನ್ನು ಮುಂದೂಡುವುದಕ್ಕಿಂತ ಮುಂಚೆ ಅವಕಾಶ ಕೊಡುತ್ತೇನೆ.

## 4. ಸಚಿವರ ಹೇಳಿಕೆ

### ಅ) ರಾಜ್ಯದಲ್ಲಿ ಪಡಿತರ ವ್ಯವಸ್ಥೆಯನ್ನು ಸರಳೀಕರಿಸಲು "ಆನ್‌ಲೈನ್" ನಲ್ಲಿ ಅರ್ಜಿಗಳನ್ನು ಸ್ವೀಕರಿಸಿ, ಆರು ತಿಂಗಳಾದರೂ ಇನ್ನೂ ವಿಲೇವಾರಿ ಮಾಡದಿರುವ ವಿಚಾರದ ಬಗ್ಗೆ.

**ಶ್ರೀ ಡಿ.ಎನ್. ಜೀವರಾಜ್ (ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿದ್ದೇನೆ. ಅದು ಈ ಕೆಳಕಂಡತಿದೆ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಬೆಂಗಳೂರು ಪೂರ್ವ ಉಪ ನಿರ್ದೇಶಕರ ವ್ಯಾಪ್ತಿಯಲ್ಲಿ ಕೇವಲ 70,000 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎನ್ನುವ ಮಾತು ಸರಿಯಲ್ಲ. ಈವರೆಗೆ ಒಟ್ಟು 1,14,864 ಅರ್ಜಿಗಳು ಬಂದಿರುತ್ತವೆ. ಈ ಬಗ್ಗೆ ಕಂಪ್ಯೂಟರ್‌ನಲ್ಲಿ ಮುದ್ರಿಸಿದ ತಃಖ್ತೆಯನ್ನು ಅನುಬಂಧ–ಅ ದಲ್ಲಿ ಈ ಉತ್ತರಕ್ಕೆ ಲಗತ್ತಿಸಲಾಗಿದೆ.

2. ಬೆಂಗಳೂರು ಪೂರ್ವ ವಲಯದಲ್ಲಿ ಬಂದಿರುವ 1,14,864 ಅರ್ಜಿಗಳ ಪೈಕಿ ಈವರೆಗೆ 50,244 ಅರ್ಜಿಗಳನ್ನು ಅನುಮೋದಿಸಲಾಗಿರುವುದನ್ನು ಮತ್ತು 23,433 ಅರ್ಜಿಗಳನ್ನು ತಿರಸ್ಕರಿಸಿರುವುದನ್ನು ಸದರಿ ತಃಖ್ತೆಯಲ್ಲಿ ನೋಡಬಹುದು. ಗಮನಾರ್ಹವಾದ ವಿಷಯ ಎಂದರೆ ಅನುಮೋದಿಸಲ್ಪಟ್ಟ 50,244 ಅರ್ಜಿದಾರ ಕುಟುಂಬಗಳ ಪೈಕಿ ಈವರೆಗೆ ಕೇವಲ 4,132 ಅರ್ಜಿದಾರರ ಕುಟುಂಬಗಳು ತಮ್ಮ ಪೋಟೋ ಮತ್ತು ಬೆರಳಚ್ಚು ಜೀವಮಾಪಕಗಳನ್ನು ನೀಡಿರುತ್ತಾರೆ. ಉಳಿದ ಸುಮಾರು

45,000 ಅರ್ಜಿದಾರರು ತಮ್ಮ ಕುಟುಂಬದ ಫೋಟೋ ಮತ್ತು ಬೆರಳಚ್ಚು ಜೀವಮಾಪಕ ನೀಡಲು ಮುಂದೆ ಬಂದಿರುವುದಿಲ್ಲ. ಮುಖ್ಯವಾಗಿ ಆಲಸ್ಯ, ಎರಡನೇಯದಾಗಿ ಕೌಟುಂಬಿಕ ತೊಂದರೆಗಳ ಕಾರಣಗಳಿಗೆ ಅರ್ಜಿದಾರರ ಕುಟುಂಬಗಳು ತಮ್ಮ ಕರ್ತವ್ಯವನ್ನು ನೆರವೇರಿಸಿರುವುದಿಲ್ಲ. ಇದಕ್ಕಾಗಿ ಇಲಾಖೆಯನ್ನು ಅಥವಾ ಅಧಿಕಾರಿ/ಸಿಬ್ಬಂದಿಗಳನ್ನು ಹೊಣೆಗಾರಿಕೆಯನ್ನಾಗಿ ಮಾಡಲಾಗದು.

3. ಬೆಂಗಳೂರು ಪೂರ್ವ ವಲಯದಲ್ಲಿ ಪೋಟೋ ಮತ್ತು ಬೆರಳಚ್ಚು ಜೀವಮಾಪಕ ನೀಡಿದ 4,132 ಅರ್ಜಿದಾರರ ಪೈಕಿ ಈಗಾಗಲೇ 1,991 ಅರ್ಜಿದಾರರಿಗೆ ಪಡಿತರ ಚೀಟಿಗಳನ್ನು ಮುದ್ರಿಸಿ ನೀಡಿರುವುದನ್ನು ಮತ್ತು 527 ಪಡಿತರ ಚೀಟಿಗಳನ್ನು ನೀಡಲು ಸಿದ್ದವಾಗಿರುವುದನ್ನು ಗಮನಿಸಬಹುದು. ಬಂದಿರುವ 1,14,864 ಅರ್ಜಿಗಳಲ್ಲಿ ಸ್ವಲ್ಪ ಸಮಯದಲ್ಲಿಯೇ 73,677 ಅರ್ಜಿಗಳ ಬಗ್ಗೆ ನಿರ್ಣಯ ತೆಗೆದುಕೊಂಡಿರುವುದನ್ನು ಸಹ ಗಮನಿಸಬಹುದು. ಸಂಖ್ಯೆಯನ್ನು ಗಮನಿಸಿದಾಗ ಇದೊಂದು ಉತ್ತಮ ಸಾಧನೆ ಎಂದೇ ಹೇಳಬೇಕಾಗುತ್ತದೆ. ಇದೇ ಗತಿಯಲ್ಲಿ ಸಾಗಿದಲ್ಲಿ ಮುಂದಿನ ಒಂದೆರಡು ತಿಂಗಳುಗಳಲ್ಲಿ ಬಾಕಿ 4,187 ಅರ್ಜಿಗಳನ್ನೂ ಸಹ ತೀರ್ಮಾನಿಸಲಾಗುವುದು.

4. ರಾಜ್ಯದಲ್ಲಿ ಈವರೆಗೆ 31,09,848 ಅರ್ಜಿಗಳ ಸ್ವೀಕರಿಸಲ್ಪಟ್ಟಿದ್ದು, ಅವುಗಳ ಪೈಕಿ, 10,43,116 ಅರ್ಜಿಗಳು ಅನುಮೋದಿಸಲ್ಪಟ್ಟಿವೆ ಮತ್ತು ಅವರ ಕುಟುಂಬದ ಸದಸ್ಯರ ಫೋಟೋ ಮತ್ತು ಬಯೋಮೆಟ್ರಿಕ್ ನೀಡಲು ತಿಳಿಸಲಾಗಿದೆ. ಆದರೆ ಈವರೆಗೆ ಕೇವಲ 1,44,235 ಜನರು ಮಾತ್ರ ಫೋಟೋ ಮತ್ತು ಬಯೋಮೆಟ್ರಿಕ್ ನೀಡಿರುತ್ತಾರೆ. ಅವರ ಪೈಕಿ ಈವರೆಗೆ 66,757 ಕುಟುಂಬಗಳು ಬಂದು ಪಡಿತರ ಚೀಟಿ ಪಡೆದಿರುತ್ತಾರೆ ಮತ್ತು 31,083 ಪಡಿತರ ಚೀಟಿಗಳು ನೀಡಲು ಸಿದ್ಧವಾಗಿರುತ್ತವೆ.

5. ರಾಜ್ಯದಲ್ಲಿ ಈವರೆಗೆ ಒಟ್ಟು 4,72,249 ಅರ್ಜಿಗಳನ್ನು ಪರಿಶೀಲನೆಯ ನಂತರ ತಿರಸ್ಕರಿಸಲಾಗಿರುತ್ತದೆ. ಅಂದರೆ, ಈವರೆಗೆ ಬಂದ ಒಟ್ಟು 31,09,848 ಅರ್ಜಿಗಳ ಪೈಕಿ, 15,15,365 (10,43,116,+4,72,249) ಅರ್ಜಿಗಳ ಇತ್ಯರ್ಥ ಮಾಡಿದಂತೆ ಆಗಿದೆ. ಇಲಾಖೆಯಲ್ಲಿ ಹಿಂದಿನಿಂದಲೂ ಹಲವಾರು ಸಮಸ್ಯೆಗಳಿದ್ದು ಅವುಗಳನ್ನು ಸುಧಾರಿಸಲು ನಿರಂತರ ಶ್ರಮಿಸಲಾಗುತ್ತಿದೆ.

# ಕರ್ನಾಟಕ ಸರ್ಕಾರ

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

LPG Statistics   RC Statistics   RC Statistics (Memberwise)   Search RR
RC Appl. Received Statistics   RC Appl. Requests   Ration Card Applications Status Report   Temporary to Permanent RC Request Status
Rural Ration Card Applications Status Report(Panchayat)   Ration Card Applications Status Report (Offices Wise)
ESCOM RR No's Uploaded Details   ESCOM RR No's Monthly Bill Uploaded Details   Photo Bio Service Centers
GSC Applications   Datewise GSC Applications Report   GSC Applications Due Report   RC Appl's Duplicate Count on RR No   RC Aaroost Collected

The Statistics as on : Jul 23 2012 1:10PM

**REPORT ON TALUK BOTH APL AND BPL WISE,RURAL AND URBAN RC APPICATIONS STATUS**

| Taluk Name | Total Appl. | Pending Appl. | Rejected Appl. | Appl. Forwarded to FI | Appl. Taken Printout For Field Verification | Appl. Approved for Photo | Appl. Having Partial Photo | Photo Completed Appl. | Appl. Sent to Correction | Modified Appl. to be sent for Photo | Modified Appl. Ready for Scrutiny | RC Generated But Not Issued | RC Issued To Party |
|---|---|---|---|---|---|---|---|---|---|---|---|---|---|
| BANGALORE EAST(IRA) | 114864 | 270 | 23433 | 31534 | 1124 | 50244 | 317 | 4132 | 653 | 58 | 579 | 527 | 1993 |
| Total | 114864 | 270 | 23433 | 31534 | 1124 | 50244 | 317 | 4132 | 653 | 58 | 579 | 527 | 1993 |

ಕರ್ನಾಟಕ ಸರ್ಕಾರ

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

NIC

LPG Statistics RC Statistics RC Statistics [illegible] Search RC
RC Appl. Received Statistics RC Appl. Requests Ration Card Applications Status Report Temporary to Permanent RC Request Status
Rural Ration Card Applications Status Report(Panchayat) Ration Card Applications Status Report (Officer Wise)
[illegible] RR No's Unbooked Details [illegible] RR No's Monthly Bill [illegible] Details Photo Bio Service Centre
GSC Applications Datewise GSC Applications Report GSC Applications Due Report RC Appl. Duplicate Count on RR No RC Amount
[illegible]

The Statistics as on : Jul 24 2012 3:28AM

**REPORT ON DISTRICT WISE BOTH APL AND BPL WISE,RURAL AND URBAN RC APPICATIONS STATUS**

ALL URBAN RURAL

ALL APL BPL

| District Name | Total Appl. | Pending Appl. | Rejected Appl. | Appl. Forwarded to FI | Appl. Taken Printout For Field Verification | Appl. Approved for Photo | Appl. Having Partial Photo | Photo Completed Appl. | Appl. Sent to Correction | Modified Appl. to be sent for Photo | Modified Appl. Ready for Scrutiny | RC Generated But Not Issued | RC Issued To Party |
|---|---|---|---|---|---|---|---|---|---|---|---|---|---|
| BAGALKOTE | 70561 | 0 | 19017 | 0 | 21575 | 18610 | 287 | 5394 | 611 | 35 | 881 | 1247 | 2904 |
| BANGALORE | 412182 | 52976 | 31561 | 104330 | 4379 | 190634 | 624 | 20245 | 2520 | 76 | 1669 | 796 | 2372 |
| BANGALORE CENTRAL | 15988 | 0 | 2962 | 594 | 404 | 9874 | 43 | 358 | 54 | 1 | 1012 | 335 | 351 |
| BANGALORE EAST | 114867 | 242 | 23440 | 31499 | 1123 | 50239 | 317 | 4170 | 664 | 55 | 583 | 579 | 2005 |
| BANGALORE NORTH | 105665 | 4649 | 14023 | 14688 | 4323 | 57456 | 193 | 4534 | 2013 | 8 | 347 | 643 | 2280 |
| BANGALORE RURAL | 53187 | 0 | 6241 | 17213 | 11022 | 14556 | 41 | 2099 | 383 | 72 | 366 | 460 | 826 |
| BANGALORE SOUTH | 76297 | 49 | 17891 | 385 | 2442 | 44907 | 168 | 4987 | 889 | 173 | 655 | 1178 | 7620 |
| BANGALORE WEST | 116030 | 4512 | 19622 | 9759 | 26458 | 44745 | 127 | 5072 | 654 | 14 | 1574 | 980 | 2521 |
| BELGAUM | 238538 | 87979 | 24474 | 6 | 70843 | 39398 | 278 | 7643 | 2257 | 77 | 1710 | 1528 | 7335 |
| BELLARY | 103883 | 0 | 27554 | 2734 | 13879 | 43720 | 226 | 5517 | 1386 | 17 | 873 | 1111 | 2866 |
| BIDAR | 115164 | 361 | 24244 | 0 | 32386 | 49949 | 226 | 4291 | 565 | 44 | 832 | 930 | 1336 |
| BIJAPUR | 102503 | 7281 | 20665 | 2 | 40307 | 24992 | 250 | 5611 | 533 | 15 | 436 | 868 | 1543 |
| CHAMARAJA NAGARA | 31685 | 0 | 5961 | 0 | 12074 | 10004 | 56 | 1645 | 327 | 10 | 519 | 250 | 839 |
| CHIKKABALLAPURA | 101575 | 6411 | 4144 | 99 | 58087 | 17993 | 100 | 2257 | 497 | 17 | 405 | 439 | 1140 |
| CHIKMAGALUR | 35934 | 25 | 6487 | 59 | 15335 | 8774 | 54 | 2827 | 551 | 16 | 218 | 380 | 1208 |
| CHITRADURGA | 75517 | 301 | 10774 | 3 | 44902 | 17667 | 51 | 802 | 187 | 19 | 549 | 792 | 2590 |
| DAKSHINA KANNADA | 46726 | 0 | 5598 | 0 | 13386 | 13517 | 158 | 7018 | 1454 | 23 | 1774 | 1381 | 2418 |
| DAVANAGERE | 75126 | 0 | 22359 | 0 | 14987 | 20683 | 165 | 4597 | 1528 | 73 | 2436 | 4183 | 4115 |
| DHARWAR | 87758 | 573 | 19280 | 7672 | 28576 | 24677 | 71 | 2467 | 637 | 68 | 977 | 737 | 2053 |
| GADAG | 68865 | 12322 | 7485 | 2 | 24805 | 17526 | 136 | 2882 | 742 | 36 | 550 | 1703 | 1176 |
| GULBARGA | 172027 | 31576 | 23269 | 55 | 71326 | 38306 | 197 | 3768 | 770 | 34 | 1105 | 857 | 1764 |
| HASSAN | 57851 | 2459 | 8889 | 0 | 27945 | 12741 | 97 | 2592 | 614 | 14 | 658 | 523 | 1319 |
| HAVERI | 42848 | 2680 | 4579 | 180 | 20171 | 10963 | 45 | 1088 | 320 | 40 | 791 | 587 | 1401 |
| KODAGU | 16337 | 574 | 2588 | 121 | 3328 | 5912 | 54 | 1187 | 427 | 6 | 734 | 251 | 1156 |
| KOLAR | 69144 | 7123 | 10583 | 17910 | 10902 | 17751 | 544 | 2603 | 729 | 13 | 168 | 348 | 869 |
| KOPPAL | 53557 | 0 | 4673 | 2022 | 26470 | 13954 | 106 | 1907 | 375 | 221 | 1651 | 761 | 1427 |
| MANDYA | 71314 | 11377 | 8404 | 16 | 19794 | 27559 | 57 | 2175 | 553 | 9 | 214 | 215 | 941 |
| MYSORE | 123521 | 0 | 17130 | 525 | 51804 | 41814 | 174 | 1896 | 1601 | 60 | 1885 | 1565 | 5067 |
| RAICHUR | 83620 | 0 | 15501 | 0 | 41923 | 22367 | 216 | 1408 | 170 | 14 | 537 | 314 | 1170 |
| RAMANAGARA | 54306 | 0 | 5016 | 10840 | 5003 | 25606 | 58 | 4173 | 1350 | 24 | 1160 | 640 | 2436 |
| SHIMOGA | 66417 | 24 | 16547 | 1 | 24710 | 17257 | 184 | 3078 | 969 | 26 | 426 | 1613 | 1669 |
| TUMKUR | 105566 | 5176 | 14055 | 3 | 28623 | 41233 | 197 | 6835 | 2445 | 91 | 1427 | 1399 | 4082 |
| UDUPI | 26920 | 1303 | 5022 | 9 | 847 | 12828 | 128 | 4216 | 649 | 10 | 265 | 706 | 951 |
| UTTARA KANNADA | 60079 | 964 | 12714 | 273 | 20804 | 12505 | 153 | 5663 | 1297 | 49 | 1865 | 1163 | 2528 |
| YADGIR | 58890 | 4073 | 9497 | 0 | 11460 | 27381 | 448 | 3675 | 779 | 26 | 493 | 171 | 987 |
| Total | 3109848 | 244960 | 472249 | 220989 | 816401 | 1043116 | 5664 | 144235 | 31503 | 1448 | 31443 | 31083 | 66757 |

**ಶ್ರೀಮತಿ ಮೋಟಮ್ಮ:–** ಮೊನ್ನೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಪ್ರಶ್ನೆ ಬಂದಿದ್ದು, ಅದಕ್ಕೂ, ಸಹ ಇದೇ ರೀತಿಯ ಉತ್ತರವಿದೆ. ಮತ್ತೆ ಇದು ಈಗ ಶೂನ್ಯವೇಳೆಯಲ್ಲಿ ಬಂದಿದೆ. ಇನ್ನೊಬ್ಬರು ಈ ವಿಷಯವಾಗಿ ಗಮನಸೆಳೆಯುವ ಸೂಚನೆಗೆ ಹಾಕಿದರೂ ಸಹ ಅದನ್ನೇ ತೆಗೆದುಕೊಳ್ಳುವುದಾ? ಅದೇ ಉತ್ತರ ಬಂದಿದೆ.

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಅವರು ಕೊಡಬಾರದಿತ್ತು. ಕೊಟ್ಟುಬಿಟ್ಟಿದ್ದಾರೆ.

**ಶ್ರೀಮತಿ ಮೋಟಮ್ಮ:–** ಈ ರೀತಿಯಲ್ಲಿ ಆಗಬಾರದು ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಯುತ ವೆಂಕಟೇಶ್‌ರವರೆ ಈ ಪ್ರಶ್ನೆಯನ್ನು ಕೇಳಿದ್ದು, ಮತ್ತೆ ಅವರೆ, ಶೂನ್ಯವೇಳೆಯಲ್ಲಿ ಅದೇ ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ,,..

**ಸಭಾಪತಿಯವರು:–** ಮುಂದೆ ಈ ರೀತಿ ಆಗುವುದು ಬೇಡ. ಚರ್ಚೆ ಬೇಡ. ಚರ್ಚೆಗೆ ಅವಕಾಶ ಕೊಡುವುದಿಲ್ಲ. ಹಾಗೆಯೇ ಶ್ರೀಯುತ ಆರ್.ವಿ.ವೆಂಕಟೇಶ್‌ರವರ ಇನ್ನೊಂದು ಪ್ರಶ್ನೆಯೂ ಸಹ ಇದೇ ರೀತಿಯಲ್ಲಿ ಗಡಿಬಿಡಿಯಾಗಿದೆ. ನೀವು ಶೂನ್ಯವೇಳೆಯಲ್ಲೂ, ಕೇಳಿ, ಪ್ರಶ್ನೋತ್ತರ ವೇಳೆಯಲ್ಲಿ ಕೇಳುವಂತಹದ್ದು ಆಗಬಾರದು. ಶೂನ್ಯವೇಳೆಯಲ್ಲಿ 23ನೇ ತಾರೀಖಿನಂದು ಎತ್ತಿದಂತಹ ವಿಷಯಕ್ಕೆ ಶ್ರೀಯುತ ಸಚಿವರಾದಂತಹ ಅರವಿಂದ ಲಿಂಬಾವಳಿಯವರು ಉತ್ತರವನ್ನು ಕೊಟ್ಟಿದ್ದಾರೆ.

### ಆ) "ವೈದ್ಯರ ಮುಷ್ಕರದಿಂದ ಸಮಗ್ರ ರೋಗಗಳ ಕಣ್ಗಾವಲು ಯೋಜನೆಯು (ಐ.ಡಿ.ಎಸ್.ಪಿ) ಸ್ಥಗಿತಗೊಂಡಿರುವ ಕುರಿತು"

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ,

ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಆಸ್ಪತ್ರೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ತರುವುದು ಹಾಗೂ ವೈದ್ಯಾಧಿಕಾರಗಳ ವೇತನ ಪರಿಷ್ಕರಣೆ ಕುರಿತಂತೆ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಸರ್ಕಾರದ ಮುಂದೆ ಬೇಡಿಕೆಗಳನ್ನಿಟ್ಟು ಮೇ 2012 ರಿಂದ ಆಗಿಂದಾಗ್ಗೆ ಮುಷ್ಕರ ನಿರತರಾಗಿದ್ದಾರೆ. ಸಮಗ್ರ ರೋಗಗಳ ಕಣ್ಗಾವಲು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಅಂಕಿ ಅಂಶಗಳನ್ನು ಒಳಗೊಂಡ ವರಿದಿಗಳನ್ನು ಕಾಲಕಾಲಕ್ಕೆ ಸಲ್ಲಿಸಬೇಕಾಗಿದ್ದು, ಸದರಿ ಮುಷ್ಕರದ ಪರಿಣಾಮವಾಗಿ, ಈ ಕಾರ್ಯಕ್ರಮ ಕುರಿತ ಸಂಪೂರ್ಣ ವಿವರಗಳ ಸಲ್ಲಿಸುವಿಕೆಯಲ್ಲಿ ಅಡಚಣೆ ಉಂಟಾಗಿದೆ. ಆದರೆ, ರಾಜ್ಯದಲ್ಲಿ ಐ.ಡಿಎಸ್.ಪಿ.ಸೇರಿದಂತೆ ರಾಷ್ಟ್ರೀಯ ಹಾಗೂ ರಾಜ್ಯದ ಇತರೆ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು. ಸದರಿ ವೈದ್ಯರ ಮುಷ್ಕರದ ಪರಿಣಾಮವಾಗಿ ಯಾವುದೇ ಆರೋಗ್ಯ ಸೇವೆಗೆ ಅಡಚಣೆಯುಂಟಾಗಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಡೆಂಗಿ ಜ್ವರ, ಹೆಚ್1ಎನ್1 ಸೋಂಕು ಮತ್ತು ಕರಳುಬೇನೆ ಖಾಯಿಲೆಗಳು ಸ್ವಲ್ಪ ಮಟ್ಟಿಗೆ ಹೆಚ್ಚಾಗಿದ್ದರೂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸದರಿ ರೋಗಗಳಿಗೆ ಸಂಬಂಧಿಸಿದಂತೆ ಸೂಕ್ತ ನಿಯಂತ್ರಣ ಮತ್ತು ಚಿಕಿತ್ಸಾ ಕ್ರಮಗಳನ್ನು ತೆಗೆದುಕೊಂಡಿದೆ. ಇಲಾಖೆಯು ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳ ಪ್ರಯುಕ್ತ. ಮಲೇರಿಯಾ, ಚಿಕುನ್‌ಗುನ್ಯ, ಮೆದುಳುಜ್ವರ ಮುಂತಾದ ರೋಗಗಳು ಹತೋಟಿಯಲ್ಲಿವೆ.

ಕರ್ನಾಟಕ ರಾಜ್ಯ ವೈದ್ಯಾಧಿಕಾರಿಗಳ ಸಂಘದ ಬೇಡಿಕೆಗಳ ಬಗ್ಗೆ ಸರ್ಕಾರವು ಆಗಿಂದಾಗ್ಗೆ ಸಂಘದ ಪದಾಧಿಕಾರಿಗಳು ಹಾಗೂ ಸರ್ಕಾರದ ಸಂಬಂಧಪಟ್ಟ ಇತರೆ ಇಲಾಖೆಗಳ ಜೊತೆ ಚರ್ಚಿಸಿದೆ. ಸನ್ಮಾನ್ಯ ಮುಖ್ಯಮಂತ್ರಿರವರು ಸಹ ಈ ದಿಸೆಯಲ್ಲಿ ಸಂಘದ ಪದಾಧಿಕಾರಿಗಳೊಡನೆ ಚರ್ಚಿಸಲು ದಿನಾಂಕ:3–8–2012 ರಂದು ಸಭೆ ಕರೆದಿದ್ದಾರೆ.

## 6. ಅಭಿನಂದನೆ

## ಶ್ರೀಯುತ ವಿಜಯ ಸಂಕೇಶ್ವರ ಅವರ ಒಡೆತನದ VRL ಸಂಸ್ಥೆಗೆ ರಾಷ್ಟ್ರಮಟ್ಟದ ಉದ್ಯಮ ಪ್ರಶಸ್ತಿ ಲಭಿಸಿರುವ ಬಗ್ಗೆ.

**ಸಭಾಪತಿಯವರು:–** ಧನ್ಯವಾದಗಳು, ಇದರ ಬಗ್ಗೆ ಮತ್ತೆ ಚರ್ಚೆ ಬೇಡ, ಡಾ॥ಎಸ್.ಆರ್.ಲೀಲಾ ಅವರು ಬೆಳಿಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಾಗಿ ಹೇಳಿದರು. ಆಗ ನಾನು ಅವರಿಗೆ ಕೊನೆಯಲ್ಲಿ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೆನು. ಮಾನ್ಯ ಸದಸ್ಯರು ಸದರಿ ಪ್ರಸ್ತಾಪದ ವಿಷಯವನ್ನು ಬೇಗ ಓದುವುದು. ಭಾಷಣ ಬೇಡ.

**ಡಾ॥ ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಯವರೆ, ನಮ್ಮ ಸದನದಲ್ಲಿ ಎಷ್ಟೋ ಬಾರಿ ಮಾತೇ ಸಾಧನವಾಗುತ್ತದೆ. ಆದರೆ, ಇವತ್ತು ಸಾಧನೆ ಮಾಡಿರುವವರ ಬಗ್ಗೆ ಒಂದು ಮಾತನ್ನು ಹೇಳಲಿಕ್ಕೆ ಅವಕಾಶ ಕೊಟ್ಟಿರುವುದಕ್ಕೆ ತಮಗೆ ತುಂಬಾ ಧನ್ಯವಾದಗಳು, ನಾವು ಇವತ್ತು ನಾವೆಲ್ಲರೂ ಸೇರಿ ಮಾನ್ಯ ಸಭಾಪತಿಯವರ ಮೂಲಕ ಈ ಸದನದ ಗೌರವಾನ್ವಿತ ಸದಸ್ಯರಾದಂತಹ ಶ್ರೀಯುತ ವಿಜಯಸಂಕೇಶ್ವರ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಕಾರಣ ಇಷ್ಟೆ. ಭಾರತದ ಸಾರಿಗೆ ಉದ್ಯಮದ ಪ್ರಮುಖ ಕಂಪನಿಗಳಲ್ಲಿ ಒಂದಾದ, ಅವರ ಒಡೆತನದ VRL Logistics ಗೆ CEAT ಪ್ರಾಯೋಜಿತ India Road Transport Award ನ ಎರಡು ಪ್ರಶಸ್ತಿಗಳು ಲಭ್ಯವಾಗಿವೆ. ಒಂದು ಅತ್ಯುತ್ತಮ ಗ್ರಾಹಕ ಸೇವೆಗೆ ದಕ್ಷಿಣ ಭಾರತ ಮಟ್ಟದ ಪ್ರಶಸ್ತಿ. ಎರಡನೆಯದಾಗಿ, ಸಾರಿಗೆ ಉದ್ಯಮಿಗಳಿಗೆ ನೀಡುವ ರಾಷ್ಟ್ರ ಮಟ್ಟದ ವರ್ಷದ ಉದ್ಯಮಿ ಪ್ರಶಸ್ತಿ. ಈ ಎರಡು ಪ್ರಶಸ್ತಿಗಳನ್ನು ಮುಂಬೈನಲ್ಲಿ ಈ 3–4 ದಿನಗಳ ಹಿಂದೆ ಅವರಿಗೆ ಪ್ರಧಾನ ಮಾಡಲಾಯಿತು. ಅದನ್ನು ಅವರು ತೆಗೆದುಕೊಂಡು ಬಂದಿದ್ದಾರೆ. ಇದರ ಮೂಲಕ ಕರ್ನಾಟಕಕ್ಕೂ ಕೂಡ ತುಂಬಾ ಗೌರವವನ್ನು ತಂದಿದ್ದಾರೆ. ಅವರಿಗೆ ಸದನ ತಮ್ಮ ಮೂಲಕ ಹೃತ್ಪೂರ್ವಕವಾದಂತಹ ಅಭಿನಂದನೆಯನ್ನು ಸಲ್ಲಿಸೋಣ. ಮತ್ತೇನೂ ಇಲ್ಲ. ಧನ್ಯವಾದಗಳು.

**ಸಭಾಪತಿಯವರು:–** ಧನ್ಯವಾದಗಳು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಯುತ ವಿಜಯಸಂಕೇಶ್ವರ್‌ರವರಿಗೆ ಪ್ರತಿಪಕ್ಷದ ಪರವಾಗಿ ನಾವು ಹೃದಯಪೂರ್ವಕವಾಗಿ ಅಭಿನಂದಿಸುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು. ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ವಿಷಯವನ್ನು ಸಭೆಯ ಗಮನಕ್ಕೆ ತರುವಲ್ಲಿ ತಡವಾಗಿರುವುದು ನಿಜ. ಊಟಕ್ಕೆ ಹೋಗಬೇಕು, ಹಸಿವು ಆಗುತ್ತಿದೆ. ಹೋಗಬೇಕು, ಬರಬೇಕು, ಎಲ್ಲವೂ ಸರಿ. ಆದರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಶ್ರೀಮತಿ ಮೋಟಮ್ಮನವರು ಬೇರೆ ಎಲ್ಲಾ ಪ್ರಮುಖರನ್ನು ನಾವು ನೋಡಿ ಕೆಲವು ವಿಷಯಗಳನ್ನು ಹೊಸ ಸದಸ್ಯರುಗಳು ಕಲಿಯಬೇಕಾಗುತ್ತದೆ. ನಾನು ಗಮನಿಸಿದಂತೆ ತಮ್ಮ ಪ್ರಶ್ನೆ ಮುಗಿದ ತಕ್ಷಣ ಅವರುಗಳು ಎದ್ದು ಹೋಗಿ ಬಿಡುತ್ತಾರೆ. ಇದು ಯಾವುದೇ ರೀತಿಯಿಂದ ಸರಿಯಲ್ಲ. ನಿಜ. ಒಂದು ಲೋಟ ಕಾಫಿ ಕುಡಿಯುವುದಕ್ಕಾಗಿ ಎದ್ದು ಹೋಗುವುದು ಸರಿ. ಆದರೆ, ತಕ್ಷಣ ನನ್ನ ಪ್ರಶ್ನೆ ಮುಗಿಯಿತು, ನಾನು ಎದ್ದು ಹೋಗುತ್ತೇನೆ ಎನ್ನುವ ಪದ್ಧತಿ ಖಂಡಿತವಾಗಿಯೂ ಸರಿಯಲ್ಲ. ದಯಮಾಡಿ ಇದರ ಬಗ್ಗೆ ಎಲ್ಲರೂ ಗಮನಿಸಬೇಕೆಂದು ಹೇಳುತ್ತಾ ಸದನವನ್ನು 4–45 ಗಂಟೆಯವರೆಗೆ ಮುಂದೂಡಿದ್ದೇನೆ.

ಮಧ್ಯಾಹ್ನ 3 ಗಂಟೆ 27 ನಿಮಿಷಗಳಲ್ಲಿ ಮೇಲೆದ್ದ ಸದನವು ಪುನಃ 3 ಗಂಟೆ 40 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾ ಪೀಠವನ್ನಲಂಕರಿಸಿದ್ದರು.

**ಶ್ರೀ ಗೋ ಮಧುಸೂದನ್:–** ಇಂದು ನಾವು ಮಾನ್ಯ ಸೋಮಣ್ಣನವರಿಗೆ ಸಾಂತ್ವನ ಹೇಳುವ ಸ್ಥಿತಿ ಬಂದಿದೆ. ಅವರು ಎಲ್ಲೆಲ್ಲೋ ಬಂದು ಎಲ್ಲೆಲ್ಲೋ ಜಿಗಿದಾಡಿಕೊಂಡು ಹೋಗುತ್ತಿದ್ದರು. ಆದರೆ ಈ ಸದನದ ಸಭಾ ನಾಯಕರಾದ ನಂತರ ಸೀಟಿಗೆ ಫೆವಿಕಾಲ್ ಹಾಕಿಕೊಂಡು ಕುಳಿತುಕೊಳ್ಳಬೇಕಾಗಿದೆ.

**ಸಭಾಪತಿಯವರು:–** ಬೆಳಿಗ್ಗೆ ತಾವೆಲ್ಲರೂ ಒಂದು ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ವಿನಂತಿ ಮಾಡಿದ್ದಿರಿ. ಈ ಸದನಕ್ಕೆ ತಿಳಿಸಿದ ಹಾಗೆ ನಿಲುವಳಿ ಸೂಚನೆಯನ್ನು ಕೊಟ್ಟಿದರು. ಅದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ನಿಗೆ ಮೊದಲು ಅವಕಾಶವನ್ನು ಕೊಡಬೇಕು. ಈ ಪ್ರಿಲಿಮಿನರಿ ಸಬ್‌ಮಿಷನ್ನಿಗೆ ಅವಕಾಶವನ್ನು ಕೊಡುವಾಗ ಸ್ವಲ್ಪ ಎಲ್ಲರಿಗೂ ಅವಕಾಶ ಸಿಗುವ ಹಾಗೆ ಆಗಬೇಕೆನ್ನುವ ರೀತಿಯಲ್ಲಿ ಎಲ್ಲಾ ಗೌರವಾನ್ವಿತ ಸದಸ್ಯರ ಅಭಿಪ್ರಾಯ ಇತ್ತು. ಆ ಹಿನ್ನೆಲೆಯಲ್ಲಿ ಅದೇ ರೀತಿಯಲ್ಲಿ ಅವಕಾಶವನ್ನು ಕೊಡುತ್ತೇನೆ. ಆದರೆ ಅದಕ್ಕೆ ಮುಂಚೆ ನನಗೆ ಕೆಲವು ತಾಂತ್ರಿಕ ಕೆಲಸ ಇದೆ. ಒಂದು ನಿಮಿಷದ ಕೆಲಸ ಅಷ್ಟೇ.

**5. ವಿಶೇಷ ಜಂಟಿ ಸದನ ಸಮಿತಿಗಳಿಗೆ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ**

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು ಹಾಗೂ ವಸತಿ ಸಚಿವರು):–** ಮಾನ್ಯ ಸಭಾಪತಿಯವರೆ, ದಿನಾಂಕ 30–06–2012ರವರೆಗೆ ವಿಸ್ತರಿಸಲಾಗಿದ್ದ **"ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ವಿವಿಧ ರೈಲ್ವೆ ಯೋಜನೆಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವ ಬಗ್ಗೆ"** ಪರಿಶೀಲಿಸಿ ರಚಿಸಲಾದ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ 31–12–2012ರವರೆಗೆ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಹಾಗೂ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸುವ ಪ್ರಸ್ತಾವನೆಯನ್ನು ಮಂಡಿಸುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ಸಭೆಯು ಒಪ್ಪಿಗೆಯನ್ನು ಸೂಚಿಸಿತು.**

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು ಹಾಗೂ ವಸತಿ ಸಚಿವರು):–** ಮಾನ್ಯ ಸಭಾಪತಿಯವರೆ, ದಿನಾಂಕ 30–06–2012 ರವರೆಗೆ ವಿಸ್ತರಿಸಲಾಗಿದ್ದ **"ಹೊರ ರಾಜ್ಯದ ಹಾಗೂ ಗಡಿ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು ಪರಿಶೀಲಿಸಿ ವರದಿ ನೀಡುವ ಬಗ್ಗೆ"** ರಚಿಸಲಾದ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು

ದಿನಾಂಕ 31–12–2012ರವರೆಗೆ ಕಾಲಾವಕಾಶವನ್ನು ವಿಸ್ತರಿಸುವ ಹಾಗೂ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸುವ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ಸಭೆಯು ಒಪ್ಪಿಗೆಯನ್ನು ಸೂಚಿಸಿತು.**

**6. ನಿಲುವಳಿ ಸೂಚನಗೆ ಅನುಮತಿಕೋರಿ ಪ್ರಸ್ತಾವಿಕ ಚರ್ಚೆ**

ಮಂಗಳೂರು ಸಮೀಪದ ಕಣ್ಣೂರಿನ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇನಲ್ಲಿ ನಡೆದಿರುವ ಘಟನೆ ಕುರಿತು.

**5 ಘಂಟೆ**

**ಸಭಾಪತಿಯವರು:–** ಎಲ್ಲರಿಗೂ ಗೊತ್ತಿರುವ ವಿಷಯ ಇದಾಗಿದೆ. ತುಂಬಾ ಜನ ಸದಸ್ಯರು ಈ ವಿಷಯದ ಮೇಲೆ ಮಾತನಾಡಬೇಕೆಂದು ನನ್ನ ಹತ್ತಿರ ಹೇಳಿದ್ದಾರೆ. ಹೆಚ್ಚಿನ ಸದಸ್ಯರಿಗೆ ಅವಕಾಶವನ್ನು ಕೊಡೋಣ. ಕೆಳಮನೆಯಲ್ಲಿ ಇದೇ ವಿಷಯ ಚರ್ಚೆಯಾಗುತ್ತಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಕೆಳಮನೆಯಲ್ಲಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಅಲ್ಲಿ ಮುಖ್ಯಮಂತ್ರಿಗಳಿದ್ದಾರೆ. ಆದ್ದರಿಂದ ಗೃಹ ಸಚಿವರನ್ನು ಇಲ್ಲಿ ಕರೆಯಿಸಿ.

**ಸಭಾಪತಿಯವರು:–** ಕರೆಯಿಸುತ್ತೇನೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಲಿ. ಮಧ್ಯದಲ್ಲಿ ಗೃಹ ಸಚಿವರನ್ನು ಕರೆಯಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು Preliminary Submission ಮಾಡುವಂಥ ಸಂದರ್ಭದಲ್ಲಿ ವಿಸ್ಕೃತವಾದ ಚರ್ಚೆಯನ್ನು ಮಾಡಿ ಎಂದು ಹೇಳಿದ್ದೀರಿ. Preliminary Submission ಅಂದರೆ ಅದಕ್ಕೆ ಸಮಯದ ಮಿತಿ ಇರುತ್ತದೆ. ಆದರೆ ವಿಸ್ತೃತ ಚರ್ಚೆಗೆ ಮಿತಿ ಬೇಡ.

**ಸಭಾಪತಿಯವರು:-** ನಾವು ಬೇರೆ ಎಲ್ಲಾ ಕಲಾಪಗಳನ್ನು ನಿಲ್ಲಿಸಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದರಿಂದ Preliminary Submission ನಲ್ಲಿ ತಾವು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಮಾತ್ರ ಚರ್ಚೆ ಮಾಡಿ ಎಂದು ಹೇಳುತ್ತಿರುತ್ತೇವೆ. ಆದರೆ ಇಂದು ಬೆಳಿಗ್ಗೆ ಎಲ್ಲಾ ಹಿರಿಯರ ಹಾಗೂ ಗೌರವಾನ್ವಿತ ಸದಸ್ಯರೊಂದಿಗೆ ಚರ್ಚೆಯನ್ನು ಮಾಡಿದಾಗ Preliminary Submission ಎಂದು ಬರೀ ಒಂದು ತಾಂತ್ರಿಕ ಚರ್ಚೆ ಮಾತ್ರ ಬೇಡ ಸ್ವಲ್ಪ ವಿಷಯದ ಬಗ್ಗೆ ಕೂಡ ನಾವು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದಾಗುತ್ತದೆ, ಎಲ್ಲರಿಗೂ ಇದೊಂದು ಮನಸ್ಸಿಗೆ ಬಹಳ ನೋವಾಗಿರತಕ್ಕಂಥ ಸಂಗತಿ ಎಂದು ಅವಕಾಶ ಕೊಡಿ ಎಂದು ಕೇಳಿದ್ದರ ಹಿನ್ನಲೆಯಲ್ಲಿ ಇದೊಂದು Exception to the normal procedure ಇರುವುದರಿಂದ ತಾವು ವಿಷಯವನ್ನು ಪ್ರಾರಂಭ ಮಾಡಬಹುದು.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೆ, ತಾವು ನಿಲುವಳಿ ಸೂಚನೆಯಡಿಯಲ್ಲಿ ಅವಕಾಶ ಕೊಟ್ಟರೆ ಅವರು ಮಾತ್ರ ಮಾತನಾಡಲು ಅವಕಾಶ ಇರುತ್ತದೆ. ಈ ವಿಷಯ ತುಂಬಾ ವಿಸ್ತಾರವಾದಂಥದ್ದಿರುವುದರಿಂದ ಎಲ್ಲರೂ ಮಾತನಾಡಬೇಕಾಗಿದೆ. ತಾವು ತಮ್ಮ ವಿಶೇಷಾಧಿಕಾರವನ್ನು ಉಪಯೋಗ ಮಾಡಿಕೊಂಡು ಈಗಲೇ ತಾವು ಅದನ್ನು ನಿಯಮ 68ರಡಿಯಲ್ಲಿ ಬದಲಾವಣೆ ಮಾಡಿಕೊಟ್ಟರೆ ಅನುಕೂಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು ಈ ವಿಷಯವನ್ನು ನಿಯಮ 68ರಡಿಯಲ್ಲಿ ಬದಲಾವಣೆ ಮಾಡಿದರೆ ನಮ್ಮ ಅಭ್ಯಂತರವೇನೂ ಇಲ್ಲ.

**ಸಭಾಪತಿಯವರು:-** ಮಾನ್ಯ ಮಧುಸೂದನ್‌ರವರು ನೀಡಿರುವ ಸಲಹೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ರೀಯಲ್ಲಿ ಸಹಮತವನ್ನು ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ಈ ನಿಲುವಳಿ ಸೂಚನೆಯ ಇದೇ ವಿಷಯವನ್ನು ನಿಯಮ 68ಕ್ಕೆ ಬದಲಾವಣೆ ಮಾಡಿ ಕೂಡಲೇ ಅದನ್ನು ಚಾಲ್ತಿಗೆ ಕೊಡುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸದರಿ ವಿಷಯವನ್ನು ನಿಯಮ 68ರಡಿಯಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿ. ಆದ್ದರಿಂದ ಸದರಿ ವಿಷಯಕ್ಕೆ ಸಮಯದ ಮಿತಿ ಇರುವುದಿಲ್ಲ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೆ, ಸದರಿ ವಿಷಯವನ್ನು ತಾವು ನಿಯಮ 68ರಡಿಯಲ್ಲಿ ಬದಲಾವಣೆ ಮಾಡಿ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

## 8. ನಿಯಮ 68ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

## ಮಂಗಳೂರು ಸಮೀಪದ ಕಣ್ಣೂರಿನ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇನಲ್ಲಿ ನಡೆದಿರುವ ಘಟನೆ ಕುರಿತು

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಂಗಳೂರಿನ ಪಡಿಲ್ ಬಳಿ ದಿನಾಂಕ 28-7-2012ರಂದು ಸಂಜೆ 7 ಗಂಟೆಯಲ್ಲಿ Morning Mist Home stay ನಲ್ಲಿ ಮಂಗಳೂರಿನ 13 ಜನ ಕಾಲೇಜಿನ ವಿದ್ಯಾರ್ಥಿಗಳು ಹುಟ್ಟು ಹಬ್ಬ ಆಚರಿಸುತ್ತಿದ್ದಾಗ ಸ್ಥಳೀಯ ಹಿಂದೂ ಜಾಗರಣಾ ವೇದಿಕೆ ಸದಸ್ಯರೆಂದು ಹೇಳಿಕೊಂಡು ಅಲ್ಲಿಗೆ ಬಂದು ಅಕ್ರಮವಾಗಿ ಬಾಗಿಲು ಮುರಿದು ಏಕಾಏಕಿ ದಾಳಿ ಮಾಡಿ ಅಲ್ಲಿದ್ದ ವಿದ್ಯಾರ್ಥಿಗಳ ಬಟ್ಟೆ ಬಿಚ್ಚಿ ಹಲ್ಲೆ ಮಾಡಿರುತ್ತಾರೆ. ಅದರಲ್ಲೂ ಮಹಿಳಾ ವಿದ್ಯಾರ್ಥಿಗಳ ಬಟ್ಟೆ ಹಿಡಿದು ಎಳೆದಾಡಿ ಸಂಸ್ಕೃತಿಯ ರಕ್ಷಣೆಯ ನೆಪದಲ್ಲಿ ಕಾನೂನನ್ನು ಕೈಗೆತ್ತಿಕೊಂಡು ವಿದ್ಯಾರ್ಥಿಗಳು ಹಾಗೂ ವಿದ್ಯಾನಿಲಯಗಳ ಮೇಲೆ ಹಲ್ಲೆ ನಡೆಸಿರುವುದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ವಿಫಲವಾಗಿರುವುದರ ಸಂಕೇತವಾಗಿರುವುದರಿಂದ ಈ ವಿಷಯವನ್ನು ನಿಯಮ

68ರಡಿಯಲ್ಲಿ ತಾವು ವಿಷಯ ಪ್ರಸ್ತಾಪಿಸುವುದಕ್ಕೆ ಅನುಮತಿ ನೀಡಿದ್ದೀರೆಂದು ಭಾವಿಸಿ ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತೇನೆ.

ಮಾನ್ಯ ಸಭಾಪತಿಯವರೆ, ಇದರ ಹಿನ್ನಲೆಯಾಗಿ ಈ ಘಟನೆಯ ಬಗ್ಗೆ ಸ್ವಲ್ಪದರಲ್ಲಿ ಹೇಳಬಯಸುತ್ತೇನೆ. ದಿನಾಂಕ 28–7–2011ರಂದು ಶನಿವಾರ ಮಂಗಳೂರು ಹೊರ ವಲಯದ ಪಡೀಲ್ ಬಳಿ Morning Mist Home stay ಯಲ್ಲಿ ಶ್ರೀ ವಿಜಯಕುಮಾರ್ ಮತ್ತು ಸಂಜನಾ ಎಂಬುವವರು ತಮ್ಮ ಸ್ನೇಹಿತರೊಂದಿಗೆ ಒಟ್ಟು ಎಂಟು ಜನ ವಿದ್ಯಾರ್ಥಿಗಳು ಹಾಗೂ ಐದು ಜನ ವಿದ್ಯಾರ್ಥಿನಿಯರು ಹುಟ್ಟು ಹಬ್ಬದ ಪಾರ್ಟಿ ನಡೆಸುತ್ತಿದ್ದರು. ಅಲ್ಲಿ ಒಟ್ಟು ಹದಿಮೂರು ವಿದ್ಯಾರ್ಥಿಗಳಿದ್ದರು. ಅಲ್ಲಿ ಅವರು ಮಧ್ಯಾಹ್ನ ಎರಡೂವರೆಗೆ ಗಂಟೆಗೆ ಹೋಗಿ ಹುಟ್ಟು ಹಬ್ಬದ ಆಚರಣೆಯನ್ನು ಪ್ರಾರಂಭಿಸಿ ವಾಪಸ್ ಹೊರಡುವಂಥ ಸಂದರ್ಭದಲ್ಲಿ ಅಂದರೆ ಸಮಯ ಏಳು ಗಂಟೆಗೆ ಹಿಂದೂ ಜಾಗರಣಾ ವೇದಿಕೆಯ ಸದಸ್ಯರೆಂದು ಹೇಳಿಕೊಳ್ಳುವ ಶ್ರೀ ಸುಭಾಷ್ ಪಡೀಲ್ ನೇತೃತ್ವದಲ್ಲಿ ನಲವತ್ತು ಜನರು ದಾಳಿ ಮಾಡಿದ್ದಾರೆ. ಶ್ರೀ ಸುಭಾಷ್ ಪಡೀಲ್ ಅಂದರೆ ಹಿಂದೂ ಜಾಗರಣಾ ವೇದಿಕೆಯ ಸಂಚಾಲಕರು. ಇವರು ಏಕಾಏಕಿ ಅವರ ಮೇಲೆ ಹಲ್ಲೆ ಮಾಡಿ ಬಟ್ಟೆಗಳನ್ನು ಬಿಚ್ಚಿ.ಹುಡುಗಿಯರ ಬಟ್ಟೆ ಹಿಡಿದುಕೊಂಡು ಎಳೆದಾಡಿ, ಅಷ್ಟೇ ಅಲ್ಲ ಅವರನ್ನು ಕೊಠಡಿಯಲ್ಲಿ ಕೂಡಿ ಹಾಕಿ ಅವರ ಕೊರಳಲ್ಲಿದ್ದಂಥ ಬಂಗಾರದ ಸರ, ಪರ್ಸ್, ಮೊಬೈಲ್ ಅನ್ನು ಕಿತ್ತುಕೊಂಡು ಹೋಗಿದ್ದಾರೆ. ಆ ವಿದ್ಯಾರ್ಥಿಗಳು ನಾವು ಹುಟ್ಟು ಹಬ್ಬವನ್ನು ಆಚರಿಸುತ್ತಿದ್ದೇವೆಂದು ಹೇಳಿದರೂ, ಆ ಯುವತಿಯರು ಸಾಕಷ್ಟು ಅಂಗಲಾಚಿ ಬೇಡಿಕೊಂಡರೂ ಸಹಿತ ಅಮಾನುಷವಾಗಿ ವರ್ತಿಸಿ ಅರ್ಧ ಗಂಟೆಯವರೆಗೆ ಅವರನ್ನು ಚೆನ್ನಾಗಿ ಥಳಿಸಿ, ಬ್ಲೇಡ್‌ಗಳಿಂದ ಗೀಚಿ, ಬಟ್ಟೆ ಕಳಚಿ ಹೊಡೆದು ಹಲ್ಲೆ ಮಾಡಿರುತ್ತಾರೆ. ಹುಡುಗಿಯರನ್ನು ಹಿಗ್ಗಾಮುಗ್ಗಾ ಎಳೆದಾಡಿ, ಅವರ ಅಂಗಾಂಗಗಳನ್ನು ಸ್ಪರ್ಷ ಮಾಡಿ ಅವರ ಬಟ್ಟೆಗಳನ್ನು ಎಳೆದಾಡಿರುತ್ತಾರೆ. ಅದರ ಜೊತೆಗೆ ಇಬ್ಬರ ಜೊತೆಯಲ್ಲಿರುವಂಥ ಚಿನ್ನದ ಸರ, ಇಬ್ಬರ ಪರ್ಸ್‌ಗಳನ್ನು, ಒಂದು ಮೊಬೈಲ್ ಸಹಿತ ಕಿತ್ತುಕೊಂಡು ಹೋಗಿದ್ದಾರೆ. ಬಹುತರವಾಗಿ ಈ ಮೊಬೈಲ್ ತೆಗೆದುಕೊಂಡು ಹೋಗುವುದಾಗಲಿ,

ಪರ್ಸ್‌ಗಳನ್ನು ತೆಗೆದುಕೊಂಡು ಹೋಗುವುದಾಗಲಿ, ಕೊರಳಲ್ಲಿರುವ ಚಿನ್ನದ ಸರ ತೆಗೆದುಕೊಂಡು ಹೋಗಿದ್ದಾರೆಂದರೆ ಅದೊಂದು ದರೋಡೆ. ಇವರು ಕಾಲಿನಿಂದ ತುಳಿದು ಹಲ್ಲೆ ಮಾಡಿದ್ದಾರೆ. ಹಾಗಿಯೇ ಒಬ್ಬ ವಿದ್ಯಾರ್ಥಿನಿಗೆ ಕಪಾಳಮೋಕ್ಷ ಮಾಡಿದ್ದಾರೆ. ಕೆಲವು ವಿದ್ಯಾರ್ಥಿಗಳನ್ನು ಕಾಲಿನಿಂದ ತುಳಿದಿದ್ದು ವೀಕ್ಷಣೆಯಿಂದ ವ್ಯಕ್ತವಾಗಿದೆ. ಆ ಯುವತಿಯರ ಜೊತೆ ಅಮಾನುಷವಾಗಿ ವರ್ತನೆ ಮಾಡಿದ್ದಾರೆ. ಆ ಯುವತಿಯರ ಕೂದಲು ಹಿಡಿದು ಎಳೆದಾಡಿ ಮುಖಕ್ಕೆ ಮನಸ್ಸಿಗೆ ಬಂದ ಹಾಗೆ ಚಚ್ಚಿದ್ದಾರೆ. ಹಲ್ಲೆಗೊಳಗಾದವರಲ್ಲಿ ಒಬ್ಬ ಯುವತಿ ಪೊಲೀಸ್ ಆಫೀಸರ್ ಮಗಳು ಎನ್ನುವುದನ್ನು ಕೂಡ ಎಡಿಜಿಪಿಯವರು ದೃಢಿಪಡಿಸಿದ್ದಾರೆ. ಆ ಯುವತಿಯರನ್ನು ಎಳೆದಾಟದಲ್ಲಿ ಅರೆನಗ್ನ ಕೂಡ ಮಾಡಿದ್ದಾರೆ. ಇದನ್ನು ನೋಡಿದರೆ ಅವರು ತಮ್ಮ ಕಾಮುಕ ಪ್ರವೃತ್ತಿಯನ್ನು ಪ್ರದರ್ಶಿಸಿದ್ದಾರೆಂದು ನಮಗೆ ದೃಷ್ಯ ಮಾಧ್ಯಮದಿಂದ ಅನಾಯಸವಾಗಿ ನಾವೊಂದು ನಿರ್ಣಯಕ್ಕೆ ಬರಬಹುದು. ನಂತರ ಅವರೆಲ್ಲರನ್ನು ಕೊಠಡಿಯಲ್ಲಿ ಕೂಡಿ ಹಾಕುತ್ತಾರೆ.

**ಸಭಾಪತಿಯವರು:-** ಯಾರದೋ ಮೊಬೈಲ್ ಫೋನ್ ಧ್ವನಿ ಮಾಡುತ್ತಿದೆ. ದಯಮಾಡಿ Switch off ಮಾಡಿ. ಇಲ್ಲದಿದ್ದರೆ ನಾನು ಎತ್ತಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ. ಅದನ್ನು Confiscate ಮಾಡಿಬಿಡಿ.

**ಸಭಾಪತಿಯವರು:-** ಮಾಡುವುದು ಒಳ್ಳೆಯದಲ್ಲವೇ? ಇವೊತ್ತು ಕೊನೆಯ Warning ಇದೆ. ನಾಳೆಯಿಂದ ಯಾರದೇ ಮೊಬೈಲ್ ಸದನದೊಳಗಡೆ ಸದ್ದು ಮಾಡಿದರೆ ಆ ಮೊಬೈಲ್ ಅನ್ನು ನಾನು ತೆಗೆದುಕೊಳ್ಳುತ್ತೇನೆ. ವಾಪಸ್ ಕೊಡುವುದಿಲ್ಲ. ಆ ಮೊಬೈಲ್ ಶಬ್ದ ಮೇಲಿನಿಂದ ಬರಲಿ, ಕೆಳಗಿನಿಂದ ಬರಲಿ. ಅದನ್ನು ವಾಪಸ್ಸು ಕೊಡುವುದಿಲ್ಲ. ಅದನ್ನು ನಮ್ಮ ಕಛೇರಿಯಲ್ಲಿ ಇಟ್ಟುಕೊಳ್ಳುತ್ತೇವೆ. ಯಾರಿಗೂ ವಾಪಸ್ಸು ಕೊಡುವುದಿಲ್ಲ. ಇವೊತ್ತೆ ಕೊನೆ. ಇವೊತ್ತು Switch off ಮಾಡಿಬಿಡಿ Jammer ಸರಿಯಾಗಿ ಕೆಲಸ

ಮಾಡುವುದಿಲ್ಲ. ಆದ್ದರಿಂದ ಮೊಬೈಲ್ Switch off ಮಾಡಿಕೊಂಡು ಒಳಗಡೆ ಬರುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಹೊರಗಡೆ ಮೊಬೈಲ್ ಇಡುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿಸಿ.

**ಸಭಾಪತಿಯವರು:–** ಹೊರಗಡೆ ವ್ಯವಸ್ಥೆಯನ್ನು ಏಕೆ ಮಾಡಬೇಕು. ಮೊಬೈಲ್ Switch off ಮಾಡಿಕೊಂಡು ಒಳಗಡೆ ಬರುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲವೆಂದು ಹೇಳಿದ್ದೇನೆ. ನಿಮಗೆ ಇಟ್ಟುಕೊಳ್ಳುವುದಕ್ಕೆ ಕಷ್ಟವಾದರೆ ನನ್ನ ಕಡೆ ಕೊಡಿ ನಾನು ವಾಪಸ್ಸು ಕೊಡುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಆ ವಿದ್ಯಾರ್ಥಿಗಳನ್ನೆಲ್ಲಾ ಒಂದು ಕೊಠಡಿಯಲ್ಲಿ ಕೂಡಿ ಹಾಕಿ ಚಿಲಕ ಜಡಿದಿದ್ದಾರೆ. ನಂತರ ಪೊಲೀಸರು ಬಂದು ಹಲ್ಲೆಖೋರರ ಬಗ್ಗೆ ಏನನ್ನು ವಿಚಾರಣೆ ಮಾಡಿಲ್ಲ. ಇವರನ್ನು ಬಿಡುಗಡೆ ಮಾಡುವ ಬಗ್ಗೆ ಕೂಡ ಚಿಂತನೆ ಮಾಡಿಲ್ಲ, ಇವರನ್ನು ಒಳಗಡೆ ಹಾಕಿ Wrongful Confinement ಏನು ಮಾಡಿದ್ದಾರೆ. ಒಳಗಡೆ ಹಾಕಿ ಚಿಲಕ ಹಾಕಿದ್ದರೆ It amounts to Wrongful Confinement in my opinion. As per Indian penal code it is an offence. ಆದರೆ ಪೊಲೀಸರು ಒಳಗಡೆ ಹೋಗಿ ಅವರು ಅರೇ ನಗ್ನಾವಸ್ಥೆಯಲ್ಲಿರುವಾಗಲೇ ಅವರ ಜೊತೆ ವಿಚಾರಣೆ ಮಾಡುತ್ತಾರೆ. ಅವರ ಬಗ್ಗೆ ಸ್ವಲ್ಪ ಕಾಳಜಿ ಮಾಡಿ ಅವರು ಬಟ್ಟೆಗಳನ್ನು ಸರಿಯಾಗಿ ಮಾಡಿಕೊಳ್ಳಲಿಕ್ಕೆ ಏನಾದರೊಂದು ಅವಕಾಶ ಕಲ್ಪಿಸಬೇಕಾಗಿತ್ತು. These police officers have never bothered about them. ಅದೇ ಸ್ಥಿತಿಯಲ್ಲಿ ಅವರ ಜೊತೆ ವಿಚಾರಣೆ ಪ್ರಾರಂಭ ಮಾಡಿದ್ದಾರೆ. ಈ ರೀತಿಯಾಗಿ ಈ ದೇಶದ ಸಂಸ್ಕೃತಿ, ಈ ದೇಶದ ಪರಂಪರೆ ರಕ್ಷಣೆ ಮಾಡುತ್ತೇವೆಂದು ಹೇಳಿ ಇವರು ಕಾನೂನನ್ನು ಕೈಗೆತ್ತಿಕೊಳ್ಳುವಂಥ ಕೆಲಸ ಏನು ಮಾಡಿದ್ದಾರೆ ಅದು ಗೃಹ ಇಲಾಖೆಯಿಂದ Outsourcing ಏನಾದರು ಮಾಡಿದ್ದೀರಾ ಎಂದು ಗೃಹ ಸಚಿವರನ್ನು ಕೇಳಬಯಸುತ್ತೇನೆ. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಒಂದು ಗ್ಯಾಂಗ್‌ಗೆ Outsourcing

ಮಾಡುವಂಥ ವ್ಯವಸ್ಥೆ ಏನಾದರೂ ಇದೆಯೆ ಎಂದು ನನಗೆ ಅರ್ಥ ಆಗುತ್ತಿಲ್ಲ. ಫ್ಯಾಕ್ಟರಿಗಳಲ್ಲಿ, Ancillary Units ಗಳಲ್ಲಿ Outsourcing ವ್ಯವಸ್ಥೆಯನ್ನು ಕೆಲವು ಕಡೆ ಮಾಡುತ್ತಿರುತ್ತಾರೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಆರೋಗ್ಯ ಇಲಾಖೆ ಮತ್ತು ಕೆಲವೊಂದು ಇಲಾಖೆಗಳಲ್ಲಿ ಕಸವನ್ನು ತೆಗೆಯುವುದಕ್ಕೆ ಕಟ್ಟಡಗಳನ್ನು ಕಾಯುವುದಕ್ಕೆ Outsourcing ಅನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ನೋಡಿಕೊಳ್ಳಲು ಈ ಸಂಘಟನೆಗಳಿಗೆ ಏನಾದರು Outsourcing ಅನ್ನು ಕೊಟ್ಟಿದ್ದಾರೆ ಎನ್ನುವಂತಹ ಅರ್ಥದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅದು ನಿಜವೇ ಎನ್ನುವಂತಹ ಪ್ರಶ್ನೆ ನಮ್ಮ ಮುಂದೆ ಬರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಶ್ರೀಮತಿ ಮೋಟಮ್ಮನವರು ಹೇಳಿದಂತೆ ಈ ಎಲ್ಲಾ ಘಟನೆಗಳನ್ನು ನೋಡಿದರೆ ಕೆಲವೊಂದು ಗ್ಯಾಂಗ್‌ಗಳಿಗೆ ಗೃಹ ಇಲಾಖೆಯವರು ನಮ್ಮ ರಾಜ್ಯದಲ್ಲಿ ಕಾನೂನು ಸುವ್ಯಸ್ಥೆಯನ್ನು ಕಾಪಾಡಿ ಎಂದು Outsourcing ಮಾಡಿದ್ದಾರೆ ಎನ್ನುವಂತಹ ಕಲ್ಪನೆ ಬರುವಂತಹ ಒಂದು ಘಟನೆಯನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತಿದ್ದೇನೆ. ಆಮೇಲೆ ಎಡಿಜಿಪಿ ಯವರು ಘಟನೆ ನಡೆದಂತಹ ಸ್ಥಳದಲ್ಲಿ ತಿಂಡಿ ಪದಾರ್ಥಗಳನ್ನು ಹೊರತು ಪಡಿಸಿದರೆ, ಹಲ್ಲೆಗೋರರು ವ್ಯಕ್ತಪಡಿಸಿದಂತೆ ಯಾವುದಾದರು ಮಾದಕ ಪದಾರ್ಥಗಳಾಗಲಿ, ಕಾಂಡಮ್‌ಗಳಾಗಲಿ ಸಿಕ್ಕಿಲ್ಲವೆಂದು ಪೊಲೀಸ್‌ನವರು ವ್ಯಕ್ತಪಡಿಸಿದ್ದಾರೆ. ಎಡಿಜಿಪಿಯವರು ಸ್ಥಳಕ್ಕೆ ಭೇಟಿ ಕೊಟ್ಟು ಅವರು ಕ್ಲಿಯರ್ ಕಟ್ ಅಗಿ ಅಲ್ಲಿ ಯಾವುದೇ 'Rave Party' ನಡೆಯುತ್ತಿರಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಯಾವುದೇ ಮಾದಕ ವಸ್ತುಗಳು ಸಿಕ್ಕಿಲ್ಲ. ಹಲ್ಲೆಗೆ ಒಳಗಾದವರು ಕಾಲೇಜು ವಿದ್ಯಾರ್ಥಿಗಳು ಹುಟ್ಟು ಹಬ್ಬವನ್ನು ಆಚರಿಸಲು ಬಂದಿದ್ದರು ಎಂದು ಹೇಳಿರುವುದನ್ನು ಗಮನಿಸಬಹುದಾಗಿದೆ. ಇವರು ಅಲ್ಲಿ ಏನು ಅನೈತಿಕ ಚಟುವಟಿಕೆಗಳು ನಡೆಯುತ್ತಿತ್ತು ಎಂದು ಆಪಾಧಿಸಿದ್ದಾರೆ.ಅದಕ್ಕೆ

ಪೂರಕವಾದಂತಹ ಯಾವುದೇ ವಸ್ತುಗಳು ಸಿಕ್ಕಿಲ್ಲವೆಂದು ಹೇಳಿದ್ದಾರೆ. ಹಲ್ಲೆಕೋರರು ಜನರನ್ನು ಕೂಡಿಸುವುದಕ್ಕೆ ಅಲ್ಲಿ 'Rave Party' ನಡೆಯುತ್ತಿದೆ ಎಂದು Complaint ಮಾಡಿದ್ದಾರೆ. 'Rave Party' ನಡೆಯುತ್ತಿದೆ ಎಂದ ತಕ್ಷಣ ಸಾಮಾನ್ಯವಾಗಿ ಬಹಳಷ್ಟು ಜನರು ಬರುತ್ತಾರೆ. ಈ ರೀತಿ ಸುಳ್ಳು ಹಬ್ಬಿಸಿದ್ದರಿಂದ ಅಲ್ಲಿ ಸಾಕಷ್ಟು ಸಾರ್ವಜನಿಕರು ಜಮಾಯಿಸುತ್ತಾರೆ. ಇದರಲ್ಲಿ ಆ ಭಾಗದ ಸ್ಥಳೀಯ ಕಾರ್ಪೂರೇಟರ್ ಶ್ರೀ ಮೋಹನ್ ಪಡೀಲ್‌ರವರದು ಏನಾದರೂ ಪೂರ್ವನಿಯೋಜಿತ ಕೃತ್ಯ ಇರಬಹುದೆಂದು ನಮಗೆ ಅನುಮಾನ ಬರುತ್ತಿದೆ. ಆ ದೃಷ್ಟಿಯಿಂದ ಯಾವುದೇ ರಾಜಕೀಯ ಒತ್ತಡಕ್ಕೆ ಮಡಿಯಲಾರದೆ ನಿಷ್ಪಕ್ಷಪಾತವಾಗಿ Judiciously ಅವರು ಯಾರೇ ಇರಲಿ, ಎಷ್ಟೇ ದೊಡ್ಡವರು ಇರಲಿ, ಎಷ್ಟೇ ಪ್ರಭಾವಿಗಳಾಗಿರಲಿ ಅವರ ಪಕ್ಷದ ಕಾರ್ಯಕರ್ತರು ಇರಲಿ, ನಾಯಕರಿರಲಿ ನಿಷ್ಪಕ್ಷಪಾತವಾಗಿ ಇದನ್ನು ತನಿಖೆ ಮಾಡುವುದು ಬಹಳ ಅವಶ್ಯಕವಿದೆ ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಅಲ್ಲಿಯ ಸ್ಥಳೀಯ ಕಾರ್ಪೂರೇಟರ್‌ಗೆ Arrested and released on bail. ಅವರ ಮೇಲೆ ಕೇಸ್ ಆದರೂ ಹಾಕಲಾಗಿದೆಯೇ? ನಮಗೆ ಗೊತ್ತಿರುವಂತೆ ಎಫ್‌ಐಆರ್ ನಲ್ಲಿ ಅವರ ಹೆಸರು ಕೂಡ ಇಲ್ಲ. ಅವರನ್ನು ಏನು ಈ ಕ್ರಿಮಿನಲ್ ಕೇಸ್‌ನಲ್ಲಿ implied ಮಾಡಿಲ್ಲ. ಆದರೆ ಅವರು ಗಲಭೆ ನಡೆದಂತಹ ಸ್ಥಳದಲ್ಲಿದ್ದರು. he was very well present. ಆದರೆ ಹಲ್ಲೆಯಾಗುವಂತಹ ಸಂದರ್ಭದಲ್ಲಿ ಅವರು ಇರಲಿಲ್ಲ. ನಂತರ ಸಾರ್ವಜನಿಕರ ಜೊತೆಯಲ್ಲಿ ಬಂದಿದ್ದಾರೆ ಎನ್ನುವಂತಹ ಮಾತನ್ನು ನಾನು ಕೇಳಿದ್ದೇನೆ. ತಮ್ಮ ಮುಖಾಂತರ ಒಂದು ಮಾತನ್ನು ಕೇಳುವುದೇನೆಂದರೆ, ಯಾವುದೇ ವ್ಯಕ್ತಿ Abettor ಎನ್ನುವವರು ಇದಕ್ಕೆ ಪ್ರಚೋದನೆ ನೀಡುವಂಥದ್ದು, Criminal conspiracy hatch ಮಾಡುವಂಥವರು ಆ ಕೃತ್ಯ ನಡೆಯುವಂತಹ ಸಂದರ್ಭದಲ್ಲಿ ಅವರು ಎಲ್ಲಿಯೇ ಇರಲಿ, ಚಂದ್ರಲೋಕದಲ್ಲಿ ಇರಲಿ, 'Abettor is equally liable; he is equally punishable with he actual culprits'. ಗೃಹ ಮಂತ್ರಿಗಳೆ, He may be on moon, at the time of offence, ಕೃತ್ಯ ನಡೆಯುವಂತಹ ಸಂದರ್ಭದಲ್ಲಿ ಅವರು ಎಲ್ಲಿಯೇ ಇರಬಹುದು. Not

necessarily that he should be with all accused. ಅವರು ಹಲ್ಲೆಕೋರರ ಜೊತೆಯಲ್ಲಿಯೇ ಇರಬೇಕೆಂದು ಏನು ಇಲ್ಲ. ಅದರ ಹಿಂದೆ Abetment ಮಾಡುವಂಥವರು, ಸ್ಥಳೀಯ ಕಾರ್ಪೊರೇಟರ್ ಅದರಲ್ಲಿ ಇರಲಿಲ್ಲ. ಎಂದರೆ, ಅವರು ಏಕೆ ಅಲ್ಲಿಗೆ ಬರುತ್ತಿದ್ದರು? ಒಂದು ವೇಳೆ ಅವರ Abetment ಇರಲಿಲ್ಲ ಎಂದರೆ, ಅವರ ಗಮನಕ್ಕೆ ಬಂದಿರಲಿಲ್ಲ ಎಂದರೆ, ಅವರು ಹೊರಗಡೆ ಬಂದಿರಲಿಲ್ಲ, ಆಮೇಲೆ ಅವರು ಎಲ್ಲಾ ಜನರ ಜೊತೆಯಲ್ಲಿದ್ದುಕೊಂಡು ಇದು Rave Party ಮಾಡುವವರನ್ನು ಅವರನ್ನು ಅರೆಸ್ಟ್ ಮಾಡಿ ಎಂದು, ಒತ್ತಾಯ ಮಾಡುವಂತಹ ವಿಚಾರದಲ್ಲಿ ಅವರೆಲ್ಲರ ಜೊತೆಯಲ್ಲಿ ಕೂಡಿಕೊಂಡಿದ್ದಾರೆ. ಅದಕ್ಕೆ ನಾನು ತಮ್ಮ ಮುಖಾಂತರ ಇದನ್ನು ನಿಷ್ಪಕ್ಷಪಾತವಾಗಿ ತನಿಖೆಯಾಗುತ್ತದೆಯೋ ಇಲ್ಲವೋ ಎನ್ನುವಂತಹ ಸಂಶಯ ಇದೆ. ಏಕೆಂದರೆ ಶ್ರೀ ಮೋಹನ್ ಪಡೀಲ್ ಎನ್ನುವಂತಹ ಕಾರ್ಪೊರೇಟರ್ ಜನರ ಮಧ್ಯೆದಲ್ಲಿಯೇ ಇದ್ದಾರೆ. ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು Rave Party ಮಾಡುತ್ತಿದ್ದಾರೆ. ಅವರನ್ನು ನೀವು ಅರೆಸ್ಟ್ ಮಾಡಬೇಕು ಎಂದು ಪೊಲೀಸ್‌ನವರನ್ನು ಅವರು ಒತ್ತಾಯ ಮಾಡುತ್ತಿದ್ದಾರೆ. ಆದರೆ ಎಡಿಜಿಪಿ ಯವರು ಅಲ್ಲಿ 'Rave Party' ಮಾಡುತ್ತಿರಲಿಲ್ಲವೆಂದು ಹೇಳಿದ್ದಾರೆ ಘಟನೆ ನಡೆದಂತಹ ಸ್ಥಳದಲ್ಲಿ ಯಾವುದೇ ಮಾದಕ ವಸ್ತುಗಳು ಇಲ್ಲವೇ ಇಲ್ಲವೆಂದು ಹೇಳಿದ್ದಾರೆ. 'Rave Party' ಯಲ್ಲವೆಂದು Clear cut ಆಗಿ ಹೇಳಿದ್ದಾರೆ. ಇಷ್ಟೆಲ್ಲಾ ಹಿನ್ನಲೆಯಾಗಿ ನಿಂತುಕೊಂಡು ಹೇಳುತ್ತಿದ್ದರೆ He must be an accused; he may not be an actual culprit. He must be an abettor. ಇದೆಲ್ಲಾ criminal conspiracy ಮಾಡುವವರು ಅವರೆ ಎನ್ನುವುದು ನನ್ನ ಭಾವನೆ. ಈಗ ಅವರು ಏನು ಭಾಗಿಯಾಗಿಲ್ಲವೆಂದು ಎಫ್‌ಐಆರ್ ನಲ್ಲಿ ಅವರ ಹೆಸರನ್ನೇ ಹಾಕಿಲ್ಲ. ನಮ್ಮ ಸ್ನೇಹಿತರು ಹೇಳಿದಂತೆ ಇದರ ಹಿಂದೆ There must be a master mind brain behind this. That is Mr. Mohan Padil, Corporater of that area. ಸರ್ಕಾರದ ಇಷ್ಟೊಂದು ಸಾಚಾತನದ ಹೇಳಿಕೆಗಳನ್ನು ಗಮನಿಸಿದಾಗ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಹಾಗೂ ಗೃಹ ಮಂತ್ರಿಗಳ ಹೇಳಿಕೆಯನ್ನು ಗಮನಿಸಿದಾಗ ನಿಷ್ಪಕ್ಷಪಾತವಾಗಿ

ತನಿಖೆ ಮಾಡುತ್ತಾರೆ ಎನ್ನುವಂತಹ ಭಾವನೆ ಬಂದಿದೆ. ಆದರೆ ಮುಖ್ಯವಾಗಿ ಶ್ರೀ ಮೋಹನ್ ಪಡೀಲ್, Who is an abettor, he would have been booked under Criminal Case along with all these accused. ಇವರಿಗೆ ಏನು ಅರೆಸ್ಟ್ ಮಾಡಲಾಗಿದೆ ಅವರ ಜೊತೆಯಲ್ಲಿ ಇವರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು. ನಂತರ ಅತ್ಯಂತ ಗೌರವದಿಂದ ಬಿಟ್ಟು ಬಿಟ್ಟಿದ್ದಾರೆ. ಇದನ್ನು ನೋಡಿದರೆ ಮಾರಿ ನೋಡಿ ಮೊಳ ಹಾಕುವುದು ಎಂದು ನಮ್ಮ ಕಡೆಯಲ್ಲಿ ಹೇಳುತ್ತಾರೆ. ನಮ್ಮ ಕಳಕಪ್ಪ ಬಂಡಿಯವರಿಗೆ ಅದು ಗೊತ್ತಿದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಮುಖ ನೋಡಿ ಮಣೆ ಹಾಕುವುದೆಂದು ಹೇಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಈ ಕಡೆ ಮುಖ ನೋಡಿ ಮಣೆ ಹಾಕುವುದೆಂದು ಹೇಳುತ್ತಾರೆ. ನಮ್ಮ ಕಡೆ ಮಾರಿ ನೋಡಿ ಮೊಳ ಹಾಕುವುದೆಂದು ನಮ್ಮ ಜಿಲ್ಲೆಯ ಭಾಷೆಯಲ್ಲಿ ಹೇಳುತ್ತೇವೆ

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಮ್ಮ ಕಡೆ ಮಾರಿ ಎಂದರೆ ಬೇರೆ ಅರ್ಥ ಬರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾರಿ ಎಂದರೆ ಯಮ್ಮಾರಿಯಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಗ್ರಾಮೀಣ ಪ್ರದೇಶದಲ್ಲಿ ದೇವತೆಗಳಿಗೆ ಹೇಳುತ್ತಾರೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಮಹಿಳೆಯು ತುಂಬಾ ಸಿಟ್ಟಾಗಿದ್ದಾಗ ಏನು ಮಾರಮ್ಮ ಆಗಿಬಿಟ್ಟಿದ್ದೀಯ ಎಂದು ಹೇಳುವಂತಹ ಪದ್ಧತಿಗಳು ಇದೆ ಎಂದು ಕಾಣುತ್ತದೆ. ಉಗ್ರ ರೂಪವನ್ನು ತಾಳಿ ಬಟ್ಟಿದ್ದೀಯ ಎಂದು ಹೇಳುತ್ತಾರೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ದೇವತೆಯ ಉಗ್ರ ರೂಪ ಎಂದು ಹೇಳುವುದು, ಒಲಿದರೆ ನಾರಿ, ಮುನಿದರೆ ಮಾರಿ ಎಂದು ಹೇಳುವುದು.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೆ, ಮಾರಿ ಎಂದರೆ ಬಹಳ ಕೆಟ್ಟದ್ದು ಎಂದು ಅರ್ಥ ಬರುತ್ತದೆ. ಯಾವ ಮಾರಿಯನ್ನು ಮನೆಗೆ ಕರೆದುಕೊಂಡು ಬಂದೆಯಪ್ಪ ಎನ್ನುವಂತಹ ಮಾತು ಕೂಡ ಇದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಕೆಟ್ಟದ್ದಕ್ಕೂ ಮಾರಿ ಎಂದು ಉಪಯೋಗ ಮಾಡುತ್ತಾರೆ. ಶ್ರೀಮತಿ ಭಾರತಿಶೆಟ್ಟಿಯವರು ಇವತ್ತು ನಮಗೆ ಸರಿಯಾಗಿ ಹೇಳಿದ್ದಾರೆ. ಅವರನ್ನು ಇವತ್ತು ಅಭಿನಂದಿಸಬೇಕು. ಅವರು ಕೂಡ ನೊಂದುಕೊಂಡಿದ್ದಾರೆ. ಆದರೆ ಅವರ ಪಕ್ಕದಲ್ಲಿರುವಂತಹ ಪ್ರೊ:ಎಸ್.ಆರ್.ಲೀಲಾರವರು ಮುಂದಕ್ಕೆ ಹೋಗಲು ಎನ್ನುತ್ತಾರೆ. ಆದರೆ ಶ್ರೀಮತಿ ಭಾರತಿಶೆಟ್ಟಿಯವರಿಗೆ ನಿಜವಾಗಿಯೂ ಕೂಡ ನೋವು ಆಗಿದೆ. ಇದರ ಬಗ್ಗೆ ಚರ್ಚೆಯಾಗಲಿ ಎನ್ನುವಂತಹ ಅಭಿಪ್ರಾಯ ಅವರಿಗಿತ್ತು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ರಾಜ್ಯದ ಎಲ್ಲಾ ಹೆಣ್ಣು ಮಕ್ಕಳಿಗೂ ನೋವು ಆಗಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಿಜ. ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮನ್ನು ಈ ವಿಷಯದಲ್ಲಿ ಅಭಿನಂದಿಸುತ್ತೇನೆ.

**ಸಭಾಪತಿಯವರು:–** ಇವರೆಲ್ಲರು ಏನೋ ಮಾಡುವುದಕ್ಕೆ ಹೊರಟ್ಟಿದ್ದಾರೆಂದು ಅನ್ನಿಸುತ್ತಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಹಿಳೆಯರು ಮೇಲೆ ಈ ರೀತಿಯಾಗಿ ದೌರ್ಜನ್ಯವಾದಾಗ ಮಹಿಳೆಯರಿಗೆ ಈ ರಾಜ್ಯದಲ್ಲಿ ಎಲ್ಲಿ ರಕ್ಷಣೆ ಇದೆ? ಇದು ಒಳ್ಳೆಯ ಸಂಸ್ಕೃತಿಯೇ, ಇದು ಭಾರತದ ಸಂಸ್ಕೃತಿಯೇ? ಕೆಲವರು ಹೇಳುತ್ತಾರೆ. ಈ ದೇಶದ ಭವ್ಯ ಪರಂಪರೆ, ಸಂಸ್ಕೃತಿ

ಧರ್ಮ, ದೇಶಾಭಿಮಾನ, ಭಾರತಮಾತೆ ಇವೆಲ್ಲಕ್ಕೂ ವಾರಸುದಾರರು ಎಂದು ಹೇಳುವಂತಹ ಮಟ್ಟಿಗೆ ಕೆಲವು ವರ್ಗಗಳು, ಕೆಲವು ಸಂಘಟನೆಗಳು ಇವೆ. ಅದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯ ಅನ್ನಿಸುತ್ತದೆ. ಹಾಗಾದರೆ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ ಮಾಡುವುದು ಇವರ ಸಂಸ್ಕೃತಿಯೇ? ಇವರು ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಆಧುನಿಕ ದುಶ್ಯಾಸನರು, ಇವರು ವಿದ್ಯಾರ್ಥಿನಿಯರ ಜಾಕೆಟ್ ಹಿಡಿದು ಜಾಗ್ಗಾಡಿದ್ದಾರೆ. ಒಬ್ಬ ವಿದ್ಯಾರ್ಥಿನಿಯ ತಾಯಿಯು ಮಾತನಾಡಿ ಇವರು ಹಲ್ಲೆಕೋರರು ಎಂದು ಹೇಳಿದ್ದಾರೆ. ಇವರು ಆ ದುಶ್ಯಾಸನರಿಗಿಂತಲೂ ಏನು ಕಡಿಮೆ ಇದ್ದಾರೆ?ಇವರು ಆಧುನಿಕ ದುಶ್ಯಾಸನರು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ರೀತಿಯ ಕೃತ್ಯ ನಡೆದಿರುವುದು ಇದೇ ಮೊದಲೇನಲ್ಲ. ದಿನಾಂಕ:4ನೇ ಜೂನ್ 2005 ರಂದು ಭಜರಂಗದಳದವರೆಂದು ಹೇಳಿಕೊಂಡಂತಹ ಪುಂಡರ ಗುಂಪೊಂದು ಮಂಗಳೂರಿನ pump well ಸಮೀಪದಲ್ಲಿ 40 ಕುಟುಂಬಗಳು ಪ್ರವಾಸ ಹೊರಟಿದ್ದ ಬಸ್ಸನ್ನು, ಮುಸಲ್ಮಾನ್ ವರ್ತಕರೊಬ್ಬರು ಏರ್ಪಾಟು ಮಾಡಿದ್ದರು ಎನ್ನುವಂತಹ ನೆಪವೊಡ್ಡಿ ಆ ಬಸ್‌ನ್ನು ತಡೆದು ನಿಲ್ಲಿಸಿ ಕಲ್ಲು ಹೊಡೆದು, ಪ್ರಯಾಣಿಕರ ಮೇಲೆ ಹಲ್ಲೆ ಮಾಡಿದಂತಹ ಪ್ರಕರಣವನ್ನು ಕೂಡ ನಾವು ಇವೊತ್ತು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಇದು ಅಷ್ಟಕ್ಕೇ ಮುಗಿಯಲಿಲ್ಲ, ದಿನಾಂಕ: 27ನೇ ಡಿಸೆಂಬರ್ 2008ರಂದು ಮಾತಾ ಶೈಕ್ಷಣಿಕ ಟ್ರಸ್ಟ್‌ನ ಪಿ.ಯು.ಸಿ ವಿದ್ಯಾರ್ಥಿಗಳು ಪ್ರವಾಸ ಹೊರಟಿದ್ದಾಗ ಭಜರಂಗದಳದ ಸದಸ್ಯರೆಂದು ಹೇಳಿಕೊಂಡಂತಹ ಪುಂಡರ ಗುಂಪೊಂದು ಬಸ್ ತಡೆದು ಮತ್ತೆ ಹಲ್ಲೆ ಮಾಡಿದ್ದಾರೆ. ದಿನಾಂಕ: 24ನೇ ಜನವರಿ 2009 ರಂದು ಮಂಗಳೂರಿಗೆ ಬಲ್ಮಠದ ಪಬ್‌ನಲ್ಲಿ ಮಹಿಳೆಯರ ಮೇಲೆ ಹಲ್ಲೆ ಮಾಡಿದ್ದು ರಾಷ್ಟ್ರೀಯ ಮಟ್ಟದಲ್ಲಿ ಮಾತ್ರವಲ್ಲ ಪ್ರಪಂಚದಾದ್ಯಂತ ದೊಡ್ಡ ಸುದ್ಧಿಯಾಯಿತು. ಅಲ್ಲಿ ಹಲ್ಲೆ ಮಾಡಿದಂತಹವರು ಶ್ರೀರಾಮ ಸೇನೆಯವರು ಎಂದು ತಿಳಿದುಬಂದಿದೆ. ಮಹಿಳೆಯರು ಜೀನ್ಸ್ ಪ್ಯಾಂಟ್ ಧರಿಸಿದ್ದಾರೆ ಎಂದು ಆ ಪಬ್‌ನಲ್ಲಿದ್ದಂತಹ ಮಹಿಳೆಯರನ್ನು

ಹೊರಗಡೆಗೆ ಎಳೆತಂದು, ಬಟ್ಟೆ ಒಗೆಯುವಂತೆ ಹಿಡಿದು ನೆಲಕ್ಕೆ ಬಡಿದಿದ್ದಾರೆ.ಇದಂತೂ ಬಹಳ ಅಮಾನವೀಯವಾದಂತಹ, ಪೈಶಾಚಿಕವಾದಂತಹ ಹಲ್ಲೆಯಾಗಿದ್ದು ರಾಕ್ಷಸರು ಕೂಡ ಈ ರೀತಿ ನಡೆದುಕೊಳ್ಳುವುದಿಲ್ಲ. ಇಡೀ ದೇಶಾದ್ಯಾಂತ ಇದು ಸುದ್ಧಿಯಾಗಿ ಮಂಗಳೂರಿನ ಒಂದು ಗೌರವ ಏನಿತ್ತು ಆ ಗೌರವಕ್ಕೆ ಕುಂದು ಬಂತು.ನಮ್ಮ ರಾಜ್ಯದ ಗೌರವಕ್ಕೆ ಕೂಡ ಒಂದು ಕಪ್ಪು ಚುಕ್ಕೆ ಬಂದಂತಾಯಿತು. ಅಲ್ಲದೆ ದಿನಾಂಕ: 14ನೇ ಅಗಸ್ಟ್ 2011 ರಂದು ಉಲ್ಲಾಳದಲ್ಲಿ ಕಾಲ್‌ಸೆಂಟರ್ ವಿದ್ಯಾರ್ಥಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳು ಏರ್ಪಡಿಸಿದ್ದಂತಹ ಒಂದು ಉಪಹಾರ ಕೂಟಕ್ಕೆ ನುಗ್ಗಿ ಆ ವಿದ್ಯಾರ್ಥಿಗಳ ಮೇಲೆ ಕೂಡ ಇವರು ಹಲ್ಲೆ ನಡೆಸಿದ್ದಾರೆ.

ಪ್ರತಿ ಬಾರಿ ಹಲ್ಲೆ ನಡೆಸಿದಂತಹ ಸಂದರ್ಭದಲ್ಲಿ ಕೂಡ ಇವರು ನಾವು ನೈತಿಕ ಪೊಲೀಸರೆಂದು ಹೇಳಿಕೊಂಡು ಮೊದಲೇ ಮಾಧ್ಯಮದವರಿಗೆ ತಿಳಿಸಿ ಹಲ್ಲೆ ಮಾಡುತ್ತಾರೆ. ಅಂದರೆ ಹಲ್ಲೆ ನಡೆಸುವಂತಹ ಸಂದರ್ಭದಲ್ಲಿ ಇವರು ಮಾಧ್ಯಮದವರನ್ನು ಕೂಡ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ನಾವು ಮುಂದೆ ಶೂರತನದ ಕೆಲಸವನ್ನೇನು ಮಾಡುತ್ತೇವೆ ಅದನ್ನು ಚಿತ್ರೀಕರಣ ಮಾಡಿಕೊಳ್ಳಿ ಎಂದು ಅವರು ಮಾಧ್ಯಮದವರನ್ನು ಕರೆದುಕೊಂಡು ಹೋಗಿ ತಮ್ಮ ಶೂರತನವನ್ನು ಪ್ರದರ್ಶಿಸುತ್ತಾರೆ ಎಂಬುದು ಇದರಿಂದ ಸ್ಪಷ್ಟವಾಯಿತು.

ಇಂತಹ ಕೃತ್ಯಗಳನ್ನು ಇವರು ಪ್ರಚಾರ ಗಿಟ್ಟಿಸುವುದರ ಜೊತೆಗೆ ಭಯದ ವಾತಾವರಣವನ್ನು ಕೂಡ ಹುಟ್ಟಿಸಿ ಮುಂದೆ ಹಫ್ತಾ ವಸೂಲಿ ಮಾಡುವಂತಹ ಉದ್ದೇಶದಿಂದ ಈ ರೀತಿ ಕೃತ್ಯಗಳನ್ನು ನಡೆಸಲು ಹೊರಟಿದ್ದಾರೆಯೋ ಏನೋ ನಮಗಂತೂ ಅರ್ಥವಾಗುತ್ತಿಲ್ಲ. ಸ್ಟೇ ಹೋಂಗಳು, ಹಳ್ಳಿ ರೆಸಾರ್ಟ್‌ಗಳಂತಹ ಬಹಳಷ್ಟು ಹೋಟಲ್‌ಗಳು ಕೊಡಗು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಂಗಳೂರು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾಕಷ್ಟಿವೆ. ಅವುಗಳನ್ನು ಲೈಸೆನ್ಸ್ ಪಡೆದು ನಡೆಸಲಾಗುತ್ತಿದೆಯೋ, ಇಲ್ಲವೋ ಎನ್ನುವಂತಹ ವಿಚಾರಗಳ ಆಳಕ್ಕೆ ನಾನು ಹೋಗುವುದಿಲ್ಲ, ಆದರೆ

ಈ ಘಟನೆಗೆ ಸೀಮಿತವಾಗಿ ನಾನು ಮಾತನಾಡಬಯಸುತ್ತೇನೆ. ಈ ಕೃತ್ಯದ ಬಗ್ಗೆ ಮಂಗಳೂರಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯಾದ್ಯಂತ ವ್ಯಾಪಕವಾದಂತಹ ಪ್ರತಿಭಟನೆಗಳು ನಡೆದಿವೆ. ನೆನ್ನೆ ದಿವಸ ಇಡೀ ರಾತ್ರಿ ಪೂರ್ತಿ ಇಂಗ್ಲೀಷ್, ಹಿಂದಿ ಭಾಷೆಯ ರಾಷ್ಟ್ರೀಯ ವಾಹಿನಿಯ ಚಾನಲ್‌ಗಳಲ್ಲಿ ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ ಬಿತ್ತರಗೊಂಡಿದ್ದು ಇದು ಅಂತರ ರಾಷ್ಟ್ರೀಯ ಸುದ್ಧಿಯಾಗಿ ರೂಪುಗೊಂಡಿದೆ. ಹೀಗಾಗಿ ಮಂಗಳೂರಿನಲ್ಲಿರುವಂತಹ ಹಿಂದೂ ಸಂಘಟನೆಗಳಿಗೆ ಕಾನೂನಿನ ಭಯವೇ ಇಲ್ಲ ಎಂಬುದಾಗಿ ಜನತೆ ದೂರಿತ್ತಿದ್ದಾರೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿರವರೆಗೆ ಮಾತನಾಡಿದ್ದರಲ್ಲಿ ಬಹಳ ಸ್ಪಷ್ಟತೆ, ನೀತಿ, ಸತ್ಯ, ವಾಸ್ತವೀಕತೆ ಇವೆಲ್ಲವೂ ಇದ್ದವು. ಆದರೆ ಈಗ ಪ್ರಾರಂಭ ಮಾಡುತ್ತಿರುವ ಮಾತಿನಲ್ಲಿ ಅವರು **'ಹಿಂದೂ ಸಂಘಟನೆಗಳು'** ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಈ ರೀತಿಯ ಶಬ್ದಗಳನ್ನು ಉಪಯೋಗ ಮಾಡುವುದು ಸರಿಯಲ್ಲ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಾನು ಹೇಳುತ್ತಿಲ್ಲ, ಆ ಸಂಘಟನೆಯವರೇ ಹೇಳಿಕೊಂಡಿದ್ದಾರೆ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಈ ರೀತಿಯ ಕೆಲಸಗಳನ್ನು ಸಂಘಟನೆಯವರು ಮಾಡುವುದಿಲ್ಲ, ಆ ಸಂಘಟನೆಗಳ ಹೆಸರಿನಲ್ಲಿ ಬೇರೆ ಜನರು ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕು.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಒಳ್ಳೆಯ ಚರ್ಚೆ ನಡೆಯುತ್ತಿರುವಂತಹ ಸಂದರ್ಭಗಳಲ್ಲಿ ಮಾನ್ಯ ಮಧುಸೂದನ್‌ರವರು ದಾರಿ ತಪ್ಪಿಸುವಂತಹ ಕೆಲಸವನ್ನು ಯಾವಾಗಲೂ ಮಾಡುತ್ತಾರೆ. ಇದು ಒಳ್ಳೆಯ ಪರಂಪರೆ ಅಲ್ಲ.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಯಾರಿಗೂ yield ಆಗಿಲ್ಲ. ನಾನು ಮಾತನಾಡಿ ಮುಗಿಸಿದ ನಂತರ ಅವರು ಮಾತನಾಡಲಿ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇವರು ಹಿಂದೂ ಸಂಘಟನೆಯನ್ನು ಹರಾಜು ಹಾಕಬಾರದು, ಕಾಶ್ಮೀರಲ್ಲಿ ಏನಾಯಿತು, ಅಸ್ಸಾಂನಲಿ ಏನಾಯಿತು. ನೀವು ಹಿಂದೂ ಸಂಘಟನೆ, ಮುಸಲ್ಮಾನ ಸಂಘಟನೆಯನ್ನು ಹರಾಜು ಹಾಕಬೇಡಿ, ಯಾರೋ ಮಾಡಿದ ಕೆಲಸವನ್ನು ಯಾವುದೋ ಸಂಘಟನೆಯ ಮೇಲೆ ಹಾಕುವುದು ಸರಿಯಲ್ಲ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ನಡೆದಿರುವ ಘಟನೆಯ ವಿಚಾರದಲ್ಲಿ ಇವರಿಗೆ ಕಳಕಳಿ ಇಲ್ಲವೇ?

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಂಗಳೂರು ನಮ್ಮ ತವರು ಜಿಲ್ಲೆಯಾದ್ದರಿಂದ ನಮಗೆ ಅವರಿಗಿಂತ ಹೆಚ್ಚು ಕಳಕಳಿ ಇದೆ. ಆದರೆ ಇವರು ಹಿಂದೂ ಸಂಘಟನೆ ಎಂದು ಹೇಗೆ ಹೇಳುತ್ತಿದ್ದಾರೆ? ಯಾರೋ ಮಾಡಿದ ತಪ್ಪಿಗೆ ಸಂಘಟನೆಯ ಹೆಸರನ್ನು ಬಳಸುವುದು ಸರಿಯಲ್ಲ. ಯಾವುದೇ ಸಂಘಟನೆಯ ಬಗ್ಗೆ ಮಾತನಾಡುವುದು ಸರಿಯಲ್ಲ. ಬೇಕಾದರೆ ಆ ತಪ್ಪನ್ನು ಮಾಡಿರುವಂತಹ ವ್ಯಕ್ತಿಗಳನ್ನು ಖಂಡಿಸಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಅವಕಾಶವೇ ಸಿಕ್ಕಿಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರು ಈಗ ಇಷ್ಟೆಲ್ಲಾ ಮಾತನಾಡುತ್ತಿದ್ದಾರೆ, ಆದರೆ ಅವರೇಕೆ ನೋಟೀಸ್ ಕೊಟ್ಟಿಲ್ಲ?

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ,ಇವರು ನೋಟೀಸ್ ಕೊಟ್ಟಿದ್ದೇವೆ ಎಂದು ಏನು ಬೇಕಾದರೂ ಮಾತನಾಡಬಹುದೇ? ಇವರು ಹಿಂದೂ ಸಂಘಟನೆಯ ಬಗ್ಗೆ ಮಾತನಾಡುವುದು ಬೇಡ.ಯಾರು ಆ ಕೃತ್ಯವನ್ನು ಮಾಡಿದ್ದಾರೆಯೋ ಅವರನ್ನು ಖಂಡಿಸಿ, ಅವರನ್ನು ಹಿಡಿದು ಒಳಗಡೆ ಹಾಕಿ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಈ ಘಟನೆಯ ವಿಚಾರದಲ್ಲಿ ನಮಗೆ ನೋವಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ನೋವು ನಿಮಗಿಂತ ನಮಗೆ ಜಾಸ್ತಿ ಇದೆ, ಅದು ನಮ್ಮ ಜಿಲ್ಲೆ ಅಲ್ಲಿರುವವರು ನಮ್ಮ ಹೆಣ್ಣು ಮಕ್ಕಳು. ನಿಮಗಿಂತ ನಮಗೆ ಹೆಚ್ಚು ನೋವಿದೆ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ಮಾಡುವುದನ್ನು ನೋಡಿದರೆ, ಅವರಿಗೆಲ್ಲಾ ಕುಹಕ ರೀತಿಯಿಂದ ಹೇಳುತ್ತಾರೆ.

(ಗೊಂದಲ)

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಹೇ, ಒಂದು ನಿಮಿಷ ತಡೆಯಿರಿ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮತ್ತೀಕಟ್ಟಿ ವೀರಣ್ಣನವರು ನನ್ನನ್ನು ಈ ರೀತಿ ಗದರಿಸಬಾರದು. ನಾನು ಹೆದರುವ ವ್ಯಕ್ತಿ ಅಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಹೇ, ಎಂದು ಕರೆದಿರುವುದೇನಿದೆ ಅದು ಪ್ರೀತಿಯಿಂದ ಕರೆದಿರುವಂಥದ್ದು.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಯಾರೂ ಸಹ ಹಿಂದೂ ಸಂಘಟನೆಯ ಹೆಸರನ್ನು ಹೇಳಬಾರದು. ಹಾಗಾದರೆ ಮೊನ್ನೆ ರೈಲಿನಿಂದ ಆ ಹೆಣ್ಣು ಮಗಳನ್ನು ದೂಡಿದ್ದು ಮುಸ್ಲೀಂ, ಸಮಾಜವೇ, ಮುಸಲ್ಮಾನ್ ಸಂಘಟನೆಯವರೇನು? ಈ ರೀತಿ ಸಮಾಜವನ್ನು ಒಡೆಯುವಂತಹ ಕೆಲಸವನ್ನು ಯಾರೂ ಮಾಡಬಾರದು.ಇವರು ಹೇಗೆ ಹಿಂದೂ ಸಂಘಟನೆಯ ಬಗ್ಗೆ ಮಾತನಾಡುತ್ತಾರೆ?

(ಗೊಂದಲ)

**ಡಾ॥ ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಯವರೇ, ಯಾರು ತಪ್ಪು ಮಾಡಿದ್ದಾರೆಯೋ ಅವರನ್ನು ಖಂಡಿಸಿ, ಆದರೆ ಹಿಂದೂ ಸಂಘಟನೆಗಳ ಹೆಸರನ್ನು ಬಳಕೆ ಮಾಡುವುದು ಸರಿಯಲ್ಲ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಇದು ಯಾವ ನ್ಯಾಯ?

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವರಿಗೆ ಏನೋ ಉದ್ದೇಶ ಇದೆ. ಅದಕ್ಕೆ ಈ ರೀತಿ ಮಾತನಾಡುತ್ತಿದ್ದಾರೆ. ಬಹುಶಃ ಸದನದಲ್ಲಿ ಈ ವಿಷಯ ಚರ್ಚೆಯಾಗಬಾರದು ಎನ್ನುವಂತಹ ಉದ್ದೇಶದಿಂದ ಈ ರೀತಿ ಗೊಂದಲದ ವಾತಾವರಣವನ್ನು ಇವರು ನಿರ್ಮಾಣ ಮಾಡುತ್ತಿದ್ದಾರೆ ಎಂದು ನಾವು ಹೇಳಬೇಕಾಗುತ್ತದೆ.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ತಪ್ಪು ಸಂಗತಿಗಳು ಸದನದ ದಾಖಲೆಗಳಿಗೆ ಹೋಗಬಾರದು.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ವಿವರಣೆ ಕೊಡುತ್ತೇನೆ, ನಾನು ವಿವರಣೆ ಕೊಟ್ಟ ನಂತರ ಅವರು ಮಾತನಾಡಲಿ.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಮಾತನಾಡಲು ತಾವು ಒಂದು ನಿಮಿಷದಷ್ಟು ಕಾಲಾವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ,

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಆ ಘಟನೆಗೆ ಕಾರಣರಾದವರನ್ನು ಇವರು ಬೇಕಾದರೆ ನಿಂದಿಸಲಿ, ಆದರೆ ಹಿಂದೂ ಸಂಘಟನೆ ಎನ್ನುವಂಥದ್ದನ್ನು ಬಳಕೆ ಮಾಡಬಾರದು, ನಾನು ಕೂಡ ಹಿಂದೂ ಸಂಘಟನೆಯಲ್ಲಿರುವವಳು. ಇವರೇಕೆ ಸಂಘಟನೆಯ ಬಗ್ಗೆ ಮಾತನಾಡುತ್ತಾರೆ?

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ನಾವು ಸಹ ಹಿಂದೂಗಳೇ, ಆದರೆ ದುಷ್ಟರನ್ನು ಕುಹಕರನ್ನು, ರಾಕ್ಷಸರನ್ನು ಇವರು ಸಪೋರ್ಟ್ ಮಾಡುವುದು ಸರಿಯಲ್ಲ. ಅದು ನಿಮಗೆ ಒಳ್ಳೆಯದಲ್ಲ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾವು ಸಪೋರ್ಟ್ ಮಾಡುತ್ತಿಲ್ಲ.

(ಗೊಂದಲ)

5.30 ಘಂಟೆ

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಎದ್ದು ನಿಂತು ಎಲ್ಲರೂ ಕುಳಿತುಕೊಳ್ಳುವುದಕ್ಕೆ ಸೂಚಿಸಿದರು)**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಹಗರಣದ ಹಿಂದೆ ಹಿಂದೂ ಜಾಗರಣ ಸಮಿತಿ ಇನ್ವಾಲ್ ಆಗಿದೆಯೇ ಇಲ್ಲವೆ ಎಂಬುದನ್ನು ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕು.

**ಸಭಾಪತಿಯವರು:–** ಸರ್ಕಾರ ಉತ್ತರ ಕೊಡುವಾಗ ಹೇಳುತ್ತದೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ನನ್ನ ವಾಕ್ಯವನ್ನು ಪೂರ್ತಿ ಮಾಡಿಲ್ಲ. ನಾನು ಏನು ಹೇಳುತ್ತೇನೆ, ಅದನ್ನು ಪೂರ್ಣವಾಗಿ ಕೇಳಿ ನಂತರ ಮಾತನಾಡಿ.

(ಗೊಂದಲ)

**ಶ್ರೀ ನಾರಾಯಣ ಸಾ. ಬಾಂಡಗೆ:–** ನಾನು ಹೇಳುವಂತಹ ಮಾತನ್ನು ಪೂರ್ಣವಾಗಿ ಕೇಳಿ, ನಂತರ ಮಾತನಾಡಿ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:–** ನೀವು ಅಸ್ಸಾಂ, ಕಾಶ್ಮೀರದಲ್ಲಿ ಮಾಡುವಂತೆ ನಾವು ಇಲ್ಲಿ ಮಾಡುವುದಿಲ್ಲ. ಅಸ್ಸಾಂ, ಕಾಶ್ಮೀರದಲ್ಲಿ ದುಷ್ಟರನ್ನು ಜೇಬಿನಲ್ಲಿಟ್ಟುಕೊಂಡು ಕೆಲಸ ಮಾಡಿದಿರಲ್ಲ? ಆ ರೀತಿ ನಾವು ಮಾಡುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಹೊಸದಾಗಿ ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ಈ ಎಲ್ಲಾ ಗೊಂದಲಕ್ಕೆ ಸರ್ಕಾರ ಉತ್ತರ ಹೇಳಲಿ, ನಾವು ಕೇಳುವುದೇನೆಂದರೆ, ಈ ಕೃತ್ಯವನ್ನು "ಹಿಂದೂ ಜಾಗರಣಾ ಸಮಿತಿ" ಮಾಡಿದೆಯೇ ಇಲ್ಲವೆ ಎಂಬುದನ್ನು ಸ್ಪಷ್ಟಪಡಿಸಬೇಕು.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿದ್ದೇನೆ. Yield ಆಗಿಲ್ಲ.

(ಗೊಂದಲ)

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಯವರೇ, ಇವತ್ತು ಎಲ್ಲರಿಗೂ ಬಹಳ ನೋವಾಗಿರುವಂತಹ ಸಂಗತಿ. "ಹಿಂದೂ ಜಾಗರಣಾ ವೇದಿಕೆ" ಎಂದು ಹೇಳಿದಂತಹ ಸಂದರ್ಭದಲ್ಲಿ ನಾವು ಯಾರೂ ಸಹ ಏನೂ ಮಾತನಾಡಲಿಲ್ಲ. ಆದರೆ ಜನರಲೈಸ್ ಮಾಡಿ "ಹಿಂದೂ" ಹೆಸರಿನಲ್ಲಿ ಅನೇಕ ಸಂಘಟನೆಗಳು "ಹಿಂದೂ ಸಂಘಟನೆಯ" ಹೆಸರಿಗೆ ಕಳಂಕ ತರಬಾರದು.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ನೀವು ಬೇಕಾದಂತೆ ಹೇಳಿದರೆ ನಾವು ಬಿಡುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ "ಹಿಂದೂ ಜಾಗರಣಾ ಸಮಿತಿ" ಎಂದು ಬಂದಿದೆ. ಅದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಲಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಮಾನ್ಯ ಸದಸ್ಯರು ಕೇಳಲಿ. ಯಾವುದೇ ಸಂಘಟನೆಗಳು "ಹಿಂದೂಗಳ" ಹೆಸರಿನ ಮೇಲೆ "ಹಿಂದೂ ಜಾಗರಣಾ ಸಮಿತಿ" ಇನ್ನಿತರ ಏನೇನೋ ಹೆಸರುಗಳ ಮುಖಾಂತರ ಈ ರೀತಿ ಮಾಡಿದರೆ ಅಕ್ಷಮ್ಯ ಅಪರಾಧವೆಂದು ಹೇಳುತ್ತಿದೆ. ಆದರೆ ನಾನು ವಾಕ್ಯವನ್ನು ಇನ್ನೂ ಪೂರ್ಣ ಮಾಡಿರಲೇ ಇಲ್ಲ.

(ಗೊಂದಲ)

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರು ಅದರ ಬಗ್ಗೆ ಕ್ಲಾರಿಫೈ ಮಾಡಿದ್ದಾರೆ ಬಿಡಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಮಾಡುವುದು ಬೇಡ ಎಂಬುದು ಮಾನ್ಯ ಸದಸ್ಯರ ಇಷ್ಟವಾಗಿರಬಹುದೆ ಕೇಳಿ.

(ಗೊಂದಲ)

**ಸಭಾಪತಿಯವರು:–** ಈಗ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದೇನೆ ಎಂಬುದರ ಬಗ್ಗೆ ಕ್ಲಾರಿಫೈ ಮಾಡಿದ್ದಾರೆ. ಅವರು ಏನು ಕ್ಲಾರಿಫೈ ಮಾಡಿದ್ದಾರೆ ಆ ಅರ್ಥದಲ್ಲಿಯೇ ಮುಂದಕ್ಕೆ ಹೋಗುವುದಕ್ಕೆ ಪ್ರಯತ್ನ ಅವರು ಮಾಡಲಿ. ಅವರು ಮಾತನಾಡುವುದನ್ನು ಮುಂದುವರೆಸಲಿ. ಸರ್ಕಾರ ತಾನು ಉತ್ತರ ಕೊಡುವಾಗ ಏನು ಉತ್ತರ ಕೊಡುತ್ತದೆ ಎಂದು ನೋಡೋಣ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, "ಹಿಂದೂ ಸಂಘಟನೆಗಳು" ಎಂದು ಏನು ಹೇಳಿದರು ಅದು ಕಡತದಿಂದ ತೆಗೆದುಹಾಕಬೇಕು.

(ಗೊಂದಲ)

**ಸಭಾಪತಿಯವರು:–** ಅದರ ಬಗ್ಗೆ ಅವರು ಸ್ಪಷ್ಟೀಕರಣ ನೀಡಿದ್ದಾರೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, 'ಹಿಂದೂ ಸಂಘಟನೆಗಳು" ಎಂದು ಹೇಳಿರುವುದನ್ನು ಕಡತದಿಂದ ತೆಗೆದುಹಾಕಬೇಕು.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರು ಏನು ಹೇಳಿದರು ಅದನ್ನು ಮತ್ತೊಮ್ಮೆ ಹೇಳುತ್ತಾರೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನೇನು "ಹಿಂದೂ" ಅಲ್ಲವೇ? ನಾನೇನು ಸಿಖ್ಖನೇ, ಬೌದ್ಧನೇ, ಜೈನನೇ ಅಥವಾ ಕ್ರಿಶ್ಚಿಯನೇ?

(ಗೊಂದಲ)

**ಶ್ರೀ ಅರುಣಾ ಶಹಾಪುರ:–** ಮಾನ್ಯ ಸಭಾಪತಿಯವರೇ, "ಹಿಂದೂ ಸಂಘಟನೆಗಳು" ಎಂದು ಹೇಳಿರುವುದನ್ನು ಯಾವುದೇ ಕಾರಣದಿಂದ ಕಡತಕ್ಕೆ ಹೋಗಬಾರದು.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ. ಈಗ ಅವರು ಮಾಡುವುದಕ್ಕೆ ಬಿಡಿ. ಅವರು ನಾನು ಯಾವ ಅರ್ಥದಲ್ಲಿ ಹೇಳಿದೆ ಅದನ್ನು ಪೂರ್ತಿಯಾಗಿ ಹೇಳಿರಲಿಲ್ಲ. ಯಾವ ಅರ್ಥದಲ್ಲಿ ಹೇಳಿದ್ದೇನೆ ಎನ್ನುವುದನ್ನು ಹೇಳುತ್ತೇನೆಂದು ಹೇಳಿದರು. ಇನ್ನೊಂದು ಸಲ ಅವರು ಏನು ಹೇಳುತ್ತಾರೆ ಅದನ್ನು ಕೇಳೋಣ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ನಾನು ಒಂದು ವಿವರಣೆಯನ್ನು ಕೇಳಬಯಸುತ್ತೇನೆ. ವಿರೋಧ ಪಕ್ಷದವರು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಈ ಘಟನೆ ನಡೆದಿರುವಂಥದ್ದರ ಬಗ್ಗೆ ಮತ್ತು ಈ ಘಟನೆಯನ್ನು ಇಂತಹ ಘಟನೆಗಳು ಈ ಹಿಂದೆ ಮರುಕಳಿಸಿದಾಗ ಯಾವ ಯಾವ ಸಂಘಟನೆಗಳು ಇತ್ತು. ಅವು ಎಲ್ಲವೂ ಕೂಡ ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡು ಹೋಗಿರುವತಂಹ ಸಂಘಟನೆಗಳು ಹಿಂದೂ ಸಂಘಟನೆಗಳು ಮತ್ತು ಅದಕ್ಕೆ ಬೇರೆ ಬೇರೆ ಹೆಸರನ್ನು ಕೊಟ್ಟುಕೊಂಡು ಹೋಗಿರುವುದು ಉಂಟು. ನಾವು ಈ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ಬಹುಶಃ ನೀವೇನಾದರು ಇಂತಹ ಸಂಘಟನೆಗಳ ಬಗ್ಗೆ ಮಾತನಾಡಲೇ ಬಾರದು ಎಂಬ ಪರಿಸ್ಥಿತಿ ಏನಾದರು ಈ ಸದನದಲ್ಲಿ ನಿರ್ಮಾಣ ಮಾಡುತ್ತೀರಾ?

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:–** ಈ ವಿಷಯದ ಬಗ್ಗೆ ಉತ್ತರ ಕೊಡುವುದಕ್ಕೆ ಮಾನ್ಯ ಸಚಿವರಿದ್ದಾರೆ. ದಯವಿಟ್ಟು ನಾನು ಮಾತನಾಡುವುದನ್ನು ಕೇಳಿ. ನಮಗೆ **ನೀವು ಇದೇ ರೀತಿ ಮಾತನಾಡಬೇಕು.ಈ ರೀತಿ ಬಿಟ್ಟು ಬೇರೆ ಮಾತನಾಡಬಾರದು** ಎಂದು ಏನಾದರು ಹೇಳುವುದು ಇದೆಯೇ?

(ಗೊಂದಲ)

**ಶ್ರೀ ಅರುಣಾ ಶಹಾಪುರ:–** ಮಾನ್ಯ ಸಭಾಪತಿಯವರೇ, ಜನರಲೈಸ್ ಮಾಡಿ ಹೇಳುವುದು ಸರಿಯಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, "ಹಿಂದೂ" ಎಂದು ಹೇಳುವಂಹದ್ದು ಕೇವಲ ಒಬ್ಬರ ಗುತ್ತಿಗೆ ಅಲ್ಲ, ಕೆಲವರ ಗುತ್ತಿಗೆಯೂ ಅಲ್ಲ. ಈ ದೇಶದಲ್ಲಿ ಸುಮಾರು 80ಕೋಟಿ "ಹಿಂದೂಗಳು" ಇದ್ದಾರೆ. ಅವರೆಲ್ಲರೂ "ಹಿಂದೂಗಳೆ" ಇವರು ಮಾತ್ರ ಹಿಂದೂಗಳೆ?

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:–** ಇವರೆಲ್ಲರೂ "ನಕಲಿ" ಹಿಂದುಗಳು.

(ಗೊಂದಲ)

**ಸಭಾಪತಿಯವರು:–** ಒಬ್ಬರಿಗಿಂತ ಜಾಸ್ತಿ ಮಾತನಾಡಿದರೆ ಕಡತಕ್ಕೆ ಹೋಗತಕ್ಕದ್ದಲ್ಲ.

(ಗೊಂದಲ)

**ಶ್ರೀ ನಾರಾಯಣ ಸಾ. ಭಾಂಡಗೆ:–** ಮಾನ್ಯ ಸಭಾಪತಿಯವರೇ, ಬೇಕಾದರೆ ದುಶ್ಕರ್ಮಿಗಳು ಮಾಡಿದ್ದಾರೆಂದು ಹೇಳಲಿ. ಕಿಡಿಗೇಡಿಗಳು ಮಾಡಿದ್ದಾರೆಂದು ಹೇಳಲಿ. ಆದರೆ "ಹಿಂದೂ ಸಂಘಟನೆ" ಎಂದು ಹೇಳಬೇಡಿ. ಪತ್ರಿಕೆಯಲ್ಲಿ ಬೇಕಾದ್ದು ಬರೆದಿರುತ್ತಾರೆ.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಒಂದು ಘಟನೆ ನಡೆಯಿತು. ಅದನ್ನು ನಾನೇ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದೆ. ಮದ್ದೂರಿನಲ್ಲಿ ಒಬ್ಬ ಹಿಂದೂ ಹೆಣ್ಣುಮಗಳ ಮೇಲೆ “ನಾಲ್ಕು ಜನ ಮುಸಲ್ಮಾರು” ಎಂದು ಹೇಳಲಿಲ್ಲ.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ನಾವು ಅದನ್ನು ಹಿಂದೂ–ಮುಸ್ಲಿಂ ಎಂದು ಹೇಳಲಿಲ್ಲ. ಅದರಲ್ಲಿ ಇದ್ದವರು ಬಹಳಷ್ಟು ಜನ ಮುಸ್ಲಿಮರು ಅದನ್ನು ನಾವು ಹೇಳಲಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಅಪರಾಧಿಗಳು ಯಾರೆ ಇರಲಿ ಅವರಿಗೆ ಶಿಕ್ಷೆಯಾಗಬೇಕು. ಅವರನ್ನು ಬಿಟ್ಟಿಲ್ಲ, ಅವರನ್ನು ಜೈಲಿಗೆ ಹಾಕಿದ್ದಾರೆ.

**ಶ್ರೀ ಗೋ. ಮಧುಸೂದನ್:–** ನಾಲ್ಕು ಜನ ಮುಸ್ಲಿಮರು, ಕಾಂಗ್ರೆಸ್‌ನವರು ಎಂದು ಅವತ್ತು ನಾವೇನು ಹೇಳಲಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಅವರ ಮೇಲೆಯು ಕೇಸ್ ಬುಕ್ ಆಗಿದೆ.

(ಗೊಂದಲ)

**ಶ್ರೀ ವೀರಣ್ಣ ಮತ್ತೀಕಟ್ಟಿ:–** ರಾಜಕಾರಣ ಮಾಡುವುದು ಒಂದೇ ಗೊತ್ತು ನಿಮಗೆ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಎಲ್ಲರೂ ಒಂದೇ ಸಾರಿ ಮಾತನಾಡಬೇಡಿ.

**ಶ್ರೀಮತಿ ಮೋಟಮ್ಮ:–** ಸಭಾಪತಿಯವರೆ, ಅವರಿಗೆ ಹೇಳಿ, ಸರಿಯಾಗಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

**ಶ್ರೀ ಗೋ. ಮಧುಸೂದನ್:–** ಹಿಂದೂ ಸಂಘಟನೆಗಳು ಎಂದು ಹೇಳುವಾಗ ನಾವು ಹೇಳಬೇಕಾಗುತ್ತದೆ.

(ಗೊಂದಲ)

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಹೇಳಿ ನಿಮಗೆ ಯಾರು ಬೇಡ ಎಂದಿದ್ದಾರೆ. ಮೊದಲು ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಶ್ರೀ ಗೋ. ಮಧುಸೂದನ್:–** ಹುಣಸೂರಿನಲ್ಲಿ ಒಬ್ಬ ವಿದ್ಯಾರ್ಥಿಯನ್ನು Karnataka Forum for Dignity (KFD) ಸಂಘಟನೆಯವರು ಕೊಲೆ ಮಾಡಿದರು. ಆ KFD ಸಂಘಟನೆಯ ಜೊತೆಗೆ ಕಾಂಗ್ರೆಸ್ ಪಕ್ಷದ ಎಲ್ಲಾ ನಾಯಕರಿದ್ದರು. ಆದರೆ KFD ಹಿಂದೆ ಕಾಂಗ್ರೆಸ್ ಇದೆ ಎಂದು ನಾವು ಹೇಳಲಿಲ್ಲ.

(ಗೊಂದಲ)

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಈ ರೀತಿ ಮಾಡಿದರೆ ಇನ್ನು ನಾವು ಸದನವನ್ನು ನಡೆಯಲು ಬಿಡುವುದಿಲ್ಲ. ಅವರ ರೀತಿಯಲ್ಲಿ ನಮಗೂ ಮಾಡಲು ಬರುತ್ತದೆ.

(ಗೊಂದಲ)

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ವಾಸ್ತವಾಂಶದ ಮೇಲೆ ಮಾತನಾಡೋಣ. ರಾಜಕಾರಣ ಮಾಡುವುದು ಬೇಡ ಇಲ್ಲಿ.

**ಸಭಾಪತಿಯವರು:–** ಸಾಕು ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಆರ್ ಅಶೋಕ್ (ಗೃಹ ಸಚಿವರು):–** ಮಾನ್ಯ ಸಭಾಪತಿಗಳೇ ಈಗಾಗಲೇ ತುಂಬಾ ಸಮಯವಾಯಿತು. ವಿರೋಧ ಪಕ್ಷದ ನಾಯಕರು ಮಾತನಾಡಲಿ, ನಾನು ಉತ್ತರ ಕೊಡಲು ಸಿದ್ದನಾಗಿದ್ದೇನೆ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾಪತಿಗಳೇ, ನಾವು ಈ ವಿಚಾರವನ್ನು ನಿಯಮ 58ರಲ್ಲಿ ತಂದಿದ್ದೇವು, ಅದಕ್ಕೆ ನಾವು ನಿಯಮ 59ರಲ್ಲಿ ಬೇಡ ಎಂದು ನಿಯಮ 68ರಲ್ಲಿ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ನಿಯಮ 59ರಲ್ಲಿ ಆ ನೋಟಿಸ್‌ಗೆ ಸಹಿ ಮಾಡಿದವರು ಮಾತ್ರ

ಮಾತನಾಡಬೇಕಾಗುತ್ತದೆ. ಮಾನ್ಯ ಮಧುಸೂದನ್‌ರವರು ನಾವು ಮಾತನಾಡುತ್ತೇವೆ ನಮಗೂ ಅವಕಾಶ ಬೇಕು ಎಂದು ಕೇಳಿದರು. ತಮ್ಮ ಆದೇಶದ ಪ್ರಕಾರ ನಾವು ಒಪ್ಪಿದ್ದೇವು. ಮಾನ್ಯ ವಿರೋಧ ಪಕ್ಷದ ನಾಯಕರು ವಿಷಯವನ್ನ ಪ್ರಸ್ತಾಪಿಸಿದರು. ಆಡಳಿತ ಪಕ್ಷದ ಸದಸ್ಯರಿಗೂ ಮಾತನಾಡಲು ಅವಕಾಶವಿದೆ. ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಕ್ತಾಯ ಮಾಡಲಿ, ಆದರೆ ಈ ವಿಷಯದ ಚರ್ಚೆ ಮಾಡುವುದೇ ಬೇಡ ಎನ್ನುವುದು ಇವರ ಉದ್ದೇಶ. ಇದು ಹೀಗೆ ಆಗಬಾರದು. ಅವರು ಹಿಂದೂಗಳ ಮೇಲೆ ಆಪಾದನೆಯನ್ನು ಮಾಡಲಿಲ್ಲ. ಹಿಂದೂ ಸಂಘಟನೆಗಳ ಹೆಸರ ಮೇಲೆ ಮಾಡುತ್ತಿದ್ದಾರೆ.

**ಶ್ರೀ ಗೋ.ಮಧುಸೂದನ್:-**

**ಶ್ರೀ ವೀರಣ್ಣ ಮತ್ತೀಕಟ್ಟಿ:-** ನಾವು ಹೇಳುವುದನ್ನು ಮೊದಲು ಕೇಳಿ. ಇಲ್ಲದಿದರೆ ನೀವೆ ಮಾತನಾಡಿ. ನೀವೆ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, It's really too much, I cannot tolerate.

(ಗೊಂದಲ)

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿ.

**ಶ್ರೀ ವೀರಣ್ಣ ಮತ್ತೀಕಟ್ಟಿ:-** ಈ ಸದನದ ಗೌರವ ಮಾನ್ಯ ಸಭಾಪತಿಗಳು, ನಮ್ಮದು ತಪ್ಪು ಇದ್ದರೆ ನೀವು ನಮಗೆ ತಿಳಿಸಿ, ವಿರೋಧ ಪಕ್ಷದ ನಾಯಕರು ಈಗ ಮಾತನಾಡುತ್ತಿದ್ದಾರೆ. ಇನ್ನು ಮಾನ್ಯ ನಾಣಯ್ಯನವರು, ಶ್ರೀಮತಿ ಮೋಟಮ್ಮನವರು, ಮಾನ್ಯ ಹೊರಟ್ಟಿಯವರು, ಇನ್ನು ಹಲವಾರು ಸದಸ್ಯರು ಮಾತನಾಡುವವರಿದ್ದಾರೆ. ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡಲಿ ಎಂದು ನಾವು ಅವರಿಗೂ ವಿನಂತಿಸಿಕೊಂಡಿದ್ದೇವೆ. ಮಧುಸೂದನ್‌ರವರು ಮಾತನಾಡಲಿ ಎಂದು ಹೇಳಿದ್ದೇವೆ.

ಆದರೆ ಮಧ್ಯದಲ್ಲಿ ಈ ರೀತಿ ದಾರಿ ತಪ್ಪಿಸುವಂತಹ ಕೆಲಸವನ್ನು ಮಾಡಬಾರದು. ಇದು ಈ ವ್ಯವಸ್ಥೆಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಸಂಕುಚಿತ ಭಾವನೆಯನ್ನು ಬಿಟ್ಟು ಚರ್ಚೆ ಮಾಡಿ. ನಾವೇನು ರೈಲು ಉರುಳಿದಂತೆ ಮಾತನಾಡಬಾರದು ಎಂದು ಹೇಳಿದ್ದೇವೆಯೇ? ದಯಮಾಡಿ ಇದು ಒಳ್ಳೆಯದಲ್ಲ. ನಾವು ಇದೇ ರೀತಿ ಮಾತನಾಡಲು ಪ್ರಾರಂಭ ಮಾಡಿದರೆ ಸದನದ ಯಾವುದೇ ಕಾರ್ಯಕಲಾಪಗಳು ನಡೆಯುವುದಿಲ್ಲ. ಆ ಸತ್ಯವನ್ನು ತಿಳಿದುಕೊಳ್ಳಬೇಕು. ತಾವು ಈ ಸದನವನ್ನು ಆರ್ಡರ್‌ಗೆ ತಂದು ಅವರಿಗೂ ಮಾತನಾಡಲು ಅವಕಾಶ ಕೊಡಿ. ಅವರು ಬೇಕಾದನ್ನು ಹೇಳಲಿ. ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ನೊಂದ ಇತರೆ ಸದಸ್ಯರು ಯಾರು ಸಹಿ ಮಾಡಿದ್ದಾರೆ. ಅವರು ಮಾತ್ರ ಮಾತನಾಡಬೇಕಾಗಿತ್ತು. ಆದರೆ ತಮ್ಮದು ದೊಡ್ಡ ಮನಸ್ಸು ಎಲ್ಲರಿಗೂ ಅವಕಾಶವನ್ನು ಕೊಟ್ಟಿದ್ದೀರಿ. ಅವರು ಮಾತನಾಡಲಿ ಎಂದು ನಾವು ಒಪ್ಪಿಕೊಂಡಿದ್ದೇವೆ. ನೀವು ಮಾತನಾಡುವಾಗ ಸಾಕಷ್ಟು ಮಾತನಾಡಿ, ಬೇಕಾದರೆ ನಾವೇ ಕಾರಣ ಎಂದು ನಮಗೇ ಹೇಳಿ ಸಂತೋಷ. ಈಗ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ,

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಧುಸೂದನರವರೆ ಮಾತನಾಡಲಿ ಮೊದಲು ನಾವು ಕುಳಿತುಕೊಳ್ಳುತ್ತೇವೆ.

**ಶ್ರಿ ಬಸವರಾಜ ಹೊರಟ್ಟಿ:–** ಅವರೇ ಮಾತನಾಡಲಿ ನಾವು ಹೋಗೋಣ.

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ನಾನು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿರುವುದಿಲ್ಲ.

**(ವಿರೋಧ ಪಕ್ಷದ ಎಲ್ಲ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಬಾವಿಗೆ ಬಂದು ಧರಣಿ ನಿರತರಾದರು)**

(ಗೊಂದಲ)

**ಶ್ರೀ ವಿಶೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ ವಿರೋಧ ಪಕ್ಷದ ಸದಸ್ಯರು ಧರಣಿಯಲ್ಲಿದ್ದಾರೆ. ದಯಮಾಡಿ ವಿರೋಧ ಪಕ್ಷದ ಸದಸ್ಯರು ತಮ್ಮ-ತಮ್ಮ ಸ್ಥಾನಗಳಿಗೆ ಬಂದು ಮಾತನಾಡಬೇಕು.

**ಸಭಾಪತಿಯವರು:-** ಬಾವಿಯಲ್ಲಿ ಧರಣಿ ನಿರತ ಸದಸ್ಯರು ಮಾತನಾಡಿರುವುದು ಯಾವುದು ರೆಕಾರ್ಡ್‌ಗೆ ಹೋಗತಕ್ಕದಲ್ಲ. ಎಲ್ಲ ಸದಸ್ಯರು ಸ್ವಲ್ಪ ಸಮಾಧಾನ ಮಾಡಿಕೊಳ್ಳಿ ಎಲ್ಲ ವಿಷಯಕ್ಕೂ ಉದ್ವೇಗಕ್ಕೆ ಹೋಗುವುದು ಒಳ್ಳೆಯದಲ್ಲ. ದಯಮಾಡಿ ತಮ್ಮ-ತಮ್ಮ ಸ್ಥಾನಗಳಿಗೆ ಬರಬೇಕು. ತಮ್ಮ ಸ್ಥಾನಕ್ಕೆ ಬಂದು ಮಾತನಾಡಿ.

**ಶ್ರೀ ವಿಶೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಗಳೇ, ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಗೌರವಾನ್ವಿತ ವಿರೋಧ ಪಕ್ಷದ ಸದಸ್ಯರು ತಮ್ಮ-ತಮ್ಮ ಸ್ಥಾನಗಳಿಗೆ ಬಂದು ಮಾತನಾಡಬೇಕು. ಇಲ್ಲಿ ಯಾರನ್ನು ಯಾರು ಕಡೆಗಣಿಸುವುದಿಲ್ಲ. ಇದು ಸರಿಯಾದ ಕ್ರಮವಲ್ಲ. ವೈಯಕ್ತಿಕವಾಗಿ ಯಾರು ತೆಗೆದುಕೊಳ್ಳಬಾರದು. ನಾನು ವಿನಂತಿ ಮಾಡಿಕೊಳ್ಳುತ್ತೇನೆ ಎಲ್ಲ ವಿರೋಧ ಪಕ್ಷದ ಸದಸ್ಯರು ತಮ್ಮ-ತಮ್ಮ ಸ್ಥಾನಗಳಿಗೆ ಬರಬೇಕು. ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನಿಮಗೆ ಅವಕಾಶವಿದೆ. ದಯಮಾಡಿ ಬನ್ನಿ.

ಸನ್ಮಾನ್ಯ ಸಭಾಪತಿಯವರೇ, ಈ ರೀತಿ ವಿಷಯಗಳು ಚರ್ಚೆ ಆಗುವಂತಹ ಸಂದರ್ಭದಲ್ಲಿ ಒಂದು ಮಾತು ಹೆಚ್ಚು ಕಡಿಮೆ ಆಡುವುದು ಇದ್ದೇ ಇರುತ್ತದೆ. ಈಗ ಇದನ್ನು ವೈಯಕ್ತಿಕವಾಗಿರುವಂತಹ ಮತ್ತು ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಳ್ಳದೆ ದಯವಿಟ್ಟು ಎಲ್ಲಾ ವಿರೋಧ ಪಕ್ಷದ ನಾಯಕರು ತಮ್ಮ ತಮ್ಮ ಸ್ಥಾನದಲ್ಲಿ ಆಸೀನರಾಗಿ ತಮ್ಮ ತಮ್ಮ ಅಭಿಪ್ರಾಯವನ್ನು ಏನು ಮಂಡಿಸುತ್ತಿದ್ದಾರೆ ಮತ್ತು ತಾವು ಯಾವ ವಿಚಾರದ ಬಗ್ಗೆ ಅವಕಾಶವನ್ನು ನೀಡಿದ್ದೀರಿ ಅದನ್ನು ಹೇಳುವುದಕ್ಕೆ ಅವರಿಗೆ

ಅವಕಾಶವನ್ನು ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ತಾವು ಇದನ್ನು ಬೇರೆ ನಿಯಮಕ್ಕೆ ಪರಿವರ್ತನೆ ಮಾಡಿಕೊಟ್ಟಿರುವುದರಿಂದ ಆಡಳಿತ ಪಕ್ಷದಲ್ಲಿ ಇರುವಂತಹ ಸದಸ್ಯರಿಗೂ ಸಹ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಇದ್ದೇ ಇದೆ.

(ಗೊಂದಲ)

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡುವುದನ್ನು ನಾವು ಬೇಡವೆಂದು ಹೇಳಲಿಲ್ಲ. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾವವನ್ನು ಮಂಡನೆ ಮಾಡಲು ಎದ್ದುನಿಂತಾಗ ಈ ರೀತಿ ವರ್ತಿಸುವುದು ಪರಂಪರೆಯೇ? ಇದು ಆಡಳಿತ ಪಕ್ಷದವರು ನಡೆದುಕೊಳ್ಳುವ ರೀತಿಯೇ? ಹಿರಿಯ ಸದಸ್ಯರುಗಳಾದ ತಾವುಗಳು ಅವರುಗಳಿಗೆ ತಿಳಿಸಿ ಹೇಳುವುದಕ್ಕೆ ಆಗುವುದಿಲ್ಲವೇ?

(ಗೊಂದಲ)

**ಶ್ರೀ ವಿಶೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ಉಲ್ಲೇಖ ಆಗಿರುವಂತಹ ಶಬ್ದದ ಹಿನ್ನೆಲೆಯಲ್ಲಿ ಆ ರೀತಿ ವರ್ತಿಸಿದ್ದಾರೆ. ಮಾನ್ಯ ವಿರೋಧ ಪಕ್ಷದವರು ವಿಷಯ ಆಧಾರಿತವಾಗಿ ಮಾತನಾಡಿದ್ದರೆ ಆ ವಿಷಯ ಬೇರೆ ಆಗುತ್ತಿತ್ತು. “ಹಿಂದೂ ಸಂಘಟನೆಗಳು” ಎಂದು ಎಲ್ಲರ ಮೇಲೂ ಆರೋಪ ಮಾಡುವ ರೀತಿಯಲ್ಲಿ

(ಗೊಂದಲ)

**ಸಭಾಪತಿಯವರು:** ಸದನದ ಬಾವಿಯೊಳಗೆ ಇರುವಂತಹ ಸದಸ್ಯರು ಮಾತನಾಡಬಾರದು.

(ಗೊಂದಲ)

**ಶ್ರೀ ವಿಶೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಭಾಗದ ಸದಸ್ಯರಲ್ಲಿ ಮತ್ತು ಆ ಭಾಗದ ಸದಸ್ಯರಲ್ಲಿಯೂ ಸಹ ಇದರ ಬಗ್ಗೆ ಒಂದು ಸ್ಪಷ್ಟತೆ ಬಂದುಬಿಟ್ಟರೆ ಯಾವ ಗೊಂದಲಗಳು ಇರುವುದಿಲ್ಲ. ಮಾನ್ಯ ಎಸ್.ಆರ್.ಪಾಟೀಲ್‌ರವರು ಹಿರಿಯ ಸದಸ್ಯರಾಗಿ ಮತ್ತು ವಿರೋಧ ಪಕ್ಷದ ನಾಯಕರಾಗಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಸಾಮೂಹಿಕವಾಗಿ "ಹಿಂದೂ ಸಂಘಟನೆಗಳು" ಎನ್ನುವಂತಹ ಅಭಿಪ್ರಾಯ ಬರುವ ರೀತಿಯಲ್ಲಿ ಮತ್ತು ಆ ದಾಟಿಯಲ್ಲಿ ಶಬ್ದಗಳ ಉಲ್ಲೇಖ ಆಯಿತು, ಎನ್ನುವ ಕಾರಣಕ್ಕಾಗಿ ನಮ್ಮ ಭಾಗದ ಸದಸ್ಯರೂ ಮಾತನಾಡಬೇಕಾಗಿರುವಂತಹ ಸಂದರ್ಭ ಬಂದಿತು. ಆ ಹಿನ್ನೆಲೆಯಲ್ಲಿ ಈ ವಿವಾದ ಸೃಷ್ಟಿಯಾಗಿದೆ. ಸಾಮೂಹಿಕವಾಗಿ ಹಿಂದೂ ಸಂಘಟನೆಗಳನ್ನು ಉದ್ದೇಶಿಸಿ ಮಾತನಾಡಬೇಕೆನ್ನುವ ಉದ್ದೇಶ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇಲ್ಲವೆನ್ನುವುದು ಈ ಸದನಕ್ಕೆ ಈಗ ಸ್ಪಷ್ಟವಾಗಿದೆ. ಅದನ್ನು ಅವರು ಮಾತನಾಡುವಂತಹ ಸಂದರ್ಭದಲ್ಲಿಯೂ ಹೇಳಿದ್ದಾರೆ. ಸಾಮೂಹಿಕವಾಗಿ ಎಲ್ಲರ ಮೇಲೆ ಆರೋಪ ಬರುವ ಹಾಗೆ ಅಗಬಾರದು ಎನ್ನುವುದಷ್ಟೇ ವಿಷಯ. ನಿಶ್ಚಿತವಾಗಿರುವಂತಹ ಯಾವುದೇ ಹಿಂದೂ ಸಂಘಟನೆಗಳ ಬಗ್ಗೆ ಮಾತನಾಡಿದರೆ ಆ ವಿಷಯ ಬೇರೆಯಾಗುತ್ತದೆ. ಸಾಮೂಹಿಕವಾಗಿ ಎಲ್ಲ ಸಂಘಟನೆಗಳು ಎನ್ನುವ ರೀತಿಯಲ್ಲಿ ಅಭಿಪ್ರಾಯ ಮೂಡಬಾರದು ಎನ್ನುವುದು ಬಹಳ ಮುಖ್ಯವಾದ ವಿಚಾರವಾಗಿದೆ.

(ಗೊಂದಲ)

**ಶ್ರೀ ವಿಶೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಈ ಚರ್ಚೆಯನ್ನು ಮುಂದುವರಿಸಬೇಕೆಂದು ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು):** ಸನ್ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಸೂಕ್ಷ್ಮವಾಗಿರುವಂತಹ ವಿಚಾರವಾಗಿದೆ. ಈ ವಿಚಾರವನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಹಿರಿಯ ಸದಸ್ಯರಾಗಿರುವಂತಹ ಮಾನ್ಯ ನಾಣಯ್ಯನವರು ಹಾಗೂ ಎಲ್ಲರೂ ಕುಳಿತು ಚರ್ಚೆ ಮಾಡಿದ್ದಾರೆ.

(ಗೊಂದಲ)

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಸ್ಥಾನಕ್ಕೆ ಮರಳಿ ಮಾತನಾಡಬೇಕು. ವಿಷಯದ ಗಾಂಭೀರ್ಯತೆಯನ್ನು ಅರಿತು ಮಾತನಾಡಲಿ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಸಂಸ್ಕೃತಿಯ ಉಸ್ತುವಾರಿಗಳ ರೀತಿ ಅವರು ವರ್ತಿಸುತ್ತಾರೆ. ಅವರೇ ಮಾತಮಾಡಲಿ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಬೇಕು. ಸಭೆಯನ್ನು ನಡೆಸೋಣ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ಯಾವ ಹೆಣ್ಣು ಮಕ್ಕಳಿಗೆ ಹೊಡೆತಗಳನ್ನು ನೀಡಿದ್ದಾರೆ, ಅವರು ಸಹ ಹಿಂದು ಹೆಣ್ಣ ಮಕ್ಕಳೇ ಎನ್ನುವಂತಹ ಪರಿಕಲ್ಪನೆ ಸಹ ಅವರಿಗೆ ಇಲ್ಲ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಆ ಪರಿಕಲ್ಪನೆ ಇದ್ದ ಕಾರಣದಿಂದಾಗಿಯೇ ನಾವು ಇಲ್ಲಿ ನಿಂತುಕೊಂಡಿದ್ದೇವೆ,

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಇದು ಈ ಸದನಕ್ಕೆ ಗೌರವ ತರುವಂತಹ ವರ್ತನೆಯಲ್ಲ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ನಾಟ್ಯ ಮಾಡುವಂತಹ ಶಿಖಂಡಿಗಳೇ!

(ಗೊಂದಲ)

**ಸಭಾಪತಿಯವರು:–** ದಯಮಾಡಿ ತಾವುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಸದನವನ್ನು ನಡೆಸಿಕೊಡುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ಅವರುಗಳು ಈ ರಾಜ್ಯದ ಗೌರವವನ್ನು ಹಾಳು ಮಾಡಿದ್ದಾರೆ. ಅವರಿಗೆ ನಾಚಿಕೆ ಆಗಬೇಕು.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅವರುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಏನು ಹೇಳಬೇಕೆಂದಿದ್ದಾರೆ ಅದನ್ನು ಹೇಳಲಿ. ಅವರು ಹೇಳುವುದನ್ನು ಸರ್ಕಾರ ಕೇಳುವುದಕ್ಕೆ ತಯಾರಿದೆ. ಗೃಹ ಸಚಿವರು ಉತ್ತರವನ್ನು ಹೇಳುವುದಕ್ಕೆ ಸಿದ್ಧರಾಗಿದ್ದಾರೆ. ಅವರು ಹೇಳುವುದನ್ನೆಲ್ಲ ನಾವು ಕೇಳುವುದಕ್ಕೆ ಸಿದ್ಧರಾಗಿದ್ದೇವೆ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರಾಗಿರುವಂತಹ ನಾವು ಯಾರೂ ಮಾತನಾಡುವುದಿಲ್ಲ. ಅವರೇ ಮಾತನಾಡಲಿ, ಅವರೇ ಉತ್ತರವನ್ನು ಹೇಳಲಿ. ಅವರು ಏನು ಹೇಳುತ್ತಾರೆ ಎನ್ನುವುದನ್ನು ನೋಡೋಣ.

(ಗೊಂದಲ)

**ಸಭಾಪತಿಯವರು:–** ಅದು ಆಗುವುದಿಲ್ಲ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಾಗೇರಿಯವರು ಈ ಸದನದ ಗೌವರವದ ಬಗ್ಗೆ ಮಾತನಾಡಿದರು. ಇವರುಗಳು ಈ ರಾಜ್ಯದ ಮರ್ಯಾದೆಯನ್ನು ಹಾಳು ಮಾಡಿದ್ದಾರೆ.ಇವರಿಗೆ ನಾಚಿಕೆ ಆಗುವುದಿಲ್ಲವೆ?

(ಗೊಂದಲ)

**ಸಭಾಪತಿಯವರು:–** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸಂಜೆ 5 ಗಂಟೆ 57 ನಿಮಿಷಗಳಲ್ಲಿ ಮೇಲೆದ್ದ ಸದನವು ಪುನಃ 7 ಗಂಟೆ 8 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿರವರು ಪೀಠವನ್ನಲಂಕರಿಸಿದರು).**

(7ಘಂಟೆ)

**(ಕಾಂಗ್ರೆಸ್ ಹಾಗೂ ಜೆಡಿ (ಎಸ್) ಪಕ್ಷದ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು ಹಾಗೂ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ವಿ. ಸೋಮಣ್ಣ (ಸಬಾನಾಯಕರು):–** ಮಾನ್ಯ ಸಭಾಪತಿಯವರೆ, ಇದೊಂದು ಸೂಕ್ಷ್ಮವಾದಂಥ ವಿಚಾರ. ರಾಜ್ಯದ ಜನತೆ ತುಂಬಾ ಸೂಕ್ಷ್ಮತೆಯಿಂದ ಬಹಳ ಸೂಕ್ಷ್ಮವಾಗಿ ನೋಡುತ್ತಿದ್ದಾರೆ. ಆದ್ದರಿಂದ ವಿರೋಧ ಪಕ್ಷದ ನಾಯಕರಲ್ಲಿ ಹಾಗೂ ಜೆಡಿ (ಎಸ್) ಪಕ್ಷದ ನಾಯಕರಲ್ಲಿ ನಾನು

ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ದಯಮಾಡಿ ಚರ್ಚೆ ಮಾಡಿ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ಎಲ್ಲರೂ ಚರ್ಚೆ ಮಾಡಿ.

ಮೊನ್ನೆ ನಡೆದಿರುವಂತಹ ಈ ಹೇಯ ಕೃತ್ಯ ಖಂಡನೀಯವಾದುದಾಗಿದೆ. ಈ ರಾಜ್ಯದ ಜನರ ಹಿತದೃಷ್ಟಿಯಿಂದ ಯಾವುದೇ ಕಾರಣಕ್ಕೂ ಕೂಡ ಸರ್ಕಾರ ಆ ವಿಚಾರದಲ್ಲಿ ಶಾಮೀಲಾಗುವುದಾಗಲಿ ಅಥವಾ ಮತ್ತೊಂದಾಗಲಿ ಮಾಡುವುದಿಲ್ಲ. ಈ ಹೇಯ ಕೃತ್ಯವನ್ನು ಮಾಡಿರುವವರ ವಿರುದ್ಧ ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರದಲ್ಲಿ ಈಗಾಗಲೇ ಸರ್ಕಾರ ತೀರ್ಮಾನ ಮಾಡಿದೆ. ದಯಮಾಡಿ ಧರಣಿಯನ್ನು ಕೈಬಿಟ್ಟು ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕೆಂದು ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ಈ ಬಗ್ಗೆ ಸದನದಲ್ಲಿ ಪಾರದರ್ಶಕವಾಗಿ ಚರ್ಚೆಯಾಗಲಿ, ಯಾರು ಅಪರಾಧಿಗಳಿದ್ದಾರೆ ಅವರು ಎಷ್ಟೇ ದೊಡ್ಡವರಾದರೂ ಕೂಡ ಅವರನ್ನು ಎಂದೂ ಕೂಡ ರಕ್ಷಣೆ ಮಾಡತಕ್ಕಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುವುದಿಲ್ಲ. ಅವರ ಮೇಲೆ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಯಾವಾಗಲೂ ಒಂದು ಹೆಜ್ಜೆ ಮುಂದಿರುತ್ತೇವೆ.

**ಸಭಾಪತಿಯವರು:-** ಸಭಾನಾಯಕರ ಹೇಳಿಕೆಯ ಹಿನ್ನೆಲೆಯಲ್ಲಿ ಎಲ್ಲ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಚರ್ಚೆ ಮುಂದುವರೆಸೋಣ, ಸಭೆ ನಡೆಸುವುದಕ್ಕೆ ತಾವೆಲ್ಲರೂ ಅನುವು ಮಾಡಿಕೊಡಬೇಕೆಂದು ಮತ್ತೊಮ್ಮೆ ನಾನು ವಿನಂತಿಸುತ್ತೇನೆ.

**(ಈ ಹಂತದಲ್ಲಿ ಧರಣಿಯಲ್ಲಿದ್ದ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:-** ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಸಂಜೆ 7 ಗಂಟೆ 12 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ :31ನೇ ಜುಲೈ 2012ರಂದು ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)**